ಶುಕ್ರವಾರ, ಜೂನ್ 4, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 155 | ಪುಟ 14
● www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ
ಪಾತ್ರಗಳ ಆಯ್ಕೆಯಲ್ಲಿ ಎಡವಿದ್ದೇನೆ ಎನ್ನುವ ನಟಿ ಶುಭಾ ಪೂಂಜಾ, ಕೌಟುಂಬಿಕ ಚಿತ್ರಗಳಲ್ಲಿ ನಟಿಸುವಾಸೆ ಹೊತ್ತಿದ್ದಾರೆ. 'ತ್ರಿದೇವಿ' ಚಿತ್ರಕ್ಕಾಗಿ ಕಳರಿಪಯಟ್ಟು ಕಲಿತಿದ್ದಾರೆ.

ಆಳ-ಅಗಲ
ಕೋವಿಡ್-19 ಸುಳ್ಳು ಸುದ್ದಿಗಳ ಸುತ್ತ
ಕೋವಿಡ್ : 514 ಮಂದಿ ಮರಣ 10
ಸಂಕಷ್ಟಕ್ಕೆ ಸಿಲುಕಿದ ಮಕ್ಕಳ ಪಾಲನೆಗೆ ಮಾರ್ಗಸೂಚಿ 10

ಸೆನ್ಸೆಕ್ಸ್	ನಿಫ್ಟಿ	₹/$
52,232 ▲	15,690 ▲	72.91 ▲

₹500 ಕೋಟಿ ನೆರವಿನ ಗಂಟು

ಜೂ.14ರವರೆಗೂ ಲಾಕ್‌ಡೌನ್ ● ಅನುದಾನ ರಹಿತ ಶಿಕ್ಷಕರಿಗೆ ₹5ಸಾವಿರ ● ಅರ್ಚಕರಿಗೆ ₹3 ಸಾವಿರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇದೇ 7ರ ಮುಂಜಾನೆ ಯವರೆಗೆ ಇದ್ದ ಲಾಕ್‌ಡೌನ್ ಅನ್ನು ಜೂನ್ 14 ರ ಬೆಳಗಿನ 6ಗಂಟೆಯವರೆಗೆ ವಿಸ್ತರಿಸಲಾಗಿದ್ದು, ಸಂಕಷ್ಟದಲ್ಲಿರುವ ಇನ್ನೂ ಕೆಲವು ದುಡಿಯುವ ವರ್ಗದ ಸಮುದಾಯದವರಿಗೆ ರಾಜ್ಯ ಸರ್ಕಾರ ಆರ್ಥಿಕ ನೆರವಿನ ಪ್ಯಾಕೇಜ್ ಘೋಷಿಸಿದೆ.

ನೇಕಾರರು, ಮೀನುಗಾರರು, ಚಲನಚಿತ್ರ ಮತ್ತು ಕಿರುತೆರೆ ಅಸಂಘಟಿತ ಕಾರ್ಮಿಕರು, ಅರ್ಚಕರು, ಆಶಾ ಮತ್ತು ಅಂಗನವಾಡಿ ಕಾರ್ಯಕರ್ತೆಯರು, ಅನುದಾನರಹಿತ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರಿಗೆ ಪರಿಹಾರ ಕಲ್ಪಿಸಲಾಗಿದೆ.

ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಗುರುವಾರ ಸುದ್ದಿಗೋಷ್ಠಿಯಲ್ಲಿ ರಾಜ್ಯ ಸರ್ಕಾರದ ಎರಡನೇ ಹಂತದ ಪ್ಯಾಕೇಜ್‌ನ ವಿವರ ಪ್ರಕಟಿಸಿದರು. ಮೊದಲ ಹಂತದಲ್ಲಿ ₹1,250 ಕೋಟಿ ಮೊತ್ತದ ಪ್ಯಾಕೇಜ್ ಪ್ರಕಟಿಸಿದ್ದರು.

6ನೇ ಪುಟ ನೋಡಿ

ಸಣ್ಣ ಉದ್ಯಮಗಳಿಗೆ ಪರಿಹಾರ



ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಿಗೆ(ಎಂಎಸ್‌ಎಂಇ) ಇದೇ ಮೇ ಮತ್ತು ಜೂನ್ ತಿಂಗಳ ವಿದ್ಯುತ್ ನಿಗದಿತ ಶುಲ್ಕ (ಫಿಕ್ಸೆಡ್ ಚಾರ್ಜಸ್) ಪಾವತಿಸುವುದರಿಂದ ವಿನಾಯಿತಿ ನೀಡಲಾಗುವುದು. ಇದರಿಂದ ಸರ್ಕಾರದ ಬೊಕ್ಕಸಕ್ಕೆ ₹114.70 ಕೋಟಿ ವೆಚ್ಚವಾಗುತ್ತದೆ ಎಂದು ಯಡಿಯೂರಪ್ಪ ಹೇಳಿದರು.

ಎಂಎಸ್‌ಎಂಇ ಬಿಟ್ಟು ಇತರೆ ಕೈಗಾರಿಕೆಗಳ ಬಳಕೆದಾರರು ಮೇ ಮತ್ತು ಜೂನ್ ತಿಂಗಳ ವಿದ್ಯುತ್ ನಿಗದಿತ ಶುಲ್ಕ ಪಾವತಿಸಲು ಜುಲೈ 30 ರವರೆಗೆ ಅವಕಾಶ ನೀಡಲಾಗುವುದು. ಇದರಿಂದ ಸರ್ಕಾರದ ಬೊಕ್ಕಸಕ್ಕೆ ₹5.56 ಕೋಟಿ ಹೊರೆಯಾಗಲಿದೆ. ಈ ಎರಡೂ ಕ್ರಮಗಳಿಂದ ಸುಮಾರು 3 ಲಕ್ಷ ಕೈಗಾರಿಕೆಗಳಿಗೆ ಪ್ರಯೋಜನವಾಗಲಿದೆ ಎಂದರು.

ಶಾಲಾ ಮಕ್ಕಳಿಗೆ ಅರ್ಧ ಕೆ.ಜಿ ಹಾಲಿನ ಪುಡಿ

ರಾಜ್ಯದಲ್ಲಿ ಹಾಲಿಗೆ ಬೇಡಿಕೆ ಕಡಿಮೆ ಆಗಿದ್ದು, ಇದರಿಂದ ಹೈನುಗಾರರಿಗೆ ಸಮಸ್ಯೆ ಆಗದಂತೆ ಹೆಚ್ಚುವರಿ ಹಾಲಿನಿಂದ ಪುಡಿ ತಯಾರಿಸಲು ನಿರ್ಧರಿಸಲಾಗಿದೆ. ಈ ರೀತಿ ತಯಾರಿಸಿದ ಪುಡಿಯನ್ನು ಶಾಲಾ ಮಕ್ಕಳಿಗೆ ತಲಾ ಅರ್ಧ ಕೆ.ಜಿಯಂತೆ ವಿತರಿಸಲಾಗುವುದು ಎಂದು ಯಡಿಯೂರಪ್ಪ ತಿಳಿಸಿದರು.

ಶಾಲೆಗಳು ಮುಚ್ಚಿರುವುದರಿಂದ ಮಕ್ಕಳಿಗೆ ಈಗಾಗಲೇ ಆಹಾರ ಧಾನ್ಯ ವಿತರಿಸುತ್ತಿದ್ದು, ಅದರ ಜತೆ ಜೂನ್ ಮತ್ತು ಜುಲೈ ತಿಂಗಳಿಗೆ ಹಾಲಿನ ಪುಡಿ ವಿತರಿಸಲಾಗುವುದು. ಇದರಿಂದ ಸರ್ಕಾರಕ್ಕೆ ₹100 ಕೋಟಿ ವೆಚ್ಚವಾಗಲಿದೆ ಎಂದು ಹೇಳಿದರು.

ಯಾರಿಗೆಲ್ಲ ಸಿಗಲಿದೆ ಪರಿಹಾರ

- ಅನುದಾನ ರಹಿತ ಶಾಲೆಗಳ ಶಿಕ್ಷಕರಿಗೆ ತಲಾ ₹5,000 ಪರಿಹಾರಕ್ಕಾಗಿ ₹100 ಕೋಟಿ ಅನುದಾನ.
- ಕೋವಿಡ್ ಮುಂಚೂಣಿ ಯೋಧರಾಗಿರುವ ಆಶಾ ಕಾರ್ಯಕರ್ತೆಯರಿಗೆ ತಲಾ ₹3,000 ಪರಿಹಾರ. ಒಟ್ಟು 42,574 ಆಶಾ ಕಾರ್ಯಕರ್ತೆಯರಿಗೆ ನೆರವು. ಇದಕ್ಕಾಗಿ ₹12.75 ಕೋಟಿ ಅನುದಾನ.
- 64,423 ಅಂಗನವಾಡಿ ಕಾರ್ಯಕರ್ತರು ಮತ್ತು 59,169 ಅಂಗನವಾಡಿ ಸಹಾಯಕರಿಗೆ ತಲಾ ₹2,000 ಗಳಂತೆ ಪರಿಹಾರಕ್ಕಾಗಿ ₹24.5 ಕೋಟಿ.
- ಪ್ರತಿ ವಿದ್ಯುತ್ ಮಗ್ಗದಲ್ಲಿ ಇಬ್ಬರು ಕೆಲಸಗಾರರಿಗೆ ಮಾತ್ರ ತಲಾ ₹3,000 ನೀಡಲಾಗುವುದು. ಸುಮಾರು 59 ಸಾವಿರ ವಿದ್ಯುತ್ ಮಗ್ಗ ಘಟಕಗಳಿಗೆ ಇದರ ಪ್ರಯೋಜನ ಸಿಗಲಿದೆ. ಈ ಉದ್ದೇಶಕ್ಕೆ ₹35 ಕೋಟಿ ವೆಚ್ಚ.
- ಚಲನಚಿತ್ರೋದ್ಯಮ ಮತ್ತು ಕಿರುತೆರೆಯಲ್ಲಿ ತೊಡಗಿಸಿಕೊಂಡಿರುವ ನೋಂದಾಯಿತ ಅಸಂಘಟಿತ ಕಾರ್ಮಿಕರಿಗೆ (ಕಲಾವಿದರು, ತಂತ್ರಜ್ಞರು) ತಲಾ ₹3,000 ಪರಿಹಾರ. 22 ಸಾವಿರ ನೋಂದಾಯಿತ ಕಾರ್ಮಿಕರಿಗೆ ಇದರ ಲಾಭ ಸಿಗಲಿದೆ. ಇದಕ್ಕೆ ₹6.6 ಕೋಟಿ ವಿನಿಯೋಗ.
- ಕೇಂದ್ರ ಸರ್ಕಾರದ ಉಳಿತಾಯ ಮತ್ತು ಪರಿಹಾರ ಯೋಜನೆಯಡಿ ನೋಂದಾಯಿಸಿದ 18,746 ಮೀನುಗಾರರಿಗೆ ತಲಾ ₹3,000 ಪರಿಹಾರ. ಇದಕ್ಕೆ ₹5.6 ಕೋಟಿ ವೆಚ್ಚವಾಗಲಿದೆ. ಅಲ್ಲದೆ,7,668 ಒಳನಾಡು ದೋಣಿ ಮಾಲೀಕರಿಗೆ ತಲಾ ₹3,000 ಪರಿಹಾರ. ಇದಕ್ಕಾಗಿ ₹2.3 ಕೋಟಿ ಹಂಚಿಕೆ.

6ನೇ ಪುಟ ನೋಡಿ

ಆಕ್ಷೇಪಾರ್ಹ ಅಂಶಕ್ಕೆ ತಕ್ಷಣವೇ ಕತ್ತರಿ ● ಕ್ಷಮೆಯಾಚನೆ

ಕನ್ನಡ 'ಕೊಳಕು' ಎಂದ ಗೂಗಲ್ !

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತದ ಕೊಳಕು ಭಾಷೆ (ಅಗ್ಲಿಯೆಸ್ಟ್) ಯಾವುದು ಎಂಬ ಪ್ರಶ್ನೆಗೆ 'ಕನ್ನಡ' ಎಂಬ ಉತ್ತರ ಕೊಟ್ಟಿದ್ದ ಗೂಗಲ್‌ನ (ಸರ್ಚ್ ಎಂಜಿನ್) ವರಸೆಗೆ ವಿಶ್ವದಾದ್ಯಂತ ಆಕ್ರೋಶ ವ್ಯಕ್ತವಾಗುತ್ತಿದ್ದಂತೆ, ತಪ್ಪು ಮಾಹಿತಿ ಇದ್ದ ವೆಬ್‌ಪುಟವನ್ನೇ ತೆಗೆದು ಹಾಕುವ ಮೂಲಕ ಸಂಸ್ಥೆಯು ತಪ್ಪನ್ನು ಸರಿಪಡಿಸಿದೆ. ಅಲ್ಲದೆ, ಕ್ಷಮೆಯನ್ನೂ ಕೇಳಿದೆ.

ಜಾಗತಿಕ ಮಟ್ಟದಲ್ಲಿ ಕನ್ನಡಕ್ಕೆ ಅವಮಾನವಾಗಲು ಕಾರಣವಾದ ಗೂಗಲ್ ವಿರುದ್ಧ ತೀವ್ರ ಅಸಮಾಧಾನ ವ್ಯಕ್ತಪಡಿಸಿರುವ ಕರ್ನಾಟಕ ಸರ್ಕಾರ, ನೋಟಿಸ್ ನೀಡಿ ಕಾನೂನು ಕ್ರಮ ಕೈಗೊಳ್ಳುವುದಾಗಿ ಎಚ್ಚರಿಸಿತ್ತು.

'ಕನ್ನಡವನ್ನು ಕೊಳಕು ಭಾಷೆಯೆಂದು ಬಿಂಬಿಸಲು ಕಾರಣವಾದ ಗೂಗಲ್ ಸಂಸ್ಥೆ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು' ಎಂದು ಹೇಳಿರುವ ಕನ್ನಡ ಮತ್ತು ಸಂಸ್ಕೃತಿ ಸಚಿವ ಅರವಿಂದ ಲಿಂಬಾವಳಿ, 'ಕಾನೂನು ಇಲಾಖೆಯ ಜೊತೆ ಚರ್ಚಿಸಿ ಗೂಗಲ್‌ಗೆ ನೋಟಿಸ್ ನೀಡಲು ಇಲಾಖೆ ಕಾರ್ಯದರ್ಶಿಗೆ ಸೂಚಿಸಿದ್ದೇನೆ' ಎಂದು ತಿಳಿಸಿದ್ದಾರೆ.

11ನೇ ಪುಟ ನೋಡಿ

'ಎಲ್ಲ ಭಾಷೆಗಳ ರಾಣಿ ಕನ್ನಡ'

'ಅಗ್ಲಿಯೆಸ್ಟ್ ಲಾಂಗ್ವೆಜ್' ಎಂಬುದಕ್ಕೆ ಪರ್ಯಾಯವಾಗಿ 'ಕ್ವೀನ್ ಆಫ್ ಆಲ್ ಲಾಂಗ್ವೆಜಸ್' ಎಂದು ಸಾವಿರಾರು ಜನ 'ಸರ್ಚ್' ಕೊಟ್ಟಾಗಲೂ ಕನ್ನಡ ಎಂಬ ಉತ್ತರ ಪ್ರದರ್ಶನವಾಗತೊಡಗಿತು.

ಸ್ವಾತಂತ್ರ್ಯ ಹೋರಾಟಗಾರ ವಿನೋಬಾ ಭಾವೆ ಅವರು ಕನ್ನಡವನ್ನು 'ವಿಶ್ವ ಲಿಪಿಗಳ ರಾಣಿ' ಎಂದು ಕರೆದಿದ್ದ ಅಂಶವನ್ನೂ ಸಾವಿರಾರು ಕನ್ನಡಿಗರು ಹಂಚಿಕೊಳ್ಳುವ ಮೂಲಕ ಕನ್ನಡದ ಶಕ್ತಿ, ಸ್ವಾಭಿಮಾನ ಪ್ರದರ್ಶಿಸಿದರು.

> **ಯಾವುದೇ ಭಾಷೆಯನ್ನು ಅವಮಾನಿಸುವ ಇಂತಹ ಘಟನೆಗಳನ್ನು ಮುಂಚಿತವಾಗಿ ತಡೆಯಲು ಗೂಗಲ್‌ನಿಂದ ಸಾಧ್ಯವಿಲ್ಲವೇ ?**
> **ಎಚ್.ಡಿ. ಕುಮಾರಸ್ವಾಮಿ**, ಜೆಡಿಎಸ್ ನಾಯಕ

> **ಯಾವುದೇ ಭಾಷೆಯನ್ನು ಹೀಗೆ ಅಸುಂದರ, ಕೊಳಕು ಎಂದೆಲ್ಲ ವಿಭಾಗಿಸುವುದೇ ಅವೈಜ್ಞಾನಿಕ. ಇಂತಹ ವಿಭಾಗವನ್ನೇ ಗೂಗಲ್ ಕೈಬಿಡಬೇಕು**
> **ಪ್ರೊ. ಬರಗೂರು ರಾಮಚಂದ್ರಪ್ಪ**, ಹಿರಿಯ ಸಾಹಿತಿ

ವಿಚ್ಛೇದನಕ್ಕಾಗಿ ನಪುಂಸಕತ್ವದ ಸುಳ್ಳು ಆರೋಪ ಕ್ರೌರ್ಯ: ಕೇರಳ ಹೈಕೋರ್ಟ್

ಕೊಚ್ಚಿ (ಪಿಟಿಐ): ವಿಚ್ಛೇದನ ಪ್ರಕರಣದಲ್ಲಿ ಸಂಗಾತಿಯ ಮೇಲೆ ನಪುಂಸಕತ್ವ ಅಥವಾ ಲೈಂಗಿಕ ನಿಶ್ಶಕ್ತಿಯ ಸುಳ್ಳು ಆರೋಪ ಹೊರಿಸುವುದು ಮಾನಸಿಕ ಕ್ರೌರ್ಯ ಎಂದು ಕೇರಳ ಹೈಕೋರ್ಟ್ ಹೇಳಿದೆ.

ನ್ಯಾಯಮೂರ್ತಿಗಳಾದ ಎ. ಮುಹಮ್ಮದ್ ಮುಸ್ತಾಕ್ ಮತ್ತು ಕೌಸರ್ ಎಡಪ್ಪಗತ್ತ್ ಅವರ ಪೀಠವು ವೈದ್ಯ ದಂಪತಿಯ ವಿಚ್ಛೇದನ ಪ್ರಕರಣದ ವಿಚಾರಣೆ ನಡೆಸಿ ಈ ಅಭಿಪ್ರಾಯ ವ್ಯಕ್ತಪಡಿಸಿದೆ. ವೈದ್ಯ ದಂಪತಿಗೆ ವಿಚ್ಛೇದನಕ್ಕೆ ಅವಕಾಶ ನೀಡಲಾಗಿದೆ.

ಅನಗತ್ಯ ಆರೋಪಗಳನ್ನು ಮಾಡುವುದು ಮಾನಸಿಕ ಕ್ರೌರ್ಯಕ್ಕೆ ಸಮಾನ ಎಂದು ಪೀಠವು ಆದೇಶದಲ್ಲಿ ಹೇಳಿದೆ.

ತಮ್ಮ ಗಂಡ ನಪುಂಸಕ ಎಂದು ಮಹಿಳೆಯು ಆರೋಪಿಸಿದ್ದರು. ಆದರೆ, ಈ ಆರೋಪವನ್ನು ಪುಷ್ಟೀಕರಿಸಲು ಅವರು ವಿಫಲರಾಗಿದ್ದಾರೆ. ಗಂಡನಿಗೆ ಲೈಂಗಿಕ ನಿಶ್ಶಕ್ತಿ ಇದೆ ಎಂಬುದನ್ನು ಸಾಬೀತು ಮಾಡುವ ಯಾವುದೇ ದಾಖಲೆಯನ್ನು ಮಹಿಳೆಯು ಸಲ್ಲಿಸಿಲ್ಲ. ಮಹಿಳೆಯ ಆರೋಪವು ತಪ್ಪು ಎಂದು ಸಾಬೀತು ಮಾಡುವುದಕ್ಕಾಗಿ ವೈದ್ಯಕೀಯ ಪರೀಕ್ಷೆಗೆ ಒಳಪಡಲು ಗಂಡ ಸಿದ್ಧವಿದ್ದರು. ಆದರೆ, ಹೆಂಡತಿ ಅವಕಾಶವನ್ನು ಬಳಸಿಕೊಂಡಿಲ್ಲ ಎಂದು ನ್ಯಾಯಾಲಯವು ಹೇಳಿದೆ.

2008ರಲ್ಲಿ ಮದುವೆಯಾಗಿದ್ದ ಇವರು, ಒಂದು ವಾರ ಒಟ್ಟಿಗಿದ್ದ ಬಳಿಕ ವ್ಯಾಸಂಗಕ್ಕಾಗಿ ಬೇರೆ ಬೇರೆ ಸ್ಥಳಕ್ಕೆ ತೆರಳಿದ್ದರು. ಗಂಡ ಕೊಚ್ಚಿಯ ಆಸ್ಪತ್ರೆಯಲ್ಲಿ 2010ರಲ್ಲಿ ಕೆಲಸಕ್ಕೆ ಸೇರಿದ್ದರು. ಆಗಿನಿಂದ ಎರಡು ವರ್ಷ ಅವರು ಜತೆಗಿದ್ದರು. ಹೆಂಡತಿ ಔಷಧ ತೆಗೆದುಕೊಳ್ಳುತ್ತಿರುವುದನ್ನು ಗಮನಿಸಿದ್ದ ಗಂಡ ಆಕೆಯನ್ನು ಮನಶ್ಶಾಸ್ತ್ರಜ್ಞರ ಬಳಿಗೆ ಕರೆದುಕೊಂಡು ಹೋಗಿದ್ದರು.

ಹೆಂಡತಿಗೆ ಭ್ರಾಂತಿಯ ಸಮಸ್ಯೆ ಇದೆ ಎಂಬ ಕಾರಣ ಕೊಟ್ಟು ಗಂಡ ವಿಚ್ಛೇದನಕ್ಕೆ ಅರ್ಜಿ ಸಲ್ಲಿಸಿದ್ದರು. ಗಂಡನಿಗೆ ಲೈಂಗಿಕ ಸಾಮರ್ಥ್ಯ ಇಲ್ಲ ಎಂದು ಹೆಂಡತಿ ಪ್ರತಿವಾದ ಮಂಡಿಸಿದ್ದರು. ಆದರೆ, ಕೌಟುಂಬಿಕ ನ್ಯಾಯಾಲಯವು ವಿಚ್ಛೇದನ ನೀಡಿರಲಿಲ್ಲ.

ರಾಜ್ಯ ಕೋವಿಡ್ ಅಂಕಿ–ಅಂಶ

26,53,446 ▲	ಒಟ್ಟು ಸೋಂಕಿತರು (26,35,122 ನಿನ್ನೆಯ ವಿವರ)
2,86,798 ▼	ಸಕ್ರಿಯ ಪ್ರಕರಣಗಳು
23,36,096 ▲	ಗುಣಮುಖರಾದವರು
30,531 ▲	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	18,324 ▲
ಗುಣಮುಖ	24,036 ▲
ಸಾವು	514 ▲

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ರಾಜ್ಯದ ವಿವಿಧೆಡೆ ಗುಡುಗು ಸಹಿತ ಮಳೆ 5

ಇಂದಿನ ಪಾಡ್‌ಕಾಸ್ಟ್ ವಿಶೇಷ
ಕಥೆ ಕೇಳು ಮಗುವೆ ಸಿನಿಮಾ ಮ್ಯಾಟಿನಿ
ಪ್ರತೀ ದಿನ: ದಿನದ ಸೂಕ್ತಿ, ವಚನವಾಣಿ ಸಂಪಾದಕೀಯ, ಪ್ರಚಲಿತ
Prajavani.net/podcast

ಚಿನಕುರಳಿ

ಪ್ರಕಾಶ್ ಶೆಟ್ಟಿ

ಜಿಲ್ಲಾಧಿಕಾರಿ ರೋಹಿಣಿ ಸಿಂಧೂರಿ ಕಿರುಕುಳ ಆರೋಪ

ಮೈಸೂರು ಪಾಲಿಕೆ ಆಯುಕ್ತೆ ಶಿಲ್ಪಾ ನಾಗ್ ರಾಜೀನಾಮೆ

ಪ್ರಜಾವಾಣಿ ವಾರ್ತೆ

ಮೈಸೂರು: ಜಿಲ್ಲಾಧಿಕಾರಿ ರೋಹಿಣಿ ಸಿಂಧೂರಿ ಅವರ ನಿರಂತರ ಕಿರುಕುಳ, ಟೀಕೆ, ಅಪಮಾನ ಮತ್ತು ದುರಹಂಕಾರದ ವರ್ತನೆಯಿಂದ ಬೇಸತ್ತು ರಾಜೀನಾಮೆ ನೀಡುತ್ತಿರುವುದಾಗಿ ಮೈಸೂರು ಮಹಾನಗರ ಪಾಲಿಕೆ ಆಯುಕ್ತರಾದ ಶಿಲ್ಪಾ ನಾಗ್ ಗುರುವಾರ ಸುದ್ದಿಗೋಷ್ಠಿಯಲ್ಲಿ ಪ್ರಕಟಿಸಿದರು.

ಶಿಲ್ಪಾ ನಾಗ್

ಸಂಸದ ಪ್ರತಾಪ ಸಿಂಹ ಮತ್ತು ಕೆಲವು ಶಾಸಕರು ಜಿಲ್ಲಾಧಿಕಾರಿ ಕಾರ್ಯವೈಖರಿ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದ ಬೆನ್ನಲ್ಲೇ ಈ ಬೆಳವಣಿಗೆ ನಡೆದಿದೆ.

'ಇಂತಹ ಉಸಿರುಗಟ್ಟಿಸುವ ವಾತಾವರಣದಲ್ಲಿ ನನಗೆ ಕೆಲಸ ಮಾಡಲಾಗುತ್ತಿಲ್ಲ. ಪ್ರತಿಭಟನಾರ್ಥವಾಗಿ ಈ ತೀರ್ಮಾನ ತೆಗೆದುಕೊಂಡಿದ್ದೇನೆ. ಪಾಲಿಕೆ ಆಯುಕ್ತರ ಹುದ್ದೆಗೆ ಮಾತ್ರವಲ್ಲ, ಐಎಎಸ್‌ಗೂ ರಾಜೀನಾಮೆ ನೀಡುತ್ತಿದ್ದೇನೆ' ಎಂದು ತಿಳಿಸಿದರು.

6ನೇ ಪುಟ ನೋಡಿ

'ಕಿರುಕುಳ ನೀಡಿಲ್ಲ, ಆರೋಪ ಸುಳ್ಳು'

ರೋಹಿಣಿ ಸಿಂಧೂರಿ

ಶಿಲ್ಪಾ ನಾಗ್ ಮಾಡಿರುವ ಆರೋಪಗಳಿಗೆ ತಿರುಗೇಟು ನೀಡಿರುವ ಜಿಲ್ಲಾಧಿಕಾರಿ ರೋಹಿಣಿ ಸಿಂಧೂರಿ, 'ಅವರು ಆರೋಪಿಸಿದಂತೆ ನಾನು ಯಾವುದೇ ಕಿರುಕುಳ ನೀಡಿಲ್ಲ. ಎಲ್ಲ ಆರೋಪಗಳೂ ಸುಳ್ಳು' ಎಂದಿದ್ದಾರೆ.

'ಕಳೆದ 10 ದಿನಗಳಿಂದ ಅವರು ಮೈಸೂರು ಜಿಲ್ಲಾಡಳಿತಕ್ಕೆ ವಿರುದ್ಧವಾದ ಹೇಳಿಕೆಗಳನ್ನು ಮಾಧ್ಯಮಗಳಿಗೆ ನೀಡುತ್ತಿದ್ದಾರೆ. ಪಾಲಿಕೆ ಆಯುಕ್ತರೊಬ್ಬರಿಂದ ಅಂತಹ ವರ್ತನೆ ನಿರೀಕ್ಷಿಸಿರಲಿಲ್ಲ' ಎಂದು ಪ್ರಕಟಣೆಯಲ್ಲಿ ಹೇಳಿದ್ದಾರೆ.

'ಕೋವಿಡ್ ನಿರ್ವಹಣೆಗಾಗಿ ಸಿಎಸ್‌ಆರ್ ನಿಧಿಯಿಂದ ಸಂಗ್ರಹವಾದ ಹಣ ಮೈಸೂರು ನಗರ ವ್ಯಾಪ್ತಿಯಲ್ಲಿ ಮಾತ್ರ ಬಳಕೆಯಾಗುತ್ತಿತ್ತು. ಆ ಹಣವನ್ನು ತಾಲ್ಲೂಕುಗಳಿಗೆ ಹಂಚಿಕೆ ಮಾಡದಿರುವುದು ತಪ್ಪು. ಆ ಕಾರಣದಿಂದ ಸಿಎಸ್‌ಆರ್ ಹಣದ ಲೆಕ್ಕ ಕೊಡುವಂತೆ ಪಾಲಿಕೆ ಆಯುಕ್ತರಲ್ಲಿ ಕೇಳಿದ್ದೆ. ಅವರು ಇದುವರೆಗೂ ಕೊಟ್ಟಿಲ್ಲ' ಎಂದರು.

'ಕೋವಿಡ್ ಪ್ರಕರಣ, ಸಾವಿಗೆ ಸಂಬಂಧಿಸಿದಂತೆ ವಾರ್ಡ್‌ಗಳ ಮಾಹಿತಿ ತಪ್ಪಾಗಿ ಬರುತ್ತಿದ್ದು, ಸರಿಪಡಿಸುವಂತೆ ಆದೇಶಿಸಿದ್ದೆ. ಮೈಸೂರು ನಗರದಲ್ಲಿ ಸರ್ಕಾರಿ ಕೋವಿಡ್ ಕೇರ್ ಸೆಂಟರ್ ಆರಂಭಿಸುವಂತೆಯೂ ಸೂಚಿಸಿದ್ದೆ. ಈ ಸೂಚನೆಗಳನ್ನು ಕಿರುಕುಳ ಎಂದು ಊಹಿಸಲೂ ಸಾಧ್ಯವಿಲ್ಲ' ಎಂದಿದ್ದಾರೆ.

> **ಜಿಲ್ಲಾಧಿಕಾರಿಗೆ ವೈಯಕ್ತಿಕ ದ್ವೇಷ ಇದ್ದರೆ ನನ್ನ ವಿರುದ್ಧವೇ ತೀರಿಸಿಕೊಳ್ಳಲಿ. ಅದನ್ನು ಮೈಸೂರು ನಗರ ಮತ್ತು ಇಲ್ಲಿನ ಜನರ ವಿರುದ್ಧ ತೀರಿಸಿಕೊಳ್ಳುವುದು ಬೇಡ**
> **ಶಿಲ್ಪಾ ನಾಗ್**, ಮೈಸೂರು ಪಾಲಿಕೆ ಆಯುಕ್ತರು

> **ಶಿಲ್ಪಾ ನಾಗ್ ಅತ್ಯಂತ ದಕ್ಷತೆಯಿಂದ ಕೆಲಸ ಮಾಡಿದ್ದಾರೆ. ಅವರ ರಾಜೀನಾಮೆಯನ್ನು ಸರ್ಕಾರ ಯಾವ ಕಾರಣಕ್ಕೂ ಅಂಗೀಕರಿಸುವುದಿಲ್ಲ**
> **ಎಸ್.ಟಿ.ಸೋಮಶೇಖರ್**, ಜಿಲ್ಲಾ ಉಸ್ತುವಾರಿ ಸಚಿವ

ಒಳ ಪುಟಗಳು

2025ರಲ್ಲಿ 90 ಕೋಟಿ ಇಂಟರ್ನೆಟ್ ಬಳಕೆದಾರರು 9
ಶಿಕ್ಷಕರ ವರ್ಗ: ತಿದ್ದುಪಡಿ ಕಾಯ್ದೆಯ ಕರಡು ಪ್ರಕಟ 10

ಟಿಇಟಿ ಪ್ರಮಾಣಪತ್ರ ಸಿಂಧುತ್ವ ಅವಧಿ ವಿಸ್ತರಣೆ

ನವದೆಹಲಿ (ಪಿಟಿಐ): ಶಿಕ್ಷಕರ ರಾಷ್ಟ್ರೀಯ ಅರ್ಹತಾ ಪರೀಕ್ಷೆ (ಟಿಇಟಿ) ಪ್ರಮಾಣಪತ್ರದ ಸಿಂಧುತ್ವವನ್ನು 7 ವರ್ಷದಿಂದ ಜೀವಿತಾವಧಿಯವರೆಗೆ ವಿಸ್ತರಿಸಿ ಕೇಂದ್ರ ಶಿಕ್ಷಣ ಸಚಿವಾಲಯ ಗುರುವಾರ ಆದೇಶ ಹೊರಡಿಸಿದೆ.

'ಈ ನಿಯಮ 2011ರಿಂದಲೇ ಪೂರ್ವಾನ್ವಯವಾಗುವುದು' ಎಂದು ಕೇಂದ್ರ ಶಿಕ್ಷಣ ಸಚಿವ ರಮೇಶ್ ಪೋಕ್ರಿಯಾಲ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಈ ಮೊದಲಿನ ನಿಯಮದಂತೆ ಟಿಇಟಿ ಪ್ರಮಾಣಪತ್ರದ ಸಿಂಧುತ್ವದ ಅವಧಿ ಕೊನೆಗೊಂಡಿದ್ದರೆ, ಅಂಥ ಅಭ್ಯರ್ಥಿಗಳಿಗೆ ಹೊಸದಾಗಿ ಪ್ರಮಾಣಪತ್ರಗಳನ್ನು ನೀಡಲು ಆಯಾ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳು ಕ್ರಮ ಕೈಗೊಳ್ಳಲಿವೆ' ಎಂದೂ ಅವರು ತಿಳಿಸಿದ್ದಾರೆ. 'ಈ ನಿರ್ಧಾರದಿಂದ ಶಿಕ್ಷಣ ಕ್ಷೇತ್ರದಲ್ಲಿ ಉದ್ಯೋಗಾವಕಾಶಗಳು ಹೆಚ್ಚಲಿವೆ ಹಾಗೂ ಶಿಕ್ಷಕ ವೃತ್ತಿಯನ್ನು ಕೈಗೊಳ್ಳಲು ಆಸಕ್ತಿ ಹೊಂದಿರುವವರಿಗೆ ಉತ್ತೇಜನ ನೀಡಿದಂತಾಗುವುದು' ಎಂದೂ ಅವರು ಹೇಳಿದ್ದಾರೆ.

ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆಗಳಿಗೆ ಶಿಕ್ಷಕರಾಗಲು ಇಚ್ಛಿಸುವವರು ಶಿಕ್ಷಕರ ರಾಷ್ಟ್ರೀಯ ಅರ್ಹತಾ ಪರೀಕ್ಷೆಯಲ್ಲಿ (ಟಿಇಟಿ) ತೇರ್ಗಡೆಯಾಗುವುದು ಕಡ್ಡಾಯ. ಈ ಪರೀಕ್ಷೆಯನ್ನು ರಾಜ್ಯಗಳು ನಡೆಸುತ್ತವೆ.

ಕೋವಿಡ್ ಸೋಂಕಿನಿಂದ ಪಾರಾಗಲು ಅಡವಿ ವಸ್ತಿ, ತೋಟದ ವಸ್ತಿ ಆಶ್ರಯ

ಆಸ್ಪತ್ರೆ, ಔಷಧವೆಂದರೇ ಹಳ್ಳಿಗರಿಗೆ ಭಯ!

● ಬಸವರಾಜ್ ಸಂಪಳ್ಳಿ

ವಿಜಯಪುರ: ಕೋವಿಡ್ ಸೋಂಕಿನಿಂದಾಗಿ ಆಸ್ಪತ್ರೆಗೆ ಹೋದ ಹರೆಯದವರು ಹೆಣವಾಗಿ ಊರಿಗೆ ಮರಳಿದ್ದು ಜನರಲ್ಲಿ ಕೋವಿಡ್ ಬಗ್ಗೆ ಇನ್ನಿಲ್ಲದ ಭಯ, ಆತಂಕ, ತಳಮಳ ಮೂಡಿಸಿದೆ. ಜೊತೆಗೆ ವೈದ್ಯಕೀಯ ವ್ಯವಸ್ಥೆ, ಚಿಕಿತ್ಸೆ, ಔಷಧದ ಬಗ್ಗೆಯೇ ಅಪನಂಬಿಕೆ, ಅನುಮಾನ ಹುಟ್ಟಿಕೊಂಡಿರುವುದು ಜಿಲ್ಲೆಯ ಗ್ರಾಮೀಣ ಭಾಗಕ್ಕೆ 'ಪ್ರಜಾವಾಣಿ' ಭೇಟಿ ನೀಡಿದಾಗ ಸ್ಪಷ್ಟವಾಗಿ ಗೋಚರಿಸಿದೆ.

ಜಿಲ್ಲೆಯ ಗ್ರಾಮೀಣ ಪ್ರದೇಶಗಳಲ್ಲಿ ಕೋವಿಡ್ ಎರಡನೇ ಅಲೆ ವ್ಯಾಪಕವಾಗಿ ಹರಡಿದೆ. ಕುಟುಂಬದ ಆಧಾರಸ್ತಂಭಗಳೇ ಕಳಚಿಕೊಂಡಿವೆ. ಜನರ ಓಡಾಟ ಹೆಚ್ಚಿಲ್ಲದ, ಅಂಗಡಿ, ಮಳಿಗೆಗಳಿಲ್ಲದ, ಸಾರಿಗೆ, ಸಂಪರ್ಕ ವಿರಳವಾಗಿರುವ ಹಳ್ಳಿಗಳಲ್ಲಿ ಕೋವಿಡ್ ಪ್ರಕರಣಗಳು ಬೆರಳೆಣಿಕೆಯಷ್ಟು ವರದಿಯಾಗಿವೆ. ಜಿಲ್ಲೆಯ 629 ಹಳ್ಳಿಗಳ ಪೈಕಿ ಇದುವರೆಗೆ 555 ಹಳ್ಳಿಗಳಿಗೆ ಕೋವಿಡ್ ತನ್ನ ಕಬಂಧಬಾಹುಗಳನ್ನು ಚಾಚಿದೆ.

ಗ್ರಾಮಾರೋಗ್ಯ
ಆಗಲಿ ಇನ್ನಷ್ಟು ಯೋಗ್ಯ

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಜನರ ಹಿಂದೇಟು: ಜಿಲ್ಲೆಯ ಗ್ರಾಮೀಣ ಭಾಗದಲ್ಲಿ 67 ಕೋವಿಡ್ ಆರೈಕೆ ಕೇಂದ್ರಗಳನ್ನು ತೆರೆಯಲಾಗಿದೆ. ಆದರೆ, ಈ ಕೇಂದ್ರಗಳಿಗೆ ಬರಲು ಸೋಂಕಿತರು ಹಿಂದೇಟು ಹಾಕುತ್ತಿದ್ದಾರೆ.

'ಆರೈಕೆ ಕೇಂದ್ರಕ್ಕೆ ಹೋದರೆ ಊರಲ್ಲಿ ಜನ ನಮ್ಮನ್ನು ನೋಡುವ ದೃಷ್ಟಿ ಬೇರೆಯಾಗುತ್ತದೆ; ಹತ್ತಿರ ಬಿಟ್ಟುಕೊಳ್ಳುವುದಿಲ್ಲ ಎಂಬ ಆತಂಕ ಗ್ರಾಮೀಣರದ್ದು, ಹೀಗಾಗಿ ಹೋಗಲೊಲ್ಲೆ ಎನ್ನುತ್ತಾರೆ. ಹೊಲ, ತೋಟದ ವಸ್ತಿಯಲ್ಲೇ ಇರ್ತಾರೆ. ಆರೈಕೆ ಕೇಂದ್ರಕ್ಕೆ ಬರುವುದಿಲ್ಲ' ಎಂದು ಇಂಡಿ ತಾಲ್ಲೂಕಿನ ಅಥರ್ಗಾ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ.ಚಂದ್ರಶೇಖರ ತಾಳಿಕೋಟೆ ತಿಳಿಸಿದರು.

ವಿಜಯಪುರ ಜಿಲ್ಲೆ ಸಾಲೊಟಗಿ ಗ್ರಾಮದಲ್ಲಿ ಕೋವಿಡ್ ಪರೀಕ್ಷೆ ಮಾಡುತ್ತಿರುವ ಆರೋಗ್ಯ ಸಿಬ್ಬಂದಿ

> **ಊರಲ್ಲಿ ಪ್ರತಿ ದಿನ ಒಂದೆರಡು ಜನ ಸಾಯುತ್ತಲೇ ಇದ್ದಾರೆ. ಒಂದು ತಿಂಗಳಲ್ಲಿ 40ಕ್ಕೂ ಹೆಚ್ಚು ಜನ ಸಾವಿಗೀಡಾಗಿದ್ದಾರೆ. ಪ್ರಾಥಮಿಕ ಆರೋಗ್ಯ ಕೇಂದ್ರ ಬಾಗಿಲು ತೆಗೆಯುತ್ತಿಲ್ಲ**
> **ನವೀದ್ ಪಾಂಡು**, ಹಂಜಗಿ ಗ್ರಾಮಸ್ಥ

11ನೇ ಪುಟ ನೋಡಿ

ವಿಶೇಷ ಪುಟ 11

CREATING THE RIGHT COURSE FOR YOUR BRIGHT FUTURE...
ADMISSIONS OPEN
FOR THE YEAR 2021 - 2022
APPLY NOW
www.jssuni.edu.in

JSS ACADEMY OF HIGHER EDUCATION & RESEARCH
(DEEMED TO BE UNIVERSITY) MYSURU

Dental*
- BDS

Fellowship
- Psychosexual Medicine
- Pain Medicine
- Neonatology

B.Sc.
(Allied Health Sciences)
- Medical Laboratory Technology
- Medical Imaging Technology
- Anaesthesia & Operation Theatre Technology
- Renal Dialysis Technology
- Respiratory Care Technology
- Cardiac Care Technology
- Perfusion Technology
- Emergency Medicine
- Optometry
- Physician Assistant (CTVS)
- Forensic Science
- Medical Genetics
- Bachelor of Occupational Therapy (BOT)

M.Sc. / MPH / M.Phil
(Biomedical / Medical Sciences)
- Medical Microbiology
- Medical Biochemistry
- Medical Physiology
- Medical Anatomy
- Medical Pharmacology
- Medical Genetics & Genomics
- Clinical Embryology
- Clinical Psychology
- Forensic Odontology
- Master of Public Health (MPH)
- M. Phil Psychiatric Social Work
- M. Phil Clinical Psychology

Pharmacy
- B.Pharm
- II B.Pharm (Lateral Entry)
- D Pharm
- B Pharm Practice
- Pharm D
- Pharm D (PB)

M.Pharm
- Pharmaceutics
- Pharmaceutical Quality Assurance Regulatory Affairs
- Industrial Pharmacy
- Pharmacy Practice
- Pharmacology
- Pharmaceutical Chemistry
- Pharmaceutical Analysis
- Pharmacognosy
- Pharmaceutical Biotechnology

M.Sc. Life Sciences & Natural Sciences
- Cognitive Neuroscience
- Environmental Science
- Geoinformatics
- Nanoscience & Technology
- Nutrition & Dietetics
- Molecular Biology
- Biochemistry
- Microbiology
- Medical Statistics
- Bioinformatics
- Cosmetic Science
- Sports Nutrition & Management
- Medical Physics
- P.G Diploma - Tissue Culture

Yoga
- B.Sc. in Yoga
- M.Sc. in Yoga
- Yoga Teachers Course (YTC) (3 months)

B.Sc. Life Sciences & Natural Sciences
- Biotechnology
- Microbiology
- Environmental Science
- Food, Nutrition & Dietetics
- Psychology
- Biochemistry

Dental Diploma
- Diploma in Dental Mechatronics
- DORA - Dental Operating Room Assistant

Health System Management Studies
- BBA in Hospital & Health System Management
- MBA in Hospital Administration
- MBA in Pharmacy Administration

Open Distance Learning
- M.Sc in Environmental Sciences
- P.G Diploma in Environment, Health & Safety Management
- Diploma in Tissue Culture
- Certificate Program - Statistical Methods & Research Methodology

Online Programs
- MBA in Hospital Administration
- PG Diploma in Bioinformatics

Diploma in
- Pharmaceutical Quality Control
- Pharmacovigilance

Ph.D.
Medicine / Dentistry / Pharmacy / Management / Life Sciences & Natural Sciences / Biomedical Sciences

*NOTE : The guidance will be given for UG Dental (BDS) admissions 2021. Candidates may apply to NEET UG 2021 entrance test & for online counselling & seat allotment to JSS Dental College & Hospital, Mysore apply at Medical Counselling Committee (MCC) @ W : www.mcc.nic.in .For more guidance please register @ W : www.jssuni.edu.in

JSS ACADEMY OF HIGHER EDUCATION & RESEARCH
Sri Shivarathreeshwara Nagar, Bannimantap, Mysuru - 570 015, Karnataka, India. | T: +91 9980841859 / 0821-2548416
F: +91-821-2548394 | E: admissions@jssuni.edu.in | W: www.jssuni.edu.in | FB: www.fb.com/jssuniversity

ಟಿ.ಆರ್ ಅನಂತರಾಮು ವಿಜ್ಞಾನ ಪ್ರತಿಷ್ಠಾನ ಸ್ಥಾಪನೆ

ಬೆಂಗಳೂರು: ವಿಜ್ಞಾನ ಲೇಖಕ ಟಿ.ಆರ್. ಅನಂತರಾಮು ಹೆಸರಿನಲ್ಲಿ ಅವರ ಕುಟುಂಬದವರು 'ಡಾ.ಟಿ.ಆರ್.ಅನಂತರಾಮು ವಿಜ್ಞಾನ ಪ್ರತಿಷ್ಠಾನ'ವನ್ನು ಸ್ಥಾಪಿಸಿದ್ದಾರೆ.

ನಾಡಿನಾದ್ಯಂತ ಕನ್ನಡದಲ್ಲಿ ವಿಜ್ಞಾನ ಜನಪ್ರಿಯಗೊಳಿಸುವುದು, ವಿಶೇಷವಾಗಿ ಹೊಸ ತಲೆಮಾರಿನ ಲೇಖಕರನ್ನು ಉತ್ತೇಜಿಸುವುದು, ಮಾಧ್ಯಮಗಳಿಗೆ ವಿಜ್ಞಾನ ಸಂಗತಿ ವರದಿ ಮಾಡುವ ಕುರಿತು ವಿಶೇಷ ಕಾರ್ಯಾಗಾರಗಳನ್ನು ನಡೆಸುವುದು ಇದರ ಮುಖ್ಯ ಉದ್ದೇಶಗಳಲ್ಲೊಂದು ಎಂದು ಪ್ರತಿಷ್ಠಾನ ಎ.ಆರ್.ಅನ್ನಪೂರ್ಣ ತಿಳಿಸಿದ್ದಾರೆ.

ವಿದ್ಯಾರ್ಥಿಗಳಲ್ಲಿ, ವಿಜ್ಞಾನ ಮತ್ತು ಗಣಿತದ ಬಗ್ಗೆ ಆಸಕ್ತಿ ಮೂಡಿಸಲೆಂದು 'ಸೂತ್ರ' ಎಂಬ ಹೊಸ ಬಗೆಯ ಮಾಸಪತ್ರಿಕೆಯನ್ನು ಹೊರತರಲಿದೆ. ವಿಜ್ಞಾನ ಮತ್ತು ಗಣಿತವನ್ನು ಆಕರ್ಷಕ ರೀತಿಯಲ್ಲಿ ವಿದ್ಯಾರ್ಥಿಗಳಿಗೆ ಬೋಧಿಸುತ್ತಿರುವ ತರುಣ ಅಧ್ಯಾಪಕರನ್ನು ಗುರುತಿಸಿ, ಪ್ರತಿ ವರ್ಷವೂ ಒಬ್ಬ ಮಹಿಳೆಯೂ ಸೇರಿದಂತೆ ಮೂರು ಮಂದಿಗೆ ಪ್ರಶಸ್ತಿಗಳನ್ನು ನೀಡಲು ಪ್ರತಿಷ್ಠಾನ ಯೋಜಿಸಿದೆ ಎಂದು ಹೇಳಿದ್ದಾರೆ.

ಹೆಚ್ಚಿನ ವಿವರಕ್ಕೆ http://travp.org ದೂರವಾಣಿ 9148670002 ಸಂಪರ್ಕಿಸಿ.

PUBLIC NOTICE

The General public are hereby notified that, my client has entered into an agreement to purchase the Schedule property from its Owner: **M/s APPLE SPIRE INDIA LLP**, A Limited Liability Partnership firm, having its registered Office at No.615, 100ft Ring Road, Banashankari 3rd Stage, Bengaluru-560 085, represented by its authorized designated partners: **(i) SRI. CHINNAPPA NAIDU CHANDRASHEKAR** S/o Sri. Nannuru Chinnappa Naidu and (ii) **SRI. JAYARAM NANNURU** S/o Sri. Nannuru Chinnappa Naidu.

Apart from the said owner, if any other person/s have any manner of right, title and or interest or claim or charge or lien over the Schedule property or otherwise have any lawful objection/s for this sale transaction, they are hereby called upon to file their objection/s in writing, along with the photocopies of documents on which they rely, with the undersigned, within **14 days** from the date of publication of this notice. Objection/s received thereafter will not be binding on my client.

SCHEDULE

All that piece and parcel of the immoveable property bearing **Municipal No. 3990/3965/363/3900 (Old No.363), Sy.No.276,** measuring 3 Acres, with a building thereon, situated at **Halagevaderahalli Village,** Rajarajeshwari Nagar, Kengeri Hobli, Bengaluru South Taluk, within the limits of Bruhat Bengaluru Mahanagara Palike (BBMP) ward No.160 (Rajarajeshwari Nagar), Bengaluru and bounded as follows :

East by : Land bearing Sy.No.206,
West by : P.W.D. Road
North by : 5th Cross Road,
South by : Remaining portion of land bearing Sy.No.276.

Sd/- **S.F. Goutam Chand**
Advocate
Goutam Associates
No.60, 2nd Floor, Kanakapura Road, Basavanagudi, Bengaluru–560 004.

ಯಲಹಂಕ: ಕಾಮಗಾರಿ ಸ್ಥಗಿತಗೊಳಿಸುವಂತೆ ಸ್ಥಳೀಯರು ಒತ್ತಾಯಿಸಿದರೂ ಕಿವಿಗೊಡದ ಗುತ್ತಿಗೆದಾರ

ಮಳೆಯ ನಡುವೆಯೇ ಡಾಂಬರೀಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯಲಹಂಕದ ಉಪನಗರ ಬಸ್‌ನಿಲ್ದಾಣದ ಬಳಿಯ ಸೋಮೇಶ್ವರನಗರದಲ್ಲಿ ಸುರಿವ ಮಳೆಯ ನಡುವೆಯೇ ಗುರುವಾರ ರಸ್ತೆಗೆ ಡಾಂಬರೀಕರಣ ಮಾಡಲಾಗಿದೆ. ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದರೂ ಗುತ್ತಿಗೆದಾರರು ಕೆಲಸ ಸ್ಥಗಿತಗೊಳಿಸಲ್ಲ ಎಂದು ಸ್ಥಳೀಯರು ದೂರಿದ್ದಾರೆ.

'ಸೋಮೇಶ್ವರನಗರದ 3 ಎ ಮುಖ್ಯರಸ್ತೆ, 2ಎ ಅಡ್ಡ ರಸ್ತೆಯಲ್ಲಿ ಡಾಂಬರೀಕರಣ ಕಾಮಗಾರಿ ನಡೆಯುತ್ತಿದೆ. ಮಳೆ ಬರುವಾಗ ಡಾಂಬರು ಹಾಕಬೇಡಿ ಎಂದು ನಾವು ವಿನಂತಿಸಿದೆವು. ಆದರೂ ಕೆಲಸಗಾರರು ಕಿವಿಗೊಡದೇ ಟಿಪ್ಪರ್ ಲಾರಿಯಲ್ಲಿ ಡಾಂಬರ್ ಮಿಶ್ರಣ ತಂದು ಸುರಿದರು. ಮಳೆ ಬರುವಾಗ ಡಾಂಬರು ಹಾಕದಂತೆ ಸ್ಥಳದಲ್ಲಿ ಸಿಗರೇಟ್ ಸೇದುತ್ತಾ ನಿಂತಿದ್ದ ಮೇಲ್ವಿಚಾರಕರಲ್ಲಿ ನಾವು ನಿವೇದಿಸಿದೆವು. ನಮ್ಮ ಮಾತಿಗೆ ಕಿವಿಗೊಡದೆ ಕೆಲಸ ಮುಂದುವರಿಸಿದರು. ಈ ವಿಷಯವನ್ನು ಬಿಬಿಎಂಪಿ ಅಧಿಕಾರಿಗಳ ಗಮನಕ್ಕೆ ತಂದೆವು. ಡಾಂಬರೀಕರಣ ಮುಗಿದ ಬಳಿಕ ಅಧಿಕಾರಿಗಳು ಸ್ಥಳಕ್ಕೆ ಬಂದರು' ಎಂದು ಸ್ಥಳೀಯ ನಿವಾಸಿ ಡಾ.ಆನಂದ್ ಕುಮಾರ್ 'ಪ್ರಜಾವಾಣಿ'ಗೆ ತಿಳಿಸಿದರು.

ಮಳೆ ಸುರಿಯುತ್ತಿರುವಾಗಲೇ ಡಾಂಬರೀಕರಣ ಮಾಡಲಾಯಿತು

'ಡಾಂಬರೀಕರಣ ನಡೆಸುವಾಗ ನಿಯಮಗಳನ್ನು ಪಾಲಿಸುತ್ತಿಲ್ಲ. ಕಾಟಾಚಾರಕ್ಕೆ ಬೇಕಾಬಿಟ್ಟಿ ಡಾಂಬರು ಹಾಕಿದ್ದಾರೆ. ಹಾಕಿದ ಡಾಂಬರು ಈಗಲೇ ಕಿತ್ತುಬರಲಾರಂಭಿಸಿದೆ. ರಸ್ತೆಯಲ್ಲಿ ಬಿರುಕು ಕಾಣಿಸಿಕೊಂಡಿದೆ. ಗುತ್ತಿಗೆದಾರರಿಗೆ ಹೇಳುವವರು, ಕೇಳುವವರು ಯಾರೂ ಇಲ್ಲ. ಪಾಲಿಕೆ ಹುಚ್ಚರ ಸಂತೆಯಂತೆ ಆಗಿದೆ' ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು.

'ಮಳೆ ಬರುವಾಗ ಡಾಂಬರು ಹಾಕಿದರೆ ಅದು ಹೆಚ್ಚು ಕಾಲ ಬಾಳಿಕೆ ಬರುವುದಿಲ್ಲ. ಡಾಂಬರೀಕರಣದ ವೇಳೆ ಮಿಶ್ರಣದ ಉಷ್ಣಾಂಶ ಕಾಯ್ದುಕೊಳ್ಳುವಿಕೆ ತುಂಬಾ ಮುಖ್ಯ. ಅದರ ಆಧಾರದಲ್ಲೇ ಡಾಂಬರೀಕರಣದ ಗುಣಮಟ್ಟ ನಿರ್ಧಾರವಾಗುತ್ತದೆ' ಎಂದು ಹಿರಿಯ ಎಂಜಿನಿಯರ್ ಒಬ್ಬರು ಅಭಿಪ್ರಾಯಪಟ್ಟರು.

'ಬಿಸಿ ಡಾಂಬರು- ಜಲ್ಲಿ ಮಿಶ್ರಣವು ಕನಿಷ್ಠ 160 ಡಿಗ್ರಿ ಸೆಂಟಿಗ್ರೇಡ್ ಉಷ್ಣಾಂಶವನ್ನು ಹೊಂದಿರಬೇಕು. ಜಲ್ಲಿ–ಡಾಂಬರು ಮಿಶ್ರಣವನ್ನು ರಸ್ತೆಗೆ ಹಾಕುವಾಗ ಅದರ ಉಷ್ಣಾಂಶ ಕನಿಷ್ಠ ಎಂದರೂ 120 ಡಿಗ್ರಿ ಸೆಂಟಿಗ್ರೇಡ್‌ನಷ್ಟು ಇರಬೇಕು. ಅದಕ್ಕಿಂತ ಕಡಿಮೆ ಆದರೆ ರಸ್ತೆಯ ಮೇಲ್ಮೈಗೆ ಮಿಶ್ರಣವು ಸರಿಯಾಗಿ ಅಂಟಿಕೊಳ್ಳುವುದಿಲ್ಲ. ರಸ್ತೆ ಮೇಲ್ಮೈಗೆ ಅಂಟು ಪದರದ ರೂಪದಲ್ಲಿ ಹಾಕುವ ದ್ರವ ಡಾಂಬರು ಕೂಡಾ ಮಳೆ ಬರುವಾಗ ತಣ್ಣಗಾಗುತ್ತದೆ. ಆಗ ರಸ್ತೆಯ ಮೇಲ್ಮೈ ಡಾಂಬರು ಮಿಶ್ರಣವನ್ನು ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯವನ್ನು ಕಳೆದುಕೊಳ್ಳುತ್ತದೆ' ಎಂದು ಅವರು ವಿವರಿಸಿದರು.

'ಮಳೆಗಾಲದಲ್ಲಿ ಡಾಂಬರೀಕರಣ ಕಾಮಗಾರಿ ನಡೆಸಬಾರದು ಎಂದು ಲೋಕೋಪಯೋಗಿ ಇಲಾಖೆಯ ಕೈಪಿಡಿಯಲ್ಲೇ ಸೂಚಿಸಲಾಗಿದೆ. ಮಳೆ ಬರುವಾಗ ಡಾಂಬರೀಕರಣ ನಡೆಸಬಾರದು ಎಂದು ಗುತ್ತಿಗೆದಾರರಿಗೂ ಸೂಚನೆ ನೀಡಲಾಗಿರುತ್ತದೆ. ಕಾಮಗಾರಿಯ ಗುಣಮಟ್ಟ ನೋಡಿಕೊಳ್ಳುವುದಕ್ಕಾಗಿಯೇ ಯೋಜನಾ ನಿರ್ವಹಣೆ ಸಲಹೆಗಾರರನ್ನು (ಪಿಎಂಸಿ) ನೇಮಿಸಲಾಗುತ್ತದೆ. ಜಲ್ಲಿ- ಡಾಂಬರು ಮಿಶ್ರಣ ನಿಗದಿತ ಉಷ್ಣಾಂಶದಲ್ಲಿದೆಯೇ ಎಂಬುದನ್ನು ತಪಾಸಣೆ ನಡೆಸುವುದು ಅವರ ಜವಾಬ್ದಾರಿ' ಎಂದು ಅವರು ತಿಳಿಸಿದರು.

'ತಣ್ಣಗಾದ ಜಲ್ಲಿ- ಡಾಂಬರು ಮಿಶ್ರಣ ಬಳಸಿದರೆ ಅದು ದೋಷಯುಕ್ತ ಕಿತ್ತುಬರುತ್ತದೆ. ಈ ಡಾಂಬರೀಕರಣ ಮೂರು ತಿಂಗಳು ಬಾಳಿಕೆ ಬಂದರೆ ಹೆಚ್ಚು' ಎಂದರು.

ಸುದ್ದಿ 2 ನಿಮಿಷ

ರೇಸ್ ಕ್ಲಬ್ : ಬೆಟ್ಟಿಂಗ್ ಮೊತ್ತದ ಮೇಲಿನ ಜಿಎಸ್‌ಟಿ ರದ್ದು

ಬೆಂಗಳೂರು: ಬೆಂಗಳೂರು ಟರ್ಫ್ ಕ್ಲಬ್ ಮತ್ತು ಮೈಸೂರು ರೇಸ್ ಕ್ಲಬ್ ಲಿಮಿಟೆಡ್‌ನಲ್ಲಿ ಸಂಪೂರ್ಣ ಬೆಟ್ಟಿಂಗ್ ಮೊತ್ತದ ಮೇಲೆ ತೆರಿಗೆ ವಿಧಿಸುವ ಕೇಂದ್ರ ಸರ್ಕಾರದ ಕ್ರಮವನ್ನು ರದ್ದುಪಡಿಸಿ ಹೈಕೋರ್ಟ್ ಆದೇಶಿಸಿದೆ.

'ಬೆಟ್ಟಿಂಗ್ ಮೊತ್ತದ ಮೇಲೆ ಜಿಎಸ್‌ಟಿ ಪಾವತಿಸಬೇಕು' ಎಂಬ ನಿಯಮ ಪ್ರಶ್ನಿಸಿ ಎರಡು ರೇಸ್ ಕ್ಲಬ್‌ಗಳು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಪೀಠ, ಈ ಆದೇಶ ನೀಡಿದೆ.

ಕೇಂದ್ರ ಸರಕು ಮತ್ತು ಸೇವೆಗಳ 2017ರ ನಿಯಮ 31ಎ(3) ಹಾಗೂ ಕರ್ನಾಟಕ ಸರಕು ಮತ್ತು ಸೇವೆ ತೆರಿಗೆ ನಿಯಮ 31ಎ ಅನ್ನು ಈ ಎರಡು ರೇಸ್ ಕ್ಲಬ್‌ಗಳಿಗೆ ಅನ್ವಯ ಆಗುವಂತೆ ಪೀಠ ರದ್ದುಪಡಿಸಿದೆ.

ಸ್ಟಾಕ್ ಬ್ರೋಕರ್ ಅಥವಾ ಟ್ರಾವೆಲ್ ಏಜೆಂಟ್‌ಗಳ ರೀತಿಯಲ್ಲಿ ಈ ಎರಡು ರೇಸ್ ಕ್ಲಬ್‌ಗಳು ಕೇವಲ ಕಮಿಷನ್ ಪಡೆದು ಕಾರ್ಯ ನಿರ್ವಹಿಸುತ್ತಿವೆ. ಈ ಕಾರಣದಿಂದ ಈ ಕ್ಲಬ್‌ಗಳು ಸಂಪೂರ್ಣ ಬೆಟ್ಟಿಂಗ್ ಮೊತ್ತದ ಮೇಲೆ ಜಿಎಸ್‌ಟಿ ಪಾವತಿಸಲು ಆಗುವುದಿಲ್ಲ ಎಂದು ಪೀಠ ಅಭಿಪ್ರಾಯಪಟ್ಟಿದೆ.

'ರೇಸ್ ಚಟುವಟಿಕೆಗಳ ಸಂಬಂಧ ಗಳಿಸುವ ಕಮಿಷನ್ ಮೇಲೆ ಮಾತ್ರ ತೆರಿಗೆ ಪಾವತಿಸಲು ಅವಕಾಶವಿದೆ. ಸಂಪೂರ್ಣ ಬೆಟ್ಟಿಂಗ್ ಮೊತ್ತದ ಮೇಲೆ ತೆರಿಗೆ ಪಾವತಿಸಲು ಅವಕಾಶವಿಲ್ಲ' ಎಂದು ಅರ್ಜಿದಾರ ಕ್ಲಬ್‌ಗಳು ವಾದ ಮಂಡಿಸಿದ್ದವು.

'ಕೆಎಸ್‌ಆರ್‌ಟಿಸಿ ಪದ ಬಳಕೆ: ಮಾಹಿತಿ ಪಡೆದು ಮುಂದಿನ ತೀರ್ಮಾನ'

ಬೆಂಗಳೂರು: 'ಕೆಎಸ್‌ಆರ್‌ಟಿಸಿ ಎಂಬ ಪದವನ್ನು ಕರ್ನಾಟಕ ಬಳಸದಂತೆ ಟ್ರೇಡ್ ಮಾರ್ಕ್ ರಿಜಿಸ್ಟ್ರಾರ್ ನೀಡಿರುವ ತೀರ್ಪಿನ ಮಾಹಿತಿ ಪಡೆದು ಕಾನೂನು ಹೋರಾಟದ ಬಗ್ಗೆ ತೀರ್ಮಾನಿಸಲಾಗುವುದು' ಎಂದು ಸಾರಿಗೆ ಸಚಿವ ಲಕ್ಷ್ಮಣ ಸವದಿ ತಿಳಿಸಿದ್ದಾರೆ.

ಕೆಎಸ್‌ಆರ್‌ಟಿಸಿ ಎಂಬುದನ್ನು ತಾವೇ ಮೊದಲು ಬಳಸಿದ್ದು, ಅದನ್ನು ಕರ್ನಾಟಕ ಬಳಸಕೂಡದು ಎಂದು ಕೇರಳ ಸರ್ಕಾರ ತಕರಾರು ತೆಗೆದಿತ್ತು. ಅದರ ಬಗ್ಗೆ ಟ್ರೇಡ್ ಮಾರ್ಕ್ ರಿಜಿಸ್ಟ್ರಾರ್ ನೀಡಿದ ತೀರ್ಪಿನಲ್ಲಿ ಏನಿದೆ ಎಂಬ ಅಂಶ ಅಧಿಕೃತವಾಗಿ ತಿಳಿದ ಬಳಿಕ ಮುಂದಿನ ನಿಲುವು ತೆಗೆದುಕೊಳ್ಳಲಾಗುವುದು ಎಂದು ಅವರು ಹೇಳಿದ್ದಾರೆ. 'ಈ ವಿವಾದ ಅನಗತ್ಯವಾಗಿ ಎದ್ದಿದೆ. ಖಾಸಗಿ ಸಂಸ್ಥೆಗಳಲ್ಲಾದರೆ ಹೆಸರು ಅಥವಾ ಟ್ರೇಡ್ ಮಾರ್ಕ್‌ಗಳು ವ್ಯವಹಾರ ಮತ್ತು ಲಾಭಗಳ ಮೇಲೆ ಪ್ರಭಾವ ಬೀರುತ್ತವೆ. ಆದರೆ, ಕರ್ನಾಟಕ ಮತ್ತು ಕೇರಳ ಸಾರಿಗೆ ಕ್ಷೇತ್ರದಲ್ಲಿ ಲಾಭ ಗಳಿಸುವ ಸ್ಪರ್ಧೆಗೆ ಮುಂದಾಗದೆ ಸಾರ್ವಜನಿಕರ ಸೇವೆ ಗಮನದಲ್ಲಿ ಇಟ್ಟುಕೊಂಡು ಕೆಲಸ ಮಾಡುತ್ತಿವೆ' ಎಂದಿದ್ದಾರೆ.

'ಇದನ್ನು ಎರಡೂ ರಾಜ್ಯಗಳು ಪ್ರತಿಷ್ಠೆಯ ವಿಷಯವಾಗಿ ಮಾಡಿಕೊಳ್ಳಬಾರದು. ಇದರಿಂದ ಕೇರಳ ರಾಜ್ಯಕ್ಕೆ ಸಂಭ್ರಮಪಡುವಂಥ ವಿಚಾರವೇನೂ ಅಲ್ಲ. ಕರ್ನಾಟಕದಲ್ಲಿ ಕೆಎಸ್‌ಆರ್‌ಟಿಸಿ ಎಂಬ ಹೆಸರಿದ್ದರೆ ಅದರಿಂದ ಕೇರಳದ ಕೆಎಸ್‌ಆರ್‌ಟಿಸಿ ಸಂಸ್ಥೆಗೆ ಯಾವುದೇ ನಷ್ಟ ಇಲ್ಲ. ಕೇರಳದ ಸಾರಿಗೆ ಸಂಸ್ಥೆಗಳೊಂದಿಗೆ ಕರ್ನಾಟಕ ಎಂದೂ ಪೈಪೋಟಿಗೆ ಇಳಿದಿದ್ದಿಲ್ಲ ಎಂಬುದನ್ನು ಕೇರಳ ಮೊದಲು ಅರ್ಥ ಮಾಡಿಕೊಳ್ಳಬೇಕು' ಎಂದು ಅವರು ಹೇಳಿದ್ದಾರೆ.

ವಿದ್ಯಾರ್ಥಿಗಳ ಜತೆ ಮೋದಿ ಸಂವಾದ

ನವದೆಹಲಿ: ಶಿಕ್ಷಣ ಸಚಿವಾಲಯ ಗುರುವಾರ ಸಿಬಿಎಸ್‌ಇ 12ನೇ ತರಗತಿ ವಿದ್ಯಾರ್ಥಿಗಳು ಮತ್ತು ಪೋಷಕರ ಜತೆ ಆಯೋಜಿಸಿದ್ದ ವರ್ಚುವಲ್ ಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ದಿಢೀರ್ ಪ್ರತ್ಯಕ್ಷರಾದರು.

ವಿದ್ಯಾರ್ಥಿಗಳ ಹವ್ಯಾಸಗಳು ಮತ್ತು ಅಧ್ಯಯನದ ಬಗ್ಗೆ ವಿದ್ಯಾರ್ಥಿಗಳ ಜತೆ ಪ್ರಧಾನಿ ಸಮಾಲೋಚನೆ ನಡೆಸಿದರು.

12ನೇ ತರಗತಿ ಪರೀಕ್ಷೆಯನ್ನು ರದ್ದುಪಡಿಸಿರುವುದಕ್ಕೆ ವಿದ್ಯಾರ್ಥಿಗಳು ಇದೇ ಸಂದರ್ಭದಲ್ಲಿ ಪ್ರಧಾನಿ ಅವರಿಗೆ ಧನ್ಯವಾದಗಳನ್ನು ಸಲ್ಲಿಸಿದರು.

ಪ್ರಧಾನಿ ಜತೆ ಮಾತನಾಡಿದ ಬೆಂಗಳೂರಿನ ಮಲ್ಲೇಶ್ವರದ ಕೇಂದ್ರೀಯ ವಿದ್ಯಾಲಯದ ವಿದ್ಯಾರ್ಥಿ ಅಭಿರಾಮ್, 'ಅಧ್ಯಯನದ ಜತೆ ಪ್ರತಿ ದಿನ 30 ನಿಮಿಷ ಯೋಗ ಮಾಡುತ್ತೇನೆ' ಎಂದು ಹೇಳಿದರು.

ಬೆಂಗಳೂರಿನ ಇನ್ನೊಬ್ಬ ವಿದ್ಯಾರ್ಥಿ ನಂದನ್ ಹೆಗಡೆ, '12ನೇ ತರಗತಿ ಪರೀಕ್ಷೆ ರದ್ದು ಮಾಡಿರುವುದು ಸ್ವಾಗತಾರ್ಹ ಕ್ರಮ. ವಿದ್ಯಾರ್ಥಿಗಳಿಗೆ ಜೀವನದಲ್ಲಿ ಇದೊಂದೇ ಕೊನೆಯ ಪರೀಕ್ಷೆ ಅಲ್ಲ. ಇನ್ನೂ ಹಲವಾರು ಪರೀಕ್ಷೆಗಳನ್ನು ಎದುರಿಸಬೇಕಾಗುತ್ತದೆ. ಆದರೆ, ಆರೋಗ್ಯವೇ ಮುಖ್ಯ' ಎಂದು ಹೇಳಿದರು.

ಕೆಲವು ಪೋಷಕರು ಕಾಲೇಜು ಪ್ರವೇಶದ ಬಗ್ಗೆಯೂ ಸಭೆಯಲ್ಲಿ ವಿವರಿಸಿದರು.

ಖಾಸಗಿ ಶಿಕ್ಷಣ ಸಂಸ್ಥೆ ಸಿಬ್ಬಂದಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೋವಿಡ್‌ನಿಂದ ಶಾಲಾ–ಕಾಲೇಜುಗಳು ನಡೆಯುತ್ತಿಲ್ಲವೆಂಬ ನೆಪವೊಡ್ಡಿ ಶಿಕ್ಷಕರು, ಉಪನ್ಯಾಸಕರನ್ನು ಖಾಸಗಿ ಶಿಕ್ಷಣ ಸಂಸ್ಥೆಗಳು ವಜಾಗೊಳಿಸದಂತೆ ಮತ್ತು ವೇತನ ಕಡಿತ ಮಾಡದಂತೆ ಆದೇಶ ಹೊರಡಿಸಬೇಕು. ಜೊತೆಗೆ, ರಾಜ್ಯ ಸರ್ಕಾರ ವಿಶೇಷ ಆರ್ಥಿಕ ಪ್ಯಾಕೇಜ್ ಘೋಷಿಸಬೇಕು' ಎಂದು ಆಗ್ರಹಿಸಿ ಅಖಿಲ ಭಾರತ ಶಿಕ್ಷಣ ಉಳಿಸಿ ಸಮಿತಿಯ ವತಿಯಿಂದ ಗುರುವಾರ ಆನ್‌ಲೈನ್ ಪ್ರತಿಭಟನೆ ನಡೆಯಿತು.

ಖಾಸಗಿ ಶಾಲಾ, ಕಾಲೇಜುಗಳ ಶಿಕ್ಷಕರು ಮತ್ತು ಉಪನ್ಯಾಸಕರು ತಮ್ಮ ಮನೆಯಲ್ಲೇ ಭಿತ್ತಿಪತ್ರಗಳನ್ನು ಹಿಡಿದು ಆನ್‌ಲೈನ್ ಚಳವಳಿಯಲ್ಲಿ ಭಾಗವಹಿಸಿದರು.

'ಶಾಲಾ ಕಾಲೇಜುಗಳು ಮುಚ್ಚಿರುವುದರಿಂದ 14 ತಿಂಗಳುಗಳಿಂದ ಸಂಬಳ ಇಲ್ಲದೆ, ಬೇರೆ ಉದ್ಯೋಗವೂ ಇಲ್ಲದೆ ಚಿಂತಾಜನಕ ಸ್ಥಿತಿಯಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳ ಸಿಬ್ಬಂದಿ ದಿನದೂಡುತ್ತಿದ್ದಾರೆ. ಕೆಲವರು ತರಕಾರಿ, ಹಣ್ಣು ಮಾರುವ, ಕಟ್ಟಡ ಕಾರ್ಮಿಕರಾಗಿ ಕೆಲಸ ಮಾಡುವ ದಯನೀಯ ಪರಿಸ್ಥಿತಿ ಬಂದಿದೆ. ಕೆಲವರು ಆರ್ಥಿಕ ಹೊರೆ ತಾಳಲಾಗದೆ, ಆತ್ಮಹತ್ಯೆ ಮಾಡಿಕೊಂಡ ಘಟನೆಗಳು ನಡೆದಿವೆ' ಎಂದು ಸಮಿತಿಯ ರಾಜ್ಯ ಘಟಕದ ಅಧ್ಯಕ್ಷ ಅಲ್ಲಮಪ್ರಭು ಬೆಟ್ಟದೂರು ಹೇಳಿದರು.

'ಕೆಲವು ಖಾಸಗಿ ಶಿಕ್ಷಣ ಸಂಸ್ಥೆಗಳು ಶಿಕ್ಷಕರನ್ನು ಕೆಲಸದಿಂದ ತೆಗೆದು ಹಾಕುತ್ತಿವೆ. ಡೊನೇಷನ್ ಬಂದಿಲ್ಲವೆಂದು ಫೆಬ್ರವರಿ ತಿಂಗಳಿನಿಂದ ನೀಡಬೇಕಾದ ಸಂಬಳವನ್ನೂ ನೀಡಿಲ್ಲ. ಕೆಲಸದಿಂದ ತೆಗೆದುಹಾಕಬಾರದೆಂದು ಸರ್ಕಾರ ಹೇಳಿದ್ದರೂ, ಅದಕ್ಕೆ ಸಂಸ್ಥೆಗಳು ಬೆಲೆ ಕೊಡುತ್ತಿಲ್ಲ. ಶಿಕ್ಷಕರನ್ನು ಕೆಲಸದಿಂದ ತೆಗೆದುಹಾಕದಂತೆ ಸರ್ಕಾರ ತಕ್ಷಣ ಆದೇಶ ಹೊರಡಿಸಬೇಕು. ಈ ಆದೇಶವನ್ನು ಉಲ್ಲಂಘಿಸದಂತೆ ಕಠಿಣ ಕ್ರಮ ತೆಗೆದುಕೊಳ್ಳಬೇಕು' ಎಂದೂ ಆಗ್ರಹಿಸಿದರು.

'ಶಾಲಾ ಕಚೇರಿ ತೆರೆಯಲು ಅವಕಾಶ ಕೊಡಿ'

ಬೆಂಗಳೂರು: 'ಜೂನ್ 15ರಿಂದ ತರಗತಿ ಆರಂಭಿಸಲು ಶಿಕ್ಷಣ ಇಲಾಖೆ ಸೂಚಿಸಿರುವುದರಿಂದ ಲಾಕ್‌ಡೌನ್ ಇದ್ದರೂ ಶಿಕ್ಷಣ ಸಂಸ್ಥೆಗಳ ಕಚೇರಿ ತೆರೆದು, ದಾಖಲಾತಿ ಪ್ರಕ್ರಿಯೆ ಆರಂಭಿಸಲು ಅವಕಾಶ ನೀಡಬೇಕು' ಎಂದು ಕರ್ನಾಟಕ ಖಾಸಗಿ ಶಾಲಾ ಆಡಳಿತ ಮಂಡಳಿ, ಶಿಕ್ಷಕ– ಶಿಕ್ಷಕೇತರ ಸಿಬ್ಬಂದಿ ಒಕ್ಕೂಟದ ಸಂಚಾಲಕ ಡಿ. ಶಶಿಕುಮಾರ್ ಒತ್ತಾಯಿಸಿದ್ದಾರೆ.

ಈ ಕುರಿತು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಪತ್ರ ಬರೆದಿದ್ದಾರೆ.

'ಪ್ರಸಕ್ತ ಸಾಲಿನ ಶೈಕ್ಷಣಿಕ ವರ್ಷ ಆರಂಭಕ್ಕೂ ಮೊದಲು ಕಳೆದ ವರ್ಷದ ಫಲಿತಾಂಶ ನೀಡಬೇಕಿದೆ. ಜೊತೆಗೆ, ಮುಂದಿನ ವರ್ಷದ ದಾಖಲಾತಿ ಪ್ರಕ್ರಿಯೆ ಆರಂಭಿಸಬೇಕಿದೆ. ಲಾಕ್‌ಡೌನ್ ಸಂಪೂರ್ಣ ತೆರವುಗೊಂಡ ಬಳಿಕ ಕಚೇರಿಗಳನ್ನು ಆರಂಭಿಸಿದರೆ ಒಮ್ಮೆಗೆ ಹೆಚ್ಚಿನ ಸಂಖ್ಯೆಯಲ್ಲಿ ಪೋಷಕರು ಬರುವ ಸಾಧ್ಯತೆ ಇದೆ. ಈ ದಟ್ಟಣೆ ತಪ್ಪಿಸಲು ಮತ್ತು ಶಾಲೆಗಳು ಆರಂಭಗೊಳ್ಳುವುದಕ್ಕೂ ಮೊದಲೇ ಎಲ್ಲ ಸಿದ್ಧತೆ ಮಾಡಿಕೊಳ್ಳಲು ತಕ್ಷಣದಿಂದ ಕಚೇರಿಗಳನ್ನು ತೆರೆಯಲು ಅನುಮತಿ ನೀಡಬೇಕು' ಎಂದು ಅವರು ಆಗ್ರಹಿಸಿದ್ದಾರೆ.

ಪರಿಹಾರ ಹೆಚ್ಚಿಸಬೇಕು: 'ಖಾಸಗಿ ಅನುದಾನರಹಿತ ಶಿಕ್ಷಣ ಸಂಸ್ಥೆಗಳ ಶಿಕ್ಷಕರಿಗೆ ಕೇವಲ ₹ 5 ಸಾವಿರ ಆರ್ಥಿಕ ನೆರವು ಘೋಷಿಸಲಾಗಿದೆ. ಅದನ್ನು ಕನಿಷ್ಠ ₹ 10 ಸಾವಿರಕ್ಕೆ ಹೆಚ್ಚಿಸಬೇಕು. ಶಿಕ್ಷಕೇತರ ಸಿಬ್ಬಂದಿಗೂ ಪರಿಹಾರ ಘೋಷಿಸಬೇಕು' ಎಂದು ಶಶಿಕುಮಾರ್ ಆಗ್ರಹಿಸಿದರು.

'ಕೋವಿಡ್ ಯೋಧರು ಎಂದು ಪರಿಗಣಿಸುವ ಸಂದರ್ಭದಲ್ಲೂ ಖಾಸಗಿ ಅನುದಾನರಹಿತ ಶಿಕ್ಷಣ ಸಂಸ್ಥೆಗಳ ಶಿಕ್ಷಕೇತರ ಸಿಬ್ಬಂದಿಯನ್ನು ಪರಿಗಣಿಸಿಲ್ಲ. ಈ ತಾರತಮ್ಯ ಸರಿಪಡಿಸಬೇಕು' ಎಂದೂ ಅವರು ಮನವಿ ಮಾಡಿದರು.

ಪತ್ರಿಕೋದ್ಯಮ ಪ್ರಶಸ್ತಿ ಪ್ರದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಭ್‌ಜಿತ್ ಸಿಂಗ್ ಮತ್ತು ಅರ್ಶು ಜಾನ್ ಅವರು ತನಿಖಾ ಪತ್ರಿಕೋದ್ಯಮ ವಿಭಾಗದಲ್ಲಿ 'ಏಷ್ಯನ್ ಕಾಲೇಜ್ ಆಫ್ ಜರ್ನಲಿಸಂ' ಪ್ರಶಸ್ತಿಗೆ ಭಾಜನರಾಗಿದ್ದಾರೆ. ಸುಕನ್ಯಾ ಶಾಂತಾ ಅವರಿಗೆ ಸಾಮಾಜಿಕ ಪರಿಣಾಮ ಪತ್ರಿಕೋದ್ಯಮ ವಿಭಾಗದಲ್ಲಿ ನೀಡಲಾಗುವ ಕೆ.ಪಿ. ನಾರಾಯಣ ಕುಮಾರ್ ಸ್ಮಾರಕ ಪ್ರಶಸ್ತಿ ಸಂದಿದೆ.

ದೆಹಲಿಯಲ್ಲಿ ನಡೆದ ಕೋಮು ಗಲಭೆಗಳ ಕುರಿತು ಸಿಂಗ್ ಮತ್ತು ಜಾನ್ ಅವರು ಬರೆದ ತನಿಖಾ ವರದಿ 'ಅಪರಾಧ ಮತ್ತು ಪೂರ್ವಾಗ್ರಹ' 'ದಿ ಕ್ಯಾರವಾನ್' ಪತ್ರಿಕೆಯಲ್ಲಿ ಪ್ರಕಟವಾಗಿತ್ತು. ದೇಶದಾದ್ಯಂತ ಜೈಲುಗಳಲ್ಲಿ ನಡೆಯುತ್ತಿರುವ ಜಾತಿ ತಾರತಮ್ಯ ಪರಿಶೀಲಿಸಿ ಶಾಂತಾ ಅವರು 'ದಿ ವೈರ್'ನಲ್ಲಿ ವರದಿ ಪ್ರಕಟಿಸಿದ್ದರು.

ಸಮಿತಿ ಅಧ್ಯಕ್ಷರಾದ ಆ್ಯಂಡ್ರೂ ವೈಟ್ ಹೆಡ್, ಸದಸ್ಯರಾದ ಅನುರಾಧಾ ರಘುನಾಥನ್ ಮತ್ತು ಪ್ಯಾರಿ ರವೀಂದ್ರನಾಥನ್ ಅವರಿದ್ದ ತೀರ್ಪುಗಾರರ ತಂಡವು ವಿಜೇತರನ್ನು ಆಯ್ಕೆ ಮಾಡಿತು. ತನಿಖಾ ಪತ್ರಿಕೋದ್ಯಮ ಪ್ರಶಸ್ತಿಗೆ ₹2 ಲಕ್ಷ ಹಾಗೂ ಸಾಮಾಜಿಕ ಪರಿಣಾಮ ಪ್ರಶಸ್ತಿ ಪುರಸ್ಕೃತರಿಗೆ ₹1 ಲಕ್ಷ ನಗದು ನೀಡಲಾಯಿತು. ಪ್ರಖ್ಯಾತ ಶಿಕ್ಷಣ ತಜ್ಞ ಮತ್ತು ನೀತಿ ಸಂಶೋಧನಾ ಕೇಂದ್ರದ ಮಾಜಿ ಅಧ್ಯಕ್ಷ ಪ್ರೊ. ಪ್ರತಾಪ್ ಭಾನು ಮೆಹ್ತಾ ಅವರು 2021ನೇ ಸಾಲಿನ ತರಗತಿ ಉದ್ಘಾಟನೆ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಿದರು. ಕೋವಿಡ್ ಕಾರಣ ಪ್ರಶಸ್ತಿ ಪ್ರದಾನ ಸಮಾರಂಭವು ವರ್ಚುವಲ್ ಆಗಿ ನೆರವೇರಿತು.

'₹18 ಕೋಟಿಯಲ್ಲಿ ಅತ್ಯಾಧುನಿಕ ಕ್ರೀಡಾಂಗಣ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಡಾ.ಬಿ.ಆರ್ ಅಂಬೇಡ್ಕರ್ ಹೆಸರಿನಲ್ಲಿ ₹18 ಕೋಟಿ ವೆಚ್ಚದಲ್ಲಿ ಅತ್ಯಾಧುನಿಕ ಕ್ರೀಡಾಂಗಣ ನಿರ್ಮಿಸಲಾಗುತ್ತಿದೆ. ಇಲ್ಲಿ ಅಂಬೇಡ್ಕರ್ ಪ್ರತಿಮೆಯೂ ಇರಲಿದೆ' ಎಂದು ವಸತಿ ಸಚಿವ ವಿ.ಸೋಮಣ್ಣ ತಿಳಿಸಿದರು.

ಗೋವಿಂದರಾಜನಗರ ಕ್ಷೇತ್ರದ ಅಗ್ರಹಾರ ದಾಸರಹಳ್ಳಿಯಲ್ಲಿ ನಡೆಯುತ್ತಿರುವ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಗುರುವಾರ ವೀಕ್ಷಿಸಿದರು.

ಬಳಿಕ ಮಾತನಾಡಿ 'ಈ ಕ್ರೀಡಾಂಗಣದಲ್ಲಿ ಸ್ಕೇಟಿಂಗ್ ಟ್ರ್ಯಾಕ್, ಮಹಿಳೆಯರಿಗೆ ಪ್ರತ್ಯೇಕವಾದ ಯೋಗ ಕೇಂದ್ರ ಹಾಗೂ ಜಿಮ್ ನಿರ್ಮಿಸಲಾಗಿದೆ. ಫುಟ್‌ಬಾಲ್ ಅಂಗಳ, 100 ಹಾಗೂ 300 ಮೀಟರ್ಸ್ ಓಟದ ಟ್ರ್ಯಾಕ್, ನಾಲ್ಕು ಬ್ಯಾಡ್ಮಿಂಟನ್ ಕೋರ್ಟ್ ಹಾಗೂ ಬ್ಯಾಸ್ಕೆಟ್‌ಬಾಲ್ ಕೋರ್ಟ್ ಕೂಡ ಇರಲಿವೆ' ಎಂದರು.

ಸಚಿವ ವಿ.ಸೋಮಣ್ಣ ಅವರು ಉದ್ಯಾನಕ್ಕೆ ಭೇಟಿ ನೀಡಿ ಪರಿಶೀಲಿಸಿದರು

'ಈ ವಾರ್ಡ್‌ನಲ್ಲಿ ಬಸವ ವನ ಪ್ರಾರಂಭಿಸಲಾಗುವುದು. ಇಲ್ಲಿ ಬಸವಣ್ಣನವರ ಪ್ರತಿಮೆ ಇರಲಿದೆ. ಸುಮಾರು 200 ಮಂದಿ ಕುಳಿತು ಯೋಗಾಭ್ಯಾಸ ಮಾಡುವುದಕ್ಕಾಗಿ ಪಿರಮಿಡ್ ಮಾದರಿಯ ಯೋಗ ಕೇಂದ್ರ ಸ್ಥಾಪಿಸಲಾಗುತ್ತಿದೆ. ಜುಲೈ 15ರೊಳಗೆ ಇದು ಬಳಕೆಗೆ ಮುಕ್ತವಾಗಲಿದೆ' ಎಂದು ತಿಳಿಸಿದರು.

ಗೋವಿಂದರಾಜನಗರ ಮಂಡಲ ಅಧ್ಯಕ್ಷ ವಿಶ್ವನಾಥ ಗೌಡ, ಪಾಲಿಕೆಯ ಮಾಜಿ ಸದಸ್ಯರಾದ ರೂಪಾ ಲಿಂಗೇಶ್, ಶ್ರೀಧರ್, ರಮೇಶ್ ಹಾಗೂ ಬಿಬಿಎಂಪಿ ಅಧಿಕಾರಿಗಳು ಇದ್ದರು.

ಮನೆಗಳಲ್ಲಿ ಪ್ರತ್ಯೇಕವಾಗಿ ಇರುವ, ಕೋವಿಡ್ ಸೋಂಕಿತರಿಗಾಗಿ ₹ 10 ಲಕ್ಷ ಮೌಲ್ಯದ 4,000 ವೈದ್ಯಕೀಯ ಕಿಟ್ ಹಾಗೂ ₹ 5 ಲಕ್ಷ ಮೌಲ್ಯದ ಪಿಪಿಇ ಕಿಟ್‌ಗಳನ್ನು ಲೂನಾರ್ ಎಕ್ಸ್‌ಪೋರ್ಟ್ಸ್‌ನ (ವಾಕ್‌ಮೇಟ್) ವ್ಯವಸ್ಥಾಪಕ ನಿರ್ದೇಶಕ ಬಾಸ್ಟಿನ್ ಜೋಸೆಫ್ ಅವರು ಮೈಸೂರು ಮಹಾನಗರ ಪಾಲಿಕೆ ಆಯುಕ್ತೆ ಶಿಲ್ಪಾ ನಾಗ್ ಅವರಿಗೆ ಈಚೆಗೆ ಹಸ್ತಾಂತರಿಸಿದರು. ಕಂಪನಿಯ ನಿರ್ದೇಶಕ (ಮಾರುಕಟ್ಟೆ) ಜೋಸ್ ಇದ್ದಾರೆ.

'ಕೋವಿಡ್ ಮೂರನೇ ಅಲೆ ಎದುರಿಸಲು ಸಿದ್ಧತೆ ಕೈಗೊಳ್ಳಿ'

ನವದೆಹಲಿ(ಪಿಟಿಐ): ಕೋವಿಡ್–19 ಮೂರನೇ ಅಲೆ ಎದುರಿಸಲು ಎಲ್ಲ ಸಿದ್ಧತೆಗಳನ್ನು ಕೈಗೊಳ್ಳಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಮೇಲೆ ಒತ್ತಡ ಹೇರುವಂತೆ ವಿರೋಧ ಪಕ್ಷಗಳಿಗೆ 185ಕ್ಕೂ ಹೆಚ್ಚು ಚಿಂತಕರು ಬಹಿರಂಗ ಪತ್ರ ಬರೆದಿದ್ದಾರೆ.

ಎರಡನೇ ಅಲೆ ಸಂದರ್ಭದಲ್ಲಿ ಬಹುತೇಕ ರಾಜಕೀಯ ಪಕ್ಷಗಳು ಜನರ ಹಿತಾಸಕ್ತಿಗಾಗಿ ಪಕ್ಷತೀತವಾಗಿ ಕಾರ್ಯನಿರ್ವಹಿಸುವ ಇಚ್ಛೆ ವ್ಯಕ್ತಪಡಿಸಿವೆ. ಆದರೆ, ಎಲ್ಲ ರೀತಿಯ ಸಹಕಾರ ನೀಡುವುದಾಗಿ ತಿಳಿಸಿದ್ದರೂ ಕೇಂದ್ರ ಸರ್ಕಾರ ಯಾವುದೇ ಸಲಹೆಗಳನ್ನು ಸ್ವೀಕರಿಸಲಿಲ್ಲ. ಎಲ್ಲ ರಾಷ್ಟ್ರೀಯ ಪಕ್ಷಗಳನ್ನು ಒಳಗೊಂಡ ರಾಷ್ಟ್ರೀಯ ಕಾರ್ಯ ಪಡೆಯನ್ನು ರಚಿಸಲಿಲ್ಲ ಎಂದು ಟೀಕಿಸಿದ್ದಾರೆ.

ಹೀಗಾಗಿ, ಮೂರನೇ ಅಲೆಯನ್ನು ಎದುರಿಸಲು ರಾಜಕೀಯ ಪಕ್ಷಗಳು ಈಗಿನಿಂದಲೇ ಯೋಜನೆಗಳನ್ನು ರೂಪಿಸಬೇಕು. ಮೂರನೇ ಅಲೆಯಲ್ಲಿ ಮಕ್ಕಳ ಮೇಲೆ ಪರಿಣಾಮ ಬೀರಬಹುದು ಎಂದು ಹೇಳಲಾಗುತ್ತಿದೆ. ಆದ್ದರಿಂದ, ಸರ್ವ ರೀತಿಯಲ್ಲೂ ಸಿದ್ಧತೆಗಳನ್ನು ಕೈಗೊಳ್ಳುವುದು ಅಗತ್ಯವಿದೆ ಎಂದು ಪತ್ರದಲ್ಲಿ ಬರೆದಿದ್ದಾರೆ.

ಆರ್ಥಿಕ ತಜ್ಞ ಕೌಶಿಕ್ ಬಸು, ಮ್ಯಾಗ್ಸೆಸೆ ಪ್ರಶಸ್ತಿ ಪುರಸ್ಕೃತ ಬೇಜವಾಡ ವಿಲ್ಸನ್, ಅಮ್ನೆಸ್ಟಿ ಇಂಟರ್‌ನ್ಯಾಷನಲ್ ಮಾಜಿ ಪ್ರಧಾನ ಕಾರ್ಯದರ್ಶಿ ಸಲೀಲ್ ಶೆಟ್ಟಿ ಸೇರಿದಂತೆ ಹಲವು ಶಿಕ್ಷಣ ತಜ್ಞರು, ಚಿಂತಕರು ಈ ಪತ್ರಕ್ಕೆ ಸಹಿ ಹಾಕಿದ್ದಾರೆ.

'ಸಾಮಾಜಿಕ ನ್ಯಾಯಕ್ಕೆ ಪಿಐಎಲ್ ಪರಿಣಾಮಕಾರಿ ಅಸ್ತ್ರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಾಮಾಜಿಕ ನ್ಯಾಯ ಕಾಪಾಡಲು ಸಾರ್ವಜನಿಕ ಹಿತಾಸಕ್ತಿ ಅರ್ಜಿ (ಪಿಐಎಲ್) ಪರಿಣಾಮಕಾರಿ ಅಸ್ತ್ರ. ಪರಿಸರ ಹಾಗೂ ಸಾರ್ವಜನಿಕ ಆಸ್ತಿ ಪಾಸ್ತಿ ರಕ್ಷಣೆಗೂ ಇದು ಸಹಕಾರಿ' ಎಂದು ಮೈಸೂರು ವಿಶ್ವವಿದ್ಯಾಲಯದ ವಿಶ್ರಾಂತ ಪ್ರಾಧ್ಯಾಪಕ ಸಿ.ಬಸವರಾಜು ತಿಳಿಸಿದರು.

ಬೆಂಗಳೂರು ವಿಶ್ವವಿದ್ಯಾಲಯದ ಎನ್‌ಎಸ್‌ಎಸ್ ಘಟಕವು ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ಆನ್‌ಲೈನ್‌ನಲ್ಲಿ ಹಮ್ಮಿಕೊಂಡಿರುವ 'ವಿಚಾರ ಕಲರವ' ಉಪನ್ಯಾಸ ಮಾಲಿಕೆಯಲ್ಲಿ 'ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ ಮತ್ತು ಪ್ರಜಾಪ್ರಭುತ್ವ' ವಿಷಯದ ಕುರಿತು ಗುರುವಾರ ಮಾತನಾಡಿದರು.

'ಸಮಾಜದಲ್ಲಿ ಗೌರವಯುತವಾಗಿ ಬದುಕಲು ಕೆಲವು ಹಕ್ಕುಗಳ ಅಗತ್ಯವಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರಜೆಗಳಿಗೆ ಹೆಚ್ಚಿನ ಸ್ವಾತಂತ್ರ್ಯ ಇರಬೇಕು. ಸಮಾನತೆಯೂ ಬಹಳ ಅಗತ್ಯ. ಚುನಾಯಿತ ಸರ್ಕಾರಗಳು ಜನಪರವಾಗಿ ಕೆಲಸ ಮಾಡಬೇಕು' ಎಂದರು.

'ಪಿಐಎಲ್‌ಗಳನ್ನು ಸುಪ್ರೀಂ ಕೋರ್ಟ್ ಗಂಭೀರವಾಗಿ ಪರಿಗಣಿಸಿದೆ. ದುರ್ಬಲರು, ದಲಿತರು, ಕಾರ್ಮಿಕರು ಹೀಗೆ ಎಲ್ಲ ವರ್ಗದವರು ತಮಗಾದ ಅನ್ಯಾಯದ ವಿರುದ್ಧ ಪಿಐಎಲ್ ಸಲ್ಲಿಸಬಹುದು. ಪ್ರಾಥಮಿಕ, ಪ್ರೌಢಶಾಲಾ ಹಂತದ ಮಕ್ಕಳಿಗೆ ಹಾಗೂ ಗ್ರಾಮೀಣ ಭಾಗದ ಜನರಿಗೆ ಇವುಗಳ ಮಹತ್ವದ ಕುರಿತು ಅರಿವು ಮೂಡಿಸುವ ಕೆಲಸ ಆಗಬೇಕು. ಇವುಗಳ ದುರ್ಬಳಕೆ ಆಗದಂತೆಯೂ ಎಚ್ಚರ ವಹಿಸಬೇಕು. ಸಾಮಾನ್ಯ ಜನರು ಸುಪ್ರೀಂಕೋರ್ಟ್‌ಗೆ ಹೋಗುವುದು ಕಷ್ಟ. ಹೀಗಾಗಿ ಜಿಲ್ಲಾ ನ್ಯಾಯಾಲಯಗಳಲ್ಲೂ ಪಿಐಎಲ್ ಸಲ್ಲಿಸಲು ಅವಕಾಶ ಕಲ್ಪಿಸಬೇಕು' ಎಂದು ತಿಳಿಸಿದರು.

ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಕೆ.ಆರ್.ವೇಣುಗೋಪಾಲ್, ಎನ್‌ಎಸ್‌ಎಸ್ ಸಂಯೋಜನಾಧಿಕಾರಿ ಎನ್.ಸತೀಶ್ ಗೌಡ ಇದ್ದರು.

ಜಿಲ್ಲಾಧಿಕಾರಿಯವರ ಕಾರ್ಯಾಲಯ, ಜಿಲ್ಲಾ ನಗರಾಭಿವೃದ್ಧಿ ಕೋಶ.
ಬೆಂಗಳೂರು ಗ್ರಾಮಾಂತರ ಜಿಲ್ಲೆ
ಜಿಲ್ಲಾ ಸಂಕೀರ್ಣ, ಬೀರಸಂದ್ರ ಗ್ರಾಮ, ಕುಂದಾಣ ಹೋಬಳಿ, ದೇವನಹಳ್ಳಿ
ತಾಲ್ಲೂಕು – 562110 ಇ–ಮೇಲ್ : blr@yahoo.co.in, dudc.blrrural@gmail.com

ಸಂ.: ಜಿನಕೋ(5)/ಸಿಆರ್/ಬೀದಿ ದೀಪ/65/2021–22 ದಿನಾಂಕ : 29–05–2021

ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಖಾಸಗಿ ಸಹಭಾಗಿತ್ವದಲ್ಲಿ L.E.D. ಇಂಧನ ಕ್ಷಮತೆಯ ಬೀದಿ ದೀಪಗಳ ಅಳವಡಿಕೆ ಮತ್ತು CCMS ವ್ಯವಸ್ಥೆ ಸ್ಥಾಪಿಸುವ ಸಲುವಾಗಿ Concessionaire ಆಯ್ಕೆ ಮಾಡಲು ಅರ್ಹ ನೊಂದಾಯಿತ ಸಂಸ್ಥೆಗಳಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಅರ್ಹ ನೊಂದಾಯಿತ ಸಂಸ್ಥೆ ಸದರಿ ಟೆಂಡರ್‌ನಲ್ಲಿ ಭಾಗವಹಿಸಲು ಮಾಹಿತಿಯನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಪಡೆಯಬಹುದಾಗಿದೆ. (INDENT NO.: DUDC/TECH/CCMS LEDSLG/CR/65/2021-22) ಹೆಚ್ಚಿನ ಮಾಹಿತಿಗಾಗಿ ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರನ್ನು ಸಂಪರ್ಕಿಸಬಹುದಾಗಿದೆ.

Schedule of Bidding Process

Events : 1) Last Date and Time for receiving queries **: 07-07-2021. 2)** Venue, Date and Time of Pre-Bid Meeting **: 16-06-2021, Time : 11.30 a.m. at Bangalore Rural DC Office. 3)** Last Date and Time Prescribed for Submission of Bid (s) (Bid due Date) **: 07-07-2021, Time : 4.30 p.m. 4)** Date and Time of Opening of the Technical Bid (s) **: 08-07-2021. 5)** Date and Time of Opening the Financial Bid (s) of Technically Qualified Bidder (s) **: 30-07-2021. 6)** Validity of Bids **: 180 days.**

ಸಹಿ/– ಯೋಜನಾ ನಿರ್ದೇಶಕರು,
ಜಿಲ್ಲಾ ನಗರಾಭಿವೃದ್ಧಿ ಕೋಶ, ಬೆಂಗಳೂರು ಗ್ರಾಮಾಂತರ ಜಿಲ್ಲೆ.

ವಾಸಾಸಂಇ/ಉನಿಕ/ಬೆಂಗ್ರಾಜ/ಮಣಿಪಾಲ್/55/2021–22

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕ್ಯಾಲನೂರು ಗ್ರಾಮ ಪಂಚಾಯಿತಿ ಕಾರ್ಯಾಲಯ
ಕೋಲಾರ ತಾಲ್ಲೂಕು ಮತ್ತು ಜಿಲ್ಲೆ
e-Mail:gpkyalanur@gmail.com, Ph.No:08152-239170
ಕ್ರ.ಸಂ: ಕ್ಯಾ.ಗ್ರಾ.ಪಂ.ಟೆಂಡರ್ ಪ್ರಕಟಣೆ/02/2021–22 ದಿನಾಂಕ: 02.06.2021

ಟೆಂಡರ್ ಪ್ರಕಟಣೆ

ಕೋಲಾರ ತಾಲ್ಲೂಕು, ಕ್ಯಾಲನೂರು ಗ್ರಾಮ ಪಂಚಾಯಿತಿ ಕ್ಯಾಲನೂರು ಗ್ರಾಮಕ್ಕೆ ಸ್ವಚ್ಛ ಭಾರತ್ ಮಿಷನ್ ಯೋಜನೆಯಡಿ ಪ್ರತಿ ಮನೆಯಿಂದ ಹಸಿ ಕಸ ಮತ್ತು ಒಣ ಕಸವನ್ನು ಸಂಗ್ರಹಿಸಲು 14 ಲೀಟರ್ ಸಾಮರ್ಥ್ಯದ ಕಸದ ಬುಟ್ಟಿಗಳನ್ನು ಸರಬರಾಜು ಮಾಡಲು ಟೆಂಡರ್ ಪ್ರಕಟಿಸುವ ಬಗ್ಗೆ.

ಕ್ರ. ಸಂ	ಕಸದ ಬುಟ್ಟಿಗಳ ವಿವರ	ಸಾಮರ್ಥ್ಯ	ಪರಿಮಾಣ
1	ಪ್ಲಾಸ್ಟಿಕ್ ಕಸದ ಬುಟ್ಟಿಗಳು ಹಸಿರು ಬಣ್ಣದು	14 ಲೀಟರ್	1300
2	ಪ್ಲಾಸ್ಟಿಕ್ ಕಸದ ಬುಟ್ಟಿಗಳು ನೀಲಿ ಬಣ್ಣದು	14 ಲೀಟರ್	1300
	ಒಟ್ಟು		2600

ವಿವರ: (1) ಟೆಂಡರ್ ಫಾರಂಗಾಗಿ ಅರ್ಜಿ ನೀಡುವುದು: **10.06.2021** ರಿಂದ **14.06.2021** ರವರೆಗೆ. (2) ಖಾಲಿ ಟೆಂಡರ್ ಫಾರಂ ನೀಡುವುದು : **17.06.2021**, ಸಮಯ **5.00** ಗಂಟೆಯವರೆಗೆ. (3) ಭರ್ತಿ ಮಾಡಿದ ಟೆಂಡರ್ ಫಾರಂ ಸಲ್ಲಿಸುವುದು: **24.06.2021** ಸಂಜೆ **4:00** ಗಂಟೆಯ ಒಳಗೆ ಸಲ್ಲಿಸುವುದು ಇದೇ ದಿನ ಸಂಜೆ **4.15** ಗಂಟೆಗೆ ಟೆಂಡರ್ ಬಾಕ್ಸ್‌ನ್ನು ಹಾಜರಿರುವ ಟೆಂಡರ್‌ದಾರರ ಸಮ್ಮುಖದಲ್ಲಿ ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಾಗಿ ಗ್ರಾಮ ಪಂಚಾಯಿತಿ ಕಛೇರಿಯನ್ನು ಸಂಪರ್ಕಿಸಿ ಪಡೆಯಬಹುದು. ಮೊಬೈಲ್ ನಂ.: 8892908799, 9449441463.

ಸಹಿ/– ಅಧ್ಯಕ್ಷರು, ಕ್ಯಾಲನೂರು ಗ್ರಾಮ ಪಂಚಾಯಿತಿ, ಕೋಲಾರ ತಾಲ್ಲೂಕು
ಸಹಿ/– ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಕ್ಯಾಲನೂರು ಗ್ರಾಮ ಪಂಚಾಯಿತಿ, ಕೋಲಾರ ತಾಲ್ಲೂಕು

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ 73/ಎಂ.ಸಿ.ಎ/2021–22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ (ವಿದ್ಯುತ್), ಯಲಹಂಕ ವಲಯ,
ಅಮೃತಹಳ್ಳಿ ಅಡ್ಡರಸ್ತೆ, ಬ್ಯಾಟರಾಯನಪುರ, ಬೆಂಗಳೂರು.
ಸಂಖ್ಯೆ: ಬೃಬೆಂಮಪಾ/ಕಾಪಾಅ/ವಿದ್ಯುತ್/ಯವ/ಟೆಂಡರ್/01/2021–22 ದಿನಾಂಕ: 03.06.2021

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ) ಐಟಿಟಿ (ಕೆಡಬ್ಲ್ಯು–1, 2, 3) (ಏಕಲಕೋಟೆ ಪದ್ಧತಿ)
(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕಾರ್ಯಪಾಲಕ ಅಭಿಯಂತರರು (ವಿದ್ಯುತ್) ಯಲಹಂಕ ವಲಯ, ಇವರು ಕೆಟಿಪಿಪಿ ಕಾಯಿದೆ 2000 & 2017ರಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ/ಕೆಪಿಡಬ್ಲ್ಯುಡಿ/ಸಿಪಿಡಬ್ಲ್ಯುಡಿ/ರೈಲ್ವೇಸ್/ಎಂಇಎಸ್/ರಾಷ್ಟ್ರೀಯ ಹೆದ್ದಾರಿ ಅಥವಾ ಇತರೆ ಯಾವುದೇ ಕೇಂದ್ರ /ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಕೆಳಗಿನ ಪಟ್ಟಿಯಲ್ಲಿ ತಿಳಿಸಿರುವಂತೆ **ಬೃ.ಬೆಂ.ಮ.ಪಾಲಿಕೆ ಯಲಹಂಕ ವಲಯದಲ್ಲಿ ಬೀದಿ ದೀಪ ವ್ಯವಸ್ಥೆಯ ಕಾರ್ಯಾಚರಣೆ ಮತ್ತು ನಿರ್ವಹಣೆ ಕಾಮಗಾರಿಗಾಗಿ** ಐಟಂ ದರದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಗಳ ಹೆಸರು	ಕಾಮಗಾರಿಗಿಟ್ಟ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)
1.	ಯಲಹಂಕ ವಲಯದ ವಾರ್ಡ್ ಸಂಖ್ಯೆ–08ರಲ್ಲಿ ಹದಗೆಟ್ಟಿರುವ ಕಂಬಗಳನ್ನು ಬದಲಾಯಿಸುವುದು, ಕಾಲಮಾಪಕ ಸ್ವಿಚ್ ಬಾಕ್ಸ್‌ಗಳ ಅಳವಡಿಕೆ, ಕಂಬಗಳಿಗೆ ಬಣ್ಣ ಬಳಿಯುವುದು, ಹಾನಿಯಾದ ಪ್ಯಾನೆಲ್ ಬೋರ್ಡ್‌ಗಳನ್ನು ಬದಲಾಯಿಸುವುದು ಮತ್ತು ಏರಿಯಲ್ ಬಂಚ್ ಕೇಬಲ್ ಬದಲಾಯಿಸುವುದರ ಮೂಲಕ ಬೀದಿ ದೀಪಗಳ ದುರಸ್ತಿ ಮತ್ತು ವ್ಯವಸ್ಥೆ ಸುಧಾರಣೆ ಮಾಡುವುದು. ಪ್ಯಾಕೇಜ್ ವೈ8	49.30
2.	ಯಲಹಂಕ ವಲಯದ ವಾರ್ಡ್ ಸಂಖ್ಯೆ–09ರಲ್ಲಿ ಹದಗೆಟ್ಟಿರುವ ಕಂಬಗಳನ್ನು ಬದಲಾಯಿಸುವುದು, ಕಾಲಮಾಪಕ ಸ್ವಿಚ್ ಬಾಕ್ಸ್‌ಗಳ ಅಳವಡಿಕೆ, ಕಂಬಗಳಿಗೆ ಬಣ್ಣ ಬಳಿಯುವುದು, ಹಾನಿಯಾದ ಪ್ಯಾನೆಲ್ ಬೋರ್ಡ್‌ಗಳನ್ನು ಬದಲಾಯಿಸುವುದು ಮತ್ತು ಏರಿಯಲ್ ಬಂಚ್ ಕೇಬಲ್ ಬದಲಾಯಿಸುವುದರ ಮೂಲಕ ಬೀದಿ ದೀಪಗಳ ದುರಸ್ತಿ ಮತ್ತು ವ್ಯವಸ್ಥೆ ಸುಧಾರಣೆ ಮಾಡುವುದು. ಪ್ಯಾಕೇಜ್ ವೈ9	49.90
3.	ಯಲಹಂಕ ವಲಯದ ವಾರ್ಡ್ ಸಂಖ್ಯೆ–03 & 04ರಲ್ಲಿ ಹದ–ಗೆಟ್ಟಿರುವ ಕಂಬಗಳನ್ನು ಬದಲಾಯಿಸುವುದು, ಕಾಲಮಾಪಕ ಸ್ವಿಚ್ ಬಾಕ್ಸ್‌ಗಳ ಅಳವಡಿಕೆ, ಕಂಬಗಳಿಗೆ ಬಣ್ಣ ಬಳಿಯುವುದು, ಹಾನಿ–ಯಾದ ಪ್ಯಾನೆಲ್ ಬೋರ್ಡ್‌ಗಳನ್ನು ಬದಲಾಯಿಸುವುದು ಮತ್ತು ಏರಿಯಲ್ ಬಂಚ್ ಕೇಬಲ್ ಬದಲಾಯಿಸುವುದರ ಮೂಲಕ ಬೀದಿ ದೀಪಗಳ ದುರಸ್ತಿ ಮತ್ತು ವ್ಯವಸ್ಥೆ ಸುಧಾರಣೆ ಮಾಡುವುದು. ಪ್ಯಾಕೇಜ್ ವೈ12	32.50
ಇಎಂಡಿ (ರೆ.ಗಳಲ್ಲಿ)	ಎಫ್‌ಡಿ–675 ವೆಚ್ಚ–12/2020 ದಿನಾಂಕ: 22.12.2020ರ ಪ್ರಕಾರ	

ಟೆಂಡರ್ ವೇಳಾಪಟ್ಟಿ: (1) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್–ಮೆಂಟ್ ಪೋರ್ಟಲ್‌ನಲ್ಲಿ ದಿನಾಂಕ: **07.06.2021**ರಿಂದ ಡೌನ್‌ಲೋಡ್ ಮಾಡಿ–ಕೊಳ್ಳಬಹುದು. (2) ಟೆಂಡರ್‌ಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಲು ಕೊನೆಯ ದಿನಾಂಕ: **06.07.2021**ರ ಸಂಜೆ **4:00** ಗಂಟೆಯೊಳಗಾಗಿ ಅಥವಾ ಮುಂಚಿತವಾಗಿ. ಮತ್ತು ತಾಂತ್ರಿಕ ಬಿಡ್/ಟೆಂಡರ್‌ಗಳನ್ನು ತೆರೆಯುವ ದಿನಾಂಕ **08.07.2021**ರ ಸಂಜೆ **4:00** ಗಂಟೆಗೆ. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ **https://eproc.karnataka.gov.in** ನಲ್ಲಿ ಪಡೆದುಕೊಳ್ಳಬಹುದಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು, ವಿದ್ಯುತ್ ವಿಭಾಗ, ಯಲಹಂಕ ವಲಯ

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ (ಟ್ರಾಫಿಕ್ ಇಂಜಿನಿಯರಿಂಗ್ ಸೆಲ್)
ರಸ್ತೆ ಮೂಲಸೌಕರ್ಯ, ಬಿಬಿಎಂಪಿ, ಎನ್.ಆರ್. ಚೌಕ, ಬೆಂಗಳೂರು–560002
ಸಂಖ್ಯೆ:ಕಾಪಾಅ/ಟಿಇಸಿ–ಆರ್‌ಐ/ಟೆಂಡ್/02/2021–22 ದಿನಾಂಕ:03.06.2021

ಪ್ರಸ್ತಾವನೆಗಾಗಿ ಆಹ್ವಾನ (ಆರ್‌ಇಪಿ)
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ) ದ್ವಿಲಕೋಟೆ ಪದ್ಧತಿ)

ಕಾರ್ಯಪಾಲಕ ಅಭಿಯಂತರರು–ಟ್ರಾಫಿಕ್ ಇಂಜಿನಿಯರಿಂಗ್ ಸೆಲ್, ರಸ್ತೆ ಮೂಲಸೌಕರ್ಯ ವಿಭಾಗ, ಬಿಬಿಎಂಪಿ, ಇವರು ಅರ್ಹ ಗುತ್ತಿಗೆದಾರರಿಂದ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. **"ಬೆಂಗಳೂರು ಪೂರ್ವ, ಬಿದರಹಳ್ಳಿ ಹೊಬಳಿ, ಸರ್ವೇ ನಂ. 50ರಲ್ಲಿರುವ ಬಿಬಿಎಂಪಿ ಆಸ್ಫಾಲ್ಟ್ ಬ್ಯಾಚ್ ಮಿಕ್ಸ್ ಪ್ಲಾಂಟ್‌ನಲ್ಲಿ ಲಭ್ಯವಿರುವ ಸೌಲಭ್ಯಗಳನ್ನು ಬಳಸಿಕೊಂಡು ಮೂರು ವರ್ಷಗಳ ಅವಧಿಗೆ (ಕಾರ್ಯಕ್ಷಮತೆಯ ಆಧಾರದ ಮೇಲೆ ಮತ್ತೆ 2 ವರ್ಷಗಳ ಅವಧಿಗೆ ವಿಸ್ತರಿಸಬಹುದಾಗಿದೆ) ಆಸ್ಫಾಲ್ಟ್ ಬ್ಯಾಚ್ ಮಿಕ್ಸ್ ಪ್ಲಾಂಟ್‌ನ ಕಾರ್ಯಾಚರಣೆ, ನಿರ್ವಹಣೆ ಮತ್ತು ಆಸ್ಫಾಲ್ಟ್ ಮಿಕ್ಸ್‌ನ ಉತ್ಪಾದನೆ / ತಯಾರಿಕೆ ಸೇರಿದಂತೆ ಬಿಬಿಎಂಪಿ ವ್ಯಾಪ್ತಿಯ ವಿವಿಧ ಸ್ಥಳಗಳಿಗೆ ಆಸ್ಫಾಲ್ಟ್ ಮಿಕ್ಸ್‌ನ ಸರಬರಾಜು ಹಾಗೂ ಮೆಕ್ಯಾನಿಕಲ್ / ಮ್ಯಾನುವಲ್ ವಿಧಾನದಲ್ಲಿ (ಯಾವುದು ಸೂಕ್ತವೋ ಅದು) ಆಸ್ಫಾಲ್ಟ್ ಮಿಕ್ಸ್ ಅನ್ನು ಹಾಕುವುದು.**

ಇಎಂಡಿ ಘೋಷಣೆ: ಸರ್ಕಾರದ ಆದೇಶ ಸಂಖ್ಯೆ : FD 675 exp-12/ 2020. ದಿನಾಂಕ:. 22.12.2020. ರಂತೆ. 1) ಟೆಂಡರ್ ಡಾಕ್ಯುಮೆಂಟ್‌ಗಳನ್ನು ಜಿಓಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https:/eproc.karnataka.gov.in ನಿಂದ **ದಿನಾಂಕ 04.06.2021**ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಪೂರ್ವಭಾವಿ ಸಭೆ ದಿನಾಂಕ : **08.06.2021ರ ಅಪರಾಹ್ನ 3.00 ಗಂಟೆಗೆ** 3) ಪ್ರಸ್ತಾವನೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ : **11.06.2021ರ ಸಂಜೆ 4.00 ಗಂಟೆಯವರೆಗೆ.** 4) ತಾಂತ್ರಿಕ ಪ್ರಸ್ತಾವನೆಗಳನ್ನು ತೆರೆಯುವ ದಿನಾಂಕ: **14.06.2021ರ ಸಂಜೆ 4.00 ಗಂಟೆಗೆ.** 5) ಆರ್ಥಿಕ ಪ್ರಸ್ತಾವನೆಗಳನ್ನು ತೆರೆಯುವ ದಿನಾಂಕವನ್ನು ಅರ್ಹ ಟೆಂಡರ್‌ದಾರರಿಗೆ ತಿಳಿಸಲಾಗುವುದು. ಹೆಚ್ಚಿನ ವಿವರಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https:/eproc.karnataka. gov.in ನಿಂದ ಪಡೆದುಕೊಳ್ಳಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಟ್ರಾಫಿಕ್ ಇಂಜಿನಿಯರಿಂಗ್ ಸೆಲ್, ರಸ್ತೆ ಮೂಲಸೌಕರ್ಯ ವಿಭಾಗ.

"ಅಭಿವೃದ್ಧಿ ಶುಲ್ಕ ಪಾವತಿಸಿ, ಬೆಂಗಳೂರು ಅಭಿವೃದ್ಧಿಗೆ ಸಹಕರಿಸಿ"

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಜಲಸಂಪನ್ಮೂಲ: ಅನಿಲ್ ಕುಮಾರ್ ಸಲಹೆಗಾರ

ಬೆಂಗಳೂರು: ಜಲ ಸಂಪನ್ಮೂಲ ಇಲಾಖೆಯ ಕಾರ್ಯದರ್ಶಿ ಹುದ್ದೆಯಿಂದ ಮೇ 31ರಂದು ನಿವೃತ್ತರಾಗಿರುವ ಅನಿಲ್ ಕುಮಾರ್ ಅವರನ್ನು ಅಂತರ ರಾಜ್ಯ ಜಲ ವಿವಾದಗಳ ಪ್ರಧಾನ ಸಲಹೆಗಾರರು ಹಾಗೂ ಕೃಷ್ಣಾ, ಮಹದಾಯಿ ಜಲ ವಿವಾದ ತಾಂತ್ರಿಕ ಸಮಿತಿ ಮತ್ತು ನೀರಾವರಿ ಯೋಜನೆಗಳ ತಾಂತ್ರಿಕ ಸಲಹಾ ಸಮಿತಿಯ ಅಧ್ಯಕ್ಷರನ್ನಾಗಿ ಗುರುವಾರ ನೇಮಕ ಮಾಡಲಾಗಿದೆ.

ಡಿ.ಎನ್. ದೇಸಾಯಿ ಅವರ ನಿಧನದ ಬಳಿಕ ಈ ಮೂರೂ ಹುದ್ದೆಗಳ ಕಾರ್ಯಭಾರವನ್ನು ಅನಿಲ್ ಕುಮಾರ್ ಅವರಿಗೆ ನೀಡಲಾಗಿತ್ತು. ವಯೋ ನಿವೃತ್ತಿಯ ಬಳಿಕ ಈ ಹುದ್ದೆಗಳಿಗೆ ಅವರನ್ನು ನೇಮಕ ಮಾಡಿ ಜಲ ಸಂಪನ್ಮೂಲ ಇಲಾಖೆ ಆದೇಶ ಹೊರಡಿಸಿದೆ.

ಕೃಷ್ಣಾ ಕಣಿವೆಯ ಸಮಗ್ರ ನೀರಾವರಿ ಯೋಜನೆ ರೂಪಿಸುವುದು, ಕೃಷ್ಣಾ ಮತ್ತು ಮಹದಾಯಿ ಜಲ ವಿವಾದಗಳಿಗೆ ಸಂಬಂಧಿಸಿದಂತೆ ಸಲಹೆ, ಶಿಫಾರಸುಗಳನ್ನು ನೀಡುವುದು, ಕೃಷ್ಣಾ–ಮಹದಾಯಿ ಜಲ ವಿವಾದಗಳಿಗೆ ಸಂಬಂಧಿಸಿದಂತೆ ತಾಂತ್ರಿಕ ಸಮಿತಿ ಹಾಗೂ ನೀರಾವರಿ ತಾಂತ್ರಿಕ ಸಲಹಾ ಸಮಿತಿಗಳಿಗೆ ವಹಿಸಿರುವ ಕೆಲಸಗಳನ್ನು ಅನಿಲ್ ಕುಮಾರ್ ನಿರ್ವಹಿಸಬೇಕಿದೆ. ಜಲ ಸಂಪನ್ಮೂಲ ಇಲಾಖೆಯ ಕಾರ್ಯನಿರ್ವಹಣೆಗೆ ಸಂಬಂಧಿಸಿದಂತೆ ಸಲಹೆ ನೀಡುವ ಕೆಲಸವನ್ನೂ ಮಾಡಬೇಕಿದೆ.

‘ಕ್ರೈಸ್ತ ಸಮುದಾಯಕ್ಕೂ ನೆರವು ನೀಡಿ’

ಬೆಂಗಳೂರು: ‘ರಾಜ್ಯದಲ್ಲಿ ಕ್ರೈಸ್ತ ಸಮುದಾಯದ ಹಲವು ಬಡ ಕುಟುಂಬಗಳು ವಾಸವಿದ್ದು, ಅವರ ಸೇವೆಯಲ್ಲಿ ತೊಡಗಿಕೊಂಡಿರುವ ಪಾದ್ರಿಗಳು ಹಾಗೂ ಚರ್ಚ್‌ಗಳಲ್ಲಿ ಕಾರ್ಯನಿರ್ವಹಿಸುವವರಿಗೆ ಅಗತ್ಯ ನೆರವು ಒದಗಿಸಬೇಕು’ ಎಂದು ಅಖಿಲ ಕರ್ನಾಟಕ ಕ್ಯಾಥೋಲಿಕ್ ಕ್ರೈಸ್ತರ ಕನ್ನಡ ಸಂಘದ ಅಧ್ಯಕ್ಷ ರಫಾಯಲ್ ರಾಜ್ ಮನವಿ ಮಾಡಿದ್ದಾರೆ.

ಈ ಸಂಬಂಧ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರಿಗೆ ಗುರುವಾರ ಪತ್ರ ಬರೆದಿರುವ ಅವರು, ‘ಲಾಕ್‌ಡೌನ್‌ನಿಂದಾಗಿ ಎಲ್ಲ ಧರ್ಮ ಹಾಗೂ ಜಾತಿಯ ಜನರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಹಿಂದೂ ಹಾಗೂ ಮುಸ್ಲಿಮರಿಗೆ ನೆರವು ಪ್ರಕಟಿಸಿದ್ದೀರಿ. ಆದರೆ, ನಮಗೆ ಈ ಸಲವೂ ನಿರಾಸೆ ಕಾಡಿದೆ. ತಲಾ ₹ 10 ಸಾವಿರ ಸಹಾಯಧನ ನೀಡಬೇಕು’ ಎಂದು ಕೋರಿದ್ದಾರೆ.

ಕಪ್ಪುಪಟ್ಟಿಗೆ ಸೇರಿದ ಕಂಪನಿಗೆ ಗುತ್ತಿಗೆ: ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾರೆಡ್ಡಿ ಆರೋಪ

ದಟ್ಟಣೆ ಕಾರಿಡಾರ್: ಕೋಟ್ಯಂತರ ಲೂಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಿಬಿಎಂಪಿ ವ್ಯಾಪ್ತಿಯಲ್ಲಿ 12 ಅತಿ ದಟ್ಟಣೆ ಕಾರಿಡಾರ್‌ಗಳ ಅಭಿವೃದ್ಧಿ ಮತ್ತು ನಿರ್ವಹಣೆ ಕಾಮಗಾರಿಯ ಹೆಸರಿನಲ್ಲಿ ನೂರಾರು ಕೋಟಿ ಲೂಟಿ ನಡೆದಿದೆ’ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾರೆಡ್ಡಿ ಆರೋಪಿಸಿದರು.

‘ಪ್ರಜಾವಾಣಿ’ಯಲ್ಲಿ ಜೂನ್ 2ರ ಸಂಚಿಕೆಯಲ್ಲಿ ಪ್ರಕಟವಾದ ‘ತಾಂತ್ರಿಕ ಅರ್ಹತೆ ಪಡೆಯದ ಗುತ್ತಿಗೆದಾರನಿಗೆ ಕಾಮಗಾರಿ?’ ವರದಿಯನ್ನು ಉಲ್ಲೇಖಿಸಿ, ದಾಖಲೆಗಳ ಸಮೇತ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ರಾಜ್ಯ ಸರ್ಕಾರವು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮದ (ಕೆಆರ್‌ಡಿಸಿಎಲ್) ಮೂಲಕ ಅನುಷ್ಠಾನಗೊಳಿಸಲಿರುವ ಈ ಕಾಮಗಾರಿ ಮತ್ತು ನಿರ್ವಹಣೆಯ ಟೆಂಡರ್ ಪ್ರಕ್ರಿಯೆಯಲ್ಲಿ ಭಾರಿ ಅವ್ಯವಹಾರ ನಡೆದಿದೆ’ ಎಂದು ದೂರಿದರು.



ರಾಮಲಿಂಗಾ ರೆಡ್ಡಿ

‘ಟೆಂಡರ್ ಪ್ರಕ್ರಿಯೆಯ ತಾಂತ್ರಿಕ ಪರಿಶೀಲನೆ ಹಂತದಲ್ಲಿಯೇ ಅನರ್ಹಗೊಂಡ ಉದಯ್ ಶಿವಕುಮಾರ್ ಅವರ ಇನ್‌ಫ್ರಾ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ಕಾಮಗಾರಿ ನೀಡಲು ಕೆಆರ್‌ಡಿಸಿಎಲ್ ಶಿಫಾರಸು ಮಾಡಿದೆ. ಆ ಮೂಲಕ, ಕಪ್ಪು ಪಟ್ಟಿಗೆ ಸೇರಿದ ಈ ಕಂಪನಿಗೆ ಬಳ್ಳಾರಿ ರಸ್ತೆ, ತುಮಕೂರು ರಸ್ತೆಗಳಲ್ಲಿ ಹಲವು ಸಿಗ್ನಲ್ ಫ್ರೀ ರಸ್ತೆಗಳ ಗುತ್ತಿಗೆ ನೀಡಲಾಗಿದೆ. ತಕ್ಷಣ ಈ ಗುತ್ತಿಗೆಯನ್ನು ರದ್ದು ಮಾಡಬೇಕು. ಅಗತ್ಯ ಇರುವ ರಸ್ತೆಗೆ ಮಾತ್ರ ಟೆಂಡರ್ ಆಹ್ವಾನಿಸಬೇಕು’ ಎಂದು ಅವರು ಆಗ್ರಹಿಸಿದರು.

‘ರಸ್ತೆಗಳ ನಿರ್ಮಾಣಕ್ಕೆ ₹355 ಕೋಟಿಗೆ ಟೆಂಡರ್ ನೀಡಲಾಗಿದೆ. ನಿರ್ಮಾಣದ ಬಳಿಕ ಪ್ರತಿವರ್ಷ ₹ 150 ಕೋಟಿಯಂತೆ ನಿರ್ವಹಣೆಗೆ ಐದು ವರ್ಷಕ್ಕೆ ₹ 750 ಕೋಟಿ ಟೆಂಡರ್ ನೀಡಲಾಗಿದೆ. ಪ್ರತಿವರ್ಷ ರಸ್ತೆಗಳ ನಿರ್ವಹಣೆಗೆ ನೂರಾರು ಕೋಟಿ ರೂಪಾಯಿ ಖರ್ಚು ಮಾಡಲಾಗುತ್ತಿದೆ. ಅದನ್ನು ಕೂಡಲೇ ನಿಲ್ಲಿಸಬೇಕು. ಇಲ್ಲದೇ ಇದ್ದರೆ ಪಕ್ಷದ ವೇದಿಕೆಯಲ್ಲಿ ಚರ್ಚಿಸಿ, ನ್ಯಾಯಾಲಯದ ಮೊರೆ ಹೋಗುತ್ತೇವೆ’ ಎಂದು ಅವರು ಎಚ್ಚರಿಕೆ ನೀಡಿದರು.

‘ನಗರ ವ್ಯಾಪ್ತಿಯಲ್ಲಿ ಅಧಿಕ ಸಾಂದ್ರತೆಯ ವಲಯಗಳಲ್ಲಿ ಶೇ 80ರಷ್ಟು ವಾಹನ ದಟ್ಟಣೆ ಇದೆ. ಇವುಗಳು ಸುಮಾರು 190 ಕಿ.ಮೀ ಉದ್ದವಿದೆ. ಈ ರಸ್ತೆಗಳ ನಿರ್ವಹಣೆಗೆ ಟೆಂಡರ್ ಕರೆಯಲಾಗಿದೆ. ₹ 477.29 ಕೋಟಿ ಮೊತ್ತಕ್ಕೆ ₹650 ಕೋಟಿ ಹೆಚ್ಚು ಸೇರಿಸಲಾಗಿದೆ. ಒಟ್ಟು ₹ 1,120 ಕೋಟಿಗೆ ಅಂದಾಜು ಪಟ್ಟಿ ತಯಾರಿಸಲಾಗಿದೆ’ ಎಂದು ಅವರು ಆರೋಪಿಸಿದರು.

‘ಗುತ್ತಿಗೆದಾರ ರಸ್ತೆ ನಿರ್ಮಿಸಿದ ಬಳಿಕ ಮೂರು ವರ್ಷ ನಿರ್ವಹಣೆ ಮಾಡಬೇಕು. ಗುತ್ತಿಗೆ ಹೆಸರಿನಲ್ಲಿ ಹಣ ಲೂಟಿ ಹೊಡೆಯುವ ಕೆಲಸಕ್ಕೆ ಸರ್ಕಾರ ಮುಂದಾಗಿದೆ. ಜನರ ತೆರಿಗೆ ಹಣವನ್ನು ಬೇಕಾಬಿಟ್ಟಿ ಖರ್ಚು ಮಾಡಲಾಗುತ್ತಿದೆ. ರಸ್ತೆ ನಿರ್ಮಾಣಕ್ಕಿಂತ ನಿರ್ವಹಣೆಗೆ ಹೆಚ್ಚು ವೆಚ್ಚ ಮಾಡುವ ಮೂಲಕ ಲೂಟಿಗೆ ಮಾರ್ಗ ಕಂಡುಕೊಳ್ಳಲಾಗಿದೆ. ಬಿಬಿಎಂಪಿ ಅಧಿಕಾರಿಗಳು ವಿರೋಧಿಸಿದರೂ ಕೆಆರ್‌ಡಿಸಿಎಲ್ ಮೂಲಕ ಟೆಂಡರ್ ನೀಡಲಾಗಿದೆ’ ಎಂದೂ ಅವರು ಹೇಳಿದರು.

‘ಬಿಬಿಎಂಪಿಯವರು ನಾವೇ ರಸ್ತೆ ಕಾಮಗಾರಿ ಮಾಡುತ್ತೇವೆ ಎಂದು ಪ್ರಸ್ತಾವ ಸಲ್ಲಿಸಿದ್ದರು. ಆದರೆ, ಸಚಿವ ಸಂಪುಟ ಸಭೆಯಲ್ಲಿ ನಿರ್ಧರಿಸಿ, ಕೆಆರ್‌ಡಿಸಿಎಲ್‌ಗೆ ವಹಿಸಲಾಗಿದೆ. ಇದು ಅನುಮಾನಕ್ಕೆ ಕಾರಣವಾಗಿದೆ. ಈ ಅಕ್ರಮದ ಬಗ್ಗೆ ಪಕ್ಷದ ಮಟ್ಟದಲ್ಲಿ ಚರ್ಚಿಸಿ, ಮುಂದಿನ ಹೋರಾಟದ ಬಗ್ಗೆ ನಿರ್ಧರಿಸುತ್ತೇವೆ’ ಎಂದೂ ಹೇಳಿದರು.

ನಂದಿನಿ ಹಾಲು ಸಂಗ್ರಹ 89 ಲಕ್ಷ ಲೀಟರ್‌ಗೆ ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಾಕ್‌ಡೌನ್ ನಡುವೆ ಹಾಲು ಉತ್ಪಾದನೆ ದಿನದಿಂದ ದಿನಕ್ಕೆ ಹೆಚ್ಚಳವಾಗುತ್ತಿದ್ದು, ಕೆಎಂಎಫ್ (ಕರ್ನಾಟಕ ಹಾಲು ಮಹಾಮಂಡಳ) ದಿನಕ್ಕೆ ಸಂಗ್ರಹಿಸುತ್ತಿರುವ ಒಟ್ಟು ಹಾಲಿನ ಪ್ರಮಾಣ 89 ಲಕ್ಷ ಲೀಟರ್‌ಗೆ ಏರಿಕೆಯಾಗಿದೆ.

ಮೇ ಮೊದಲ ವಾರದಲ್ಲಿ 70 ಲಕ್ಷ ಲೀಟರ್ ಹಾಲನ್ನು ಒಕ್ಕೂಟಗಳಿಗೆ ರೈತರು ಪೂರೈಸುತ್ತಿದ್ದರು. ಒಂದೇ ವಾರದಲ್ಲಿ ಅದರ ಪ್ರಮಾಣ 82 ಲಕ್ಷ ಲೀಟರ್‌ಗೆ ಏರಿಕೆಯಾಗಿತ್ತು. ಈಗ 89 ಲಕ್ಷ ಲೀಟರ್‌ಗೆ ಮುಟ್ಟಿದೆ. ಜೂನ್ ಮತ್ತು ಜುಲೈನಲ್ಲಿ ಇನ್ನಷ್ಟು ಹೆಚ್ಚಳವಾಗುವ ಸಾಧ್ಯತೆ ಇದೆ ಎಂದು ಕೆಎಂಎಫ್ ಅಂದಾಜಿಸಿದೆ.

ಖಾಸಗಿಯವರು ಹಾಲು ಖರೀದಿ ಕಡಿಮೆ ಮಾಡಿರುವುದು, ಮಳೆ ಆಗಿದ್ದರಿಂದ ದನಕರುಗಳಿಗೆ ಯಥೇಚ್ಛವಾಗಿ ಮೇವು ಸಿಗುತ್ತಿರುವುದು ಹಾಲಿನ ಪ್ರಮಾಣ ಹೆಚ್ಚಳಕ್ಕೆ ಕಾರಣ.

‘ಲಾಕ್‌ಡೌನ್ ಎರಡನೇ ಅಲೆಯ ನಡುವೆಯೂ 62 ಸಾವಿರ ಟನ್ ಪಶು ಆಹಾರ ಉತ್ಪಾದಿಸಲಾಗಿದೆ. ಜನವರಿ ಮತ್ತು ಫೆಬ್ರುವರಿಯಲ್ಲಿ ಪ್ರತಿ ಟನ್ ಪಶು ಆಹಾರಕ್ಕೆ ₹2 ಸಾವಿರ ಕಡಿಮೆ ಮಾಡುವ ಮೂಲಕ ರೈತರ ಕೈ ಹಿಡಿಯಲಾಯಿತು. ಅಲ್ಲದೇ, 1 ಲಕ್ಷ ಟನ್ ಮೆಕ್ಕೆಜೋಳವನ್ನು ರೈತರಿಂದ ಖರೀದಿಸಲಾಗಿದೆ’ ಎಂದು ಕೆಎಂಎಫ್ ವಿವರಿಸಿದೆ.

ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ಗ್ರಾಹಕರ ಮನೆ- ಮನೆಗೆ ತಲುಪಿಸುವ ವ್ಯವಸ್ಥೆ ಹೆಚ್ಚಿಸಲಾಗಿದೆ. ಇ-ಮಾರುಕಟ್ಟೆ ಬಲಪಡಿಸಲಾಗಿದೆ. 500ಕ್ಕೂ ಹೆಚ್ಚು ಮನೆಗಳಿರುವ ಅಪಾರ್ಟ್‌ಮೆಂಟ್ ಸಮುಚ್ಚಯಗಳನ್ನು ಗುರುತಿಸಿ ಮಳಿಗೆಗಳನ್ನು ತೆರೆಯಲಾಗಿದೆ. ಲಾಕ್‌ಡೌನ್ ಅವಧಿಯಲ್ಲಿ ಹೋಟೆಲ್, ರೆಸ್ಟೋರೆಂಟ್, ಕ್ಯಾಂಟೀನ್‌ಗಳು ಸ್ಥಗಿತಗೊಂಡು ಹಾಲಿನ ಮಾರಾಟ ಕಡಿಮೆಯಾಗಿದ್ದರೂ, ಗುಡ್‌ಲೈಫ್ ಹಾಲು ಮತ್ತು ಇತರ ಉತ್ಪನ್ನಗಳ ಮಾರಾಟ ಹೆಚ್ಚಿಸಿ ಸರಿದೂಗಿಸುವ ಪ್ರಯತ್ನ ಮಾಡಲಾಗುತ್ತಿದೆ. ಜೂನ್ 1ರಿಂದ ಪ್ರತಿ ಲೀಟರ್ ಹಾಲಿಗೆ 40 ಗ್ರಾಂ ಹೆಚ್ಚುವರಿಯಾಗಿ ಉಚಿತವಾಗಿ ನೀಡಲಾಗುತ್ತಿದೆ’ ಎಂದು ಕೆಎಂಎಫ್ ತಿಳಿಸಿದೆ.

‘ಬಮುಲ್‌ನಿಂದ ₹8 ಕೋಟಿ ನೆರವು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಮುಲ್ ವತಿಯಿಂದ ಹಾಲು ಉತ್ಪಾದಕರ ಸಹಕಾರ ಸಂಘಗಳ ಸದಸ್ಯರು ಹಾಗೂ ಸಿಬ್ಬಂದಿಗೆ ₹8 ಕೋಟಿ ನೆರವು ನೀಡಲಾಗುತ್ತಿದ್ದು, ಇದಕ್ಕೆ ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ಗುರುವಾರ ಚಾಲನೆ ನೀಡಿದರು.

ತಾವರೆಕೆರೆ ಹಾಲು ಉತ್ಪಾದಕರ ಸಂಘದ ಕಚೇರಿಯಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ‘ಬಮುಲ್ ವ್ಯಾಪ್ತಿಯ ಕಚೇರಿಗಳಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿಗೆ ₹50 ಲಕ್ಷ ವೆಚ್ಚದಲ್ಲಿ ಅಕ್ಕಿ, ₹4.5 ಕೋಟಿ ವೆಚ್ಚದಲ್ಲಿ ತುಪ್ಪ ಹಾಗೂ ಹಾಲು ವಿತರಕರಿಗೆ ₹3.6 ಕೋಟಿ ವೆಚ್ಚದಲ್ಲಿ ಹೆಚ್ಚುವರಿ ಹಾಲು ಹಾಗೂ ವೈದ್ಯಕೀಯ ವಿಮೆ ಸೌಲಭ್ಯ ಕಲ್ಪಿಸಲಾಗಿದೆ. ಕೋವಿಡ್ ಕಾಲದಲ್ಲಿ ಬಮುಲ್ ಮಾದರಿ ಕಾರ್ಯ ಮಾಡುತ್ತಿದೆ’ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಸಚಿವ ಎಸ್‌ಟಿ. ಸೋಮಶೇಖರ್ ಅವರು ರಾಮೋಹಳ್ಳಿ ಗ್ರಾಮ ಪಂಚಾಯಿತಿಯ ಚಳ್ಳೇಗಟ್ಟದಲ್ಲಿ ಸ್ಥಳೀಯರಿಗೆ ಪಡಿತರ ಕಿಟ್ ವಿತರಿಸಿದರು

‘ಎರಡನೇ ಅಲೆ ಮಾರಣಾಂತಿಕ ಸ್ವರೂಪ ಪಡೆದುಕೊಂಡಿದೆ. ಹೀಗಾಗಿ ಜ್ವರ, ಶೀತ ಕಾಣಿಸಿಕೊಂಡರೆ ನಿರ್ಲಕ್ಷ್ಯ ಮಾಡದೇ ಕೂಡಲೇ ಚಿಕಿತ್ಸೆ ಪಡೆಯಿರಿ. ಯಶವಂತಪುರ ಕ್ಷೇತ್ರದಲ್ಲಿ 7,500 ಜನರಿಗೆ ಸೋಂಕು ತಗುಲಿದ್ದು, ಈ ಪೈಕಿ 6,500 ಮಂದಿ ಗುಣಮುಖರಾಗಿದ್ದಾರೆ. ಎಲ್ಲ ಗ್ರಾಮ ಹಾಗೂ ವಾರ್ಡ್‌ಗಳಲ್ಲೂ ಲಸಿಕೆ ಕಾರ್ಯಕ್ರಮ ನಡೆಯುತ್ತಿದೆ. ಗ್ರಾಮ ಪಂಚಾಯಿತಿ ಸದಸ್ಯರು ಇದರ ಉಸ್ತುವಾರಿ ನೋಡಿಕೊಳ್ಳಬೇಕು. ಕಷ್ಟದಲ್ಲಿರುವವರಿಗೆ ಪಡಿತರ ಕಿಟ್ ಕೊಡುವ ಕೆಲಸ ಮುಂದುವರಿಸಿದ್ದೇವೆ. ಇಸ್ಕಾನ್ ವತಿಯಿಂದ ಸುಮಾರು 2 ಸಾವಿರ ಮಂದಿಗೆ ಊಟದ ವ್ಯವಸ್ಥೆ ಮಾಡಲಾಗುತ್ತಿದೆ’ ಎಂದು ಮಾಹಿತಿ ನೀಡಿದರು.

ಕೆಎಂಎಫ್ ವ್ಯವಸ್ಥಾಪಕ ನಿರ್ದೇಶಕ ಬಿ.ಸಿ. ಸತೀಶ್, ತಾವರೆಕೆರೆ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ, ಸದಸ್ಯರು ಹಾಗೂ ಸಿಬ್ಬಂದಿ ಇದ್ದರು.

ಸಿಸಿಬಿ ಕಚೇರಿ ಬಳಿಯೇ ಸರ ಕಿತ್ತೊಯ್ಯಲು ಯತ್ನ

ಬೆಂಗಳೂರು: ಚಾಮರಾಜಪೇಟೆ ಬಳಿಯ ಸಿಸಿಬಿ ಕಚೇರಿ ಸಮೀಪದಲ್ಲೇ ವೃದ್ಧೆಯೊಬ್ಬರ ಚಿನ್ನದ ಸರವನ್ನು ಕಳ್ಳನೊಬ್ಬ ಕಿತ್ತೊಯ್ಯಲು ಯತ್ನಿಸಿದ್ದ ಘಟನೆ ಗುರುವಾರ ನಡೆದಿದೆ.

‘ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದ ವೃದ್ಧೆಯನ್ನು ಹಿಂಬಾಲಿಸಿದ್ದ ವ್ಯಕ್ತಿಯೊಬ್ಬ, ಚಿನ್ನದ ಸರ ಕಿತ್ತುಕೊಂಡು ಪರಾರಿಯಾಗಲು ಯತ್ನಿಸಿದ್ದ’ ಎಂದು ಸ್ಥಳೀಯರೊಬ್ಬರು ಹೇಳಿದರು.

‘ಸರ ಕಿತ್ತೊಯ್ಯುತ್ತಿದ್ದಾಗ ವೃದ್ಧೆ ಕಿರುಚಾಡಿದ್ದರು. ರಸ್ತೆಯಲ್ಲಿದ್ದ ಸ್ಥಳೀಯರು ಕಳ್ಳನನ್ನು ಬೆನ್ನಟ್ಟಿದರು. ಹೆದರಿದ ಕಳ್ಳ ರಸ್ತೆಯಲ್ಲೇ ಸರವನ್ನು ಬಿಸಾಕಿ ಪರಾರಿಯಾಗಿದ್ದಾನೆ. ಸರ ವಾಪಸು ಕೈ ಸೇರಿರುವುದರಿಂದ, ಠಾಣೆಗೆ ವೃದ್ಧೆ ದೂರು ನೀಡಿಲ್ಲ’ ಎಂದೂ ತಿಳಿಸಿದರು.

‘ಮಹತ್ವ ಕಳೆದುಕೊಂಡ ಮೀಸಲಾತಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪ್ರಸ್ತುತ ಸಮಯದಲ್ಲಿ ಮೀಸಲಾತಿ ತನ್ನ ಮಹತ್ವ ಕಳೆದುಕೊಂಡಿದೆ. ಆರ್ಥಿಕವಾಗಿ ಹಿಂದುಳಿದ ಮೇಲ್ಜಾತಿಯವರಿಗೆ ಕೇಂದ್ರ ಸರ್ಕಾರ ಶೇ 10ರಷ್ಟು ಮೀಸಲಾತಿ ನೀಡಿರುವುದು ಸಂವಿಧಾನ ಬಾಹಿರ ನಡೆ’ ಎಂದು ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್ ದಾಸ್ ತಿಳಿಸಿದರು.

ಬೆಂಗಳೂರು ವಿಶ್ವವಿದ್ಯಾಲಯದ ಎನ್‌ಎಸ್‌ಎಸ್ ಘಟಕವು ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ಆನ್‌ಲೈನ್‌ನಲ್ಲಿ ಹಮ್ಮಿಕೊಂಡಿರುವ ‘ವಿಚಾರ ಕಲರವ’ ಉಪನ್ಯಾಸ ಮಾಲಿಕೆಯಲ್ಲಿ ‘ಭಾರತದ ಸಂವಿಧಾನದ ಅಡಿಯಲ್ಲಿ ಸಾಮಾಜಿಕ ನ್ಯಾಯ’ ವಿಷಯದ ಕುರಿತು ಮಾತನಾಡಿದರು.

‘ಈ ಹಿಂದೆ ರೈತರು ಗ್ರಾಮಗಳಲ್ಲಿ ಜನರಿಗೆ ಉದ್ಯೋಗ ಕಲ್ಪಿಸುತ್ತಿದ್ದರು. ಇಂದಿನ ಸರ್ಕಾರಗಳ ಅವೈಜ್ಞಾನಿಕ ಹಾಗೂ ಅಸಮಂಜಸ ಕೃಷಿ ನೀತಿಗಳಿಂದಾಗಿ ರೈತ ಸಮುದಾಯ ಕಂಗಾಲಾಗಿದೆ. ಅವರು ಕೂಡ ಮೀಸಲಾತಿ ಕೇಳುವ ಪರಿಸ್ಥಿತಿ ಸೃಷ್ಟಿಯಾಗಿದೆ’ ಎಂದರು.

‘ಸರ್ಕಾರವು ಸಾರ್ವಜನಿಕ ಉದ್ದಿಮೆಗಳನ್ನು ಖಾಸಗಿ ವಲಯಗಳಾಗಿ ಮಾರ್ಪಡಿಸಿದೆ. ಇದು ಸಾಮಾಜಿಕ ನ್ಯಾಯದ ಗುರಿ ಹಾಗೂ ಉದ್ದೇಶಗಳನ್ನು ವಿಫಲಗೊಳಿಸಿದಂತೆ. ಬಹುತೇಕ ಸರ್ಕಾರಿ ಸಂಸ್ಥೆಗಳಲ್ಲಿ ನೇಮಕಾತಿಗಳು ನಡೆಯುತ್ತಿಲ್ಲ. ಒಪ್ಪಂದ ಹಾಗೂ ಹೊರಗುತ್ತಿಗೆ ಆಧಾರದಲ್ಲಿ ಉದ್ಯೋಗ ನೀಡುವ ಮೂಲಕ ಸಾಮಾಜಿಕ ನ್ಯಾಯದ ಉದ್ದೇಶವನ್ನೇ ಬುಡಮೇಲು ಮಾಡಲಾಗಿದೆ’ ಎಂದು ಹೇಳಿದರು.

ಮಣಿಪಾಲ್ ತೆಕ್ಕೆಗೆ ವಿಕ್ರಮ್ ಆಸ್ಪತ್ರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ವಿಕ್ರಮ್ ಆಸ್ಪತ್ರೆಯ ಶೇ 100ರಷ್ಟು ಷೇರುಗಳನ್ನು ಮಣಿಪಾಲ್ ಆಸ್ಪತ್ರೆಗಳ ಸಮೂಹ ಖರೀದಿಸಿದೆ. ಈ ಮೂಲಕ ತನ್ನ ಸ್ವಾಧೀನಕ್ಕೆ ಮತ್ತೊಂದು ಆಸ್ಪತ್ರೆಯನ್ನು ತೆಗೆದುಕೊಂಡಿದೆ.

ಕೆಲ ದಿನಗಳ ಹಿಂದಷ್ಟೇ ಮಣಿಪಾಲ್ ಆಸ್ಪತ್ರೆಗಳ ಸಮೂಹವು ಕೊಲಂಬಿಯಾ ಏಷ್ಯಾ ಹಾಸ್ಪಿಟಲ್ಸ್ ಸಮೂಹವನ್ನು ತನ್ನ ಸ್ವಾಧೀನಕ್ಕೆ ಪಡೆದುಕೊಂಡಿತ್ತು. ವಿಕ್ರಮ್ ಆಸ್ಪತ್ರೆಗೆ ಸಂಬಂಧಿಸಿದಂತೆ ಇಕ್ವಿಟಿ ಫರ್ಮ್ ಮಲ್ಟಿಪಲ್ಸ್ ಜತೆಗೆ ಒಪ್ಪಂದ ಮಾಡಿಕೊಂಡು, ಸ್ವಾಧೀನಪಡಿಸಿಕೊಂಡಿದೆ. ಈ ಮೂಲಕ ನಗರದಲ್ಲಿ ಮಣಿಪಾಲ್ ಆಸ್ಪತ್ರೆಗಳ ಸಮೂಹದ 10ನೇ ಆಸ್ಪತ್ರೆಯಾಗಿ ವಿಕ್ರಮ್ ಸೇರ್ಪಡೆಯಾಗಿದೆ.

2009ರಲ್ಲಿ ಪ್ರಾರಂಭವಾದ ವಿಕ್ರಮ್ ಆಸ್ಪತ್ರೆಯು 200 ಹಾಸಿಗೆಗಳನ್ನು ಹೊಂದಿದೆ.

‘ವಿಕ್ರಮ್ ಆಸ್ಪತ್ರೆಯನ್ನು ನಮ್ಮ ಸಮೂಹಕ್ಕೆ ಸ್ವಾಗತಿಸಲು ಸಂತೋಷ ಪಡುತ್ತೇವೆ. ಮುಂದಿನ ದಿನಗಳಲ್ಲಿ ವೈದ್ಯಕೀಯ ಸೇವೆಯನ್ನು ಇನ್ನಷ್ಟು ವಿಸ್ತರಿಸುವ ಜತೆಗೆ ಆಸ್ಪತ್ರೆಗಳಲ್ಲಿನ ಹಾಸಿಗೆಗಳ ಸಂಖ್ಯೆಯನ್ನೂ ಹೆಚ್ಚಳ ಮಾಡಲಾಗುವುದು’ ಎಂದು ಮಣಿಪಾಲ್ ಆಸ್ಪತ್ರೆಯ ಶಿಕ್ಷಣ ಮತ್ತು ವೈದ್ಯಕೀಯ ಸಮೂಹದ ಅಧ್ಯಕ್ಷ ಡಾ. ರಂಜನ್ ಪೈ ತಿಳಿಸಿದ್ದಾರೆ.

ಅಕಾಲಿಕ ನಿಧನ

ಶ್ರೀ ರಾಘವೇಂದ್ರ ನಾಯಕ್

ನಿಸರ್ಗ ಬಡಾವಣೆಯ ನಿವಾಸಿಗಳು ಹಾಗೂ ನಿರ್ಮಾಣ್ ದೇವಾಲಯಗಳ ವಿಶ್ವಸ್ಥ ಮಂಡಳಿಯ ವಿಶ್ವಸ್ಥರಾದ ಶ್ರೀ ರಾಘವೇಂದ್ರ ನಾಯಕ್ 03.06.2021ರ ಮಧ್ಯಾಹ್ನ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತಾ, ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸುವವರು

ನಿರ್ಮಾಣ್ ದೇವಾಲಯಗಳ ವಿಶ್ವಸ್ಥ ಮಂಡಳಿ,
ವಿ. ಲಕ್ಷ್ಮೀನಾರಾಯಣ್,
ನಿರ್ಮಾಣ್ ದೇವಾಲಯಗಳ ವಿಶ್ವಸ್ಥ ಮಂಡಳಿಯ ವ್ಯವಸ್ಥಾಪಕ ವಿಶ್ವಸ್ಥರು,
ಎಸ್. ರವಿರಾಜ್ ಭಟ್,
ದೇವಾಲಯಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಹಾಗೂ
ನಿರ್ಮಾಣ್ ದೇವಾಲಯಗಳ ವಿಶ್ವಸ್ಥ ಮಂಡಳಿಯ ಎಲ್ಲಾ ವಿಶ್ವಸ್ಥರು.

ಮಳೆಗಾಲದ ಪೂರ್ವಸಿದ್ಧತೆ: ಬಿಬಿಎಂಪಿ ಅಧಿಕಾರಿಗಳಿಗೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಸೂಚನೆ

ಪ್ರವಾಹ: 209 ಸೂಕ್ಷ್ಮ ಸ್ಥಳಗಳಲ್ಲಿ ವಿಶೇಷ ನಿಗಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಪ್ರವಾಹ ಉಂಟಾಗುವ ಸಾಧ್ಯತೆ ಇರುವ 209 ಸೂಕ್ಷ್ಮ ಮತ್ತು ಅತಿಸೂಕ್ಷ್ಮ ಪ್ರದೇಶಗಳಲ್ಲಿ ಮಳೆಗಾಲದಲ್ಲಿ ಅನಾಹುತ ತಡೆಯಲು ವಿಶೇಷ ನಿಗಾ ವಹಿಸುವಂತೆ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ನಗರದಲ್ಲಿ ಮಳೆಗಾಲದಲ್ಲಿ ವಿಕೋಪ ಉಂಟಾಗದಂತೆ ತಡೆಯಲು ನಡೆಸಲಾದ ಪೂರ್ವ ಸಿದ್ಧತೆಗಳನ್ನು ಪರಿಶೀಲಿಸಲು ಮುಖ್ಯಮಂತ್ರಿಯವರು ಗುರುವಾರ ವಿಶೇಷ ಸಭೆ ನಡೆಸಿದರು.

ಮಳೆಯಾದಾಗ ವಿಕೋಪ ಸಂಭವಿಸಬಹುದಾದ 58 ಅತಿ ಸೂಕ್ಷ್ಮ ಹಾಗೂ 151 ಸೂಕ್ಷ್ಮ ಪ್ರದೇಶಗಳನ್ನು ನಗರದಲ್ಲಿ ಗುರುತಿಸಲಾಗಿದೆ. ಈ ಪ್ರದೇಶಗಳಲ್ಲಿ ಪ್ರವಾಹ ನಿಯಂತ್ರಣಕ್ಕೆ ಶಾಶ್ವತ ಪರಿಹಾರ ರೂಪಿಸುವಂತೆ ಮುಖ್ಯಮಂತ್ರಿ ನಿರ್ದೇಶನ ನೀಡಿದರು.

‘ನಗರದಲ್ಲಿ 440 ಕಿ.ಮೀ. ಉದ್ದದ ರಾಜಕಾಲುವೆಗೆ ತಡೆಗೋಡೆ ನಿರ್ಮಿಸಲಾಗಿದೆ. ತಡೆಗೋಡೆ ಹೊಂದಿರುವ ರಾಜಕಾಲುವೆಯ ವಾರ್ಷಿಕ ನಿರ್ವಹಣೆಗೆ ಕ್ರಮ ವಹಿಸಲಾಗಿದೆ‘ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

‘ರಾಜಕಾಲುವೆಗಳ ಮೂಲಕ ಕೆರೆಗಳಿಗೆ ಮಳೆನೀರು ಮಾತ್ರ ಹರಿಯುವಂತೆ ಮಾಡುವುದರಿಂದ ಪ್ರವಾಹ ತಪ್ಪಿಸಬಹುದು’ ಎಂದು ಮುಖ್ಯಮಂತ್ರಿ ಸಲಹೆ ನೀಡಿದರು.

‘ಬಿಬಿಎಂಪಿಯ ಎಂಟು ವಲಯಗಳಲ್ಲಿ ಶಾಶ್ವತ ನಿಯಂತ್ರಣ ಕೊಠಡಿಗಳನ್ನು ಹಾಗೂ 63 ಕಡೆ ತಾತ್ಕಾಲಿಕ ನಿಯಂತ್ರಣ ಕೊಠಡಿಗಳನ್ನು ಸ್ಥಾಪಿಸಲಾಗಿದೆ. ಇವುಗಳು ದಿನದ 24 ಗಂಟೆಯೂ ಕಾರ್ಯನಿರ್ವಹಿಸಲಿವೆ. ತುರ್ತು ಪರಿಹಾರ ಕಾರ್ಯಕ್ಕೆ ಕೆಲಸದಾಳುಗಳನ್ನು ಹಾಗೂ ಮೇಲ್ವಿಚಾರಕರನ್ನು ನೇಮಿಸಲಾಗಿದೆ. ರಕ್ಷಣೆ ಮತ್ತು ಪರಿಹಾರ ಕಾರ್ಯಾಚರಣೆಗೆ ಅಗತ್ಯ ಸಲಕರಣೆಗಳನ್ನು ಸಂಗ್ರಹಿಸಲು ಕ್ರಮ ವಹಿಸಲಾಗುತ್ತಿದೆ’ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

‘ರಸ್ತೆ ಬದಿ ಮಳೆನೀರು ಚರಂಡಿ ಹಾಗೂ ಅಡ್ಡಮೋರಿಗಳ ಹೂಳು ತೆಗೆಯಲಾಗುತ್ತಿದೆ. ರಾಜಕಾಲುವೆಗೆ ಸಂಪರ್ಕಿಸುವ ಚರಂಡಿಗಳನ್ನು ಗುರುತಿಸಿ ಸುಸ್ಥಿತಿಯಲ್ಲಿಡಲು ಕ್ರಮ ವಹಿಸಲಾಗಿದೆ. ದೊಡ್ಡ ಕಾಲುವೆಗಳಲ್ಲಿ 26 ಕಡೆ ನೀರಿನ ಮಟ್ಟವನ್ನು ಗುರುತಿಸುವ ಸಂವೇದಕಗಳನ್ನು ಅಳವಡಿಸಲಾಗಿದೆ’ ಎಂದು ಮಾಹಿತಿ ನೀಡಿದರು.

ಕ್ಷೇತ್ರಕ್ಕೊಂದು ಕಾರ್ಯಪಡೆ

‘ಮಳೆಗಾಲದಲ್ಲಿ ಅನಾಹುತ ಸಂಭವಿಸಿದರೆ ತುರ್ತು ನೆರವು ಒದಗಿಸಲು ಪ್ರತಿ ವಿಧಾನಸಭಾ ಕ್ಷೇತ್ರಕ್ಕೊಂದು ಕಾರ್ಯಪಡೆಗಳನ್ನು ರಚಿಸಲಾಗುತ್ತದೆ. ಇವುಗಳಿಗೆ ಅಗತ್ಯ ಸಿಬ್ಬಂದಿ, ಸಲಕರಣೆ ಒದಗಿಸಲಾಗುತ್ತದೆ. ಇದಕ್ಕೆ ಅಗತ್ಯವಿರುವ ಅನುದಾನ ಬಿಡುಗಡೆ ಮಾಡಲಾಗಿದೆ’ ಎಂದು ಸಚಿವ ಆರ್. ಅಶೋಕ್ ಸುದ್ದಿಗಾರರಿಗೆ ಮಾಹಿತಿ ನೀಡಿದರು.

‘ನಿಂತ ನೀರನ್ನು ಹೊರಚೆಲ್ಲಲು ಹೈ ಪ್ರೆಷರ್ ಪಂಪ್ ಬಳಸಲು ಸೂಚಿಸಲಾಗಿದೆ. ಚರಂಡಿಗಳ ಹೂಳು ತೆಗೆಯುವ ಕಾಮಗಾರಿಯನ್ನು ತಿಂಗಳೊಳಗೆ ಪೂರ್ಣಗೊಳಿಸುವಂತೆ ಸೂಚಿಸಲಾಗಿದೆ’ ಎಂದರು.

ಮಳೆ ವಿವರ ನೀಡಲು ‘ಮೇಘ ಸಂದೇಶ’

‘ಬೆಂಗಳೂರು ಮೇಘ ಸಂದೇಶ ಆ್ಯಪ್‌ನಲ್ಲಿ ಮಳೆಯ ಪ್ರಮಾಣದ ಮಾಹಿತಿ ನೀಡಲಾಗುತ್ತದೆ. ನೀರು ಸಂಗ್ರಹವಾಗಿರುವ ಸ್ಥಳಗಳು, ಜನರಿಗೆ ಸುರಕ್ಷಿತ ಮಾರ್ಗ ಬಳಕೆಯ ಕುರಿತು ಕೂಡಾ ಇದರ ಮಾಹಿತಿ ನೀಡಲಾಗುತ್ತದೆ’ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

ಗುಡುಗು– ಸಿಡಿಲು ಸಹಿತ ಜೋರು ಮಳೆ

ಬೆಂಗಳೂರು: ನಗರದಲ್ಲಿ ಗುಡುಗು– ಸಿಡಿಲು ಸಹಿತವಾಗಿ ಗುರುವಾರ ಧಾರಾಕಾರ ಮಳೆ ಸುರಿಯಿತು.

ಬೆಳಿಗ್ಗೆಯಿಂದ ಮೋಡ ಕವಿದ ವಾತಾವರಣವಿತ್ತು. ಬಹುತೇಕ ಕಡೆ ಮಧ್ಯಾಹ್ನವೇ ಜೋರು ಮಳೆ ಶುರುವಾಯಿತು. ಕೆಲ ಗಂಟೆ ಸುರಿದ ಮಳೆಯಿಂದಾಗಿ ರಸ್ತೆಯಲ್ಲಿ ನೀರು ತುಂಬಿ ಹರಿಯಿತು. ಸುರಿವ ಮಳೆಯಲ್ಲೇ ವಾಹನಗಳು ಸಂಚರಿಸಿದವು.

ಕೆಲಗಂಟೆ ಬಿಡುವು ಕೊಟ್ಟಿದ್ದ ಮಳೆ, ಸಂಜೆಯಿಂದ ರಾತ್ರಿಯವರೆಗೂ ಧಾರಾಕಾರವಾಗಿ ಸುರಿಯಿತು. ಇದೇ ವೇಳೆ ಗುಡುಗು– ಸಿಡಿಲು ಅಬ್ಬರವೂ ಇತ್ತು.

ಶಿವಾಜಿನಗರ, ಇಂದಿರಾನಗರ, ಹಲಸೂರು, ರಾಜಾಜಿನಗರ, ಬಸವೇಶ್ವರನಗರ, ವಿಜಯನಗರ, ಮಹಾಲಕ್ಷ್ಮಿ ಲೇಔಟ್, ಮಲ್ಲೇಶ್ವರ, ಯಶವಂತಪುರ, ಪೀಣ್ಯ, ಸಂಪಂಗಿರಾಮನಗರ, ನಾಗರಬಾವಿ, ಕೆಂಗೇರಿ, ರಾಜರಾಜೇಶ್ವರಿನಗರ, ಅನ್ನಪೂರ್ಣೇಶ್ವರಿನಗರ, ಬನಶಂಕರಿ, ಆರ್.ಟಿ.ನಗರ, ಹೆಬ್ಬಾಳ ಹಾಗೂ ಸುತ್ತಮುತ್ತ ಪ್ರದೇಶಗಳಲ್ಲಿ ಮಳೆ ಅಬ್ಬರ ಜೋರಾಗಿತ್ತು

ವಿಜಯನಗರ, ಹೆಬ್ಬಾಳ, ಮಲ್ಲೇಶ್ವರದ ಕೆಲವೆಡೆ ಮರದ ಟೊಂಗೆಗಳು ತುಂಡಾಗಿ ಬಿದ್ದಿದ್ದವು.

ಲಾಕ್‌ಡೌನ್‌ನಿಂದಾಗಿ ಗೂಡ್ಸ್ ಹಾಗೂ ತುರ್ತು ವಾಹನಗಳ ಸಂಚಾರಕ್ಕೆ ಮಾತ್ರ ಅವಕಾಶವಿತ್ತು. ಮಳೆಯಿಂದಾಗಿ ಕೆಲವೆಡೆ ವಾಹಗಳ ಸಂಚಾರ ನಿಧಾನಗತಿಯಲ್ಲಿತ್ತು. ಹೊಸೂರು ರಸ್ತೆ ಹಾಗೂ ನಾಯಂಡನಹಳ್ಳಿ ಬಳಿ, ವಾಹನಗಳ ದಟ್ಟಣೆಯೂ ಕಂಡುಬಂತು. ನಗರದಲ್ಲಿ ತೆರೆಯಲಾಗಿರುವ ಚೆಕ್‌ಪೋಸ್ಟ್‌ಗಳಲ್ಲಿ ಕೆಲಸ ಮಾಡುತ್ತಿದ್ದ ಪೊಲೀಸರು, ಅಕ್ಕ– ಪಕ್ಕದ ಕಟ್ಟಡಗಳಲ್ಲಿ ಆಶ್ರಯ ಪಡೆದಿದ್ದು ಕಂಡುಬಂತು. ಕೆಲವೆಡೆ ಬ್ಯಾರಿಕೇಡ್‌ಗಳೂ ನೀರಿನಲ್ಲಿ ತೇಲಿ ಹೋಗಿದ್ದವು.

ಮೈಸೂರು ರಸ್ತೆಯಲ್ಲಿ ವಾಹನ ಸವಾರರು ಮಳೆಯಲ್ಲೇ ಕೊಡೆ ಹಿಡಿದು ಸಾಗಿದರು –ಪ್ರಜಾವಾಣಿ ಚಿತ್ರ. ಅನೂಪ್ ರಾಘ . ಟಿ.

ಗುರುವಾರ ಸುರಿದ ಮಳೆಯಲ್ಲಿ ಕೊಡೆ ಆಶ್ರಯ ಪಡೆದು ಓಡಿದ ಪಾದಚಾರಿಗಳು

ಮಳೆ ವೇಳೆ ಹೆಬ್ಬಾಳ ಬಳಿಯ ರಸ್ತೆಯಲ್ಲಿ ಸಾಗಿದ ಕಾರು– ಪ್ರಜಾವಾಣಿ ಚಿತ್ರಗಳು

‘ನಗರದಲ್ಲಿ ಉತ್ತಮ ಮಳೆಯಾಗುತ್ತಿದೆ. ಕೆಲ ರಸ್ತೆಗಳಲ್ಲಿ ನೀರು ತುಂಬಿ ಹರಿಯುತ್ತಿದೆ. ಮರ ಬಿದ್ದ ಹಾಗೂ ಇತರೆ ಹಾನಿ ಬಗ್ಗೆ ಯಾವುದೇ ದೂರುಗಳು ಬಂದಿಲ್ಲ. ಪ್ರತಿಯೊಂದು ವಾರ್ಡ್‌ನಲ್ಲೂ ಬಿಬಿಎಂಪಿ ಸಿಬ್ಬಂದಿ ಸಂಚರಿಸುತ್ತಿದ್ದು, ರಸ್ತೆಯಲ್ಲಿ ನಿಂತ ನೀರು ಹರಿದು ಹೋಗಲು ದಾರಿ ಮಾಡಿಕೊಡುತ್ತಿದ್ದಾರೆ’ ಎಂದು ಬಿಬಿಎಂಪಿ ಸಹಾಯವಾಣಿ ಸಿಬ್ಬಂದಿ ಹೇಳಿದರು.

ಸುದ್ದಿ 2 ನಿಮಿಷ

19 ಅನಾಥ ಮಕ್ಕಳಿಗೆ ನೆರವು

ಬೆಂಗಳೂರು: ‘ಕೋವಿಡ್‌ನಿಂದ ತಂದೆ– ತಾಯಿಯನ್ನು ಕಳೆದುಕೊಂಡ ಮಕ್ಕಳಿಗೆ ಯಾವುದೇ ರೀತಿಯಲ್ಲಿ ಪೋಷಕರು ಇಲ್ಲ ಎಂಬ ಕೊರಗು ಉಂಟಾಗದಂತೆ ರಾಜ್ಯ ಸರ್ಕಾರ ಯೋಜನೆಗಳನ್ನು ರೂಪಿಸಲಿದೆ’ ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಶಶಿಕಲಾ ಜೊಲ್ಲೆ ಹೇಳಿದರು.

ರಾಜ್ಯದಲ್ಲಿ ಕೋವಿಡ್‌ನಿಂದ ಪೋಷಕರನ್ನು ಕಳೆದುಕೊಂಡು ಅನಾಥರಾದ 19 ಮಕ್ಕಳ ಜೊತೆ ಸ್ವಕ್ಷೇತ್ರ ನಿಪ್ಪಾಣಿಯಿಂದ ಗುರುವಾರ ವಿಡಿಯೊ ಸಂವಾದ ನಡೆಸಿದ ಬಳಿಕ ಮಾತನಾಡಿದ ಅವರು, ‘ಮಕ್ಕಳ ನೋವು ಕಂಡು ಮನಸ್ಸು ಭಾರವಾಯಿತು’ ಎಂದು ಭಾವುಕರಾದರು.

ಮಕ್ಕಳನ್ನು ಪಾಲನೆ ಮಾಡುತ್ತಿರುವವರ ಜೊತೆಗೂ ಸಂವಾದ ನಡೆಸಿ, ‘ಈ ಮಕ್ಕಳ ಜೊತೆ ನಾವಿದ್ದೇವೆ’ ಎಂದು ಹೇಳಿದರು.

‘ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಈಗಾಗಲೇ ‘ಬಾಲ ಸೇವಾ’ ಯೋಜನೆ ಘೋಷಿಸಿದ್ದಾರೆ.ಬಾಲ ಸೇವಾ ಯೋಜನೆಯ ಬಗ್ಗೆ ಗ್ರಾಮಮಟ್ಟದಲ್ಲಿ ಜಾಗೃತಿ ಮೂಡಿಸಲಾಗುವುದು. ಸಾಮಾಜಿಕ ಜಾಲತಾಣ ಹಾಗೂ ಇತರ ಮಾಧ್ಯಮಗಳ ಮೂಲಕವೂ ಮಾಹಿತಿ ನೀಡಲಾಗುವುದು. ಪೋಷಕರನ್ನು ಕಳೆದುಕೊಂಡ ಮಕ್ಕಳಿಗೆ ಮಾಸಿಕ ₹ 3,500, 10 ವರ್ಷದ ಒಳಗಿನ ಮಕ್ಕಳ ಶಿಕ್ಷಣಕ್ಕೆ ಸರ್ಕಾರಿ ವಸತಿ ಶಾಲೆಗಳಲ್ಲಿ ವ್ಯವಸ್ಥೆ, ತಂದೆ– ತಾಯಿಯನ್ನು ಕಳೆದುಕೊಂಡ 21 ವರ್ಷ ಪೂರೈಸಿರುವ ಹೆಣ್ಣು ಮಕ್ಕಳಿಗೆ ₹ 1 ಲಕ್ಷ ಸಹಾಯಧನವನ್ನು ಅವರ ಖಾತೆಗೆ ತಲುಪಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಯೋಜನೆ ಅನುಷ್ಠಾನದಲ್ಲಿ ಮಧ್ಯವರ್ತಿಗಳ ಹಾವಳಿ ಆಗದಂತೆ ಕ್ರಮ ವಹಿಸಲಾಗುವುದು’ ಎಂದರು.

ಸರ್ಕಾರದಿಂದ ಎಲ್ಲಾ ಜಿಲ್ಲೆಗಳಲ್ಲೂ ಅಸ್ಥಿ ವಿಸರ್ಜನೆಗೆ ಆದೇಶ

ಬೆಂಗಳೂರು: ಕೋವಿಡ್‌ನಿಂದ ಮೃತಪಟ್ಟವರ ಅಸ್ಥಿಯನ್ನು ಅವರ ವಾರಸುದಾರರು 15 ದಿನಗಳೊಳಗೆ ಪಡೆಯದಿದ್ದರೆ ಸರ್ಕಾರದಿಂದಲೇ ಗೌರವಯುತವಾಗಿ ಅಸ್ಥಿ ವಿಸರ್ಜಿಸುವ ಕ್ರಮವನ್ನು ಎಲ್ಲ ಜಿಲ್ಲೆಗಳಲ್ಲೂ ಜಾರಿಗೆ ತರುವಂತೆ ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ಎನ್. ಮಂಜುನಾಥ್ ಪ್ರಸಾದ್ ಗುರುವಾರ ಆದೇಶ ಹೊರಡಿಸಿದ್ದಾರೆ.

ಕೋವಿಡ್‌ನಿಂದ ಮೃತಪಟ್ಟವರ ಅಂತ್ಯ ಸಂಸ್ಕಾರ ಮತ್ತು ಅಸ್ಥಿ ವಿಸರ್ಜನೆಗೆ ಅವಕಾಶ ಕಲ್ಪಿಸಿ ಆದೇಶಗಳನ್ನು ಹೊರಡಿಸಲಾಗಿದೆ. ಆದರೆ, ಬೆಂಗಳೂರಿನಲ್ಲಿ ಹಲವು ಮಂದಿಯ ವಾರಸುದಾರರು ಅಸ್ಥಿ ಪಡೆಯಲು ಆಸಕ್ತಿ ತೋರಿಲ್ಲ. ಈ ಕಾರಣದಿಂದ ಕಂದಾಯ ಸಚಿವರ ನೇತೃತ್ವದಲ್ಲಿ ಅಸ್ಥಿ ವಿಸರ್ಜನೆ ಮಾಡಲಾಗಿದೆ ಎಂದು ಆದೇಶದಲ್ಲಿ ತಿಳಿಸಿದ್ದಾರೆ.

ಎಲ್ಲ ಜಿಲ್ಲೆಗಳಲ್ಲೂ ಕೋವಿಡ್‌ನಿಂದ ಮೃತಪಟ್ಟವರ ಶವಗಳನ್ನು ದಹಿಸಿದ ಬಳಿಕ 15 ದಿನಗಳವರೆಗೂ ಅಸ್ಥಿಯನ್ನು ಕಾಯ್ದಿರಿಸಬೇಕು. ಅಲ್ಲಿಯವರೆಗೂ ವಾರಸುದಾರರು ಬಂದು ಅಸ್ಥಿ ಪಡೆಯದಿದ್ದರೆ ಜಿಲ್ಲಾಧಿಕಾರಿ, ಉಪ ವಿಭಾಗಾಧಿಕಾರಿ ಮತ್ತು ತಹಶೀಲ್ದಾರರು ಗೌರವಯುತವಾಗಿ ವಿಸರ್ಜಿಸಬೇಕು ಎಂದು ಸೂಚಿಸಿದ್ದಾರೆ.

ನ್ಯಾಯಾಧೀಶರ ಎದುರು ಸಂತ್ರಸ್ತೆ ಹೇಳಿಕೆ

ಬೆಂಗಳೂರು: ಮೃಗೀಯವಾಗಿ ವರ್ತಿಸಿ ಸಾಮೂಹಿಕ ಅತ್ಯಾಚಾರವೆಸಗಿದ್ದ ಪ್ರಕರಣದಲ್ಲಿ ನ್ಯಾಯಾಧೀಶರ ಎದುರು ಸಂತ್ರಸ್ತೆ ಬುಧವಾರ ಹೇಳಿಕೆ ದಾಖಲಿಸಿದ್ದಾರೆ.

ರಾಮಮೂರ್ತಿನಗರ ಠಾಣೆ ವ್ಯಾಪ್ತಿಯಲ್ಲಿ ಕೃತ್ಯ ನಡೆದ ಬಳಿಕ ತೀವ್ರ ಗಾಯಗೊಂಡಿದ್ದ ಸಂತ್ರಸ್ತೆ, ಸ್ನೇಹಿತನ ಸಹಾಯ ಕೋರಿ ಕೇರಳಕ್ಕೆ ಹೋಗಿದ್ದರು. ಅಲ್ಲಿಂದ ಅವರನ್ನು ನಗರಕ್ಕೆ ಕರೆತಂದ ಪೊಲೀಸರು, ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ ನ್ಯಾಯಾಧೀಶರ ಎದುರು ಹಾಜರುಪಡಿಸಿದರು.

ಸಿಆರ್‌ಪಿಸಿ 164ರಡಿ ನ್ಯಾಯಾಧೀಶರ ಎದುರು ಹೇಳಿಕೆ ದಾಖಲಿಸಿರುವ ಯುವತಿ, ಕೃತ್ಯ ನಡೆಯುವ ಹಾಗೂ ಕೃತ್ಯ ನಡೆದ ನಂತರದ ಸಂಗತಿಗಳನ್ನು ಬಿಚ್ಚಿಟ್ಟಿದ್ದಾರೆಂದು ಗೊತ್ತಾಗಿದೆ.

ಪ್ರಕರಣದಲ್ಲಿ ಈಗಾಗಲೇ ಆರೋಪಿಗಳ ಬಂಧನವಾಗಿದ್ದು, ಅವರೆಲ್ಲರೂ ಸಂತ್ರಸ್ತೆಗೆ ಪರಿಚಿತರು. ಅವರ ಬಗ್ಗೆಯೂ ಸಂತ್ರಸ್ತೆ ಹೇಳಿಕೆಯಲ್ಲಿ ತಿಳಿಸಿರುವುದಾಗಿ ತಿಳಿದುಬಂದಿದೆ.

ಮತ್ತಷ್ಟು ಆರೋಪಿಗಳಿಗೆ ಶೋಧ: ಬಾಂಗ್ಲಾದೇಶದ 23 ವರ್ಷದ ಸಂತ್ರಸ್ತೆಯ ಗುಪ್ತಾಂಗದೊಳಗೆ ಮದ್ಯದ ಬಾಟಲಿ ಹಾಗೂ ಕಾಲ್ಬೆರಳುಗಳನ್ನು ತುರುಕಿ ಮೃಗೀಯವಾಗಿ ವರ್ತಿಸಿ ಸಾಮೂಹಿಕ ಅತ್ಯಾಚಾರ ಎಸಗಲಾಗಿತ್ತು. ಈ ಪ್ರಕರಣದಲ್ಲಿ ಇಬ್ಬರು ಮಹಿಳೆಯರು ಸೇರಿ 12 ಮಂದಿಯನ್ನು ಈಗಾಗಲೇ ಬಂಧಿಸಲಾಗಿದೆ. ಮತ್ತಷ್ಟು ಆರೋಪಿಗಳು ತಲೆಮರೆಸಿಕೊಂಡಿದ್ದಾರೆ.

‘ಸಂತ್ರಸ್ತೆ ಹಾಗೂ ಬಹುಪಾಲು ಆರೋಪಿಗಳು, ಬಾಂಗ್ಲಾ ದೇಶದವರು. ಮಾನವ ಕಳ್ಳ ಸಾಗಣೆ ಮೂಲಕ ಅಕ್ರಮವಾಗಿ ದೇಶದೊಳಗೆ ಬಂದು ನೆಲೆಸಿದ್ದಾರೆ. ಇದೊಂದು ಸಾಮೂಹಿಕ ಅತ್ಯಾಚಾರ ಪ್ರಕರಣವಷ್ಟೇ ಅಲ್ಲ, ದೇಶದ ಭದ್ರತೆ ಪ್ರಕರಣವೂ ಹೌದು. ಪ್ರತಿಯೊಬ್ಬ ಆರೋಪಿ ಹಿನ್ನೆಲೆಯನ್ನೂ ಕೂಲಂಕುಷವಾಗಿ ಪರಿಶೀಲಿಸಲಾಗುತ್ತಿದೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

‘ನ್ಯಾಯಾಧೀಶರ ಎದುರು ಸಂತ್ರಸ್ತೆ ಹೇಳಿಕೆ ದಾಖಲಿಸಿದ್ದು, ಅದರನ್ವಯ ತನಿಖೆ ಮುಂದುವರಿಸಲಾಗಿದೆ. ಸದ್ಯದಲ್ಲೇ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಲಾಗುವುದು’ ಎಂದೂ ತಿಳಿಸಿದರು.

ಮಾನವ ಕಳ್ಳ ಸಾಗಣೆ ಜಾಲ

ಸಾಮೂಹಿಕ ಅತ್ಯಾಚಾರ ಪ್ರಕರಣದ ತನಿಖೆ ನಡೆಸುತ್ತಿರುವ ಪೊಲೀಸರು, ಮಾನವ ಕಳ್ಳ ಸಾಗಣೆ ಜಾಲದಲ್ಲಿ ಸಕ್ರಿಯರಾಗಿದ್ದರು ಎನ್ನಲಾದ ನಾಲ್ವರನ್ನು ಬಂಧಿಸಿದ್ದಾರೆ.

‘ಬಾಂಗ್ಲಾದೇಶದ ಅಶ್ರಫುಲ್ಲ ಹಾಗೂ ಆತನ ಸಹಚರರು, ಮಾನವ ಕಳ್ಳ ಸಾಗಣೆಯಲ್ಲಿ ನಿರತರಾಗಿದ್ದರು. ಕೆಲಸದ ಆಮಿಷವೊಡ್ಡಿ ಬಾಂಗ್ಲಾದೇಶದಿಂದ ಯುವತಿಯರನ್ನು ಕರೆತಂದು ದೇಶದಲ್ಲಿ ವೇಶ್ಯಾವಾಟಿಕೆಗೆ ತಳ್ಳುತ್ತಿದ್ದರು. ಇದುವರೆಗೂ ಈ ಜಾಲ, ಸುಮಾರು 40 ಯುವತಿಯರನ್ನು ಸಾಗಣೆ ಮಾಡಿರುವ ಮಾಹಿತಿ ಇದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ. ‘ಸಾಮೂಹಿಕ ಅತ್ಯಾಚಾರ ಪ್ರಕರಣದ ಸಂತ್ರಸ್ತೆ, ಬಾಂಗ್ಲಾದೇಶದವರು. ಬಹುತೇಕ ಆರೋಪಿಗಳು ಸಹ ಬಾಂಗ್ಲಾದವರು. ಎಲ್ಲರೂ ಕಳ್ಳ ಸಾಗಣೆ ಮೂಲಕ ದೇಶದೊಳಗೆ ಬಂದವರು’ ಎಂದೂ ತಿಳಿಸಿವೆ.

ಅಪರಾಧ ಸುದ್ದಿ

ಮಗು ವಿಚಾರ: ಆಯೋಗದ ಮೊರೆಹೋದ ದಂಪತಿ

ಬೆಂಗಳೂರು: ಐಪಿಎಸ್ ಅಧಿಕಾರಿ ವರ್ತಿಕಾ ಕಟಿಯಾರ್ ಹಾಗೂ ಐಎಫ್‌ಎಸ್ ಅಧಿಕಾರಿ ನಿತೀನ್ ಸುಭಾಷ್ ದಂಪತಿ ಕೌಟುಂಬಿಕ ಜಗಳವು ಇದೀಗ ರಾಷ್ಟ್ರೀಯ ಮಕ್ಕಳ ರಕ್ಷಣಾ ಆಯೋಗದ ಮೆಟ್ಟಿಲೇರಿದೆ.

‘ಅಧಿಕಾರ ಹಾಗೂ ಪ್ರಭಾವ ಬಳಸಿಕೊಳ್ಳುತ್ತಿರುವ ಪತ್ನಿ ವರ್ತಿಕಾ, ಮಗುವನ್ನು ನೋಡಲು ಬಿಡುತ್ತಿಲ್ಲ. ಕಾನೂನು ಉಲ್ಲಂಘನೆ ಮಾಡುತ್ತಿದ್ದಾರೆ. ದಯವಿಟ್ಟು ಮಗು ನೋಡಲು ಅವಕಾಶ ಮಾಡಿಕೊಡಿ’ ಎಂದು ಕೋರಿ ನಿತೀನ್ ಅವರು ಆಯೋಗಕ್ಕೆ ದೂರು ನೀಡಿದ್ದಾರೆ. ದೂರಿನ ಪ್ರತಿಯನ್ನು ರಾಜ್ಯ ಪೊಲೀಸ್ ಮಹಾನಿರ್ದೇಶಕ ಪ್ರವೀಣ್ ಸೂದ್ ಅವರಿಗೆ ಕಳುಹಿಸಿರುವ ಆಯೋಗ, ಕ್ರಮ ಕೈಗೊಳ್ಳುವಂತೆ ಸೂಚಿಸಿದೆ.

2009ನೇ ವೃಂದದ ಐಪಿಎಸ್ ಅಧಿಕಾರಿ ವರ್ತಿಕಾ ಹಾಗೂ ಭಾರತೀಯ ವಿದೇಶಾಂಗ ಸೇವೆಯ (ಐಎಫ್‌ಎಸ್) ಅಧಿಕಾರಿ ನಿತೀನ್ ಸುಭಾಷ್ ಅವರು 2011ರಲ್ಲಿ ಮದುವೆಯಾಗಿದ್ದರು.

‘ಪತಿ ನಿತೀನ್ ಸುಭಾಷ್ ಹಾಗೂ ಅವರ ಮನೆಯವರು ನಿತ್ಯವೂ ಕಿರುಕುಳ ನೀಡುತ್ತಿದ್ದು, ವರದಕ್ಷಿಣೆ ತರುವಂತೆ ಪೀಡಿಸುತ್ತಿದ್ದಾರೆ. ದೈಹಿಕವಾಗಿ ಹಲ್ಲೆಯನ್ನೂ ಮಾಡಿ ಜೀವಬೆದರಿಕೆ ಹಾಕಿದ್ದಾರೆ’ ಎಂದು ಆರೋಪಿಸಿ ವರ್ತಿಕಾ ಇತ್ತೀಚೆಗಷ್ಟೇ ಕಬ್ಬನ್ ಪಾರ್ಕ್ ಠಾಣೆಗೆ ದೂರು ನೀಡಿದ್ದರು.

ಕಂಪನಿ ಹೆಸರಿನಲ್ಲಿ ವಂಚನೆ

ಬೆಂಗಳೂರು: ಸಂದರ್ಶನ ನೀಡಿದ್ದ ಕಂಪನಿ ಹೆಸರಿನಲ್ಲಿ ಅಭ್ಯರ್ಥಿಯನ್ನು ಸಂಪರ್ಕಿಸಿದ್ದ ಆನ್‌ಲೈನ್ ವಂಚಕರು, ಕೆಲಸ ಕೊಡಿಸುವ ಆಮಿಷವೊಡ್ಡಿ ₹ 5.03 ಲಕ್ಷ ಪಡೆದು ವಂಚಿಸಿದ್ದಾರೆ.

ವೈಟ್‌ಫೀಲ್ಡ್ ನಿವಾಸಿಯಾಗಿರುವ 21 ವರ್ಷದ ಯುವಕ ವಂಚನೆ ಬಗ್ಗೆ ಸೈಬರ್ ಕ್ರೈಂ ಠಾಣೆಗೆ ದೂರು ನೀಡಿದ್ದಾರೆ. ಆರೋಪಿ ಶ್ರವಣ್‌ಕುಮಾರ್ ಎಂಬಾತನ ವಿರುದ್ಧ ಪ್ರಕರಣ ದಾಖಲಾಗಿದೆ.

‘ದೂರುದಾರ ಕೆಲಸಕ್ಕಾಗಿ ಹುಡುಕಾಟ ನಡೆಸುತ್ತಿದ್ದರು. ಫೆಬ್ರುವರಿ 21ರಂದು ಮಾರತ್ತಹಳ್ಳಿಯಲ್ಲಿರುವ ಕಂಪನಿಯೊಂದರ ಸಂದರ್ಶನಕ್ಕೆ ಹಾಜರಾಗಿದ್ದರು. ಆದರೆ, ಅವರು ಸಂದರ್ಶನದಲ್ಲಿ ಅನುತ್ತೀರ್ಣರಾಗಿದ್ದರು’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಅದೇ ಕಂಪನಿ ಹೆಸರಿನಲ್ಲೇ ದೂರುದಾರರನ್ನು ಸಂಪರ್ಕಿಸಿದ್ದ ಆರೋಪಿ ಶ್ರವಣ್‌ಕುಮಾರ್, ಕೆಲ ಶುಲ್ಕಗಳನ್ನು ಹಾಗೂ ಕಮಿಷನರ್ ಕೊಟ್ಟರೆ ಕೆಲಸ ಕೊಡಿಸುವುದಾಗಿ ಆಮಿಷವೊಡ್ಡಿದ್ದ. ಅದನ್ನು ನಂಬಿದ್ದ ದೂರುದಾರ, ಹಂತ ಹಂತವಾಗಿ ₹ 5.03 ಲಕ್ಷ ನೀಡಿದ್ದರು. ಅದಾದ ನಂತರ ಆರೋಪಿ ನಾಪತ್ತೆಯಾಗಿದ್ದಾನೆ’ ಎಂದೂ ಮೂಲಗಳು ತಿಳಿಸಿವೆ.

‘ಕೋವಿಡ್ ಹೆಚ್ಚಳ: ಸರ್ಕಾರದ ಬೇಜವಾಬ್ದಾರಿ ಕಾರಣ’

ಬೆಂಗಳೂರು: ‘ಕೋವಿಡ್ ಎರಡನೇ ಅಲೆಯಲ್ಲಿ ಸಾವು ನೋವು ಹೆಚ್ಚಲಿದೆ ಎಂದು ತಜ್ಞರ ಸಮಿತಿ ಮೊದಲೇ ಎಚ್ಚರಿಸಿತ್ತು. ಹೀಗಿದ್ದರೂ ಸರ್ಕಾರ ಮುಂಜಾಗ್ರತಾ ಕ್ರಮಗಳನ್ನು ಅನುಸರಿಸಲಿಲ್ಲ. ಈಗಿನ ಸ್ಥಿತಿಗೆ ಸರ್ಕಾರದ ಬೇಜವಾಬ್ದಾರಿತನವೇ ಕಾರಣ’ ಎಂದು ಇಟ್ಟಮಡು ನಿವಾಸಿ ಬಿ.ಆರ್.ದೇವಿಕಾ ದೂರಿದರು.

ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ಬೆಂಗಳೂರು ದಕ್ಷಿಣ ಜಿಲ್ಲೆ ಸಮಿತಿ ಗುರುವಾರ ಹಮ್ಮಿಕೊಂಡಿದ್ದ ‘ಸಾರ್ವತ್ರಿಕ ಉಚಿತ ಲಸಿಕೆಗಾಗಿ ಆನ್‌ಲೈನ್ ಅಹವಾಲು’ ಕಾರ್ಯಕ್ರಮದಲ್ಲಿ ಮಾತನಾಡಿದರು.

‘ಜಾತಿಯ ಆಧಾರದಲ್ಲಿ ಲಸಿಕೆ ನೀಡುತ್ತಿರುವುದು ಖಂಡನೀಯ. ಸರ್ಕಾರ ಲಸಿಕೆ ಮಾರಾಟ ನಿಲ್ಲಿಸಬೇಕು’ ಎಂದರು.

‘ಲಸಿಕೆಯ ಒಂದು ಡೋಸ್‌ಗೆ ₹4 ಸಾವಿರ ಹಣ ಪಾವತಿಸಬೇಕಂತೆ. ಈ ವ್ಯವಸ್ಥೆಯಲ್ಲಿ ಶ್ರೀಮಂತರಷ್ಟೇ ಬದುಕಬೇಕು. ಬಡವರೆಲ್ಲಾ ಸಾಯಬೇಕೇ’ ಎಂದು ಕುಮಾರಸ್ವಾಮಿ ಬಡಾವಣೆಯ ಕಲಾವತಿ ಪ್ರಶ್ನಿಸಿದರು.

ತ್ಯಾಗರಾಜನಗರದ ಪಾರ್ವತಮ್ಮ ‘ಮೂರನೇ ಅಲೆಯಲ್ಲಿ ಮಕ್ಕಳಿಗೆ ಹೆಚ್ಚು ತೊಂದರೆ ಎಂದು ತಜ್ಞರು ಅಭಿಪ್ರಾಯಪಡುತ್ತಿದ್ದಾರೆ. ಇದನ್ನು ತಡೆಯಲು ಸರ್ಕಾರ ಈಗಿನಿಂದಲೇ ಕಾರ್ಯಪ್ರವೃತ್ತವಾಗಬೇಕು.’ ಎಂದರು.

ಅಖಿಲ ಭಾರತ ವಕೀಲರ ಸಂಘದ ಅಧ್ಯಕ್ಷ ಎಸ್.ಶಂಕರಪ್ಪ ‘ಖಾಸಗಿ ಆಸ್ಪತ್ರೆಗಳಿಗೆ ಲಸಿಕೆ ಹಂಚಿಕೆ ಮಾಡುವುದನ್ನು ನಿಲ್ಲಿಸಬೇಕು. ಜನಪ್ರತಿನಿಧಿಗಳು ಈ ಸಮಯದಲ್ಲೂ ಮಾನವೀಯತೆ ಮರೆತು ಹಣ ಮಾಡುವ ದಂಧೆಗೆ ಇಳಿದಿದ್ದಾರೆ. ಇದು ವಿಷಾದನೀಯ’ ಎಂದರು.

ಕರ್ನಾಟಕ ಜನಾರೋಗ್ಯ ಚಳವಳಿಯ ಅಖಿಲಾ, ‘ಲಸಿಕೆ ನೀತಿಯು ರಾಜ್ಯಗಳಿಗೆ ಹೊರೆಯಾಗಿದೆ. ಖಾಸಗಿ ಆಸ್ಪತ್ರೆಗಳಿಗೆ ಲಾಭ ಮಾಡಿಕೊಡಲು ಅನುವು ಮಾಡಿಕೊಡಲಾಗುತ್ತಿದೆ’ ಎಂದರು.

ಸಿಐಟಿಯು ರಾಜ್ಯ ಕಾರ್ಯದರ್ಶಿ ಪ್ರತಾಪ್ ಸಿಂಹ, ‘ಲಸಿಕೆ ನೀತಿ ತಾರತಮ್ಯದಿಂದ ಕೂಡಿದೆ. ಸುಪ್ರೀಂ ಕೂಡ ಇದನ್ನು ಪ್ರಶ್ನಿಸಿದೆ. ಕೇಂದ್ರ ಸರ್ಕಾರವು ಸುಮಾರು 15 ಕೋಟಿ ಲಸಿಕೆಯನ್ನು ಖಾಸಗಿಯವರಿಗೆ ನೀಡಿ ಲೂಟಿಗೆ ಅವಕಾಶ ಮಾಡಿಕೊಟ್ಟಿದೆ’ ಎಂದರು.

ಜನವಾದಿ ಸಂಘಟನೆಯ ರಾಜ್ಯ ಉಪಾಧ್ಯಕ್ಷೆ ಕೆ.ಎಸ್.ಲಕ್ಷ್ಮಿ ‘ಲಸಿಕೆ ಹಂಚಿಕೆ ವಿಚಾರದಲ್ಲಿ ಪಾರದರ್ಶಕತೆ ತೋರಬೇಕು. ಇಡೀ ದೇಶದ ಜನರ ಆರೋಗ್ಯ ಕಾಪಾಡುವುದು ಸರ್ಕಾರದ ಮೂಲಭೂತ ಜವಾಬ್ದಾರಿ.’ ಎಂದರು.

ಕಸ್ತೂರಿನಗರದ ಮಂಜುಳಾ, ಉತ್ತರಹಳ್ಳಿಯ ಲಕ್ಷ್ಮಮ್ಮ, ರೇಣುಕಮ್ಮ, ನಿನಾದ್, ಪುಷ್ಪಾ, ರಾಧಿಕಾ, ಅರ್ಪಿತಾ, ವಿಜಯಲಕ್ಷ್ಮಿ, ಜಯಮ್ಮ ಹಾಗೂ ಮೆಹ್ತಾಜ್ ಅಹವಾಲು ಸಲ್ಲಿಸಿದರು.

ಜನವಾದಿ ಸಂಘಟನೆಯ ರಾಜ್ಯ ಉಪಾಧ್ಯಕ್ಷೆ ಕೆ.ಎಸ್.ವಿಮಲಾ, ಸೆಲ್ವಿ, ಬಸಮ್ಮ ಇದ್ದರು.

‘ಆತ್ಮಸ್ಥೈರ್ಯ ತುಂಬಿದ ಕ್ರಮ’

ಬೆಂಗಳೂರು: ಕೋವಿಡ್ ಎರಡನೇ ಪ್ಯಾಕೇಜ್ ಪ್ರಕಟಿಸುವ ಮೂಲಕ ಸಂಕಷ್ಟದಲ್ಲಿರುವವರಿಗೆ ಮುಖ್ಯಮಂತ್ರಿ ಯಡಿಯೂರಪ್ಪ ಅವರು ಆತ್ಮಸ್ಥೈರ್ಯ ತುಂಬಿದ್ದಾರೆ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

‘ಸಂಕಷ್ಟಕ್ಕೆ ಸಿಲುಕಿದ್ದ ರಾಜ್ಯದ ಶಿಕ್ಷಕರ ಸಮುದಾಯ, ಮೀನುಗಾರರ ಮತ್ತು ನೇಕಾರ ಸಮುದಾಯಕ್ಕೂ ಆರ್ಥಿಕ ಸಹಾಯದ ಪ್ಯಾಕೇಜ್ ಘೋಷಣೆ ಮಾಡುವಂತೆ ಮುಖ್ಯಮಂತ್ರಿಯವರಿಗೆ ಪತ್ರ ಬರೆದಿದ್ದೆ.’ ಎಂದು ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಎನ್.ರವಿಕುಮಾರ್ ತಿಳಿಸಿದ್ದಾರೆ.

ಉತ್ತಮ ಮಳೆ: ಸೋಂಪುರದಲ್ಲಿ ಗರಿಗೆದರಿದ ಕೃಷಿ ಚಟುವಟಿಕೆ

ಪ್ರಜಾವಾಣಿ ವಾರ್ತೆ

ದಾಬಸ್ ಪೇಟೆ: ಸೋಂಪುರ ಹೋಬಳಿಯುದ್ದಕ್ಕೂ ಉತ್ತಮ ಮಳೆಯಾಗುತ್ತಿದ್ದು, ರೈತರು ಹೊಲಗಳ ಉಳುಮೆ ಹಾಗೂ ಬಿತ್ತನೆ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದಾರೆ.

ಸೋಂಪುರದಲ್ಲಿ ಐದು ಹಂತಗಳ ಕೈಗಾರಿಕಾ ಪ್ರದೇಶವಿದ್ದರೂ ಹೋಬಳಿಯಲ್ಲಿ ಕೃಷಿ ಮಾಡುವವರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ.

ಇಲ್ಲಿನ ಮುಖ್ಯ ಬೆಳೆ ರಾಗಿ. ತೊಗರಿ, ಅವರೆ, ಅಲಸಂದೆ, ಮುಸುಕಿನ ಜೋಳ, ಕಡಲೇಕಾಯಿ ಇತ್ಯಾದಿ ಬೆಳೆಗಳನ್ನು ಪೂರ್ವ ಮುಂಗಾರಿನಲ್ಲಿ ಬಿತ್ತನೆ ಮಾಡಿದರೆ ಉತ್ತಮ ಫಸಲು ಸಿಗುತ್ತದೆ ಎನ್ನುವುದು ರೈತರ ನಿರೀಕ್ಷೆ. ಹಲವು ರೈತರು ಮೇವಿಗಾಗಿ ಮುಸುಕಿನ ಜೋಳ, ತೊಗರಿ, ಅವರೆ ಬಿತ್ತನೆ ಮಾಡಿದ್ದು, ಇನ್ನೂ ಹಲವು ರೈತರು ಬಿತ್ತನೆಗೆ ಮುಂದಾಗಿದ್ದಾರೆ.

’ಸೋಂಪುರ ರೈತ ಸಂಪರ್ಕ ಕೇಂದ್ರದಲ್ಲಿ ಬಿತ್ತನೆ ಬೀಜಗಳು, ಔಷಧಿ ರಿಯಾಯಿತಿ ದರದಲ್ಲಿ ದೊರೆಯಲಿವೆ. ಹೋಬಳಿಯ ರೈತರು ಬೆಳಿಗ್ಗೆ ಆರರಿಂದ 10 ಗಂಟೆಯವರೆಗೆ ಕೇಂದ್ರಕ್ಕೆ ಬಂದು ಬಿತ್ತನೆ ಬೀಜ ಮತ್ತು ಔಷಧಿಗಳನ್ನು ಪಡೆಯಬಹುದು’ ಎಂದು ಸೋಂಪುರ ರೈತ ಸಂಪರ್ಕ ಕೇಂದ್ರದ ಕೃಷಿ ಅಧಿಕಾರಿ ಕುಮಾರ್ ತಿಳಿಸಿದ್ದಾರೆ.

ಅಖಿಲ ಭಾರತ ಕಾರ್ಮಿಕ ಸಂಘಟನೆಗಳ ಆಗ್ರಹ

ಮಾಸಿಕ ₹10 ಸಾವಿರ ಭತ್ಯೆ ಕೊಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೋವಿಡ್ ಸಂದರ್ಭದಲ್ಲೂ ಜೀವದ ಹಂಗು ತೊರೆದು ಕೆಲಸ ಮಾಡುತ್ತಿರುವ ಕಾರ್ಮಿಕರಿಗೆ ಮುಂದಿನ ಆರು ತಿಂಗಳಿನವರೆಗೆ ₹10,000 ಮಾಸಿಕ ಕೋವಿಡ್ ಭತ್ಯೆ ಹಾಗೂ ಸಾಂಕ್ರಾಮಿಕ ವೇತನ ನೀಡಬೇಕು’ ಎಂದು ಆಗ್ರಹಿಸಿ ಕಾರ್ಮಿಕರು ರಾಜ್ಯದಾದ್ಯಂತ ಗುರುವಾರ ಪ್ರತಿಭಟನೆ ನಡೆಸಿದರು.

ಅಖಿಲ ಭಾರತ ಕಾರ್ಮಿಕ ಸಂಘಟನೆಗಳ (ಎಐಸಿಸಿಟಿಯು) ಅಂಗ ಸಂಘಟನೆಗಳಾದ ಗುತ್ತಿಗೆ ಆರೋಗ್ಯ ನೌಕರರ ಒಕ್ಕೂಟ (ಸಿಎಚ್‌ಇಎಫ್) ಮತ್ತು ಅಖಿಲ ಭಾರತ ಮುನ್ಸಿಪಲ್ ವರ್ಕರ್ಸ್ ಒಕ್ಕೂಟ (ಎಐಎಂಡಬ್ಲ್ಯುಎಫ್) ಪ್ರತಿಭಟನೆಗೆ ಕರೆ ನೀಡಿದ್ದವು

ಪೌರ ಕಾರ್ಮಿಕರು, ಆಸ್ಪತ್ರೆಗಳ ಡಿ–ಗ್ರೂಪ್ ನೌಕರರು, ಸ್ವಚ್ಛತಾ ಕಾರ್ಮಿಕರು, ಸ್ಮಶಾನ ಕಾರ್ಮಿಕರು ಹಾಗೂ ಇತರೆ ಮುಂಚೂಣಿ ಕಾರ್ಮಿಕರು ಪ್ರತಿಭಟನೆಯಲ್ಲಿ ಪಾಲ್ಗೊಂಡರು. ತಾವು ಕೆಲಸ ಮಾಡುವ ಸ್ಥಳದಲ್ಲಿ ಹಾಗೂ ವಾಸವಿರುವ ಸ್ಥಳದಲ್ಲೇ ಅಂತರ ಕಾಯ್ದುಕೊಂಡು ಘೋಷಣಾ ಫಲಕಗಳನ್ನು ಪ್ರದರ್ಶಿಸಿ, ಸರ್ಕಾರಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

‘ಕೋವಿಡ್ ಪರಿಸ್ಥಿತಿ ಎದುರಾದಾಗಿನಿಂದಲೂ ಕಾರ್ಮಿಕರನ್ನು ಹಲವು ಕೆಲಸಗಳಿಗೆ ಬಳಸಿಕೊಳ್ಳಲಾಗುತ್ತಿದೆ. ಕಾರ್ಮಿಕರು, ಕೋವಿಡ್ ಭೀತಿ ಇದ್ದರೂ ಜನರ ಪ್ರಾಣ ಉಳಿಸಲು ಕೆಲಸ ಮಾಡುತ್ತಿದ್ದಾರೆ. ಇಂಥ ಕಾರ್ಮಿಕರಿಗೆ ಇದುವರೆಗೂ ಯಾವುದೇ ಭತ್ಯೆ ನೀಡಿಲ್ಲ. ಬಹುತೇಕ ಕಡೆ ಮುಂಜಾಗ್ರತಾ ಕ್ರಮವಾಗಿ ಸುರಕ್ಷತಾ ಸಾಧನಗಳನ್ನೂ ಕೊಟ್ಟಿಲ್ಲ’ ಎಂದು ಪ್ರತಿಭಟನಕಾರರು ದೂರಿದರು.

‘ಕಾರ್ಮಿಕರು ಹಾಗೂ ಅವರ ಕುಟುಂಬದವರಿಗೆ ಕೋವಿಡ್ ಲಸಿಕೆ ಉಚಿತವಾಗಿ ನೀಡಬೇಕು. ₹ 10 ಲಕ್ಷ ಆರೋಗ್ಯ ವಿಮೆ ಹಾಗೂ ₹ 50 ಲಕ್ಷ ಜೀವ ವಿಮೆ ಸೌಲಭ್ಯ ಒದಗಿಸಬೇಕು. ಕಾರ್ಮಿಕರಿಗೆ ರಕ್ಷಣಾತ್ಮಕ ಪರಿಕರಗಳು, ಉಪಕರಣಗಳನ್ನು ನೀಡಬೇಕು’ ಎಂದೂ ಅವರು ಒತ್ತಾಯಿಸಿದರು.

ಪೌರ ಕಾರ್ಮಿಕರು ಘೋಷಣಾ ಫಲಕ ಪ್ರದರ್ಶಿಸಿದರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

BUSINESS

Business Offers

General

BUSINESS
Wanted Associates for Established Consulting Business Civil, Mechanical, Electrical, I & C, Marketing and Finance Professionals with relevant experience Investment Rs. 25 lacs. Contact: investerhunt@gmail.com

JOB OPPORTUNITIES

Cook

COOK WANTED. South Indian veg and non vegetarian male cook for company MD residence. At Basaveshwaranagar Bangalore. Contact: 9845343184

General

WANTED OFFICE ASSISTANTS (Male) H.S.R. Layout (Bangalore) Call: 9344168305 Email: starsilks@gmail.com

WEEKEND CORNER

FUSION MONT™ Svasthya
VITAMIN - Enriched Functional Water
Inviting Area Dealers & Experienced Sales Representatives for Retail & Corporate Sales.
Contact: 9845013347

Hospital & Medical Jobs

WANTED EXPERIENCED B.Sc NURSE for the post RESIDENTIAL NURSE. Apply: medicopastoralassociation@gmail.com /7411485215

PERSONAL

Change of Name

14833627X, SEP/MT, Dokare Mahesh Diwakar 1ATC mother name service record ASHABAI DEWAKAR DOKARE instead of ASHABAI DIWAKAR DOKARE notary KV Mani, Bangalore.

14833627X, SEP/MT, Dokare Mahesh Diwakar 1ATC son name service record SHRIRANG instead of SHRIRANG MAHESH DOKARE notary KV Mani, Bangalore.

KUMARI SHOBHA W/o. 14831034M, SEP/MT, KALLAPPA TULAVI, Villl: Pudakalakatti Makkalgerj Gokak, Belgaum, Karnataka, my name KUMARI SHOBHA to SHOBHA KALLAPPA TULAVI, notary KV Mani, Bangalore.

14833627X, SEP/MT, Dokare Mahesh Diwakar 1ATC father name service record DEWAKAR TULSIRAM DOKARE instead of DIWAKAR TULSIRAM DOKARE notary KV Mani, Bangalore.

14831034M, SEP/MT, KALLAPPA TULAVI 1ATC, mother name service record NINGAVA instead of NINGAVVA SIDDAPPA TULAVI notary KV Mani, Bangalore.

KOLLI SANTHI KUMARI W/o 14837219K- Hav- LOKANADHAM NARTU R/a Nartuputtuga, Pedda Srirampuram, Srikakulam, Andhra Pradesh changed name from KOLLI SANTHI KUMARI to NARTHU SANTHI KUMARI notary KV Mani Bangalore.

SHAHAJAD M/O 8037147L- NK- SHANUR NADAF R/a Vannur, Bailhongal, Belgaum, Karnataka changed name from SHAHAJAD to SHAHAJAD DADASAB NADAF notary KV Mani Bangalore.

DADASAB F/O 8037147L- NK- SHANUR NADAF R/a Vannur, Bailhongal, Belgaum, Karnataka changed name from DADASAB to DADASAB SULTANASAB NADAF notary KV Mani Bangalore.

RENTAL PROPERTIES

Accommodation Available

Flats

3 BHK, 3 Baths, A/c, Furnished, Family, Behind Manyata Tech Park. Contact 9845171036.

DH Classifieds
BOOK YOUR AD FOR SATURDAY & GET 50% OFF ON SUNDAY AD
*condition apply
For more information contact:
9880856233
9731810277 | 9901641752
9845114560 | 9886213331

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

ಕೋವಿಡ್ ಲಸಿಕೆ: 18ರಿಂದ 44 ವರ್ಷದವರಿಗೆ ಮತ್ತಷ್ಟು ದಿನ ಕಾಯಬೇಕಾದ ಪರಿಸ್ಥಿತಿ

ಲಸಿಕೆ: ನೋಂದಣಿಗೂ ಸಿಗದ ಅವಕಾಶ

• ವರುಣ ಹೆಗಡೆ

ಪ್ರಾತಿನಿಧಿಕ ಚಿತ್ರ

ಬೆಂಗಳೂರು: ನಗರದ ಖಾಸಗಿ ಆಸ್ಪತ್ರೆಗಳಲ್ಲಿ ಕೋವಿಡ್ ಲಸಿಕೆ ಪಡೆಯುವ ಸಂಬಂಧ 'ಕೋವಿನ್' ಪೋರ್ಟಲ್‌ನಲ್ಲಿ ಹೆಸರು ನೋಂದಣಿ ಮಾಡಿಕೊಂಡರೂ 18ರಿಂದ 44 ವರ್ಷದವರಿಗೆ ಲಸಿಕೆ ದೊರೆಯುತ್ತಿಲ್ಲ. ಇದರಿಂದಾಗಿ ಈ ವರ್ಗದವರು ಲಸಿಕೆಗಾಗಿ ಇನ್ನಷ್ಟು ದಿನ ಎದುರು ನೋಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ.

ನಿಗದಿತ ಪ್ರಮಾಣದಲ್ಲಿ ಲಸಿಕೆ ಉತ್ಪಾದನೆ ಹಾಗೂ ಪೂರೈಕೆಯಾಗದ ಕಾರಣ ಸರ್ಕಾರಿ ಆರೋಗ್ಯ ಕೇಂದ್ರಗಳಲ್ಲಿ 18–44 ವರ್ಷದವರಿಗೆ ಲಸಿಕೆ ವಿತರಣೆ ಪ್ರಕ್ರಿಯೆಯನ್ನು ತಾತ್ಕಾಲಿಕವಾಗಿ ಸ್ಥಗಿತ ಮಾಡಲಾಗಿದೆ. ಆದರೆ, ಗುರುತಿಸಲಾದ ಮುಂಚೂಣಿ ಕಾರ್ಯಕರ್ತರಿಗೆ ಮಾತ್ರ ಲಭ್ಯತೆ ಅನುಸಾರ ನೀಡಲಾಗುತ್ತಿದೆ. ಇದರಿಂದಾಗಿ ಖಾಸಗಿ ಆರೋಗ್ಯ ಕೇಂದ್ರಗಳಲ್ಲಿ ಲಸಿಕೆ ಲಭ್ಯತೆ ಬಗ್ಗೆ ವಿಚಾರಿಸುವವರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಳವಾಗುತ್ತಿದೆ.

ಪ್ರಜಾವಾಣಿ ವಿಶೇಷ

45 ವರ್ಷ ಮೇಲ್ಪಟ್ಟವರಿಗೆ ಲಸಿಕೆ ವಿತರಣೆಗೆ ಆದ್ಯತೆ ನೀಡಿದ್ದರಿಂದ 'ಕೋವಿನ್' ಪೋರ್ಟಲ್‌ನಲ್ಲಿ ಹೆಸರು ನೋಂದಾಯಿಸಿದ 18ರಿಂದ 44 ವರ್ಷದವರಿಗೆ ನಿಗದಿತ ಸಮಯ (ಸ್ಲಾಟ್) ಲಭ್ಯವಾಗುತ್ತಿಲ್ಲ.

ಖಾಸಗಿ ಆಸ್ಪತ್ರೆಗಳಿಗೆ ಪುಣೆಯ ಸೀರಂ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾವು ಪ್ರತಿ ಡೋಸ್ 'ಕೋವಿಶೀಲ್ಡ್' ಲಸಿಕೆಯನ್ನು ₹ 600ಗೆ, ಹೈದರಾಬಾದ್‌ನ ಭಾರತ್ ಬಯೋಟೆಕ್ ಸಂಸ್ಥೆಯು 'ಕೋವ್ಯಾಕ್ಸಿನ್' ಲಸಿಕೆಯನ್ನು ₹ 1,200ಗೆ ಪೂರೈಕೆ ಮಾಡುತ್ತಿದೆ. ನೇರವಾಗಿ ಕಂಪನಿಗಳಿಂದ ಖರೀದಿಸಲು ಸಾಧ್ಯವಾಗದ ಆಸ್ಪತ್ರೆಗಳು ಔಷಧ ಪೂರೈಕೆದಾರರಿಂದ ಹೆಚ್ಚಿನ ಹಣ ಪಾವತಿಸಿ, ಖರೀದಿಸುತ್ತಿವೆ. ಸರ್ಕಾರವು ಪ್ರತಿ ಡೋಸ್ ಲಸಿಕೆಗೆ ₹ 200 ಸೇವಾ ಶುಲ್ಕ ನಿಗದಿಪಡಿಸಿದೆ. ಇದರಿಂದಾಗಿ ಪ್ರತಿ ಡೋಸ್‌ಗೆ ₹ 850 ರಿಂದ ₹ 1,450 ಪಡೆಯಲಾಗುತ್ತಿದೆ. ಇಷ್ಟು ಹಣ ನೀಡಿದರೂ 18–44 ವರ್ಷದವರಿಗೆ ಲಸಿಕೆ ದೊರೆಯುತ್ತಿಲ್ಲ.

ಪೂರೈಕೆ ಸಮಸ್ಯೆ: 'ಶೇ 90ರಷ್ಟು ಆಸ್ಪತ್ರೆಗಳಲ್ಲಿ ಲಸಿಕೆ ದಾಸ್ತಾನು ಇಲ್ಲ. ದೊಡ್ಡ ಪ್ರಮಾಣದಲ್ಲಿ ಕಾರ್ಯಾದೇಶ ನೀಡಿದವರಿಗೆ, ಪ್ರಭಾವಿಗಳಿಂದ ಒತ್ತಡ ಹಾಕಿದ ಕೆಲವರಿಗೆ ಮಾತ್ರ ಒಂದಷ್ಟು ಲಸಿಕೆ ಸಿಗುತ್ತಿದೆ. ಸಣ್ಣ ಮತ್ತು ಮಧ್ಯಮ ಗಾತ್ರದ ಆಸ್ಪತ್ರೆಗಳು ಎಷ್ಟೇ ಮನವಿ ಸಲ್ಲಿಸಿದರೂ ಲಸಿಕೆ ದೊರೆಯುತ್ತಿಲ್ಲ. 'ಕೋವಿಶೀಲ್ಡ್' ಲಸಿಕೆಗೆ ಎರಡು ತಿಂಗಳು ಕಾಯುವಂತೆ ತಯಾರಿಕಾ ಕಂಪನಿ ಹೇಳುತ್ತಿದೆ. 'ಕೋವ್ಯಾಕ್ಸಿನ್' ಲಸಿಕೆಗೆ ಸಂಬಂಧಿಸಿದಂತೆ ತಯಾರಿಕಾ ಕಂಪನಿಯಿಂದ ಯಾವುದೇ ಉತ್ತರ ಬರುತ್ತಿಲ್ಲ' ಎಂದು ಖಾಸಗಿ ಆಸ್ಪತ್ರೆಗಳು ಮತ್ತು ನರ್ಸಿಂಗ್ ಹೋಮ್ಸ್ ಅಸೋಸಿಯೇಷನ್ (ಫನಾ) ಅಧ್ಯಕ್ಷ ಡಾ. ಪ್ರಸನ್ನ ಎಚ್.ಎಂ. ತಿಳಿಸಿದರು.

'ಲಸಿಕೆ ಲಭ್ಯವಿದ್ದಲ್ಲಿ ಎಲ್ಲ ವಯೋಮಾನದವರಿಗೂ ಒದಗಿಸಲು ಸಾಧ್ಯವಾಗುತ್ತಿತ್ತು. ಸದ್ಯ ಸರ್ಕಾರದ ಬಳಿ ಲಸಿಕೆಯ ದಾಸ್ತಾನು ಇದೆ. ಆದರೆ, ಸರ್ಕಾರಿ ಆರೋಗ್ಯ ಕೇಂದ್ರಗಳಲ್ಲಿ ದಿನಕ್ಕೆ 200 ಮಂದಿಗೆ ಮಾತ್ರ ಲಸಿಕೆ ನೀಡಲಾಗುತ್ತಿದೆ. ಇದರಿಂದಾಗಿ ಅಭಿಯಾನದ ವೇಗ ಹೆಚ್ಚಿಸಲು ಸಾಧ್ಯವಾಗುತ್ತಿಲ್ಲ. ಈ ಹಿಂದಿನಂತೆ ಖಾಸಗಿ ಕೇಂದ್ರಗಳಿಗೆ ಪೂರೈಕೆ ಮಾಡಿ, ವಿತರಿಸಲು ಅವಕಾಶ ನೀಡಿದ್ದರೆ ಜನತೆ ಕಾಯುವುದು ತಪ್ಪುತಿತ್ತು' ಎಂದು ವಿವರಿಸಿದರು.

'ಖಾಸಗಿ ಆಸ್ಪತ್ರೆಗಳು ವಿವಿಧ ಸಂಸ್ಥೆಗಳು ಹಾಗೂ ಅಪಾರ್ಟ್‌ಮೆಂಟ್ ಸಮುಚ್ಚಯಗಳ ಜತೆಗೆ ಒಪ್ಪಂದ ಮಾಡಿಕೊಂಡು ಲಸಿಕೆ ನೀಡಲು ಸರ್ಕಾರ ಅವಕಾಶ ನೀಡಿದೆ. ಆ ಸದಸ್ಯರು ಕೋವಿನ್ ಪೋರ್ಟಲ್‌ನಲ್ಲಿ ಮುಂಚಿತವಾಗಿ ಹೆಸರು ನೋಂದಾಯಿಸುವ ಅಗತ್ಯ ಇರುವುದಿಲ್ಲ. ಆದರೆ, ಲಸಿಕೆ ಪಡೆಯುವವರ ಮಾಹಿತಿಯನ್ನು ಆಸ್ಪತ್ರೆಗಳು ಪಡೆದು, ಸಂಬಂಧಪಟ್ಟ ಅಧಿಕಾರಿಗೆ ಒದಗಿಸಬೇಕಾಗುತ್ತದೆ. ಬಳಿಕ ಅವರ ಮಾಹಿತಿ ನೋಂದಣಿಯಾಗುತ್ತದೆ' ಎಂದು ಫನಾದ ನಿಕಟಪೂರ್ವ ಅಧ್ಯಕ್ಷ ಡಾ. ರವೀಂದ್ರ ಆರ್. ತಿಳಿಸಿದರು.

'ರೆಮ್‌ಡಿಸಿವಿರ್' ಹಂಚಿಕೆ ಮಾಡಿದಂತೆ ಲಸಿಕೆಗೆ ಕೂಡ ವ್ಯವಸ್ಥೆ ರೂಪಿಸಲು ಸರ್ಕಾರಕ್ಕೆ ಮನವಿ ಮಾಡಿದ್ದೇವೆ. ಸರ್ಕಾರ ಕ್ರಮಕೈಗೊಂಡಲ್ಲಿ ಸಮಸ್ಯೆ ಯಾಗದಂತೆ ಲಸಿಕೆ ನೀಡಲು ಸಾಧ್ಯ

ಡಾ. ಪ್ರಸನ್ನ ಎಚ್.ಎಂ., ಫನಾ ಅಧ್ಯಕ್ಷ

ಅಂಕಿ-ಅಂಶಗಳು

368 ನಗರದಲ್ಲಿನ ಸರ್ಕಾರಿ ಲಸಿಕೆ ವಿತರಣಾ ಕೇಂದ್ರಗಳು	**176** ಖಾಸಗಿ ಲಸಿಕೆ ವಿತರಣಾ ಕೇಂದ್ರಗಳು
29.34 ಲಕ್ಷ ಮೊದಲ ಡೋಸ್ ಲಸಿಕೆ ಪಡೆದುಕೊಂಡವರು	**6.93** ಲಕ್ಷ ಎರಡನೇ ಡೋಸ್ ಲಸಿಕೆ ಪಡೆದುಕೊಂಡವರು
15.95 ಲಕ್ಷ ಲಸಿಕೆ ಪಡೆದುಕೊಂಡ ಪುರುಷರು	**13.37** ಲಕ್ಷ ಲಸಿಕೆ ಪಡೆದುಕೊಂಡ ಮಹಿಳೆಯರು

ಕೋವಿಡ್: ಸಾವಿನ ದರ, ಸೋಂಕು ಪತ್ತೆ ದರ (ಕಳೆದ ಎಂಟು ವಾರಗಳ ವಿವರ)



ಕೋವಿಡ್: ಶೇ 6ಕ್ಕೇರಿದ ಸಾವಿನ ಪ್ರಮಾಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿಯು ಚಿಕಿತ್ಸಾ ನಿರ್ಧಾರ ಕೇಂದ್ರಗಳಲ್ಲಿ ಕೋವಿಡ್ ರೋಗಿಯ ಆರೋಗ್ಯ ತಪಾಸಣೆ ನಡೆಸಿದ ಬಳಿಕವೇ ಆಸ್ಪತ್ರೆಗಳಲ್ಲಿ ಹಾಸಿಗೆ ಕಾಯ್ದಿರಿಸುವ ವ್ಯವಸ್ಥೆಗೆ ಗುರುವಾರ ಅಧಿಕೃತವಾಗಿ ಚಾಲನೆ ನೀಡಿದೆ. ಇನ್ನೊಂದೆಡೆ, ನಗರದಲ್ಲಿ ಕೋವಿಡ್ ಎರಡನೇ ಅಲೆಯಲ್ಲಿ ಸೋಂಕಿತರ ಸಾವಿನ ದರ ಶೇ 6.10ಕ್ಕೆ ಏರಿದೆ.

ನಗರದಲ್ಲಿ ಕೋವಿಡ್ ಪರೀಕ್ಷೆಗೆ ಒಳಗಾದವರಲ್ಲಿ ಸೋಂಕು ಪತ್ತೆ ಪ್ರಮಾಣ ಶೇ 7.58ಕ್ಕೆ ಇಳಿದಿದೆ. ಗುರುವಾರ 64,935 ಮಂದಿಯನ್ನು ಕೋವಿಡ್ ಪರೀಕ್ಷೆಗೆ ಒಳಪಡಿಸಲಾಗಿದೆ.

'ಚಿಕಿತ್ಸಾ ನಿರ್ಧಾರ ಕೇಂದ್ರಗಳನ್ನು ಆರಂಭಿಸಿದ ಬಳಿಕ ಪ್ರಾಥಮಿಕ ಹಂತದಲ್ಲೇ ಸೋಂಕು ಪತ್ತೆಹಚ್ಚಿ ಚಿಕಿತ್ಸೆ ಕೊಡಿಸುವುದು ಸಾಧ್ಯವಾಗಿದೆ. ಹೆಚ್ಚಿನವರಿಗೆ ಆರಂಭಿಕ ಹಂತದಲ್ಲೇ ಚಿಕಿತ್ಸೆ ಸಿಗುತ್ತಿದೆ. ಸೋಂಕು ಪತ್ತೆ ಪ್ರಮಾಣ ಗಣನೀಯವಾಗಿ ಇಳಿಕೆ ಯಾದರೂ ಕೋವಿಡ್ ಸೋಂಕಿತರ ಸಾವಿನ ದರ ಇಳಿಕೆ ಕಾಣದಿರುವುದು ಏಕೆ ಎಂದು ಅರ್ಥವಾಗುತ್ತಿಲ್ಲ' ಎಂದು ಬಿಬಿಎಂಪಿಯ ಹಿರಿಯ ಅಧಿಕಾರಿಯೊಬ್ಬರು ಅಚ್ಚರಿ ವ್ಯಕ್ತಪಡಿಸಿದರು.

'ಕೋವಿಡ್ ಸೋಂಕಿತರ ಸಾವಿದರದ ಶೇ 6.10ಕ್ಕೆ ಹೆಚ್ಚಿರುವುದು ನಿಜಕ್ಕೂ ಗಾಬರಿ ಹುಟ್ಟಿಸುವಂತಹದ್ದು. ಈಗಲೂ ತೀವ್ರ ನಿಗಾ ಘಟಕಗಳಲ್ಲಿ (ಐಸಿಯು) ಹಾಸಿಗೆ ಕೊರತೆ ಇದೆ. ಐಸಿಯುಗಳಲ್ಲಿ ಹಾಸಿಗೆ ಅಗತ್ಯ ಇರುವವರಿಗೆ ಇದನ್ನು ಒದಗಿಸಲು ಸಾಧ್ಯವಾಗುತ್ತಿಲ್ಲ. ಬಹುಶಃ ಇದು ಕೂಡಾ ಸಾವಿನ ದರ ಹೆಚ್ಚಳಕ್ಕೆ ಕಾರಣವಾಗಿರಬಹುದು. ತೀವ್ರ ಅವಲಂಬನೆ ಘಟಕ (ಎಚ್‌ಡಿಯು) ಘಟಕಗಳಲ್ಲಿ ಹಾಸಿಗೆಗಳು ಲಭ್ಯ ಇವೆ. ನಾವು ಐಸಿಯುಗಳಲ್ಲಿ ವೆಂಟಿಲೇಟರ್ ಸೌಲಭ್ಯ ಇರುವ ಹಾಸಿಗೆಗಳ ಸಂಖ್ಯೆ ಹೆಚ್ಚಿಸಬೇಕಾದ ಅಗತ್ಯವಿದೆ' ಎಂದರು.

ಬಿಬಿಎಂಪಿ ಬಿಡುಗಡೆ ಮಾಡಿದ ಅಂಕಿಅಂಶಗಳ ಪ್ರಕಾರ ವೆಂಟಿಲೇಟರ್ ಸೌಲಭ್ಯ ಇರುವ 29 ಹಾಸಿಗೆಗಳು ಹಂಚಿಕೆಗೆ ಗುರುವಾರ ಲಭ್ಯ ಇದ್ದವು. ಆದರೆ, ಐಸಿಯುವಿನಲ್ಲಿ ವೆಂಟಿಲೇಟರ್ ಸೌಲಭ್ಯ ಇರುವ ಹಾಸಿಗೆಗಳು ಸಿಗದೇ ರೋಗಿಗಳು ಸಮಸ್ಯೆ ಎದುರಿಸುವ ಪರಿಸ್ಥಿತಿ ಗುರುವಾರವೂ ಮುಂದುವರಿದಿತ್ತು.

ರೆಮ್‌ಡಿಸಿವಿರ್: ನೇರ ಖರೀದಿಗೆ ಅವಕಾಶ

ಬೆಂಗಳೂರು: ಕೋವಿಡ್ ಪೀಡಿತರ ಚಿಕಿತ್ಸೆಗೆ ಬಳಸುವ 'ರೆಮ್‌ಡಿಸಿವಿರ್' ಔಷಧವನ್ನು ಆಸ್ಪತ್ರೆಗಳು ಹಾಗೂ ಸಾರ್ವಜನಿಕರು ಔಷಧ ವಿತರಕರಿಂದ ನೇರವಾಗಿ ಖರೀದಿಸಬಹುದಾಗಿದೆ.

ಈ ಬಗ್ಗೆ ಆರೋಗ್ಯ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಜಾವೇದ್ ಅಖ್ತರ್ ಅವರು ಪ್ರಕಟಣೆ ಹೊರಡಿಸಿದ್ದು, 'ಕೊರೊನಾ ಸೋಂಕಿತರ ಚಿಕಿತ್ಸೆಗೆ ಈಗ ಬೇಡಿಕೆಗಿಂತ ಹೆಚ್ಚಿನ ಪ್ರಮಾಣದಲ್ಲಿ ರೆಮ್‌ಡಿಸಿವಿರ್ ಔಷಧ ಮಾರುಕಟ್ಟೆಯಲ್ಲಿ ದಾಸ್ತಾನು ಇದೆ. ಹೀಗಾಗಿ, ಕೆಪಿಎಂಇ ಪೋರ್ಟಲ್ ಮೂಲಕ ಆಸ್ಪತ್ರೆಗಳಿಂದ ಆನ್‌ಲೈನ್ ಮನವಿ ಪಡೆದು, ಔಷಧ ಹಂಚಿಕೆ ಮಾಡುವ ಪ್ರಕ್ರಿಯೆಯನ್ನು ನಿಲ್ಲಿಸಲಾಗಿದೆ' ಎಂದು ತಿಳಿಸಿದ್ದಾರೆ.

'ಅಗತ್ಯ ಇರುವವರು ನೇರವಾಗಿ ಔಷಧ ವಿತರಕರಿಂದಲೇ ಇನ್ನುಮುಂದೆ ಖರೀದಿಸಬಹುದಾಗಿದೆ. ಯಾವುದೇ ಸಂಸ್ಥೆಯು ಔಷಧ ಬೆಲೆ ನಿಯಂತ್ರಣ ಆದೇಶ ಉಲ್ಲಂಘಿಸಿ, ಹೆಚ್ಚಿನ ಬೆಲೆಗೆ ಮಾರಾಟ ಮಾಡುವಂತಿಲ್ಲ. ಔಷಧ ಮತ್ತು ಕಾಂತಿವರ್ಧಕ ಅಧಿನಿಯಮ ಲ್ಲಂಘಿಸಿ ಮಾರಾಟ ಮಾಡಿದಲ್ಲಿ ಅಂಥವರ ವಿರುದ್ಧ ಕಠಿಣ ಕ್ರಮ ಜರುಗಿಸಲಾಗುವುದು' ಎಚ್ಚರಿಕೆ ನೀಡಿದ್ದಾರೆ.

ಸುಧಾರಿತ ತಂತ್ರಾಂಶ ಬಿಡುಗಡೆ ಮಾಡಿದ ಸಚಿವ ಅರವಿಂದ ಲಿಂಬಾವಳಿ

ಟ್ರಯಾಜಿಂಗ್ ಸೆಂಟರ್‌ನಿಂದಲೇ ಹಾಸಿಗೆ ಕಾಯ್ದಿರಿಸುವಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ರೋಗಿಗಳಿಗೆ ಚಿಕಿತ್ಸೆ ನಿರ್ಧಾರ ಕೇಂದ್ರಗಳ (ಟ್ರಯಾಜಿಂಗ್ ಸೆಂಟರ್) ಮೂಲಕವೇ ಆಸ್ಪತ್ರೆಗಳಲ್ಲಿ ಹಾಸಿಗೆಗಳನ್ನು ಕಾಯ್ದಿರಿಸಲು ಬಿಬಿಎಂಪಿಯ 'ಕೋವಿಡ್ ಆಸ್ಪತ್ರೆಗಳಲ್ಲಿ ಹಾಸಿಗೆ ನಿರ್ವಹಣೆಯ ಕೇಂದ್ರೀಕೃತ ವ್ಯವಸ್ಥೆ'ಯ (ಸಿಎಚ್‌ಬಿ ಎಂಎಸ್) ತಂತ್ರಾಂಶದಲ್ಲಿ ಸುಧಾರಣೆ ತರಲಾಗಿದೆ.

ಸುಧಾರಿತ ತಂತ್ರಾಂಶವನ್ನು ವಾರ್ ರೂಂ, ಕಾಲ್ ಸೆಂಟರ್ ನಿರ್ವಹಣೆ ಮತ್ತು ಸೋಂಕಿತರಿಗೆ ವೈದ್ಯಕೀಯ ಸಲಹೆ ವ್ಯವಸ್ಥೆ ಮೇಲ್ವಿಚಾರಣೆಯ ನೋಡಲ್ ಸಚಿವ ಅರವಿಂದ ಲಿಂಬಾವಳಿ ಗುರುವಾರ ಬಿಡುಗಡೆ ಮಾಡಿದರು.

'ಚಿಕಿತ್ಸಾ ನಿರ್ಧಾರ ಕೇಂದ್ರಗಳಿಗೆ ಬರುವ ಕೋವಿಡ್ ಸೋಂಕಿತರಿಗೆ ಇದುವರೆಗೆ ವಲಯ ನಿಯಂತ್ರಣ ಕೊಠಡಿ ಹಾಗೂ ಬಿಬಿಎಂಪಿಯ ಕೇಂದ್ರ ವಾರ್ ರೂಂನ ಮೂಲಕ ಹಾಸಿಗೆ ಕಾಯ್ದಿರಿಸಲಾಗುತ್ತಿತ್ತು. ಇನ್ನು ರೋಗಿಗಳ ಆರೋಗ್ಯ ಸ್ಥಿತಿ ಆಧರಿಸಿ ಸರದಿ ಪ್ರಕಾರ ಆಸ್ಪತ್ರೆಯಲ್ಲಿ ಹಾಸಿಗೆ ಕಾಯ್ದಿರಿಸಲಾಗುತ್ತದೆ. ತೀವ್ರ ನಿಗಾ ಘಟಕಗಳಲ್ಲಿ ತುರ್ತಾಗಿ ಹಾಸಿಗೆ ವ್ಯವಸ್ಥೆ ಆಗಬೇಕಿರುವವರಿಗೆ ದೂರವಾಣಿ ಮೂಲಕವೇ ಅವರ ದೇಹಸ್ಥಿತಿಯ ವಿವರ ಪಡೆದು ಸೂಕ್ತ ಹಾಸಿಗೆ ಕಾಯ್ದಿರಿಸಲಾಗುತ್ತದೆ' ಎಂದು ಲಿಂಬಾವಳಿ ಮಾಹಿತಿ ನೀಡಿದರು.

ಆಸ್ಪತ್ರೆಗಳಲ್ಲಿ ಹಾಸಿಗೆ ಕಾಯ್ದಿರಿಸುವ ಕೇಂದ್ರೀಕೃತ ವ್ಯವಸ್ಥೆಯ ತಂತ್ರಾಂಶದ ಬಗ್ಗೆ ಬಿಬಿಎಂಪಿ ವಿಶೇಷ ಆಯುಕ್ತ ಡಿ. ರಂದೀಪ್ ಅವರು ಸಚಿವ ಅರವಿಂದ ಲಿಂಬಾವಳಿ ಅವರಿಗೆ ಮಾಹಿತಿ ನೀಡಿದರು. ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಹಾಗೂ ಸಂಸದ ತೇಜಸ್ವಿ ಸೂರ್ಯ ಇದ್ದಾರೆ

'ಸಿಎಚ್‌ಬಿಎಂಎಸ್‌ನಲ್ಲಿ ಚಿಕಿತ್ಸೆಯ ಸರದಿ ನಿರ್ಧಾರ ಘಟಕವನ್ನು ಅಳವಡಿಸಲಾಗಿದೆ. ಇದನ್ನು ಎಂಟು ವಲಯಗಳ 16 ಚಿಕಿತ್ಸೆ ನಿರ್ಧಾರ ಕೇಂದ್ರಗಳಲ್ಲಿ ಬಳಸಬಹುದು. ಈ ಕೇಂದ್ರಗಳಿಗೆ ನೇರವಾಗಿ ಬರುವ ಕೊರೊನಾ ಸೋಂಕಿತರ ದೈಹಿಕ ತಪಾಸಣೆ ನಡೆಸಿ ಅಗತ್ಯ ಬಿದ್ದರೆ ಅಲ್ಲೇ ಆಸ್ಪತ್ರೆಗಳಲ್ಲಿ ಹಾಸಿಗೆ ಕಾಯ್ದಿರಿಸಲಾಗುತ್ತದೆ. ರೋಗಿಗಳನ್ನು ಆಸ್ಪತ್ರೆಗಳಿಗೆ ಕರೆದೊಯ್ಯಲು ಈ ಕೇಂದ್ರಗಳಿಗೆ ಆಂಬುಲೆನ್ಸ್‌ಗಳನ್ನೂ ಒದಗಿಸಲಾಗಿದೆ. ಸೋಂಕಿತರು ಈ ಕೇಂದ್ರಗಳಿಗೆ ಬರಲು ಸಾಧ್ಯವಾಗದಿದ್ದರೆ ಆಂಬುಲೆನ್ಸ್ ಅವರು ಇರುವಲ್ಲಿಗೇ ಹೋಗಲಿದೆ. ಈ ಆಂಬುಲೆನ್ಸ್‌ಗಳನ್ನೇ ಚಿಕಿತ್ಸಾ ನಿರ್ಧಾರ ಘಟಕಗಳಂತೆ ಬಳಸಲಾಗುತ್ತದೆ' ಎಂದು ಅವರು ವಿವರಿಸಿದರು.

'ಚಿಕಿತ್ಸಾ ನಿರ್ಧಾರ ಕೇಂದ್ರಗಳಲ್ಲಿ ಕಂಪ್ಯೂಟರ್ ಮತ್ತು ಇಂಟರ್ನೆಟ್ ಸೌಲಭ್ಯ ಕಲ್ಪಿಸಲಾಗಿದೆ. ಪ್ರತಿ ಪಾಳಿಯಲ್ಲಿ ತಲಾ ಇಬ್ಬರು ವೈದ್ಯರು ಮತ್ತು ಇಬ್ಬರು ಅರೆವೈದ್ಯಕೀಯ ಸಿಬ್ಬಂದಿ ಕಾರ್ಯನಿರ್ವಹಿಸುತ್ತಾರೆ. ಎಲ್ಲ ಕೇಂದ್ರಗಳನ್ನೂ ಆಮ್ಲಜನಕ ಪೂರೈಕೆ ಸೌಲಭ್ಯಗಳಿರುವ ಕೋವಿಡ್ ಆರೈಕೆ ಕೇಂದ್ರದ ಜೊತೆ ಜೋಡಿಸಲಾಗಿರುತ್ತದೆ. ಈ ಕೇಂದ್ರಗಳ ಮೂಲಕ ಹಾಸಿಗೆ ಕಾಯ್ದಿರಿಸಲು 26 ಆಸ್ಪತ್ರೆಗಳನ್ನು ಗೊತ್ತುಪಡಿಸಲಾಗಿದೆ' ಎಂದು ತಿಳಿಸಿದರು.

'ಹೊಸ ವ್ಯವಸ್ಥೆಯನ್ನು ಮೂರು ದಿನಗಳ ಕಾಲ ಪರೀಕ್ಷಿಸಲಾಗಿದೆ. ಇವುಗಳಲ್ಲಿ 936 ರೋಗಿಗಳನ್ನು ದೈಹಿಕ ತಪಾಸಣೆಗೆ ಒಳಪಡಿಸಲಾಗಿದೆ. 678 ರೋಗಿಗಳಿಗೆ ಮನೆಯಲ್ಲೇ ಪ್ರತ್ಯೇಕವಾಗಿದ್ದು ಆರೈಕೆಗೊಳಗಾಗುವಂತೆ ಸಲಹೆ ನೀಡಲಾಗಿದೆ. 186 ರೋಗಿಗಳನ್ನು ಕೋವಿಡ್ ಆರೈಕೆ ಕೇಂದ್ರಗಳಿಗೆ ಮತ್ತು 72 ರೋಗಿಗಳನ್ನು ವಿವಿಧ ಆಸ್ಪತ್ರೆಗಳಲ್ಲಿ ಎಚ್‌ಡಿಯು, ಐಸಿಯು ಘಟಕಗಳಲ್ಲಿ ದಾಖಲಿಸಲಾಗಿದೆ' ಎಂದು ಅವರು ವಿವರ ನೀಡಿದರು.

ಸಂಸದ ತೇಜಸ್ವಿ ಸೂರ್ಯ, ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ, ರಾಜ್ಯ ಕೋವಿಡ್ ವಾರ್ ರೂಂಗಳ ಉಸ್ತುವಾರಿ ವಿ.ಪೊನ್ನುರಾಜ್, ಬಿಬಿಎಂಪಿ ವಾರ್ ರೂಂನ ನೋಡಲ್ ಅಧಿಕಾರಿ ತುಷಾರ್ ಗಿರಿನಾಥ್, ಕುಮಾರ್ ಪುಷ್ಕರ್, ಬಿಬಿಎಂಪಿ ವಿಶೇಷ ಆಯುಕ್ತ ರಂದೀಪ್, ಡಾ.ಭಾಸ್ಕರ್ ಉಪಸ್ಥಿತರಿದ್ದರು.

'ದೈಹಿಕ ತಪಾಸಣೆ ಕಡ್ಡಾಯ'

'ಆಸ್ಪತ್ರೆಗಳಿಗೆ ದಾಖಲಾಗಲು ಬಯಸುವ ಎಲ್ಲ ರೋಗಿಗಳನ್ನೂ ಕಡ್ಡಾಯ ದೈಹಿಕ ತಪಾಸಣೆಗೆ ಒಳಪಡಿಸುವ ಚಿಂತನೆ ಇದೆ. ಈ ಸಲುವಾಗಿ ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ ಹೆಚ್ಚಿನ ಸಂಖ್ಯೆಯ ಚಿಕಿತ್ಸಾ ನಿರ್ಧಾರ ಕೇಂದ್ರಗಳನ್ನು ಆರಂಭಿಸಲಾಗುತ್ತದೆ. ಪ್ರಕರಣಗಳ ಸಂಖ್ಯೆ ಹೆಚ್ಚಾದರೆ ಈ ಕೇಂದ್ರಗಳ ಸಂಖ್ಯೆಯನ್ನೂ ಹೆಚ್ಚಿಸಲಾಗುತ್ತದೆ' ಎಂದು ಅರವಿಂದ ಲಿಂಬಾವಳಿ ತಿಳಿಸಿದರು.

ಕೋವಿಡ್ ಅಂಕಿ–ಅಂಶ



'ಲಸಿಕೆ: ಅಮೆರಿಕದಿಂದ ನಿರೀಕ್ಷಿತ ಪ್ರಮಾಣದಲ್ಲಿ ಪೂರೈಕೆ ಇಲ್ಲ'

ಪ್ರಜಾವಾಣಿ ವಾರ್ತೆ

ನವದೆಹಲಿ: ಭಾರತಕ್ಕೆ ಕೋವಿಡ್–19 ವಿರುದ್ಧದ ಲಸಿಕೆ ಪೂರೈಸುವುದಾಗಿ ಅಮೆರಿಕ ಭರವಸೆ ನೀಡಿದೆ. ಆದರೆ, ಮೊದಲ ಹಂತದಲ್ಲಿ ನಿರೀಕ್ಷಿತ ಪ್ರಮಾಣದಲ್ಲಿ ದೊರೆಯುವ ಸಾಧ್ಯತೆ ಇಲ್ಲ.

ಭಾರತ, ಕೆನಡಾ, ಮೆಕ್ಸಿಕೊ, ದಕ್ಷಿಣ ಕೊರಿಯಾ ಮತ್ತು ಇತರ ಸ್ನೇಹಿ ರಾಷ್ಟ್ರಗಳು ಹಾಗೂ ಕೋವಿಡ್–19 ಅತಿ ಹೆಚ್ಚಿನ ಸಂಖ್ಯೆಯಲ್ಲಿ ಪ್ರಕರಣಗಳಿರುವ ರಾಷ್ಟ್ರಗಳಿಗೆ ಕೇವಲ 60 ಲಕ್ಷ ಡೋಸ್ ಲಸಿಕೆ ಪೂರೈಸುವುದಾಗಿ ಅಮೆರಿಕ ಅಧ್ಯಕ್ಷ ಜೋ ಬೈಡನ್ ಗುರುವಾರ ಹೇಳಿದ್ದಾರೆ.

ಜೂನ್ ತಿಂಗಳ ಅಂತ್ಯಕ್ಕೆ ವಿವಿಧ ರಾಷ್ಟ್ರಗಳಿಗೆ ಒಟ್ಟು 8 ಕೋಟಿ ಲಸಿಕೆ ಪೂರೈಸುವುದಾಗಿ ಅಮೆರಿಕ ಹೇಳಿದೆ. ಮೊದಲ ಹಂತದಲ್ಲಿ 2.5 ಕೋಟಿ ಡೋಸ್ ಕಳುಹಿಸುವುದಾಗಿ ತಿಳಿಸಿದೆ. ಈ ಲಸಿಕಾ ಅಭಿಯಾನದ ಭಾಗವಾಗಿಯೇ 60 ಲಕ್ಷ ಡೋಸ್‌ಗಳನ್ನು ಭಾರತವು ಸೇರಿದಂತೆ ವಿವಿಧ ರಾಷ್ಟ್ರಗಳಿಗೆ ಪೂರೈಸಲಿಸದೆ. ಹೀಗಾಗಿ, ಭಾರತಕ್ಕೆ ಕಡಿಮೆ ಪ್ರಮಾಣದಲ್ಲಿ ಲಸಿಕೆ ದೊರೆಯ ಲಿದೆ.

ಇನ್ನೊಂದು ಹಂತದಲ್ಲಿ ನೀಡಲಾಗುವ 70 ಲಕ್ಷ ಡೋಸ್ ಲಸಿಕೆಯಲ್ಲಿ ಭಾರತಕ್ಕೂ ದೊರೆಯಲಿದೆ ಎಂದು ಶ್ವೇತ ಭವನದ ಪ್ರಕಟಣೆ ತಿಳಿಸಿದೆ.

ಲಸಿಕೆ ರಫ್ತು ಮತ್ತು ಭಾರತದಲ್ಲಿ ತಯಾರಿಸುವ ಕುರಿತು ಅಮೆರಿಕದ ಕಂಪನಿಗಳಾದ ಫೈಜರ್, ಮಾಡರ್ನಾ ಹಾಗೂ ಜಾನ್ಸನ್ ಮತ್ತು ಜಾನ್ಸನ್ ಜತೆಯೂ ಕೇಂದ್ರ ಸರ್ಕಾರ ಮಾತುಕತೆ ನಡೆಸುತ್ತಿದೆ.

ಕಮಲಾ ಜತೆ ಮೋದಿ ಮಾತುಕತೆ: ಪ್ರಧಾನಿ ನರೇಂದ್ರ ಮೋದಿ ಅವರು ಗುರುವಾರ ಅಮೆರಿಕ ಉಪಾಧ್ಯಕ್ಷೆ ಕಮಲಾ ಹ್ಯಾರಿಸ್ ಜತೆ ದೂರವಾಣಿ ಮೂಲಕ ಮಾತುಕತೆ ನಡೆಸಿದರು.

ಭಾರತಕ್ಕೆ ಲಸಿಕೆ ಪೂರೈಸುವುದಾಗಿ ಅಮೆರಿಕ ಭರವಸೆ ನೀಡಿರುವುದಕ್ಕೆ ಪ್ರಧಾನಿ ನರೇಂದ್ರ ಮೋದಿ ಕೃತಜ್ಞತೆ ಸಲ್ಲಿಸಿದರು. ಜಾಗತಿಕ ವಿತರಣೆ ಕಾರ್ಯಕ್ರಮದ ಭಾಗವಾಗಿ ಭಾರತಕ್ಕೂ ಲಸಿಕೆ ಲಭ್ಯವಾಗಲಿದೆ. ಈ ತಿಂಗಳ ಅಂತ್ಯಕ್ಕೆ ಮೊದಲ ಬ್ಯಾಚ್‌ನ ಡೋಸ್‌ಗಳು ಭಾರತ ತಲುಪಲಿವೆ.

ನಗರದ ಕೋವಿಡ್ ಅಂಕಿ–ಅಂಶ

ಒಟ್ಟು ಪ್ರಕರಣಗಳು (11,70,742 ನಿನ್ನೆಯ ವಿವರ)	11,74,275
ಸಕ್ರಿಯ ಪ್ರಕರಣಗಳು	1,34,384
ಗುಣಮುಖರಾದವರು	10,25,614
ಒಟ್ಟು ಸಾವು	14,276
ಗುರುವಾರದ ಏರಿಕೆ	
ಹೊಸ ಪ್ರಕರಣ	3,533
ಗುಣಮುಖ	7,672
ಸಾವು	347

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ತಲಾ ₹ 10 ಸಾವಿರ ಪರಿಹಾರ ಎಚ್‌.ಡಿ. ಕುಮಾರಸ್ವಾಮಿ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಾಕ್‌ಡೌನ್ ವಿಸ್ತರಿಸುವ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ನಿರ್ಧಾರವನ್ನು ಬೆಂಬಲಿಸಿರುವ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ, ಶ್ರಮಿಕ ವರ್ಗದ ಒಂದು ಕೋಟಿ ಕುಟುಂಬಗಳಿಗೆ ತಲಾ ₹ 10,000 ಪರಿಹಾರ ನೀಡುವಂತೆ ಆಗ್ರಹಿಸಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, 'ತಲಾ ₹ 10,000 ನೀಡಿದರೆ ಒಟ್ಟು ₹ 10,000 ಕೋಟಿ ಬೇಕಾಗುತ್ತದೆ. ಮೇ ತಿಂಗಳಲ್ಲಿ ಅಬಕಾರಿ ಇಲಾಖೆಗೆ ಶೇ 150ರಷ್ಟು ಹೆಚ್ಚಿನ ವರಮಾನ ಸಂಗ್ರಹವಾಗಿದೆ. ಅನಗತ್ಯವಾಗಿ ಸಾವಿರಾರು ಕೋಟಿ ರೂಪಾಯಿಗಳ ಕಾಮಗಾರಿ ಮಂಜೂರು ಮಾಡುವುದನ್ನು ಸ್ಥಗಿತಗೊಳಿಸಬೇಕು. ಲಭ್ಯವಿರುವ ಹಣದಲ್ಲಿ ₹ 10 ಸಾವಿರ ಕೋಟಿಯನ್ನು ಪರಿಹಾರ ವಿತರಣೆಗೆ ಬಳಸಬೇಕು' ಎಂದಿದ್ದಾರೆ. ಸಾರ್ವಜನಿಕರ ಆರೋಗ್ಯದ ದೃಷ್ಟಿಯಿಂದ ಲಾಕ್‌ಡೌನ್ ಮುಂದುವರಿಸುವುದು ಸೂಕ್ತ. ಆದರೆ, ಜನರಿಗೆ ಆರ್ಥಿಕ ನೆರವೂ ನೀಡ ಬೇಕು. ಈಗ ಘೋಷಿಸಿರುವ ಪ್ಯಾಕೇಜ್‌ಗಳು ಅವೈಜ್ಞಾನಿಕವಾಗಿವೆ ಎಂದಿದ್ದಾರೆ.

'ಜನರ ಸಂಕಷ್ಟ ಪರಿಹರಿಸದ ಪ್ಯಾಕೇಜ್'

'ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಪ್ರಕಟಿಸಿರುವ ಎರಡನೇ ಪ್ಯಾಕೇಜ್‌ನಿಂದ ಜನರ ಸಂಕಷ್ಟ ಪರಿಹಾರವಾಗುವುದಿಲ್ಲ' ಎಂದು ಭಾರತ ಕಮ್ಯೂನಿಸ್ಟ್ ಪಕ್ಷದ (ಮಾರ್ಕ್ಸ್‌ವಾದಿ) ಬೆಂಗಳೂರು ದಕ್ಷಿಣ ಜಿಲ್ಲಾ ಸಮಿತಿಯ ಕಾರ್ಯದರ್ಶಿ ಕೆ.ಎನ್.ಉಮೇಶ್ ತಿಳಿಸಿದ್ದಾರೆ.

'ಮೊದಲು ಅರೆಬರೆ ಪ್ಯಾಕೇಜ್ ಪ್ರಕಟಿಸಿದ್ದ ಯಡಿಯೂರಪ್ಪನವರು ಎರಡನೇ ಪ್ಯಾಕೇಜ್‌ನಲ್ಲಿ ಎಲ್ಲ ವರ್ಗವನ್ನೂ ಗಮನದಲ್ಲಿಟ್ಟುಕೊಂಡು ನೆರವು ಪ್ರಕಟಿಸಬಹುದು ಎಂದು ನಿರೀಕ್ಷಿಸಲಾಗಿತ್ತು. ರಾಜ್ಯದ ಜನತೆಯ ಈ ನಿರೀಕ್ಷೆ ಹುಸಿಯಾಗಿದೆ' ಎಂದಿದ್ದಾರೆ.

'ಈಗಲಾದರೂ ಸರ್ಕಾರ ಎಚ್ಚೆತ್ತು ಕನಿಷ್ಠ ₹15 ಸಾವಿರ ಕೋಟಿ ಮೊತ್ತದ ಪ್ಯಾಕೇಜ್ ನೀಡಬೇಕು. ಪ್ರತಿ ಕುಟುಂಬಕ್ಕೂ ₹10 ಸಾವಿರ ನೇರ ನಗದು ವರ್ಗಾವಣೆ ಮಾಡ ಬೇಕು' ಎಂದು ಬೆಂಗಳೂರು ಉತ್ತರ ಜಿಲ್ಲಾ ಸಮಿತಿಯ ಕಾರ್ಯದರ್ಶಿ ಎನ್. ಪ್ರತಾಪ್ ಸಿಂಹ ಒತ್ತಾಯಿಸಿದ್ದಾರೆ.

'ಗೂಗಲ್‌ನಿಂದ ಪ್ರಮಾದ'

'ಕನ್ನಡ ಅತ್ಯಂತ ಕೆಟ್ಟ ಭಾಷೆ ಎಂಬ ಮಾಹಿತಿಯುಳ್ಳ ವೆಬ್ ಪುಟವನ್ನು ಪ್ರಕಟಿಸುವ ಮೂಲಕ ಗೂಗಲ್ ಪ್ರಮಾದ ಎಸಗಿದೆ. ಈಗ ಆ ಪುಟವನ್ನು ತೆಗೆದು ಹಾಕಿರಬಹುದು. ಆದರೆ, ಅದರಿಂದ ಕನ್ನಡಿಗರಿಗೆ ಆದ ನೋವಿಗೆ ಏನು ಪರಿಹಾರ' ಎಂದು ಎಚ್.ಡಿ. ಕುಮಾರಸ್ವಾಮಿ ಪ್ರಶ್ನಿಸಿದ್ದಾರೆ.

ಲಸಿಕೆ: ಸರ್ಕಾರದ ಮೊರೆ ಹೋದ ಖಾಸಗಿ ಆಸ್ಪತ್ರೆಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: 21.71 ಲಕ್ಷ ಡೋಸ್ ಲಸಿಕೆ ಪೂರೈಸುವಂತೆ ನಗರದ 33 ಖಾಸಗಿ ಆಸ್ಪತ್ರೆಗಳು ಕೋವಿಡ್ ಲಸಿಕೆ ತಯಾರಿಕಾ ಕಂಪನಿಗಳಿಗೆ ಕಾರ್ಯಾದೇಶ ನೀಡಿದ್ದವು.

ಆದರೆ, ಅವುಗಳಿಗೆ 15.46 ಲಕ್ಷ ಡೋಸ್ ಲಸಿಕೆ ಮಾತ್ರ ಪೂರೈಕೆಯಾಗಿದೆ. ಇದರಿಂದಾಗಿ ಲಸಿಕೆ ಪೂರೈಕೆಗೆ ಸಂಬಂಧಿಸಿದಂತೆ ತಯಾರಿಕಾ ಕಂಪನಿಗಳ ಜತೆಗೆ ಮಾತುಕತೆ ನಡೆಸಲು ಆರೋಗ್ಯ ಇಲಾಖೆಗೆ ಖಾಸಗಿ ಆಸ್ಪತ್ರೆಗಳು ಮನವಿ ಮಾಡಿಕೊಂಡಿವೆ.

ಲಸಿಕೆಗೆ ಸಂಬಂಧಿಸಿದಂತೆ ಇಲಾಖೆಯ ಉನ್ನತ ಅಧಿಕಾರಿಗಳ ಜತೆಗೆ ಖಾಸಗಿ ಆಸ್ಪತ್ರೆಗಳು ಮತ್ತು ನರ್ಸಿಂಗ್ ಹೋಮ್ಸ್ ಅಸೋಸಿಯೇಷನ್‌ನ (ಫನಾ) ಪ್ರಮುಖರು ಗುರುವಾರ ಆನ್‌ಲೈನ್ ಮೂಲಕ ಸಭೆ ನಡೆಸಿದರು.

ಖಾಸಗಿ ಆಸ್ಪತ್ರೆಗಳು ಈವರೆಗೆ 3,29,680 ಡೋಸ್ 'ಕೋವ್ಯಾಕ್ಸಿನ್' ಹಾಗೂ 18,41,620 ಡೋಸ್ 'ಕೋವಿಶೀಲ್ಡ್' ಲಸಿಕೆಗೆ ಕಾರ್ಯಾದೇಶ ನೀಡಿವೆ.

'ಲಸಿಕೆ ಅಭಿಯಾನದ ಪ್ರಾರಂಭದಲ್ಲಿ ಒಂದು ಸಾವಿರ ಖಾಸಗಿ ಆಸ್ಪತ್ರೆಗಳು ಪಾಲ್ಗೊಂಡಿದ್ದವು. ಆದರೆ, ಈಗ 50 ಆಸ್ಪತ್ರೆಗಳು ಮಾತ್ರ ಅಭಿಯಾನ ನಡೆಸುತ್ತಿದ್ದು, ಅವುಗಳು ಮಾತ್ರ ಲಸಿಕೆಯ ದಾಸ್ತಾನು ಹೊಂದಿವೆ. ಅವರು ತಮ್ಮ ದಾಸ್ತಾನನ್ನು ಖಾಲಿ ಮಾಡಲು ಎರಡರಿಂದ ಮೂರು ವಾರಗಳು ಬೇಕಾಗುತ್ತವೆ. ಈ ಅವಧಿಯಲ್ಲಿ ಬೇರೆ ಆಸ್ಪತ್ರೆಗಳಿಗೆ ಆ ಲಸಿಕೆಗಳು ಲಭ್ಯವಾಗಿದ್ದರೆ ಲಸಿಕೆ ವಿತರಣೆ ಅಭಿಯಾನಕ್ಕೆ ವೇಗ ಒದಗಿಸಲು ಸಾಧ್ಯವಾಗುತ್ತಿತ್ತು' ಎಂದು ಫನಾ ಕಾರ್ಯದರ್ಶಿ ಡಾ.ವೈ.ಎಲ್. ರಾಜಶೇಖರ್ ತಿಳಿಸಿದರು.

ವಿಶೇಷ ಲಸಿಕಾ ಅಭಿಯಾನ ನಡೆಸಲು ಸರ್ಕಾರಕ್ಕೆ ಹೈಕೋರ್ಟ್ ಸೂಚನೆ

ಕೋವಿಡ್ ಮುಂಚೂಣಿ ಕಾರ್ಯಕರ್ತರು ಮತ್ತವರ ಕುಟುಂಬ ಸದಸ್ಯರಿಗೆ ಲಸಿಕೆ ನೀಡಲು ವಿಶೇಷ ಅಭಿಯಾನ ಹಮ್ಮಿಕೊಳ್ಳಲು ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶನ ನೀಡಿದೆ.

ಕೋವಿಡ್ ಸಂಬಂಧ ಸಲ್ಲಿಕೆಯಾಗಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ಮತ್ತು ನ್ಯಾಯಮೂರ್ತಿ ಅರವಿಂದಕುಮಾರ್ ಅವರಿದ್ದ ವಿಭಾಗೀಯ ಪೀಠ ಈ ನಿರ್ದೇಶನ ನೀಡಿತು.

'ಹಿರಿಯ ನಾಗರಿಕರು, ಅಂಗವಿಕಲರು, ಕೊಳಗೇರಿ ನಿವಾಸಿಗಳು, ದುರ್ಬಲ ವರ್ಗದವರಿಗೆ ಆದ್ಯತೆ ಮೇರೆಗೆ ಲಸಿಕೆ ನೀಡಲು ಕಾರ್ಯಕ್ರಮ ಆಯೋಜಿಸಬೇಕು. ಸ್ವಯಂ ಸೇವಾ ಸಂಸ್ಥೆಗಳ ನೆರವನ್ನೂ ಸರ್ಕಾರ ಪಡೆದುಕೊಳ್ಳಬೇಕು. ವಿಶೇಷ ಅಭಿಯಾನಗಳ ಬಗ್ಗೆ ಮುಂದಿನ ವಿಚಾರಣೆ ವೇಳೆ ಮಾಹಿತಿ ನೀಡಬೇಕು' ಎಂದು ಪೀಠ ತಿಳಿಸಿತು.

ಆನ್‌ಲೈನ್ ಲಸಿಕೆ ನಂಬಿ ಹಣ ಕಳೆದುಕೊಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಲಸಿಕೆ ನೀಡುವುದಾಗಿ ಆನ್‌ಲೈನ್‌ನಲ್ಲಿ ಜಾಹೀರಾತು ನೀಡಿದ್ದ ವಂಚಕರು, ನಗರದ ನಿವಾಸಿಯೊಬ್ಬರಿಂದ ಹಣ ಪಡೆದು ವಂಚಿಸಿದ್ದಾರೆ.

ಬನಶಂಕರಿ 3ನೇ ಹಂತದ 33 ವರ್ಷದ ನಿವಾಸಿಯೊಬ್ಬರು ವಂಚನೆ ಬಗ್ಗೆ ದೂರು ನೀಡಿದ್ದಾರೆ.

ಈ ಸಂಬಂಧ ದಕ್ಷಿಣ ವಿಭಾಗದ ಸೈಬರ್ ಕ್ರೈಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಕೋವಿಡ್ ಲಸಿಕೆ ಎಲ್ಲಿ ಸಿಗುತ್ತದೆ? ಎಂದು ದೂರುದಾರ ಆನ್‌ಲೈನ್‌ನಲ್ಲಿ ಹುಡುಕಾಡಿದ್ದರು. ಇಂಡಿಯಾ ಮಾರ್ಟ್ ಜಾಲತಾಣದಲ್ಲಿ ಕೋವಿಡ್ ಲಸಿಕೆ ಬಗ್ಗೆ ಜಾಹೀರಾತು ನೋಡಿದ್ದರು. ಅದಾದ ಕೆಲ ನಿಮಿಷಗಳಲ್ಲಿ ದೂರು ದಾರರಿಗೆ ಕರೆ ಮಾಡಿದ್ದ ವಂಚಕ, 'ನಾವು ನಿಮಗೆ ಕೋವಿಡ್ ಲಸಿಕೆ ನೀಡುತ್ತೇವೆ' ಎಂಬುದಾಗಿ ಹೇಳಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಕೆಲ ಶುಲ್ಕ ಪಾವತಿ ಮಾಡಿದರೆ ಮನೆಗೆ ಬಂದು ಲಸಿಕೆ ಹಾಕುವುದಾಗಿಯೂ ವಂಚಕ ಹೇಳಿದ್ದ. ಅದನ್ನು ನಂಬಿದ್ದ ದೂರುದಾರ, ವಂಚಕ ಹೇಳಿದ್ದ ಬ್ಯಾಂಕ್ ಖಾತೆಗೆ ₹12,601 ಪಾವತಿ ಮಾಡಿದ್ದರು. ಅದಾದ ನಂತರ ವಂಚಕ ನಾಪತ್ತೆಯಾಗಿದ್ದಾನೆ' ಎಂದೂ ಮೂಲಗಳು ತಿಳಿಸಿವೆ.

ಕಪ್ಪು ಶಿಲೀಂಧ್ರ ರೋಗ; ₹ 1.36 ಲಕ್ಷ ವಂಚನೆ

ಕಪ್ಪು ಶಿಲೀಂಧ್ರ ರೋಗದ ಔಷಧಿ ಮಾರಾಟ ಮಾಡುವುದಾಗಿ ಹೇಳಿ ನಗರದ ನಿವಾಸಿಯೊಬ್ಬರಿಂದ ₹ 1.36 ಲಕ್ಷ ಪಡೆದು ವಂಚಿಸಲಾಗಿದೆ.

'ಯಲಹಂಕದ ನಿವಾಸಿಯಾಗಿರುವ ಯುವತಿಯೊಬ್ಬರು ವಂಚನೆ ಬಗ್ಗೆ ದೂರು ನೀಡಿದ್ದಾರೆ. ಅಪರಿಚಿತರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಈಶಾನ್ಯ ವಿಭಾಗದ ಸೈಬರ್ ಕ್ರೈಂ ಠಾಣೆ ಮೂಲಗಳು ಹೇಳಿವೆ.

'ದೂರುದಾರರ ತಂದೆಯು ಕಪ್ಪು ಶಿಲೀಂಧ್ರ ರೋಗದಿಂದ ಬಳಲುತ್ತಿದ್ದಾರೆ. ಅವರಿಗೆ 'ಆ್ಯಂಫೊಟೆರಿಸಿನ್–ಬಿ' ಔಷಧಿ ತುರ್ತಾಗಿ ನೀಡಬೇಕೆಂದು ವೈದ್ಯರು ಹೇಳಿದ್ದರು. ಔಷಧಿಗಾಗಿ ಹಲವೆಡೆ ಹುಡುಕಾಡಿದ್ದ ದೂರುದಾರರು, ಆನ್‌ಲೈನ್‌ನಲ್ಲಿ ಸಿಕ್ಕ ಮೊಬೈಲ್ ನಂಬರ್‌ಗೆ ಕರೆ ಮಾಡಿ ವಿಚಾರಿಸಿದ್ದರು.'

'ಔಷಧಿ ನೀಡುವುದಾಗಿ ಹೇಳಿದ್ದ ಆರೋಪಿ, ಮುಂಗಡವಾಗಿ ಹಣ ಪಾವತಿಸುವಂತೆ ಹೇಳಿದ್ದ. ಅದನ್ನು ನಂಬಿದ್ದ ಯುವತಿ, ಆರೋಪಿ ಹೇಳಿದ್ದ ಖಾತೆಗಳಿಗೆ ಹಂತ ಹಂತವಾಗಿ ₹ 1.36 ಲಕ್ಷ ಪಾವತಿಸಿದ್ದರು. ಅದಾದ ನಂತರ ಯಾವುದೇ ಔಷಧಿ ನೀಡದೇ ಆರೋಪಿ ನಾಪತ್ತೆಯಾಗಿದ್ದಾನೆ' ಎಂದೂ ಮೂಲಗಳು ತಿಳಿಸಿವೆ.

ಆಮ್ಲಜನಕ ಹೆಸರಿನಲ್ಲಿ ₹ 2.97 ಲಕ್ಷ ವಂಚನೆ

ಬೆಂಗಳೂರು: ಆಮ್ಲಜನಕ ಸಾಂದ್ರತೆ ಸಾಧನ ಹಾಗೂ ವಿವಿಧ ವೈದ್ಯಕೀಯ ಉಪಕರಣ ಮಾರಾಟದ ಹೆಸರಿನಲ್ಲಿ ₹ 2.97 ಲಕ್ಷ ವಂಚಿಸಲಾಗಿದ್ದು, ಈ ಸಂಬಂಧ ವೈಟ್‌ಫೀಲ್ಡ್ ವಿಭಾಗದ ಸೈಬರ್ ಕ್ರೈಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಚನ್ನಸಂದ್ರದ ಉದ್ಯಮಿಯೊಬ್ಬರು ದೂರು ನೀಡಿದ್ದಾರೆ.

'ವೈದ್ಯಕೀಯ ಉಪಕರಣ ಖರೀದಿಗಾಗಿ ದೂರುದಾರ ಆನ್‌ಲೈನ್‌ನಲ್ಲಿ ಹುಡುಕಾಡಿದ್ದರು. ಕಂಪನಿಯೊಂದರ ಮಾಹಿತಿ ಪಡೆದು ಉಪಕರಣಗಳಿಗೆ ಬೇಡಿಕೆ ಸಲ್ಲಿಸಿದ್ದರು. ಅದನ್ನು ತಿಳಿದ ವಂಚಕ, ಕಂಪನಿ ಹೆಸರಿನಲ್ಲಿ ದೂರುದಾರರಿಗೆ ಕರೆ ಮಾಡಿ ಮುಂಗಡ ಹಣ ಪಡೆದಿದ್ದ ನಂತರ, ಆರೋಪಿ ನಾಪತ್ತೆಯಾಗಿದ್ದಾನೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಕೋವಿಡ್ ರೋಗಿಗಳ ಸುಲಿಗೆ ಆರೋಪ

₹ 65 ಲಕ್ಷ ವಸೂಲಿ: ಕಂಫರ್ಟ್ ಆಸ್ಪತ್ರೆಗೆ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಗ್ಗದಾಸಪುರ ಮುಖ್ಯರಸ್ತೆಯಲ್ಲಿರುವ 'ಕಂಫರ್ಟ್ ಮಲ್ಟಿ ಸ್ಪೆಷಾಲಿಟಿ' ಆಸ್ಪತ್ರೆ ಆಡಳಿತ ಮಂಡಳಿ, ಕೋವಿಡ್ ರೋಗಿಗಳ ಚಿಕಿತ್ಸೆಗಾಗಿ ₹ 65 ಲಕ್ಷ ಹೆಚ್ಚುವರಿ ಶುಲ್ಕ ವಸೂಲಿ ಮಾಡಿರುವುದನ್ನು ಸರ್ಕಾರದ ಉನ್ನತ ಅಧಿಕಾರಿಗಳ ತಂಡ ಪತ್ತೆ ಹಚ್ಚಿದೆ. ಆ ಶುಲ್ಕವನ್ನು ವಾರದೊಳಗೆ ರೋಗಿಗಳಿಗೆ ಮರುಪಾವತಿ ಮಾಡುವಂತೆಯೂ ಆಸ್ಪತ್ರೆಗೆ ಗಡುವು ನೀಡಲಾಗಿದೆ.

ಸರ್ಕಾರ ನಿಗದಿ ಮಾಡಿರುವ ಶುಲ್ಕಕ್ಕಿಂತಲೂ ಹೆಚ್ಚುವರಿ ಶುಲ್ಕ ಪಡೆಯುತ್ತಿದ್ದ ಹಾಗೂ ರೋಗಕ್ಕೆ ಸಂಬಂಧವೇ ಇಲ್ಲದ ಪರೀಕ್ಷೆ ಮಾಡಿ ಹೆಚ್ಚು ಶುಲ್ಕ ವಸೂಲಿ ಮಾಡುತ್ತಿದ್ದ ಬಗ್ಗೆ ಆಸ್ಪತ್ರೆ ವಿರುದ್ಧ ದೂರು ಬಂದಿತ್ತು.

ಐಪಿಎಸ್ ಹಿರಿಯ ಅಧಿಕಾರಿ ಅಲೋಕ್ ಕುಮಾರ್ ಹಾಗೂ ಹಿರಿಯ ಐಎಎಸ್ ಅಧಿಕಾರಿ ಪಿ. ಮಣಿವಣ್ಣನ್ ನೇತೃತ್ವದ ಉನ್ನತ ಅಧಿಕಾರಿಗಳ ತಂಡ ಆಸ್ಪತ್ರೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿತು.

ಚಿಕಿತ್ಸೆ ಪಡೆದ ಹಾಗೂ ಚಿಕಿತ್ಸೆ ಪಡೆಯುತ್ತಿರುವ ಕೋವಿಡ್ ರೋಗಿಗಳ ಪಟ್ಟಿಯನ್ನು ತಂಡ ತಪಾಸಣೆ ನಡೆಸಿತು. ಚಿಕಿತ್ಸೆಗಾಗಿ ಪ್ರತಿಯೊಬ್ಬ ರೋಗಿಯಿಂದ ಪಡೆದ ಶುಲ್ಕದ ದಾಖಲೆಗಳನ್ನೂ ಪರಿಶೀಲಿಸಿತು.

ಇದೇ ಸಂದರ್ಭದಲ್ಲೇ ಶುಲ್ಕದಲ್ಲಿ ಸಾಕಷ್ಟು ವ್ಯತ್ಯಾಸ ಕಂಡುಬಂತು. ಆಸ್ಪತ್ರೆ ಕೊಠಡಿ ಬಾಡಿಗೆ, ಆಮ್ಲಜನಕ ಹಾಗೂ ಇತರೆ ಸೇವೆಗಳಿಗೆ ಪ್ರತಿಯೊಬ್ಬ ರೋಗಿಯಿಂದಲೂ ಹೆಚ್ಚುವರಿ ಶುಲ್ಕ ವಸೂಲಿ ಮಾಡಿರುವುದಕ್ಕೆ ದಾಖಲೆಗಳು ಲಭ್ಯವಾದವು. ಅವುಗಳನ್ನು ತಂಡ ಜಪ್ತಿ ಮಾಡಿತು. ಕಂಪ್ಯೂಟರ್‌ನಲ್ಲಿದ್ದ ಹಾರ್ಡ್ ಡಿಸ್ಕ್ ಸಹ ಸುಪರ್ದಿಗೆ ಪಡೆಯಿತು.

'ಖಚಿತ ಮಾಹಿತಿ ಮೇರೆಗೆ ಆಸ್ಪತ್ರೆಗೆ ಹೋಗಿ ತಪಾಸಣೆ ನಡೆಸಲಾಯಿತು. ಆಸ್ಪತ್ರೆಯವರು ರೋಗಿಗಳಿಂದ ₹ 65 ಲಕ್ಷ ಹೆಚ್ಚುವರಿ ಶುಲ್ಕ ವಸೂಲಿ ಮಾಡಿರುವುದಕ್ಕೆ ದಾಖಲೆಗಳು ಲಭ್ಯವಾಗಿವೆ. ಹೆಚ್ಚುವರಿ ಶುಲ್ಕ ಪಾವತಿಸಿದ್ದ 81 ರೋಗಿಗಳ ಪಟ್ಟಿ ಮಾತ್ರ ಸದ್ಯಕ್ಕೆ ಸಿಕ್ಕಿದ್ದು, ಉಳಿದ ರೋಗಿಗಳ ಬಗ್ಗೆಯೂ ಮಾಹಿತಿ ಕೋರಲಾಗಿದೆ' ಎಂದು ಅಲೋಕ್ ಕುಮಾರ್ 'ಪ್ರಜಾವಾಣಿ'ಗೆ ತಿಳಿಸಿದರು.

'ಹೆಚ್ಚುವರಿಯಾಗಿ ಪಡೆದ ಶುಲ್ಕವನ್ನು ರೋಗಿಗಳಿಗೆ ಮರು ಪಾವತಿ ಮಾಡುವಂತೆ ಎಚ್ಚರಿಕೆ ನೀಡಿ ಆಸ್ಪತ್ರೆಗೆ ನೋಟಿಸ್ ನೀಡಲಾಗುವುದು. ನಿಗದಿತ ಸಮಯದಲ್ಲಿ ಶುಲ್ಕ ಮರು ಪಾವತಿ ಆಗದಿದ್ದರೆ ಆಸ್ಪತ್ರೆ ವಿರುದ್ಧ ಮುಂದಿನ ಕಾನೂನು ಕ್ರಮ ಕೈಗೊಳ್ಳಲಾಗುವುದು' ಎಂದೂ ಅವರು ಹೇಳಿದರು.

'ಪ್ರತಿಯೊಂದು ಖಾಸಗಿ ಆಸ್ಪತ್ರೆಗಳ ಮೇಲೆ ನಿಗಾ ವಹಿಸಲಾಗಿದೆ. ಸರ್ಕಾರದ ನಿಯಮಗಳನ್ನು ಪಾಲಿಸದ ಆಸ್ಪತ್ರೆಗಳ ವಿರುದ್ಧ ಕಾರ್ಯಾಚರಣೆ ಮುಂದುವರಿಯಲಿದೆ' ಎಂದೂ ಅವರು ತಿಳಿಸಿದರು.

ಜನರ ಸಂಕಷ್ಟ ನೋಡಿಯೂ ಸುಮ್ಮನಿದ್ದಿರೇಕೆ?

ಕಲಬುರ್ಗಿ: ‘ಸಂಘ ಪರಿವಾರದ ಅಂಗ ಸಂಸ್ಥೆ ಬಿಜೆಪಿಯ ದುರಾಡಳಿತದಿಂದ ದೇಶದ ಜನರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಇದನ್ನು ನೋಡಿಯೂ ನೀವು ಸುಮ್ಮನೇಕೆ ಇದ್ದೀರಿ’ ಎಂದು ಸಾಹಿತಿಗಳು ಮತ್ತು ಪ್ರಗತಿಪರರು ಬಹಿರಂಗ ಪತ್ರದ ಮೂಲಕ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸರಸಂಘ ಚಾಲಕ ಮೋಹನ್ ಭಾಗವತ್ ಅವರನ್ನು ಪ್ರಶ್ನಿಸಿದ್ದಾರೆ.

ಹಿರಿಯ ಸಾಹಿತಿ ದೇವನೂರ ಮಹಾದೇವ, ರಾಜ್ಯಸಭೆ ಸದಸ್ಯ ಡಾ. ಎಲ್ ಹನುಮಂತಯ್ಯ, ಬಿ.ಟಿ. ಲಲಿತಾನಾಯಕ್, ಪ್ರೊ. ಆರ್. ಕೆ. ಹುಡಗಿ ಪರವಾಗಿ ಮಾಜಿ ಶಾಸಕ ಬಿ.ಆರ್.ಪಾಟೀಲ ಪತ್ರ ಬರೆದಿದ್ದಾರೆ.

‘ಆರ್‌ಎಸ್‌ಎಸ್ ಸಿದ್ಧಾಂತ ಮತ್ತು ತತ್ವಕ್ಕೆ ವಿರುದ್ಧವಾದ ಇಂತಹ ಜ್ವಲಂತ ಘಟನೆ ಸಂಭವಿಸುತ್ತಿದ್ದರೂ ತಾವು ಸರಸಂಘ ಚಾಲಕರಾಗಿ ನಿಮ್ಮದೇ ಕೃಪಾಕಟಾಕ್ಷದಲ್ಲಿರುವ ಸರ್ಕಾರಗಳಿಗೆ ಕಿವಿ ಹಿಂಡುವ ತಾಕತ್ತು ಇಲ್ಲವೇ? ಇದ್ದರೂ ಸುಮ್ಮನೆ ಕೂರುವುದು ಆತ್ಮವಂಚನೆ ಮತ್ತು ಆಷಾಢಭೂತಿತನದ ಪರಮಾವಧಿ ಅಲ್ಲವೇ’ ಎಂದು ಅವರು ಕೇಳಿದ್ದಾರೆ.

‘ಕಾಂಗ್ರೆಸ್‌ನ ಲೋಪ ದೋಷಗಳನ್ನು ತೋರಿಸುತ್ತ ಅಧಿಕಾರದ ಹಾದಿ ಸುಗಮಗೊಳಿಸಿಕೊಂಡ ಪ್ರಧಾನಿ ನರೇಂದ್ರ ಮೋದಿಯವರು ದೇಶದ ಜನತೆಗೆ ಎಷ್ಟೆಲ್ಲಾ ಸುಳ್ಳು ಹೇಳಿ ವಂಚಿಸುತ್ತಿದ್ದಾರೆ. ನಾನೇನು ಒಬ್ಬ ಫಕೀರ, ಜೋಳಿಗೆ ಎತ್ತಿಕೊಂಡು ಹೋಗಿ ಬಿಡುವೆ ಎನ್ನುವ ಪ್ರಧಾನಿ, ವೈಯಕ್ತಿಕ ಬಳಕೆಗೆ ₹ 8,500 ಕೋಟಿ ವೆಚ್ಚದ ಎರಡು ಸುಸಜ್ಜಿತ ವಿಮಾನಗಳನ್ನು ವಿದೇಶದಿಂದ ಖರೀದಿಸಿರುವುದು, ಆರ್ಥಿಕ ಸಂಕಷ್ಟ ಕಾಲದಲ್ಲಿ ₹ 20 ಸಾವಿರ ಕೋಟಿಗೂ ಅಧಿಕ ಮೊತ್ತ ವ್ಯಯಿಸಿ ತಮ್ಮ ನಿವಾಸ ಮತ್ತು ಹೊಸ ಸಂಸತ್ ಭವನ ಕಟ್ಟಡ ನಿರ್ಮಾಣಕ್ಕೆ ಮುಂದಾಗಿದ್ದು, ನಿಮಗೆ ಮುಜುಗರ ಆಗುತ್ತಿಲ್ಲವೆ’ ಎಂದು ಅವರು ಪ್ರಶ್ನಿಸಿದ್ದಾರೆ.

ನಿಧನ ವಾರ್ತೆ

ಎನ್.ಎಸ್.ಖೇಡ್

ವಿಜಯಪುರ: ಜಿಲ್ಲೆಯ ಇಂಡಿ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕ ಎನ್.ಎಸ್.ಖೇಡ್ (74) ಅನಾರೋಗ್ಯದಿಂದ ಖಾಸಗಿ ಆಸ್ಪತ್ರೆಯಲ್ಲಿ ಗುರುವಾರ ನಿಧನರಾದರು.

ಅವರಿಗೆ ಪತ್ನಿ, ಪುತ್ರ ಹಾಗೂ ಇಬ್ಬರು ಪುತ್ರಿಯರು ಇದ್ದಾರೆ. ಮೃತರ ಅಂತ್ಯಕ್ರಿಯೆ ಸ್ವಗ್ರಾಮ ಸಾವಳಸಂಗದಲ್ಲಿ ಗುರುವಾರ ಸಂಜೆ ನೆರವೇರಿತು.

ಜೆ.ಎಂ.ಎಸ್. ಮಣಿ



ಬೆಂಗಳೂರು: ನಾಡಿನ ಪ್ರಸಿದ್ಧ ಕಲಾವಿದ ಜೆ.ಎಂ.ಎಸ್. ಮಣಿ (72) ಅವರು ಗುರುವಾರ ನಿಧನರಾಗಿದ್ದಾರೆ.

ಅವರು ಕೆಲ ದಿನಗಳಿಂದ ವಯೋಸಹಜ ಅನಾರೋಗ್ಯ ಸಮಸ್ಯೆ ಎದುರಿಸುತ್ತಿದ್ದರು. ಶೇಷಾದ್ರಿಪುರದಲ್ಲಿ ನೆಲೆಸಿದ್ದ ಅವರು, ತಮ್ಮ ಮನೆಯಲ್ಲಿ ಮೃತಪಟ್ಟಿದ್ದಾರೆ. ಅವರಿಗೆ ಪತ್ನಿ, ಪುತ್ರ ಹಾಗೂ ಪುತ್ರಿ ಇದ್ದಾರೆ. ಹರಿಶ್ಚಂದ್ರ ಘಾಟ್ ಚಿತಾಗಾರದಲ್ಲಿ ಅಂತ್ಯಸಂಸ್ಕಾರ ನೆರವೇರಿತು.

ನಟಿ ಬಿ.ಜಯಾ

ಬೆಂಗಳೂರು: ವಯೋಸಹಜ ಅನಾರೋಗ್ಯದಿಂದ ಬಳಲುತ್ತಿದ್ದ ಕನ್ನಡ ಚಿತ್ರರಂಗದ ಪೋಷಕ ನಟಿ ಬಿ.ಜಯಾ (76) ಗುರುವಾರ ನಿಧನರಾದರು.

‘ಪಾರ್ಶ್ವವಾಯು ಕಾರಣ ಏಪ್ರಿಲ್ 29ರಂದು ಸೇಂಟ್ ಜಾನ್ಸ್ ಆಸ್ಪತ್ರೆಗೆ ಸೇರಿಸಲಾಗಿತ್ತು. ಅಲ್ಲಿ 20 ದಿನ ಚಿಕಿತ್ಸೆ ಪಡೆದು ಮರಳಿದ್ದರು. ವಯಸ್ಸಾದ ಕಾರಣ ಆರೋಗ್ಯ ಮತ್ತೆ ಹದಗೆಟ್ಟಿತ್ತು. ಗುರುವಾರ ಮಧ್ಯಾಹ್ನ 3.30ಕ್ಕೆ ಮೃತಪಟ್ಟರು’ ಎಂದು ಜಯಾ ಅವರ ತಮ್ಮ ಮಲ್ಲೇಶ್ ತಿಳಿಸಿದರು.

ಕೊಳ್ಳೇಗಾಲ ಮೂಲದವರಾದ ಬಿ.ಜಯಾ, 1958ರಲ್ಲಿ ‘ಭಕ್ತ ಪ್ರಹ್ಲಾದ’ ಸಿನಿಮಾ ಮುಖಾಂತರ ಬಾಲನಟಿಯಾಗಿ ಕನ್ನಡ ಚಿತ್ರರಂಗಕ್ಕೆ ಕಾಲಿರಿಸಿದ್ದರು. ಆರು ದಶಕಗಳ ಕಾಲ 350ಕ್ಕೂ ಅಧಿಕ ಸಿನಿಮಾ, 80ಕ್ಕೂ ಅಧಿಕ ಧಾರಾವಾಹಿಗಳಲ್ಲಿ ನಟಿಸಿದ್ದಾರೆ.

ಭಾ ರಾ ರಾ ಪ್ರಾ NHAI

ಭಾರತ ಸರ್ಕಾರ
ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯ

(ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಇಲಾಖೆ)

ಭಾರತ ಸರ್ಕಾರದ ವಿಶೇಷ ರಾಜ್ಯ ಪತ್ರ ಭಾಗ-II
ಕಲಂ-3, ಉಪ ಕಲಂ (ii)

ಸಂಖ್ಯೆ: ಭೂಸ್ವಾ/ರಾಹೆ4/ಎಸ್‌ಆರ್/01/2021 **ದಿನಾಂಕ 31-05-2021**

ಸಾರ್ವಜನಿಕ ಪ್ರಕಟಣೆ (ಅಧಿಸೂಚನೆ)

ಹೊಸ ದೆಹಲಿ

ಎಸ್.ಓ.ನಂ.1946 (ಇ) ಕೇಂದ್ರ ಸರ್ಕಾರಕ್ಕೆ ಇದೀಗ ಸಾರ್ವಜನಿಕ ಉದ್ದೇಶಕ್ಕಾಗಿ ಇದರೊಂದಿಗೆ ಲಗತ್ತಿಸಿರುವ ಶೆಡ್ಯೂಲನಂತೆ ಜಮೀನುಗಳನ್ನು ಕರ್ನಾಟಕ ರಾಜ್ಯದಲ್ಲಿರುವ ಬೆಳಗಾವಿ ಜಿಲ್ಲೆಯಲ್ಲಿ ಬರುವ ರಾಷ್ಟ್ರೀಯ ಹೆದ್ದಾರಿ ನಂ.4ರಲ್ಲಿ (ಬೆಳಗಾವಿಯಿಂದಾ-ಮಹಾರಾಷ್ಟ್ರ ಗಡಿವರೆಗೆ) ರಸ್ತೆಯನ್ನು ಕಿ.ಮೀ.515.000 ರಿಂದ 592.705 ಕಿ.ಮೀ ವರೆಗೆ ರಸ್ತೆ ನಿರ್ಮಾಣ (ಅಗಲಗೊಳಿಸುವದು/6 ಪಥದ) ಸಂರಕ್ಷಣೆ, ಕಾರ್ಯನಿರ್ವಹಣೆ ಮತ್ತು ಕಾರ್ಯಕ್ರೀಯೆ ಮಾಡುವ ಸಲುವಾಗಿ ಭೂಸ್ವಾಧೀನ ಪಡಿಸಿಕೊಳ್ಳಲು ಅವಶ್ಯಕತೆಯಿದೆ ಎಂದು ಕಂಡುಬರುತ್ತದೆ. ಆದ ಕಾರಣ ಕೇಂದ್ರ ಸರ್ಕಾರವು ರಾಷ್ಟ್ರೀಯ ಹೆದ್ದಾರಿ ಕಾಯ್ದೆ 1956 (1956ರ 48) ರ ಪ್ರಕಾರ ನಿಯಮ 3 (ಎ)ರ ಉಪನಿಯಮ (1)ರಲ್ಲಿ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ, ಈ ಕೆಳಗಿನ ಶೆಡ್ಯೂಲನಲ್ಲಿ ವಿವರಿಸಿರುವ ಜಮೀನುಗಳನ್ನು ಭೂ-ಸ್ವಾಧೀನ ಪಡಿಸಿಕೊಳ್ಳಲು ಈ ಮೂಲಕ ಸೂಚನೆ ನೀಡಿದೆ. ಸದರಿ ಜಮೀನುಗಳ ಬಗ್ಗೆ ಭೂ ಮಾಲೀಕರ ಅಥವಾ ಯಾವುದೇ ಆಸಕ್ತಿ/ಹಿತಾಸಕ್ತಿ ಉಳ್ಳವರು ಹಾಗೂ ಸಾರ್ವಜನಿಕರ ಅವಗಾಹನೆಗಾಗಿ ಈ ಪ್ರಕಟಣೆ ಪ್ರಕಟಿಸಿದ ದಿನಾಂಕದಿಂದ 21 ದಿನದೊಳಗೆ ಸೆಕ್ಷನ 3(ಸಿ) (1) ರಂತೆ ತಮ್ಮಗಳ ಆಕ್ಷೇಪಣೆಗಳನ್ನು ಸಲ್ಲಿಸಬಹುದಾಗಿರುತ್ತದೆ. ಅಂತಹ ಆಕ್ಷೇಪಣೆಗಳನ್ನು ಉಪವಿಭಾಗಾಧಿಕಾರಿಗಳು ಬೆಳಗಾವಿ ಮತ್ತು ಸಕ್ಷಮ ಪ್ರಾಧಿಕಾರಿಗಳು, ರಾಷ್ಟ್ರೀಯ ಹೆದ್ದಾರಿ ನಂ.4, ಎಸ್.ಬಿ.ಐ ಬ್ಯಾಂಕನ ಲೇನ್, ಶಿವಂ ರೆಸಿಡೇನ್ಸಿ ಮುಂದುಗಡೆ, ಶಾರಧಾ ಎನ್‌ಕ್ಲೆವ್, ಎರಡನೆ ಮಹಡಿ, ಪ್ಲಾಟ ನಂ. 255, ಸಿ.ಟಿ.ಎಸ್ ನಂ. 9216, ಶಿವಬಸವ ನಗರ, ಬೆಳಗಾವಿ-590016 ಇವರಿಗೆ ಲಿಖಿತ ಪತ್ರದ ಮೂಲಕ ಸಕಾರಣಗಳೊಂದಿಗೆ ಸಲ್ಲಿಸತಕ್ಕದ್ದು. ಸಕ್ಷಮ ಪ್ರಾಧಿಕಾರಿಗಳು ಆಕ್ಷೇಪಣೆ ಸಲ್ಲಿಸಿದವರನ್ನಾಗಲಿ ಅಥವಾ ತಮಗೆ ಯೋಗ್ಯವೆನಿಸಿದ ವ್ಯಕ್ತಿಯಿಂದ / ಅವರ ಪರ ವಕೀಲರನ್ನಾಗಲಿ, ಅವರು ಸಲ್ಲಿಸಿರುವ ಆಕ್ಷೇಪಣೆಗಳ ಬಗ್ಗೆ ವಿಚಾರಣೆ ಜರುಗಿಸಿ, ಈ ಬಗ್ಗೆ ಇತರೇ ಅಂಶಗಳನ್ನು ಪರಿಗಣಿಸಿ ಆಕ್ಷೇಪಣೆಗಳನ್ನು ಪುರಸ್ಕರಿಸಬಹುದು/ತಿರಸ್ಕರಿಸಬಹುದು.

ರಾಷ್ಟ್ರೀಯ ಹೆದ್ದಾರಿ ಕಾಯ್ದೆ 1956 (1956ರ 48) ರ ಉಪಕಲಂ (2) ಕಲಂ (3)(ಸಿ)ರಂತೆ ಸಕ್ಷಮ ಪ್ರಾಧಿಕಾರಿಗಳು ಮಾಡಿದ ಆದೇಶವು ಅಂತಿಮವಾಗಿರುತ್ತದೆ.

ಈ ಅಧಿಸೂಚನೆಯಲ್ಲಿ ಸೂಚಿಸಿರುವ ಜಮೀನುಗಳ ವಿವರ ಹಾಗೂ ನಕಾಶೆಗಳನ್ನು ಈ ಮೇಲೆ ತಿಳಿಸಿದ ಕಛೇರಿಯಲ್ಲಿ ಪರಿಶೀಲನೆಗೆ ಇಡಲಾಗಿದೆ.

ವಿಶೇಷ ಸೂಚನೆ:- ಈ ಕೆಳಕಂಡ ಶೆಡ್ಯೂಲದಲ್ಲಿಯ ಸ್ವತ್ತುಗಳನ್ನು ಯಾವುದೇ ಕ್ರಯ-ವಿಕ್ರಯ, ಭೋಗ್ಯ ಇತರೇ ದಸ್ತಾವೇಜುಗಳನ್ನು ಮಾಡುವಂತಿಲ್ಲ ಹಾಗೂ ಯಾವುದೆ ಅಭಿವೃದ್ಧಿ ಕಾರ್ಯಕೈಗೊಳ್ಳಬಾರದೆಂದು ಈ ಮೂಲಕ ಸೂಚಿಸಿದೆ.

ಸಹಿ/-
ರವೀಂದ್ರ ಕರಲಿಂಗಣ್ಣವರ
ಉಪವಿಭಾಗಾಧಿಕಾರಿ ಬೆಳಗಾವಿ
ಹಾಗೂ ಸಕ್ಷಮ ಪ್ರಾಧಿಕಾರಿಗಳು ರಾಷ್ಟ್ರೀಯ
ಹೆದ್ದಾರಿ ನಂ.4 ಬೆಳಗಾವಿ-ಮಹಾರಾಷ್ಟ್ರ (ಗಡಿಭಾಗ),
ಬೆಳಗಾವಿ

ಷೆಡ್ಯೂಲ್

ಕರ್ನಾಟಕ ರಾಜ್ಯದ ಬೆಳಗಾವಿ ಜಿಲ್ಲೆಯಲ್ಲಿರುವ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ 4 ರಲ್ಲಿ ಕಿ ಮೀ. 515.000 ರಿಂದ 592.705 (ಬೆಳಗಾವಿ-ಮಹಾರಾಷ್ಟ್ರ/ ಕರ್ನಾಟಕ ಗಡಿಭಾಗ) ವರೆಗೆ ಹೆಚ್ಚುವರಿಯಾಗಿ ಭೂಸ್ವಾಧೀನಪಡಿಸಿಕೊಳ್ಳಲು ಉದ್ದೇಶಿಸಿರುವ ಕಟ್ಟಡ/ಗಿಡಮರಗಳು ಇರುವ ಜಮೀನುಗಳು ಅಥವಾ ಕಟ್ಟಡ/ಗಿಡಮರಗಳು ಇಲ್ಲದೆ ಇರುವ ಜಮೀನುಗಳ ಸಂಕ್ಷಿಪ್ತ ವಿವರ.

ಅ ನಂ	ಜಿಲ್ಲೆ	ತಾಲೂಕ	ಗ್ರಾಮ	ಸರ್ವೆ ನಂ	ಜಮೀನಿನ ವಿವರಣೆ	ಜಮೀನಿನ ತರಹೆ	ಕ್ಷೇತ್ರ ಚ.ಮೀ.
1	2	3	4	5	6	7	8
ತಾಲೂಕಾ: ಹುಕ್ಕೇರಿ							
1	ಬೆಳಗಾವಿ	ಹುಕ್ಕೇರಿ	ಬಿರನಹೋಳಿ	198A	ತರಿ	ಸರಕಾರಿ	357.80
			ಒಟ್ಟು				**357.80**
2	ಬೆಳಗಾವಿ	ಹುಕ್ಕೇರಿ	ಚಿಕ್ಕಾಲಗುಡ್ಡ	143	ತರಿ	ಖಾಸಗಿ	790.60
				314	ತರಿ	ಖಾಸಗಿ	260.00
				315	ತರಿ	ಖಾಸಗಿ	450.10
				316	ತರಿ	ಖಾಸಗಿ	181.70
				328	ತರಿ	ಖಾಸಗಿ	93.80
				346	ತರಿ	ಖಾಸಗಿ	64.60
				4	ತರಿ	ಖಾಸಗಿ	609.10
				416	ತರಿ	ಖಾಸಗಿ	59.40
				419	ತರಿ	ಖಾಸಗಿ	48.80
				430	ತರಿ	ಖಾಸಗಿ	400.00
				435	ತರಿ	ಖಾಸಗಿ	184.70
				438	ತರಿ	ಖಾಸಗಿ	609.10
				5	ತರಿ	ಖಾಸಗಿ	112.00
				90	ತರಿ	ಖಾಸಗಿ	176.20
			ಒಟ್ಟು				**4040.10**
3	ಬೆಳಗಾವಿ	ಹುಕ್ಕೇರಿ	ಗೋಟುರ	108	ತರಿ	ಖಾಸಗಿ	128.20
				109	ತರಿ	ಖಾಸಗಿ	188.00
				110	ತರಿ	ಖಾಸಗಿ	145.40
				111	ತರಿ	ಖಾಸಗಿ	73.30
				112	ತರಿ	ಖಾಸಗಿ	81.30
				113	ತರಿ	ಖಾಸಗಿ	113.90
				114	ತರಿ	ಖಾಸಗಿ	42.90
				124	ತರಿ	ಖಾಸಗಿ	61.10
				125	ತರಿ	ಖಾಸಗಿ	44.00
				126	ತರಿ	ಖಾಸಗಿ	70.30
				127	ತರಿ	ಖಾಸಗಿ	57.30
				128	ತರಿ	ಖಾಸಗಿ	41.00
				129	ತರಿ	ಖಾಸಗಿ	11.50
				130	ತರಿ	ಖಾಸಗಿ	70.40
				131	ತರಿ	ಖಾಸಗಿ	35.90
				132	ತರಿ	ಖಾಸಗಿ	471.80
				133	ತರಿ	ಖಾಸಗಿ	680.50
				134	ತರಿ	ಖಾಸಗಿ	364.50
				135	ತರಿ	ಖಾಸಗಿ	42.60
				136	ತರಿ	ಖಾಸಗಿ	52.40
				140	ತರಿ	ಖಾಸಗಿ	27.00
				141	ತರಿ	ಖಾಸಗಿ	6.50
				169	ತರಿ	ಖಾಸಗಿ	8.70
				170	ತರಿ	ಖಾಸಗಿ	603.50
				171	ತರಿ	ಖಾಸಗಿ	552.20
				172	ತರಿ	ಖಾಸಗಿ	124.30
				73	ತರಿ	ಖಾಸಗಿ	24.10
				214	ತರಿ	ಖಾಸಗಿ	24.70
				233	ತರಿ	ಖಾಸಗಿ	27.20
				234	ತರಿ	ಖಾಸಗಿ	170.50
				235	ತರಿ	ಖಾಸಗಿ	192.30
				236	ತರಿ	ಖಾಸಗಿ	158.30
				237	ತರಿ	ಖಾಸಗಿ	224.50
				238	ತರಿ	ಖಾಸಗಿ	111.00
				239	ತರಿ	ಖಾಸಗಿ	5.00
				75	ತರಿ	ಖಾಸಗಿ	124.20
				76	ತರಿ	ಖಾಸಗಿ	96.10
				77	ತರಿ	ಖಾಸಗಿ	81.50
				ಗ್ರಾಮಠಾಣಾ	ತರಿ	ಖಾಸಗಿ	172.40
			ಒಟ್ಟು				**5510.30**
4	ಬೆಳಗಾವಿ	ಹುಕ್ಕೇರಿ	ಹಂಚಿನಾಳ	164	ತರಿ	ಖಾಸಗಿ	8804.50
				165	ತರಿ	ಖಾಸಗಿ	3003.70
				166	ತರಿ	ಖಾಸಗಿ	20694.90
				167	ತರಿ	ಖಾಸಗಿ	858.70
				181	ತರಿ	ಖಾಸಗಿ	39.50
				38	ತರಿ	ಖಾಸಗಿ	805.70
				39	ತರಿ	ಖಾಸಗಿ	824.80
				40	ತರಿ	ಖಾಸಗಿ	1306.50
				57	ತರಿ	ಖಾಸಗಿ	168.30
				58	ತರಿ	ಖಾಸಗಿ	5.70
				92	ತರಿ	ಖಾಸಗಿ	25.80
			ಒಟ್ಟು				**36538.10**
5	ಬೆಳಗಾವಿ	ಹುಕ್ಕೇರಿ	ಹೆಬ್ಬಾಳ	109	ತರಿ	ಖಾಸಗಿ	476.80
				110	ತರಿ	ಖಾಸಗಿ	89.90
				111	ತರಿ	ಖಾಸಗಿ	800.50
				113	ತರಿ	ಖಾಸಗಿ	29.20
				114	ತರಿ	ಖಾಸಗಿ	14.50
				119	ತರಿ	ಖಾಸಗಿ	135.70
				191	ತರಿ	ಖಾಸಗಿ	39.00
				192	ತರಿ	ಖಾಸಗಿ	360.40
				193	ತರಿ	ಖಾಸಗಿ	21.40
				194	ತರಿ	ಖಾಸಗಿ	11451.00
				196	ತರಿ	ಖಾಸಗಿ	13084.30
				198	ತರಿ	ಖಾಸಗಿ	3735.70
				200	ತರಿ	ಖಾಸಗಿ	289.60
				210	ತರಿ	ಖಾಸಗಿ	9.60
				212	ತರಿ	ಖಾಸಗಿ	477.00
				213	ತರಿ	ಖಾಸಗಿ	83.20
				214	ತರಿ	ಖಾಸಗಿ	113.30
			ಒಟ್ಟು				**31211.10**
6	ಬೆಳಗಾವಿ	ಹುಕ್ಕೇರಿ	ಹಿಟ್ನಿ	210	ತರಿ	ಖಾಸಗಿ	7.60
				211	ತರಿ	ಖಾಸಗಿ	3.20
			ಒಟ್ಟು				**10.80**
7	ಬೆಳಗಾವಿ	ಹುಕ್ಕೇರಿ	ಹೊನ್ನಿಹಳ್ಳಿ	19	ತರಿ	ಖಾಸಗಿ	124.30
				20	ತರಿ	ಖಾಸಗಿ	4.80
				43	ತರಿ	ಖಾಸಗಿ	170.80
				44	ತರಿ	ಖಾಸಗಿ	295.80
				45	ತರಿ	ಖಾಸಗಿ	277.70
				47	ತರಿ	ಖಾಸಗಿ	358.90
				48	ತರಿ	ಖಾಸಗಿ	65.10
			ಒಟ್ಟು				**1297.40**
8	ಬೆಳಗಾವಿ	ಹುಕ್ಕೇರಿ	ಕಣಗಲಾ	143	ತರಿ	ಖಾಸಗಿ	37.50
				15	ತರಿ	ಖಾಸಗಿ	8.90
				16	ತರಿ	ಖಾಸಗಿ	48.80
				189	ತರಿ	ಖಾಸಗಿ	888.90
				190	ತರಿ	ಖಾಸಗಿ	46.50
				192	ತರಿ	ಖಾಸಗಿ	136.90
				193	ತರಿ	ಖಾಸಗಿ	160.60
				194	ತರಿ	ಖಾಸಗಿ	436.50
				198	ತರಿ	ಖಾಸಗಿ	3.90
				203	ತರಿ	ಖಾಸಗಿ	309.70
				205	ತರಿ	ಖಾಸಗಿ	5.80
				206	ತರಿ	ಖಾಸಗಿ	519.40
				207	ತರಿ	ಖಾಸಗಿ	674.40
				22	ತರಿ	ಖಾಸಗಿ	50.70
				228	ತರಿ	ಖಾಸಗಿ	95.30
				24	ತರಿ	ಖಾಸಗಿ	125.50
				243	ತರಿ	ಖಾಸಗಿ	89.60
				244	ತರಿ	ಖಾಸಗಿ	227.60
				246	ತರಿ	ಖಾಸಗಿ	114.20
				248	ತರಿ	ಖಾಸಗಿ	117.60
				25	ತರಿ	ಖಾಸಗಿ	9.30
				250	ತರಿ	ಖಾಸಗಿ	184.80
				251	ತರಿ	ಖಾಸಗಿ	745.10
				27	ತರಿ	ಖಾಸಗಿ	185.90
				29	ತರಿ	ಖಾಸಗಿ	256.40
				30	ತರಿ	ಖಾಸಗಿ	232.90
				31	ತರಿ	ಖಾಸಗಿ	103.40
				40	ತರಿ	ಖಾಸಗಿ	161.60
				42	ತರಿ	ಖಾಸಗಿ	9.60
				45	ತರಿ	ಖಾಸಗಿ	125.50
				46	ತರಿ	ಖಾಸಗಿ	69.10
				47	ತರಿ	ಖಾಸಗಿ	314.90
				48	ತರಿ	ಖಾಸಗಿ	148.20
				5	ತರಿ	ಖಾಸಗಿ	211.30
				50	ತರಿ	ಖಾಸಗಿ	2.00
				507	ತರಿ	ಖಾಸಗಿ	59.30
				508	ತರಿ	ಖಾಸಗಿ	838.80
				51	ತರಿ	ಖಾಸಗಿ	4.10
				53	ತರಿ	ಖಾಸಗಿ	43.90
				54	ತರಿ	ಖಾಸಗಿ	147.00
				55	ತರಿ	ಖಾಸಗಿ	153.10
				77	ತರಿ	ಖಾಸಗಿ	82.20
				78	ತರಿ	ಖಾಸಗಿ	86.90
				89	ತರಿ	ಖಾಸಗಿ	169.00
				90	ತರಿ	ಖಾಸಗಿ	115.00
				91	ತರಿ	ಖಾಸಗಿ	104.20
			ಒಟ್ಟು				**8661.80**
9	ಬೆಳಗಾವಿ	ಹುಕ್ಕೇರಿ	ಮಣಗುತ್ತಿ	186	ತರಿ	ಖಾಸಗಿ	305.10
				201	ತರಿ	ಖಾಸಗಿ	161.50
				204	ತರಿ	ಖಾಸಗಿ	869.60
				205	ತರಿ	ಖಾಸಗಿ	406.90
				206	ತರಿ	ಖಾಸಗಿ	166.30
				228	ತರಿ	ಖಾಸಗಿ	152.60
				229	ತರಿ	ಖಾಸಗಿ	129.40
				231	ತರಿ	ಖಾಸಗಿ	94.60
				232	ತರಿ	ಖಾಸಗಿ	313.20
				233	ತರಿ	ಖಾಸಗಿ	352.60
				234	ತರಿ	ಖಾಸಗಿ	35.00
				241	ತರಿ	ಖಾಸಗಿ	2317.00
				242	ತರಿ	ಖಾಸಗಿ	1065.50
				243	ತರಿ	ಖಾಸಗಿ	820.90
				259A	ತರಿ	ಖಾಸಗಿ	2301.20
			ಒಟ್ಟು				**9491.40**
10	ಬೆಳಗಾವಿ	ಹುಕ್ಕೇರಿ	ಸಂಕೇಶ್ವರ (ಗ್ರಾಮೀಣ)	156	ತರಿ	ಖಾಸಗಿ	582.10
				173	ತರಿ	ಖಾಸಗಿ	227.20
				174	ತರಿ	ಖಾಸಗಿ	5.00
				179	ತರಿ	ಖಾಸಗಿ	2235.10
				180	ತರಿ	ಖಾಸಗಿ	66.90
				197	ತರಿ	ಖಾಸಗಿ	237.10
				198	ತರಿ	ಖಾಸಗಿ	156.30
				199	ತರಿ	ಖಾಸಗಿ	281.40
				202	ತರಿ	ಖಾಸಗಿ	13574.40
				203	ತರಿ	ಖಾಸಗಿ	14110.80
				204	ತರಿ	ಖಾಸಗಿ	477.00
				206	ತರಿ	ಖಾಸಗಿ	36.70
				390	ತರಿ	ಖಾಸಗಿ	18.30
				393	ತರಿ	ಖಾಸಗಿ	30.70
				394	ತರಿ	ಖಾಸಗಿ	487.10
				395	ತರಿ	ಖಾಸಗಿ	459.40
				396	ತರಿ	ಖಾಸಗಿ	447.20
				397	ತರಿ	ಖಾಸಗಿ	125.10
				398	ತರಿ	ಖಾಸಗಿ	479.90
				399	ತರಿ	ಖಾಸಗಿ	279.90
				400	ತರಿ	ಖಾಸಗಿ	194.30
				41	ತರಿ	ಖಾಸಗಿ	35.20
				43	ತರಿ	ಖಾಸಗಿ	75.90
				438	ತರಿ	ಖಾಸಗಿ	2665.20
				440	ತರಿ	ಖಾಸಗಿ	12.00
				443	ತರಿ	ಖಾಸಗಿ	528.40
				46	ತರಿ	ಖಾಸಗಿ	1373.60
				47	ತರಿ	ಖಾಸಗಿ	326.80
				48	ತರಿ	ಖಾಸಗಿ	731.20
				49	ತರಿ	ಖಾಸಗಿ	64.70
				56	ತರಿ	ಖಾಸಗಿ	87.00
			ಒಟ್ಟು				**40411.90**
11	ಬೆಳಗಾವಿ	ಹುಕ್ಕೇರಿ	ಶಿಪ್ಪೂರ	570	ತರಿ	ಖಾಸಗಿ	3024.60
				590	ತರಿ	ಖಾಸಗಿ	108.50
				594	ತರಿ	ಖಾಸಗಿ	465.00
				595	ತರಿ	ಖಾಸಗಿ	734.80
				597	ತರಿ	ಖಾಸಗಿ	297.60
				598	ತರಿ	ಖಾಸಗಿ	549.80
				600	ತರಿ	ಖಾಸಗಿ	397.50
				603	ತರಿ	ಖಾಸಗಿ	412.10
				605	ತರಿ	ಖಾಸಗಿ	513.40
				606	ತರಿ	ಖಾಸಗಿ	484.50
				607	ತರಿ	ಖಾಸಗಿ	576.50
				617	ತರಿ	ಖಾಸಗಿ	4.30
				626	ತರಿ	ಖಾಸಗಿ	281.30
				627	ತರಿ	ಖಾಸಗಿ	347.60
				628	ತರಿ	ಖಾಸಗಿ	815.40
				629	ತರಿ	ಖಾಸಗಿ	824.60
				630	ತರಿ	ಖಾಸಗಿ	1849.10
				631	ತರಿ	ಖಾಸಗಿ	1395.00
				632	ತರಿ	ಖಾಸಗಿ	7312.60
				633	ತರಿ	ಖಾಸಗಿ	1347.50
				638	ತರಿ	ಖಾಸಗಿ	1139.20
				639	ತರಿ	ಖಾಸಗಿ	733.50
				640	ತರಿ	ಖಾಸಗಿ	39.20
				641	ತರಿ	ಖಾಸಗಿ	987.40
				643	ತರಿ	ಖಾಸಗಿ	686.70
				644	ತರಿ	ಖಾಸಗಿ	14.40
				645	ತರಿ	ಖಾಸಗಿ	574.20
				647	ತರಿ	ಖಾಸಗಿ	620.00

ಮುಂದುವರಿಯುವ ಪುಟ 2

ಬುಧವಾರ ರಾತ್ರಿ ಸುರಿದ ಮಳೆಗೆ ಹೊಸಪೇಟೆ ತಾಲ್ಲೂಕಿನ ಹಂಪಿ ಪಾನ್ ಸುಪಾರಿ ಬಜಾರ್ ಆವರಣದಲ್ಲಿ ಅಪಾರ ನೀರು ಸಂಗ್ರಹಗೊಂಡಿದ್ದು, ಸ್ಮಾರಕಗಳ ಪ್ರತಿಬಿಂಬ ಕಂಡಿದ್ದು ಹೀಗೆ –ಚಿತ್ರ: ರಾಚಯ್ಯ ಎಸ್‌. ಸ್ಥಾವರಿಮಠ

ರಾಜ್ಯದ ವಿವಿಧೆಡೆ ಮಳೆ

ಬೆಂಗಳೂರು: ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಗುರುವಾರ ಮಳೆಯಾಗಿದೆ. ಕೆಲವೆಡೆ ಗುಡುಗು–ಸಿಡಿಲಿನ ಆರ್ಭಟದ ಪರಿಣಾಮ ವಿದ್ಯುತ್ ವ್ಯತ್ಯಯವಾಗಿ ಜನರು ಪರದಾಡಿದ್ದಾರೆ.

ಬೆಳಗಾವಿ ಜಿಲ್ಲೆಯ ವಿವಿಧೆಡೆ, ಹುಬ್ಬಳ್ಳಿ–ಧಾರವಾಡ, ವಿಜಯಪುರ, ವಿಜಯನಗರ, ಗದಗ, ಬಾಗಲಕೋಟೆ ಜಿಲ್ಲೆಗಳಲ್ಲಿ ಗುರುವಾರ ಮಳೆಯಾಗಿದೆ.

ಬೆಳಗಾವಿ ನಗರ, ಗೋಕಾಕ, ಹಾರೂಗೇರಿ, ಚಿಕ್ಕೋಡಿ, ಮೂಡಲಗಿ, ಮುನವಳ್ಳಿ, ರಾಮದುರ್ಗ, ಸವದತ್ತಿ, ಸಂಕೇಶ್ವರ, ಕೌಜಲಗಿ, ಹುಕ್ಕೇರಿ, ಕಿತ್ತೂರು, ಬೈಲಹೊಂಗಲ, ಘಟಪ್ರಭಾ ಪ್ರದೇಶದಲ್ಲಿ ಮಳೆಯಾಯಿತು.

ಧಾರವಾಡದಲ್ಲಿ ಅರ್ಧ ತಾಸು ಬಿರುಗಾಳಿ ಸಹಿತ ಮಳೆ ಸುರಿಯಿತು. ಗದಗ ಜಿಲ್ಲೆಯ ನರಗುಂದ ತಾಲ್ಲೂಕಿನಲ್ಲಿ ಜೋರು ಮಳೆಯಾಗಿದೆ. ವಿಜಯನಗರ–ಬಳ್ಳಾರಿ ಜಿಲ್ಲೆಯ ಹಲವೆಡೆ ಬುಧವಾರ ರಾತ್ರಿಯಿಡಿ ಮಳೆಯಾಗಿದ್ದು ಗುರುವಾರವೂ ಗುಡುಗು ಸಹಿತ ಮಳೆಯಾಗಿದೆ. ವಿಜಯಪುರ ಜಿಲ್ಲೆಯ ಸಿಂದಗಿ, ಆಲಮೇಲ, ಇಂಡಿ, ಬಸವ ಬಾಗೇವಾಡಿ ಸೇರಿದಂತೆ ಜಿಲ್ಲೆಯಾದ್ಯಂತ ಗುಡುಗು, ಸಿಡಿಲು ಸಹಿತ ಮಳೆಯಾಗಿದೆ. ಹಾವೇರಿ ರಟ್ಟಿಹಳ್ಳಿಯಲ್ಲಿ ಗುಡುಗು ಸಹಿತ ಮಳೆಯಾಗಿದೆ.

ಉತ್ತರ ಕನ್ನಡದ ಯಲ್ಲಾಪುರ ತಾಲ್ಲೂಕಿನ ಕೆಲವೆಡೆ, ಹೊನ್ನಾವರ, ಭಟ್ಕಳದಲ್ಲಿ ಮಳೆಯಾಗಿದೆ. ದಾಂಡೇಲಿಯಲ್ಲಿ ತುಂತುರು ಹನಿಗಳು ಬಿದ್ದಿವೆ. ಕಾರವಾರ, ಶಿರಸಿ, ಸಿದ್ದಾಪುರ ಭಾಗದಲ್ಲಿ ದಿನವಿಡೀ ಮೋಡ, ಬಿಸಿಲು ಇತ್ತು.

ಕಲಬುರ್ಗಿ, ಮಂಗಳೂರಲ್ಲಿ ಧಾರಾಕಾರ ಮಳೆ

ಕಲಬುರ್ಗಿ: ಕಲಬುರ್ಗಿ, ಯಾದಗಿರಿ, ಬೀದರ್ ಮತ್ತು ಕೊಪ್ಪಳ ಜಿಲ್ಲೆಯ ಕೆಲ ಕಡೆ ಬುಧವಾರ ರಾತ್ರಿ ಮತ್ತು ಗುರುವಾರ ಮಳೆಯಾಯಿತು. ಕಲಬುರ್ಗಿ ನಗರ ಸೇರಿ ಜಿಲ್ಲೆಯ ವಿವಿಧೆಡೆ ಬುಧವಾರ ರಾತ್ರಿ ಹಾಗೂ ಗುರುವಾರ ಬೆಳಗಿನ ಜಾವ ಭಾರಿ ಮಳೆಯಾಗಿದೆ.ಕಾಳಗಿ ತಾಲ್ಲೂಕಿನ ಕೋಡ್ಲಿ ಗ್ರಾಮದಲ್ಲಿ 108.4 ಮಿ.ಮಿ. ದಾಖಲೆಯ ಮಳೆ ಸುರಿದಿದೆ. ಗೋಟೂರ, ಕೋರವಾರ, ಅಶೋಕನಗರದಲ್ಲಿ ಮಳೆಯಾಗಿದೆ. ಕಾಳಗಿಯ ರೌದ್ರಾವತಿ ನದಿ ಮತ್ತು ಕಣಸೂರ ಹಳ್ಳಕ್ಕೆ ಹೊಸ ನೀರು ಅಧಿಕ ಪ್ರಮಾಣದಲ್ಲಿ ಹರಿದುಬಂತು.ಚಿಂಚೋಳಿ ತಾಲ್ಲೂಕಿನ ಚಿಮ್ಮನಚೋಡ, ಸುಲೇಪೇಟ, ಚಿಂಚೋಳಿ, ಐನಾಪುರ, ನಿಡಗುಂದಾ, ಜೇವರ್ಗಿ ತಾಲ್ಲೂಕಿನ ನೆಲೋಗಿ, ಜೇರಟಗಿ, ಇಜೇರಿ, ಅಂದೋಲಾ, ಯಡ್ರಾಮಿ ಪಟ್ಟಣದಲ್ಲಿ ಮಳೆಯಾಗಿದೆ.

ಮಂಗಳೂರಿನಲ್ಲಿ ಉತ್ತಮ ಮಳೆ: (ಮಂಗಳೂರು) ಚಿಕ್ಕಮಗಳೂರು ಜಿಲ್ಲೆಯ ಬಾಳೆಹೊನ್ನೂರಿನ ಜಯಪುರ ಸುತ್ತಮುತ್ತ ಗುರುವಾರ ಉತ್ತಮ ಮಳೆಯಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯ ಉಜಿರೆ, ಬೆಳ್ತಂಗಡಿ ಪ್ರದೇಶಗಳಲ್ಲಿ ಗುರುವಾರ ಸಂಜೆ ಉತ್ತಮ ಮಳೆಯಾಗಿದೆ. ಉಜಿರೆಯಲ್ಲಿ ಗುಡುಗು, ಮಿಂಚು ಸಹಿತ 1 ಗಂಟೆ ಮಳೆ ಸುರಿಯಿತು. ಸುಬ್ರಹ್ಮಣ್ಯದಲ್ಲಿ ಮಧ್ಯಾಹ್ನ ನಂತರ ಗುಡುಗು ಮಿಂಚಿನಿಂದ ಕೂಡಿದ ಮಳೆಯಾಗಿದೆ. ಮಲೆನಾಡಿನಲ್ಲಿ ಅಡಿಕೆ ಬೆಳೆಗಾರರು ಔಷಧ ಸಿಂಪಡಣೆ ಮಾಡಲು ಸಿದ್ಧತೆ ಮಾಡಿಕೊಂಡಿದ್ದು, ಮಳೆ ಬಿಡುವು ನೀಡುವುದನ್ನು ಕಾಯುತ್ತಿದ್ದಾರೆ.

				648	ತರಿ	ಖಾಸಗಿ	471.10
				650A	ತರಿ	ಖಾಸಗಿ	1141.40
				653	ತರಿ	ಖಾಸಗಿ	45.00
				654	ತರಿ	ಖಾಸಗಿ	17.00
				692	ತರಿ	ಖಾಸಗಿ	1826.90
			ಒಟ್ಟು				**30037.70**
12	ಬೆಳಗಾವಿ	ಹುಕ್ಕೇರಿ	ಸೋಲ್ಲಾಪುರ	12	ತರಿ	ಖಾಸಗಿ	29.10
				13	ತರಿ	ಖಾಸಗಿ	387.70
				16	ತರಿ	ಖಾಸಗಿ	770.60
				21	ತರಿ	ಖಾಸಗಿ	445.70
				22	ತರಿ	ಖಾಸಗಿ	231.60
				23	ತರಿ	ಖಾಸಗಿ	45.20
				27	ತರಿ	ಖಾಸಗಿ	104.70
				28	ತರಿ	ಖಾಸಗಿ	623.50
				29	ತರಿ	ಖಾಸಗಿ	875.50
				33	ತರಿ	ಖಾಸಗಿ	46.50
				396	ತರಿ	ಖಾಸಗಿ	22.20
				397	ತರಿ	ಖಾಸಗಿ	70.50
				398	ತರಿ	ಖಾಸಗಿ	738.50
				399	ತರಿ	ಖಾಸಗಿ	331.40
				400	ತರಿ	ಖಾಸಗಿ	8.10
				404	ತರಿ	ಖಾಸಗಿ	557.20
				406	ತರಿ	ಖಾಸಗಿ	4.70
				407	ತರಿ	ಖಾಸಗಿ	19.50
				408	ತರಿ	ಖಾಸಗಿ	1.30
				409	ತರಿ	ಖಾಸಗಿ	209.20
				410	ತರಿ	ಖಾಸಗಿ	635.40
				412	ತರಿ	ಖಾಸಗಿ	405.60
				428	ತರಿ	ಖಾಸಗಿ	1042.70
				429	ತರಿ	ಖಾಸಗಿ	5.40
				434	ತರಿ	ಖಾಸಗಿ	97.20
				483	ತರಿ	ಖಾಸಗಿ	195.50
				484	ತರಿ	ಖಾಸಗಿ	58.30
			ಒಟ್ಟು				**7962.80**
13	ಬೆಳಗಾವಿ	ಹುಕ್ಕೇರಿ	ಶಾಣಾಹತ್ತರಗಿ	101	ತರಿ	ಖಾಸಗಿ	12630.80
				102	ತರಿ	ಖಾಸಗಿ	8407.50
				251	ತರಿ	ಖಾಸಗಿ	350.60
				253	ತರಿ	ಖಾಸಗಿ	70.40
				256	ತರಿ	ಖಾಸಗಿ	135.80
				262B	ತರಿ	ಖಾಸಗಿ	206.70
				263A	ತರಿ	ಖಾಸಗಿ	82.80
				265	ತರಿ	ಖಾಸಗಿ	18.60
				272A	ತರಿ	ಖಾಸಗಿ	545.90
				279	ತರಿ	ಖಾಸಗಿ	195.80
				281	ತರಿ	ಖಾಸಗಿ	135.30
				424	ತರಿ	ಖಾಸಗಿ	712.70
				429	ತರಿ	ಖಾಸಗಿ	339.10
				51	ತರಿ	ಖಾಸಗಿ	3019.60
				52	ತರಿ	ಖಾಸಗಿ	1136.50
				53	ತರಿ	ಖಾಸಗಿ	1176.70
				54	ತರಿ	ಖಾಸಗಿ	2786.30
				55	ತರಿ	ಖಾಸಗಿ	7.90
				57	ತರಿ	ಖಾಸಗಿ	1600.40
				83	ತರಿ	ಖಾಸಗಿ	318.20
				85	ತರಿ	ಖಾಸಗಿ	116.00
				88	ತರಿ	ಖಾಸಗಿ	155.40
				98	ತರಿ	ಖಾಸಗಿ	23.90
				99	ತರಿ	ಖಾಸಗಿ	626.20
			ಒಟ್ಟು				**34799.10**
14	ಬೆಳಗಾವಿ	ಹುಕ್ಕೇರಿ	ಉ.ಖಾನಾಪೂರ	21	ತರಿ	ಖಾಸಗಿ	251.10
				22	ತರಿ	ಖಾಸಗಿ	589.60
				28	ತರಿ	ಖಾಸಗಿ	525.10
				29	ತರಿ	ಖಾಸಗಿ	174.60
			ಒಟ್ಟು				**1540.40**
ತಾಲೂಕಾ: ಬೆಳಗಾವಿ							
15	ಬೆಳಗಾವಿ	ಬೆಳಗಾವಿ	ಬಂಬರಗೆ	75	ತರಿ	ಖಾಸಗಿ	1052.30
				76	ತರಿ	ಖಾಸಗಿ	988.10
				77	ತರಿ	ಖಾಸಗಿ	210.80
				79	ತರಿ	ಖಾಸಗಿ	193.90
			ಒಟ್ಟು				**2445.10**
16	ಬೆಳಗಾವಿ	ಬೆಳಗಾವಿ	ಭರಮೆನಹಟ್ಟಿ	51	ತರಿ	ಖಾಸಗಿ	803.70
				54B	ತರಿ	ಖಾಸಗಿ	14.90
				56	ತರಿ	ಖಾಸಗಿ	154.50
				57	ತರಿ	ಸರಕಾರಿ	658.30
			ಒಟ್ಟು				**1631.40**
17	ಬೆಳಗಾವಿ	ಬೆಳಗಾವಿ	ಭುತರಾಮನ ಹಟ್ಟಿ	1	ತರಿ	ಖಾಸಗಿ	420.90
				11	ತರಿ	ಖಾಸಗಿ	520.90
				2	ತರಿ	ಸರಕಾರಿ	102.50
				3	ತರಿ	ಸರಕಾರಿ	118.20
				8	ತರಿ	ಖಾಸಗಿ	11.60
			ಒಟ್ಟು				**1174.10**
18	ಬೆಳಗಾವಿ	ಬೆಳಗಾವಿ	ಹಾಲಭಾವಿ	104	ತರಿ	ಖಾಸಗಿ	34.00
				105	ತರಿ	ಖಾಸಗಿ	250.30
				106	ತರಿ	ಖಾಸಗಿ	62.50
				107	ತರಿ	ಖಾಸಗಿ	49.50
				109	ತರಿ	ಖಾಸಗಿ	1201.40
				111	ತರಿ	ಖಾಸಗಿ	1524.00

				112	ತರಿ	ಖಾಸಗಿ	4.00
				113	ತರಿ	ಖಾಸಗಿ	3279.10
				92	ತರಿ	ಖಾಸಗಿ	12.60
			ಒಟ್ಟು				**6417.40**
19	ಬೆಳಗಾವಿ	ಬೆಳಗಾವಿ	ಹೊನಗಾ	269	ತರಿ	ಖಾಸಗಿ	43.30
				272	ತರಿ	ಖಾಸಗಿ	1.70
				273	ತರಿ	ಖಾಸಗಿ	39.10
				274	ತರಿ	ಖಾಸಗಿ	137.80
				275	ತರಿ	ಖಾಸಗಿ	307.90
				276	ತರಿ	ಖಾಸಗಿ	34.70
				279	ತರಿ	ಖಾಸಗಿ	113.70
				280	ತರಿ	ಖಾಸಗಿ	719.00
				294	ತರಿ	ಖಾಸಗಿ	84.10
				298	ತರಿ	ಖಾಸಗಿ	126.80
				299	ತರಿ	ಖಾಸಗಿ	981.20
				300	ತರಿ	ಖಾಸಗಿ	74.40
				315	ತರಿ	ಖಾಸಗಿ	85.50
				318	ತರಿ	ಖಾಸಗಿ	119.10
				320	ತರಿ	ಖಾಸಗಿ	30.90
				321	ತರಿ	ಖಾಸಗಿ	13.10
				322	ತರಿ	ಖಾಸಗಿ	7.00
				323	ತರಿ	ಖಾಸಗಿ	0.70
				355	ತರಿ	ಖಾಸಗಿ	41.10
				356	ತರಿ	ಖಾಸಗಿ	197.30
				357	ತರಿ	ಖಾಸಗಿ	474.50
				360	ತರಿ	ಖಾಸಗಿ	106.30
				361	ತರಿ	ಖಾಸಗಿ	141.10
				363	ತರಿ	ಖಾಸಗಿ	55.70
				364	ತರಿ	ಖಾಸಗಿ	41.60
				365	ತರಿ	ಖಾಸಗಿ	63.60
				366	ತರಿ	ಖಾಸಗಿ	51.20
				367	ತರಿ	ಖಾಸಗಿ	125.10
				368	ತರಿ	ಖಾಸಗಿ	21.40
				427	ತರಿ	ಖಾಸಗಿ	668.80
				428	ತರಿ	ಖಾಸಗಿ	750.40
				431	ತರಿ	ಖಾಸಗಿ	11.80
				433	ತರಿ	ಖಾಸಗಿ	875.00
				438	ತರಿ	ಖಾಸಗಿ	106.00
				439	ತರಿ	ಖಾಸಗಿ	466.70
				449	ತರಿ	ಖಾಸಗಿ	189.30
				450	ತರಿ	ಖಾಸಗಿ	112.20
				451	ತರಿ	ಖಾಸಗಿ	99.80
				452	ತರಿ	ಖಾಸಗಿ	690.80
				455	ತರಿ	ಖಾಸಗಿ	229.00
				457	ತರಿ	ಖಾಸಗಿ	14.90
			ಒಟ್ಟು				**8453.60**
20	ಬೆಳಗಾವಿ	ಬೆಳಗಾವಿ	ರಾಮದುರ್ಗ	5	ತರಿ	ಖಾಸಗಿ	57.40
				7	ತರಿ	ಖಾಸಗಿ	557.00
			ಒಟ್ಟು				**614.40**
21	ಬೆಳಗಾವಿ	ಬೆಳಗಾವಿ	ಸುತಗಟ್ಟಿ	13	ತರಿ	ಖಾಸಗಿ	30.40
				30	ತರಿ	ಖಾಸಗಿ	7.20
				53	ತರಿ	ಖಾಸಗಿ	581.90
				54	ತರಿ	ಖಾಸಗಿ	795.60
				56	ತರಿ	ಖಾಸಗಿ	103.90
			ಒಟ್ಟು				**1519.00**
ತಾಲೂಕಾ: ನಿಪ್ಪಾಣಿ							
22	ಬೆಳಗಾವಿ	ನಿಪ್ಪಾಣಿ	ಗವಾನ	63	ತರಿ	ಖಾಸಗಿ	376.90
				64	ತರಿ	ಖಾಸಗಿ	780.20
				66	ತರಿ	ಖಾಸಗಿ	49.00
				67	ತರಿ	ಖಾಸಗಿ	19.20
				68	ತರಿ	ಖಾಸಗಿ	5524.60
				70	ತರಿ	ಖಾಸಗಿ	567.40
				88	ತರಿ	ಖಾಸಗಿ	27.90
			ಒಟ್ಟು				**7345.20**
23	ಬೆಳಗಾವಿ	ನಿಪ್ಪಾಣಿ	ಕೋಗನೋಳಿ	446	ತರಿ	ಖಾಸಗಿ	185.20
				450	ತರಿ	ಖಾಸಗಿ	651.50
				451	ತರಿ	ಖಾಸಗಿ	214.70
				452	ತರಿ	ಖಾಸಗಿ	837.20
				461	ತರಿ	ಖಾಸಗಿ	2.00
				467	ತರಿ	ಖಾಸಗಿ	28.70
				468	ತರಿ	ಖಾಸಗಿ	28.20
				555	ತರಿ	ಖಾಸಗಿ	660.50
				556	ತರಿ	ಖಾಸಗಿ	507.10
				557	ತರಿ	ಖಾಸಗಿ	388.00
				558A	ತರಿ	ಖಾಸಗಿ	80.50
				561	ತರಿ	ಖಾಸಗಿ	93.00
				562	ತರಿ	ಖಾಸಗಿ	643.70
				563	ತರಿ	ಖಾಸಗಿ	30.50
				613	ತರಿ	ಖಾಸಗಿ	1.60
				620	ತರಿ	ಖಾಸಗಿ	10.30
				622	ತರಿ	ಖಾಸಗಿ	233.10
				623	ತರಿ	ಖಾಸಗಿ	398.30
				624	ತರಿ	ಖಾಸಗಿ	1231.00
				625	ತರಿ	ಖಾಸಗಿ	1141.70
				626	ತರಿ	ಖಾಸಗಿ	40.40
				634	ತರಿ	ಖಾಸಗಿ	603.50
				635	ತರಿ	ಖಾಸಗಿ	100.30

				638	ತರಿ	ಖಾಸಗಿ	569.70
				646	ತರಿ	ಖಾಸಗಿ	5698.00
				647	ತರಿ	ಖಾಸಗಿ	4196.80
				648	ತರಿ	ಖಾಸಗಿ	119.90
				649	ತರಿ	ಖಾಸಗಿ	14639.30
				651	ತರಿ	ಖಾಸಗಿ	2302.90
				652	ತರಿ	ಖಾಸಗಿ	5710.80
				653	ತರಿ	ಖಾಸಗಿ	633.50
				665	ತರಿ	ಖಾಸಗಿ	5764.50
				666	ತರಿ	ಖಾಸಗಿ	108.10
				679	ತರಿ	ಖಾಸಗಿ	4.40
				680	ತರಿ	ಖಾಸಗಿ	32.70
				682	ತರಿ	ಖಾಸಗಿ	84.70
				685	ತರಿ	ಖಾಸಗಿ	1200.40
				686	ತರಿ	ಖಾಸಗಿ	50.70
				715	ತರಿ	ಖಾಸಗಿ	224.70
				716	ತರಿ	ಖಾಸಗಿ	128.70
				717	ತರಿ	ಖಾಸಗಿ	102.20
				719	ತರಿ	ಖಾಸಗಿ	148.00
				720	ತರಿ	ಖಾಸಗಿ	7.50
				721	ತರಿ	ಖಾಸಗಿ	8276.10
				722	ತರಿ	ಖಾಸಗಿ	387.90
				723	ತರಿ	ಖಾಸಗಿ	10409.10
				724	ತರಿ	ಖಾಸಗಿ	4262.50
				725	ತರಿ	ಖಾಸಗಿ	6149.90
				726	ತರಿ	ಖಾಸಗಿ	2173.30
				727	ತರಿ	ಖಾಸಗಿ	1901.70
				728	ತರಿ	ಖಾಸಗಿ	1147.80
				730	ತರಿ	ಖಾಸಗಿ	2760.60
				731	ತರಿ	ಖಾಸಗಿ	7163.90
				734	ತರಿ	ಖಾಸಗಿ	48.70
				736	ತರಿ	ಖಾಸಗಿ	1762.80
				741	ತರಿ	ಖಾಸಗಿ	9.40
				742	ತರಿ	ಖಾಸಗಿ	179.60
				744	ತರಿ	ಖಾಸಗಿ	2315.20
				865	ತರಿ	ಖಾಸಗಿ	58.90
			ಒಟ್ಟು				**98845.90**
24	ಬೆಳಗಾವಿ	ನಿಪ್ಪಾಣಿ	ನಿಪ್ಪಾಣಿ (ಗ್ರಾಮೀಣ)	108	ತರಿ	ಖಾಸಗಿ	978.30
				110	ತರಿ	ಖಾಸಗಿ	1542.90
				111	ತರಿ	ಖಾಸಗಿ	175.10
				119	ತರಿ	ಖಾಸಗಿ	127.90
				121	ತರಿ	ಖಾಸಗಿ	145.80
				125	ತರಿ	ಖಾಸಗಿ	207.10
				13	ತರಿ	ಖಾಸಗಿ	3.10
				133	ತರಿ	ಖಾಸಗಿ	720.10
				142	ತರಿ	ಖಾಸಗಿ	148.70
				143	ತರಿ	ಖಾಸಗಿ	736.20
				144	ತರಿ	ಖಾಸಗಿ	553.40
				15	ತರಿ	ಖಾಸಗಿ	357.00
				153	ತರಿ	ಖಾಸಗಿ	575.90
				156	ತರಿ	ಖಾಸಗಿ	763.40
				159	ತರಿ	ಖಾಸಗಿ	226.30
				16	ತರಿ	ಖಾಸಗಿ	360.60
				17	ತರಿ	ಖಾಸಗಿ	23.10
				19	ತರಿ	ಖಾಸಗಿ	363.30
				25	ತರಿ	ಖಾಸಗಿ	468.60
				26	ತರಿ	ಖಾಸಗಿ	582.70
				27	ತರಿ	ಖಾಸಗಿ	141.10
				28	ತರಿ	ಖಾಸಗಿ	918.70
				30	ತರಿ	ಖಾಸಗಿ	1878.20
				31	ತರಿ	ಖಾಸಗಿ	1409.20
				50	ತರಿ	ಖಾಸಗಿ	1176.10
				55	ತರಿ	ಖಾಸಗಿ	316.40
				56	ತರಿ	ಖಾಸಗಿ	3065.10
				59	ತರಿ	ಖಾಸಗಿ	780.60
				8	ತರಿ	ಖಾಸಗಿ	397.80
				91	ತರಿ	ಖಾಸಗಿ	401.10
				92	ತರಿ	ಖಾಸಗಿ	1983.90
				92	ತರಿ	ಖಾಸಗಿ	137.90
				93	ತರಿ	ಖಾಸಗಿ	357.50
				94	ತರಿ	ಖಾಸಗಿ	1694.40
				95	ತರಿ	ಖಾಸಗಿ	1558.60
			ಒಟ್ಟು				**25276.10**
25	ಬೆಳಗಾವಿ	ನಿಪ್ಪಾಣಿ	ಸೌಂದಲಗಾ	124	ತರಿ	ಖಾಸಗಿ	441.20
				125	ತರಿ	ಖಾಸಗಿ	251.10
				132	ತರಿ	ಖಾಸಗಿ	86.20
				133	ತರಿ	ಖಾಸಗಿ	140.30
				134	ತರಿ	ಖಾಸಗಿ	36.90
				136	ತರಿ	ಖಾಸಗಿ	86.90
				137	ತರಿ	ಖಾಸಗಿ	111.50
				138	ತರಿ	ಖಾಸಗಿ	196.80
				139	ತರಿ	ಖಾಸಗಿ	106.00
				146	ತರಿ	ಖಾಸಗಿ	17.50
				148	ತರಿ	ಖಾಸಗಿ	4.10
				173	ತರಿ	ಖಾಸಗಿ	5.80
				259	ತರಿ	ಖಾಸಗಿ	11.10

ಮುಂದುವರಿಯುವ ಪುಟ 3

₹500 ಕೋಟಿ ನೆರವಿನ ಗಂಟು

ಒಂದನೇ ಪುಟದಿಂದ

ಮೊದಲ ಹಂತದ ಪ್ಯಾಕೇಜ್‌ನಲ್ಲಿ ಶೇ 70 ರಷ್ಟು ಜನರಿಗೆ ಪರಿಹಾರ ಪಾವತಿಸುವ ಕಾರ್ಯಕ್ಕೆ ಚಾಲನೆ ಸಿಕ್ಕಿದೆ. ಎರಡನೇ ಹಂತದ ಪ್ಯಾಕೇಜ್ ಪರಿಹಾರ ನೀಡುವ ಕಾರ್ಯ ಇನ್ನೆರಡು ದಿನಗಳಲ್ಲಿ ಆರಂಭಿಸಲಾಗುವುದು ಎಂದು ಯಡಿಯೂರಪ್ಪ ವಿವರಿಸಿದರು.

'ಈಗಿರುವ ಲಾಕ್‌ಡೌನ್ ನಿಯಮಗಳೇ ಮುಂದುವರಿಯಲಿವೆ. ಜೂನ್ 14 ರ ಬಳಿಕ ಕೋವಿಡ್ ದೃಢ (ಪಾಸಿಟಿವ್) ಸಂಖ್ಯೆ ಶೇ 5 ಕ್ಕಿಂತಲೂ ಕಡಿಮೆಯಾದರೆ, ಜನ ಸಹಕರಿಸಿದರೆ, ಕಟ್ಟುನಿಟ್ಟಿನ ನಿಯಮಗಳನ್ನು ಸಡಿಲಗೊಳಿಸುವುದರ ಜತೆಗೆ ಲಾಕ್‌ಡೌನ್ ತೆರವುಗೊಳಿಸಲಾಗುವುದು' ಎಂದೂ ತಿಳಿಸಿದರು.

ಯಾರಿಗೆಲ್ಲ ಸಿಗಲಿದೆ ಪರಿಹಾರ

ಒಂದನೇ ಪುಟದಿಂದ

- ಮೀನುಗಾರರ ಸಂಘಗಳಿಂದ ಒಳನಾಡು ಮೀನುಗಾರರಿಗೆ ಸರ್ಕಾರಕ್ಕೆ ನೀಡಬೇಕಾಗಿರುವ ಗುತ್ತಿಗೆ ಶುಲ್ಕದಲ್ಲಿ ಶೇ 25 ರಷ್ಟು ರಿಯಾಯಿತಿ ನೀಡಲಾಗುವುದು.
- ಮುಜರಾಯಿ ವ್ಯಾಪ್ತಿಗೆ ಬರುವ 'ಸಿ' ವರ್ಗದ ದೇವಸ್ಥಾನಗಳಲ್ಲಿ ಕೆಲಸ ಮಾಡುವ ಅರ್ಚಕರು, ಅಡುಗೆ ಕೆಲಸಗಾರರು ಮತ್ತು ಸಿಬ್ಬಂದಿಗೆ ತಲಾ ₹3,000 ನೀಡಲಾಗುವುದು. 36,047 ಜನರಿಗೆ ಇದರ ಪ್ರಯೋಜನ ಸಿಗಲಿದೆ. ಈ ಉದ್ದೇಶಕ್ಕೆ ₹10.8 ಕೋಟಿ ವೆಚ್ಚ .
- ಮಸೀದಿಗಳಲ್ಲಿ ಕಾರ್ಯ ನಿರ್ವಹಿಸುವ ಪೇಶ್ ಇಮಾಮ್ ಮತ್ತು ಫೌಜಿಂಗಳಿಗೆ ತಲಾ ₹3,000 ನೆರವು.
- ನ್ಯಾಯವಾದಿಗಳ ಕಲ್ಯಾಣ ನಿಧಿಗೆ ₹5 ಕೋಟಿ. ಈ ನಿಧಿಯನ್ನು ಅಗತ್ಯವಿರುವ ನ್ಯಾಯವಾದಿಗಳು ಮತ್ತು ಬೆಂಚ್ ಗುಮಾಸ್ತರಿಗೆ ಬಳಸಲಾಗುವುದು.

ಐಎಎಸ್ ಅಧಿಕಾರಿ ಶಿಲ್ಪಾ ನಾಗ್ ರಾಜೀನಾಮೆ: ಹಲವು ರೀತಿಯ ಚರ್ಚೆ

ಸಾಂತ್ವನ ಹೇಳಿದ್ದೇ ಮುಳುವಾಯಿತೇ?

ಪ್ರಜಾವಾಣಿ ವಾರ್ತೆ

ಮೈಸೂರು: ಕೋವಿಡ್‌ನಿಂದ ಮೃತಪಟ್ಟಿದ್ದ ಮೈಸೂರು ಮಹಾನಗರ ಪಾಲಿಕೆಯ ಆಂಬುಲೆನ್ಸ್ ಚಾಲಕ ರವಿ (ಹೊರ ಗುತ್ತಿಗೆ ನೌಕರ) ಅವರ ತಾಯಿಯನ್ನು ತಬ್ಬಿಕೊಂಡು, ಪಾಲಿಕೆ ಆಯುಕ್ತೆ ಶಿಲ್ಪಾ ನಾಗ್ ಸಾಂತ್ವನ ಹೇಳಿದ್ದರು. ಈ ಘಟನೆಯ ಚಿತ್ರವೊಂದಕ್ಕೆ ವ್ಯಕ್ತವಾದ ಮೆಚ್ಚುಗೆಯು, ಶಿಲ್ಪಾ ಅವರಿಗೆ ಮುಳುವಾಯಿತೇ?

ಜಿಲ್ಲಾಧಿಕಾರಿ ರೋಹಿಣಿ ಸಿಂಧೂರಿ ಜೊತೆ ಜಟಾಪಟಿಗೆ ಬಿದ್ದಿದ್ದ ಶಾಸಕರು ಮತ್ತು ಸಂಸದರು, ತಮಗೆ ಅವಕಾಶ ಸಿಕ್ಕಾಗಲೆಲ್ಲಾ ಕೋವಿಡ್ ನಿಯಂತ್ರಣದಲ್ಲಿ ಶಿಲ್ಪಾ ನಾಗ್ ತೆಗೆದುಕೊಂಡಿದ್ದ ಕ್ರಮಗಳನ್ನು ಶ್ಲಾಘಿಸಿದ್ದು ಕಾರಣವಾಯಿತೇ?

ಇದುವರೆಗೆ ಅಧಿಕಾರಿಗಳ ವಲಯದಲ್ಲಷ್ಟೇ ಕೇಳಿ ಬರುತ್ತಿದ್ದ ಈ ಚರ್ಚೆಯು, ಶಿಲ್ಪಾ ನಾಗ್ ಅವರು ಗುರುವಾರ ಪಾಲಿಕೆಯ ಆಯುಕ್ತರ ಹುದ್ದೆಯ ಜೊತೆಗೆ ಭಾರತೀಯ ಆಡಳಿತ ಸೇವೆಗೂ ರಾಜೀನಾಮೆಗೆ ನೀಡುತ್ತಿರುವುದಾಗಿ ಪ್ರಕಟಿಸುತ್ತಲೇ ಸಾರ್ವಜನಿಕರ ವಲಯದಲ್ಲೂ ಬಿರುಸು ಪಡೆದಿದೆ. ಹತ್ತಾರು ವಿಶ್ಲೇಷಣೆಗಳೂ ನಡೆದಿವೆ.

ಮೃತಪಟ್ಟ ಚಾಲಕನ ಕುಟುಂಬಕ್ಕೆ ಸಾಂತ್ವನ ಹೇಳಲು ಅವರ ಮನೆಗೆ ಶಿಲ್ಪಾ ನಾಗ್ ಹೋಗಿದ್ದಾಗ ಆತನ ತಾಯಿ ದುಃಖಿಸಿದ್ದರು. ಈ ಸಂದರ್ಭದಲ್ಲಿ ಸಹಜವಾಗಿಯೇ ಆಯುಕ್ತರು ತಬ್ಬಿಕೊಂಡು ಸಾಂತ್ವನ ಹೇಳಿದ್ದರು. ಈ ದೃಶ್ಯದ ಫೋಟೊವನ್ನು ಐಎಎಸ್ ಅಧಿಕಾರಿಗಳ ಅಸೋಸಿಯೇಷನ್ ಹಾಗೂ ಅನೇಕ ಹಿರಿಯ ಐಎಎಸ್ ಅಧಿಕಾರಿಗಳು ತಮ್ಮ ಟ್ವಿಟರ್ ಖಾತೆಯಲ್ಲಿ ಪೋಸ್ಟ್ ಮಾಡಿ, ಮೆಚ್ಚುಗೆ ವ್ಯಕ್ತಪಡಿಸಿದ್ದರು.

ಜನಪ್ರತಿನಿಧಿಗಳು ಸಹ ಆಗಿನಿಂದಲೇ ಶಿಲ್ಪಾ ನಡೆಗೆ ಪ್ರಶಂಸಿಸುತ್ತಿದ್ದರು. ಜಿಲ್ಲಾಧಿಕಾರಿ ರೋಹಿಣಿ ಅವರನ್ನು ಟೀಕಿಸುತ್ತಿದ್ದರು. ಇದು ಸಿಂಧೂರಿ ಅವರ ಅಸಹನೆಗೆ ಕಾರಣವಾಗಿತ್ತು ಎನ್ನಲಾಗಿದ್ದು, 'ಇಂತಹದ್ದೊಂದು ನನ್ನ ಫೋಟೊವನ್ನು ಯಾರೊಬ್ಬರೂ ತೆಗೆದಿಲ್ಲವಲ್ಲಾ?' ಎಂದು ತಮ್ಮ ಆಪ್ತ ಅಧಿಕಾರಿಗಳ ಬಳಿಯೇ ಪರೋಕ್ಷವಾಗಿ ಅಸಮಾಧಾನ ವ್ಯಕ್ತಪಡಿಸಿದ್ದರು ಎಂಬುದು ಗೊತ್ತಾಗಿದೆ.

ಶಾಸಕರು, ಸಂಸದರು ಶಿಲ್ಪಾ ಪರವಾಗಿ ಮಾತನಾಡಲು ಶುರು ಮಾಡುತ್ತಿದ್ದಂತೆ, ತಮ್ಮ ಆಪ್ತ ಅಧಿಕಾರಿಗಳ ಮೂಲಕವೇ ಇದಕ್ಕೆ ಜಾತಿಯ ಲೇಪನವನ್ನು ಬಳಿಯುವಲ್ಲಿ ರೋಹಿಣಿ ಯಶಸ್ವಿಯಾಗಿದ್ದರು. ಇದು ಆಯುಕ್ತರನ್ನು ಘಾಸಿಗೊಳಿಸಿತ್ತು ಎನ್ನಲಾಗಿದೆ.

ಸಹನೆಯ ಕಟ್ಟೆ ಆಸ್ಫೋಟ

ಮೈಸೂರು ನಗರದಲ್ಲಿ 401ಕ್ಕೂ ಹೆಚ್ಚು ಕೋವಿಡ್ ಸೋಂಕಿತರರಿರುವ ಪ್ರದೇಶವನ್ನು ಕೆಂಪು ಬಣ್ಣದಲ್ಲಿ ಗುರುತಿಸಿ, ನಕ್ಷೆಯೊಂದನ್ನು ಜಿಲ್ಲಾಡಳಿತ ಮೇ 31ರಂದು ಬಿಡುಗಡೆ ಮಾಡಿತ್ತು.

ಆದರೆ, ಈ ಸಂಖ್ಯೆಯನ್ನು 51ಕ್ಕೆ ಇಳಿಸಿ, 51ಕ್ಕೂ ಹೆಚ್ಚು ಸೋಂಕಿತರಿರುವ ಪ್ರದೇಶವನ್ನು ಕೆಂಪು ಬಣ್ಣದಲ್ಲಿ ಗುರುತಿಸಿ ಗುರುವಾರ (ಜೂನ್ 3) ಹೊಸ ನಕ್ಷೆಯನ್ನು ಜಿಲ್ಲಾಡಳಿತ ಬಿಡುಗಡೆ ಮಾಡಿದೆ. ಇದರಿಂದ ಮೈಸೂರಿನ ಬಹುತೇಕ ಪ್ರದೇಶವನ್ನು ಕೆಂಪು ವಲಯದಲ್ಲಿದೆ ಎಂಬುದನ್ನು ಬಿಂಬಿಸಿದ್ದೇ ಶಿಲ್ಪಾನಾಗ್ ಅವರ ಸಹನೆಯ ಕಟ್ಟೆಯೊಡೆಯಲು ಕಾರಣ ಎನ್ನಲಾಗಿದೆ.

'ಶಿಲ್ಪಾನಾಗ್ ಜೊತೆಗೆ ನಿಲ್ತೀವಿ'

ಶಿಲ್ಪಾ ನಾಗ್ ರಾಜೀನಾಮೆ ಪ್ರಕಟಿಸುತ್ತಿದ್ದಂತೆ, ಜಿಲ್ಲಾಧಿಕಾರಿ ರೋಹಿಣಿ ಸಿಂಧೂರಿ ವಿರುದ್ಧ ಟೀಕೆ ವ್ಯಕ್ತವಾಗಿದೆ.

ಪಾಲಿಕೆಯ ಹಂಗಾಮಿ ಮೇಯರ್ ಸೇರಿದಂತೆ 65 ಸದಸ್ಯರೂ ಶಿಲ್ಪಾನಾಗ್ ಪರ ನಿಲ್ಲುವುದಾಗಿ ಪತ್ರಿಕಾಗೋಷ್ಠಿ ನಡೆಸಿದರು. ಸಾಮಾಜಿಕ ಜಾಲತಾಣದಲ್ಲೂ 'ಶಿಲ್ಪಾನಾಗ್ ಜೊತೆಗೆ ನಿಲ್ತೀವಿ' ಎನ್ನುವ ಅಭಿಯಾನ ಬಿರುಸು ಪಡೆದಿದೆ.

ಈಜುಕೊಳ ನಿರ್ಮಾಣ: ತನಿಖೆ

ಮೈಸೂರು: ಪಾರಂಪರಿಕ ಕಟ್ಟಡವಾದ ಮೈಸೂರು ಜಿಲ್ಲಾಧಿಕಾರಿ ನಿವಾಸದಲ್ಲಿ ₹ 50 ಲಕ್ಷದಲ್ಲಿ ಒಳಾಂಗಣ ಈಜುಕೊಳ, ಜಿಮ್ ನಿರ್ಮಾಣವಾಗುತ್ತಿರುವುದಕ್ಕೆ ಸಂಬಂಧಿಸಿದಂತೆ ತನಿಖೆ ನಡೆಸಿ, ಏಳು ದಿನಗಳೊಳಗಾಗಿ ವರದಿ ನೀಡುವಂತೆ ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿ, ಮೈಸೂರು ವಿಭಾಗದ ಪ್ರಾದೇಶಿಕ ಆಯುಕ್ತರಿಗೆ ಆದೇಶಿಸಿದ್ದಾರೆ.

'ಮೇ 31ರಂದು ಹೊರಡಿಸಿರುವ ಆದೇಶವು ಬುಧವಾರ ಸಂಜೆ ನನಗೆ ತಲುಪಿದೆ. ತಕ್ಷಣವೇ ಕಾರ್ಯ ಪ್ರವೃತ್ತನಾಗಿರುವೆ' ಎಂದು ಪ್ರಾದೇಶಿಕ ಆಯುಕ್ತ ಜಿ.ಸಿ.ಪ್ರಕಾಶ್ 'ಪ್ರಜಾವಾಣಿ'ಗೆ ತಿಳಿಸಿದರು.

ಕೋವಿಡ್‌ನಿಂದ ಮೃತಪಟ್ಟ ಮೈಸೂರು ಮಹಾನಗರ ಪಾಲಿಕೆಯ ನೌಕರರೊಬ್ಬರ ಕುಟುಂಬದ ಸದಸ್ಯೆಯೊಬ್ಬರನ್ನು ಈಚೆಗೆ ಅಪ್ಪಿಕೊಂಡು ಸಾಂತ್ವನ ಹೇಳಿದ ಆಯುಕ್ತೆ ಶಿಲ್ಪಾನಾಗ್

ನಿತ್ಯವೂ ಕಿರಿಕಿರಿ: ಆರೋಪ

ಆಯುಕ್ತರಾಗಿ ಶಿಲ್ಪಾ ನಾಗ್ ಮೈಸೂರು ನಗರದಲ್ಲಿ ಕೋವಿಡ್ ನಿಯಂತ್ರಿಸಲು ಹಲವು ಕ್ರಮ ತೆಗೆದುಕೊಂಡಿದ್ದರು. ಕೋವಿಡ್ ಮಿತ್ರ, ಟೆಲಿ ಕೇರ್ ಸೇರಿದಂತೆ ಹಲವು ಯೋಜನೆ ಅನುಷ್ಠಾನಗೊಳಿಸಿದ್ದರು. ಆದರೆ ಸಚಿವರು, ಉಪ ಮುಖ್ಯಮಂತ್ರಿ ನಡೆಸಿದ ಸಭೆಗಳಲ್ಲಿ ಜಿಲ್ಲಾಧಿಕಾರಿಯು, ಇದೆಲ್ಲವನ್ನು ತಾವೇ ಜಾರಿಗೊಳಿಸಿದ್ದಾಗಿ ಮಾಹಿತಿ ನೀಡುತ್ತಿದ್ದರು. ಇದು ಶಿಲ್ಪಾ ಅವರಲ್ಲಿ ಸಾಕಷ್ಟು ಬೇಸರ ಮೂಡಿಸಿತ್ತು ಎಂದು ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

'ನಿತ್ಯವೂ ಸಲ್ಲದ ವಿಷಯಕ್ಕೆ ಕಿರಿಕಿರಿ ನೀಡುತ್ತಿದ್ದರು' ಎಂದು ಅವರು ಹೇಳಿದರು.

ಪ್ರಜಾವಾಣಿ
ಸಿನಿ ಸಿಪ್ ಚಪ್ಪರಿಸಿದಷ್ಟೂ ನೆನಪು..
ರವಿಚಂದ್ರನ್ ಶಾರೀರದ ಶಕ್ತಿ

ಸಿನಿಮಾ ತೆರೆಮೇಲೆ ಕಾಣದ ಅಪರೂಪದ ನೆನಪು ಸಹೃದಯರಿಗೆ ಗುಟುಕಿನ ರೂಪದಲ್ಲಿ...
https://bit.ly/3ifur4U

ಆಯುಕ್ತೆ ಶಿಲ್ಪಾ ನಾಗ್ ರಾಜೀನಾಮೆ

ಒಂದನೇ ಪುಟದಿಂದ

ಮಾತಿನುದ್ದಕ್ಕೂ ಜಿಲ್ಲಾಧಿಕಾರಿ ವಿರುದ್ಧ ಹರಿಹಾಯ್ದ ಅವರು, ಕಣ್ಣೀರೂ ಸುರಿಸಿದರು. 'ನನಗೆ ಹಾಗೂ ನನ್ನ ಕೈಕೆಳಗಿನ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ನಿರಂತರ ಕಿರುಕುಳ ನೀಡುತ್ತಾ ಬಂದಿದ್ದಾರೆ. ನಾನು ಇಟ್ಟುಕೊಂಡು ಬಂದಿದ್ದ ಮೌಲ್ಯ ನಾಶವಾಗಿದೆ. ಇದು ಏಕಾಏಕಿ ತೆಗೆದುಕೊಂಡು ತೀರ್ಮಾನ ಅಲ್ಲ. ಒಂದು ವಾರದಿಂದ ಆಲೋಚನೆ ಮಾಡಿ ಈ ನಿರ್ಧಾರಕ್ಕೆ ಬಂದಿದ್ದೇನೆ' ಎಂದರು.

'ಎಲ್ಲರ ಸಹನೆಗೂ ಒಂದು ಮಿತಿ ಇರುತ್ತದೆ. ಪ್ರತಿದಿನ ಅವಮಾನ ಸಹಿಸಿ, ನೋಟಿಸ್‌ಗೆ ಉತ್ತರ ಕೊಡುತ್ತಾ ಕೆಲಸ ಮಾಡಲು ಯಾರಿಗೂ ಸಾಧ್ಯವಿಲ್ಲ. ಯಾವುದೇ ವ್ಯಕ್ತಿ ಇಷ್ಟು ದುರಹಂಕಾರ ಇಟ್ಟುಕೊಂಡು ಕೆಲಸ ಮಾಡಬಾರದು. ಇಷ್ಟು ವರ್ಷ ನಾನು ಮಾಡಿದ ಕೆಲಸಗಳಿಗೆ ಎಳ್ಳುನೀರು ಬಿಟ್ಟಂತಾಗಿದೆ' ಎಂದು ನೋವು ತೋಡಿಕೊಂಡರು.

'ಕೋವಿಡ್ ನಿರ್ವಹಣೆಯಲ್ಲಿ ಪಾಲಿಕೆ ಚೆನ್ನಾಗಿ ಕೆಲಸ ಮಾಡಿದೆ. ಇದರಿಂದ ಅವರಿಗೆ ಅಸೂಯೆಯಾಗಿದೆ. ಪಾಲಿಕೆ ಏನೂ ಕೆಲಸ ಮಾಡುತ್ತಿಲ್ಲ ಎಂದು ಬಿಂಬಿಸುತ್ತಿದ್ದಾರೆ. ಕೋವಿಡ್ ನಿರ್ವಹಣೆಯಲ್ಲಿ ಜಿಲ್ಲಾಡಳಿತದಿಂದ ನಮಗೆ ಯಾವುದೇ ಸಹಕಾರ ದೊರೆತಿಲ್ಲ. ಸಿಎಸ್‌ಆರ್ ನಿಧಿಯಿಂದ ಕೆಲಸ ಮಾಡುತ್ತಿದ್ದೇವೆ. ಆದರೆ, ಇದೀಗ ಈ ನಿಧಿಯನ್ನು ಪಾಲಿಕೆ ಬಳಸಬಾರದು ಎಂದು ಆದೇಶ ಹೊರಡಿಸಿದ್ದಾರೆ. ಅವರ ಈ ಆದೇಶ ಕಾನೂನಿಗೆ ವಿರುದ್ಧವಾದುದು' ಎಂದರು.

'ಎಲ್ಲರಿಗೂ ಒಂದು ಸಹನೆ ಇರುತ್ತದೆ. ಸಹನೆ ಒಡೆದಾಗ ಏನು ಮಾಡಬೇಕು? ಒಬ್ಬರು ಐಎಎಸ್ ಅಧಿಕಾರಿಯಾಗಿ ಮತ್ತೊಬ್ಬ ಐಎಎಸ್ ಅಧಿಕಾರಿ ಮೇಲೆ ದಬ್ಬಾಳಿಕೆ ಮಾಡೋದು ಎಷ್ಟು ಸರಿ? ದಯವಿಟ್ಟು ನಿಮ್ಮ ವರ್ತನೆ ಸರಿಪಡಿಸಿಕೊಳ್ಳಿ. ಇಲ್ಲದಿದ್ದರೆ ಮೈಸೂರು ಬಿಟ್ಟು ತೊಲಗಿ. ಮೈಸೂರು ನಗರಕ್ಕೆ ಇಷ್ಟೊಂದು ಅಪಚಾರ ಮಾಡಿಕೊಂಡು ನೀವು ಇಲ್ಲಿ ಇರುವುದು ಸರಿಯಲ್ಲ. ಇಂತಹ ಜಿಲ್ಲಾಧಿಕಾರಿ ಯಾವ ಜಿಲ್ಲೆಗೂ ಬೇಡ' ಎಂದು ಕಿಡಿಕಾರಿದರು.

'ನನ್ನನ್ನು ತುಳಿಯುವ ವ್ಯವಸ್ಥಿತ ಪಿತೂರಿ ನಡೆದಿದೆ. ನಾವು ಚೆನ್ನಾಗಿ ಕೆಲಸ ಮಾಡುವುದನ್ನು ಅವರಿಗೆ ನೋಡಲು ಆಗುವುದಿಲ್ಲ. ಆದ್ದರಿಂದ ನಾವು ಮಾಡುವ ಕೆಲಸಕ್ಕೆ ಮನ್ನಣೆ ಸಿಗುತ್ತಿಲ್ಲ. ಪಾಲಿಕೆ ಚೆನ್ನಾಗಿ ಕೆಲಸ ಮಾಡುತ್ತಿದೆ ಎಂಬ ವರದಿಗಳು ಮಾಧ್ಯಮಗಳಲ್ಲಿ ಬಂದಿದ್ದರಿಂದ ನನ್ನನ್ನು ಟಾರ್ಗೆಟ್ ಮಾಡಲಾಗಿದೆ. ನನಗೆ ಕೆಲಸ ಮಾಡುವ ಆಸಕ್ತಿಯೇ ಇಲ್ಲದಂತಾಗಿದೆ' ಎಂದು ಬೇಸರದಿಂದ ನುಡಿದರು.

ಕಾಲಿಗೆ ಬಿದ್ದ ಭದ್ರತಾ ಸಿಬ್ಬಂದಿ: ತಮ್ಮ ಹುದ್ದೆಗೆ ರಾಜೀನಾಮೆ ಸಲ್ಲಿಸುವುದಾಗಿ ಘೋಷಿಸಿ, ಶಿಲ್ಪಾ ನಾಗ್ ಅವರು ಪಾಲಿಕೆ ಕಚೇರಿಯಿಂದ ಹೊರ ಬರುತ್ತಿದ್ದಂತೆಯೇ ಭದ್ರತಾ ಸಿಬ್ಬಂದಿ ಕಾಲಿಗೆ ಬಿದ್ದು, ಹೋಗಬೇಡಿ ಎಂದು ಅಂಗಲಾಚಿದರು. ಇದರಿಂದ ಭಾವೋದ್ವೇಗಕ್ಕೆ ಒಳಗಾದ ಆಯುಕ್ತರು, ಎಲ್ಲರತ್ತ ಕೈ ಮುಗಿದು ಕಾರಿನಲ್ಲಿ ತೆರಳಿದರು.

ಕರ್ನಾಟಕ ಸರ್ಕಾರ ಕಾರ್ಯಪಾಲಕ ಇಂಜನೀಯರ್‌ರವರ ಕಚೇರಿ,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಹರಪ್ಪನಹಳ್ಳಿ
ಸಂಖ್ಯೆ: ಕಾಪಾಇಂ/ಗ್ರಾಕುನೀ&ನೈವಿ/ಹ.ಹಳ್ಳಿ/ಎಎಂ/ಇ-ಪ್ರೊಕ್ ಅಲ್ಪಾವಧಿ ಟೆಂಡರ್ ಪ್ರಕಟಣೆ/ಜೆಇ/2021-22/185 ದಿನಾಂಕ: 31-05-2021
ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ ಸಂಖ್ಯೆ: 07/2020-21
ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಹರಪ್ಪನಹಳ್ಳಿರವರಿಂದ 2020-21 ನೇ ಸಾಲಿನ ಜಲ ಜೀವನ್ ಮಿಷನ್ ಯೋಜನೆಯಡಿಯಲ್ಲಿ ಮಂಜೂರಾದ ಹೂವಿನಹಡಗಲಿ ತಾಲ್ಲೂಕಿನ ಕುಡಿಯುವ ನೀರು ಕಾಮಗಾರಿಗಳಿಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಂಜನೀಯರಿಂಗ್ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟ ಅರ್ಹ ಗುತ್ತಿಗೆದಾರರಿಂದ Standard Bid Document KW-IV ರ ನಿಯಮಗಳ ನಿಬಂಧನೆಗಳೊಪಟ್ಟು (ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಿರುವಂತೆ) ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಇ-ಟೆಂಡರ್ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಹಾಗೂ ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ನಿಗದಿತ ಅವಧಿ 01-06-2021 ರಿಂದ 30-06-2021ರ ಸಾಯಂಕಾಲ 5:00 ಗಂಟೆಯವರೆಗೆ ಹಾಗೂ ದಿನಾಂಕ: 07-06-2021 ರಂದು ಬೆಳಿಗ್ಗೆ 11:00 ಗಂಟೆಗೆ ಪೂರ್ವಭಾವಿ ಸಭೆಯನ್ನು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಪರಹಪ್ಪನಹಳ್ಳಿಯಲ್ಲಿ ಕರೆಯಲಾಗಿದೆ. ಮತ್ತು ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ತೆರೆಯುವ ದಿನಾಂಕ: 01-7-2021 ರಂದು ಸಾಯಂಕಾಲ 5:05 ಗಂಟೆ ನಂತರ. ಹೆಚ್ಚಿನ ವಿವರಗಳಿಗೆ ಕರ್ನಾಟಕ ಸರ್ಕಾರದ ವಿದ್ಯುನ್ಮಾನ ಸಂಗ್ರಹಣೆ (e-procurment portal) ವೇದಿಕೆ ವೆಬ್‌ಸೈಟ್‌ನಲ್ಲಿ ಪಡೆಯಬಹುದು. (www.eproc.karnataka.gov.in) ಈ ಬಗ್ಗೆ ಇನ್ನು ಹೆಚ್ಚಿನ ವಿವರಗಳಿಗಾಗಿ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಪರಪನಹಳ್ಳಿರವರ ಕಚೇರಿಯ ವೇಳೆಯಲ್ಲಿ ಪಡೆಯಬಹುದು.
ಸಹಿ/- ಕಾರ್ಯಪಾಲಕ ಇಂಜನಿಯರ್
ಗ್ರಾ.ಕು.ನೀ.&ನೈ. ವಿಭಾಗ, ಪಹರಪ್ಪನಹಳ್ಳಿ.

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
ANAB ISO 9001:2015 NVT-QC CERTIFICATE NO. 2790095
ಜಲಭವನ, ನಂ. 6, 1ನೇ ಘಟ್ಟ, 1ನೇ ಹಂತ, ಬಿಟಿಎಂ ಲೇಔಟ್, ಬನ್ನೇರುಘಟ್ಟ ಮುಖ್ಯ ರಸ್ತೆ, ಬೆಂಗಳೂರು - 560 029. ದೂ: 080-41106504 - 18
ಇ-ಮೇಲ್: cekwbbng@gmail.com ವೆಬ್‌ಸೈಟ್: https://eproc.karnataka.gov.in
ಅಲ್ಪಾವಧಿ ಟೆಂಡರ್ ಪ್ರಕಟಣೆ- 2ನೇ ಕರೆ
(ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
ಈ ಕೆಳಕಂಡ ಕಾಮಗಾರಿಗೆ ಅರ್ಹ ಏಜೆನ್ಸಿ/ಗುತ್ತಿಗೆದಾರರಿಂದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಇಡುಗಂಟು ಟೆಂಡರ್‌ಗಳನ್ನು (ದ್ವಿ ಲಕೋಟೆ ಪದ್ಧತಿಯಲ್ಲಿ) ಆಹ್ವಾನಿಸಲಾಗಿದೆ.
ಸಂಖ್ಯೆ: KWB/CE(B)TEC/NGT/323/2021-22 Dtd: 03-06-2021
ಇ-ಪ್ರೊಕ್ಯೂರ್‌ಮೆಂಟ್ ಇಂಡೆಂಟ್ ಸಂಖ್ಯೆ: No: KUWSDB/2021-22/WS/WORK_INDENT2942/2ನೇ ಕರೆ
ಕಾಮಗಾರಿಯ ಹೆಸರು ಮತ್ತು ವಿವರ:
ಭಾಗ-I (ಇಡುಗಂಟು) : ಅ. ಮಾನ್ಯ ರಾಷ್ಟ್ರೀಯ ಹಸಿರು ನ್ಯಾಯಾಧಿಕರಣ ಕಾರ್ಯಕ್ರಮದಡಿ ರಾಮನಗರ, ಕನಕಪುರ ನಗರಗಳಲ್ಲಿ ಹಾಲಿ ಇರುವ ಒಳಚರಂಡಿ ವ್ಯವಸ್ಥೆಯ ಪುನರ್ ಜೋಡಣೆ ಮತ್ತು ಹೊನ್ನಾಳಿ ಪಟ್ಟಣದಲ್ಲಿ ಹಾಲಿ ಇರುವ ಒಳಚರಂಡಿ ಯೋಜನೆಯನ್ನು ಉನ್ನತಿಕರಿಸುವುದು. ಆ. ಮಾನ್ಯ ರಾಷ್ಟ್ರೀಯ ಹಸಿರು ನ್ಯಾಯಾಧಿಕರಣ ಕಾರ್ಯಕ್ರಮದಡಿ ಭದ್ರಾವತಿ ನಗರದಲ್ಲಿ ಭದ್ರ ನದಿಗೆ, ಶಿವಮೊಗ್ಗ ನಗರದಲ್ಲಿ ತುಂಗಾ ನದಿ ಹಾಗೂ ಜೇವರ್ಗಿ ಪಟ್ಟಣದಲ್ಲಿ ಭೀಮಾ ನದಿಗಳಿಗೆ ಪ್ರವೇಶಿಸುವ ತ್ಯಾಜ್ಯ ನೀರನ್ನು ತಡೆದು ಮಾರ್ಗಾಂತರ ಮಾಡುವ ಕಾಮಗಾರಿಗಳು.
ಟೆಂಡರಿಗಿಟ್ಟ ಮೊತ್ತ ಜಿ.ಎಸ್.ಟಿ ರಹಿತ (ರೂ.ಲಕ್ಷಗಳಲ್ಲಿ): 7445.38
ಭಾಗ-II (ಇಡುಗಂಟು) ಅ. ರಾಮನಗರ ನಗರ ಹಾಗೂ ಹೊನ್ನಾಳಿ ನಗರ ಪಟ್ಟಣದಲ್ಲಿ ದೋಷ ಹೊಣೆಗಾರಿಕೆ ಅವಧಿ ಒಳಗೊಂಡಂತೆ ಐದು ವರ್ಷಗಳ ಅವಧಿಗೆ ನಿರ್ವಹಣೆ ಮತ್ತು ದುರಸ್ತಿ. ಆ. ಈ ಯೋಜನೆಯಡಿ ಕನಕಪುರ ನಗರದಲ್ಲಿ ನಿರ್ಮಿಸಲಾದ ವೆಟ್‌ವೆಲ್‌ಗಳು ಹಾಗೂ ಎಸ್‌ಟಿಪಿಗಳ ಹಾಗೂ ಈ ಯೋಜನೆ ಅಡಿಯಲ್ಲಿ ಜೇವರ್ಗಿ ಪಟ್ಟಣದಲ್ಲಿ ನಿರ್ಮಿಸಲಾದ ಸ್ವತ್ತುಗಳ ದೋಷ ಹೊಣೆಗಾರಿಕೆ ಅವಧಿ ಒಳಗೊಂಡಂತೆ ಐದು ವರ್ಷಗಳ ಅವಧಿಗೆ ನಿರ್ವಹಣೆ ಮತ್ತು ದುರಸ್ತಿ.
ಟೆಂಡರಿಗಿಟ್ಟ ಮೊತ್ತ ಜಿ.ಎಸ್.ಟಿ ರಹಿತ (ರೂ.ಲಕ್ಷಗಳಲ್ಲಿ): 1162.41
ಭದ್ರತಾ ಠೇವಣಿ ಹಣ: ಇಲ್ಲ
ಪೂರ್ಣಗೊಳಿಸಲು ಕಾಲಾವಧಿ ಮಳೆಗಾಲ ಸೇರಿ: ಭಾಗ-I ಕ್ಕೆ 12 ತಿಂಗಳು. ಭಾಗ-II ಕ್ಕೆ 60 ತಿಂಗಳು ದೋಷ ಹೊಣೆಗಾರಿಕೆ ಅವಧಿ ಒಳಗೊಂಡಂತೆ.
1) ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಳ್ಳಲು ಪ್ರಾರಂಭದ ದಿನಾಂಕ ಹಾಗೂ ಸಮಯ: 04-06-2021 ರಂದು 11.30 ಗಂಟೆಯ ನಂತರ. 2) ಸ್ಪಷ್ಟೀಕರಣಕ್ಕೆ ಕೊನೆಯ ದಿನಾಂಕ ಹಾಗೂ ಸಮಯ: 11-06-2021 ರಂದು 11.00 ಗಂಟೆಯವರೆಗೆ. 3) ಪೂರ್ವ ಬಿಡ್ ಸಭೆಯ ದಿನಾಂಕ ಹಾಗೂ ಸಮಯ: 11-06-2021 ರಂದು 11.30 ಗಂಟೆಗೆ. 4) ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ ಹಾಗೂ ಸಮಯ: 19/06/2021 ರಂದು 17.30 ಗಂಟೆಯವರೆಗೆ. 5) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಹಾಗೂ ಸಮಯ: 22/06/2021 ರಂದು 11.00 ಗಂಟೆಯ ನಂತರ.
ಹೆಚ್ಚಿನ ವಿವರಗಳನ್ನು ಕೆಳಸಹಿದಾರರಿಂದ ಅಥವಾ ವೆಬ್‌ಸೈಟ್: (https://eproc.karnataka.gov.in) ನಲ್ಲಿ ಅಥವಾ ಇ-ಪ್ರೊಕ್ಯೂರ್‌ಮೆಂಟ್ ಸಹಾಯವಾಣಿ : 080-22371090 / 22373788, ಇ-ಮೇಲ್ ಸಹಾಯ: hphelpdesk.blr@intarvo.com ಸಂಪರ್ಕಿಸಬಹುದು.
ಸಹಿ/- ಮುಖ್ಯ ಅಭಿಯಂತರರು,
ಕನನಿಸ ಮತ್ತು ಒಚ ಮಂಡಳಿ, ಬೆಂಗಳೂರು
ವಾ.ಸಾ.ಸಂ.ಇ/ಬೆಂ.ನಗರ/468/ಆಕಾರ್/2021-22
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಹಾವೇರಿ
ನಂ. ಗ್ರಾಕುನೀ&ನೈವಿ/ಹಾವೇರಿ/ಪಿಬಿ-1/ಟೆಂಡರ್:09/2021-22
ದಿನಾಂಕ : 02-06-2021
ಅಲ್ಪಾವಧಿ ಟೆಂಡರ ಪ್ರಕಟಣೆ (2ನೇ ಕರೆ)
(E-GOK ಇ-ಪ್ರೊಕ್ಯೂರಮೆಂಟ ಮುಖಾಂತರ ಮಾತ್ರ)
NRDWP JJM ಯೋಜನೆಯಡಿ ಬ್ಯಾಡಗಿ, ಹಾವೇರಿ, ಹಿರೇಕೆರೂರ, ರಾಣೇಬೆನ್ನೂರ ಮತ್ತು ಸವಣೂರ ತಾಲೂಕುಗಳ ಈ ಕೆಳಕಂಡ ಗ್ರಾಮಗಳಲ್ಲಿ ಟೆಂಡರ್ ಕರೆಯಲಾಗಿದೆ.
(1) E-Procurement ನಲ್ಲಿ ಹಾಗೂ ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನ ಮತ್ತು ಸಮಯ : ದಿನಾಂಕ: 14-06-2021 ರ 17:30 ಗಂಟೆವರೆಗೆ (2) ಇ-ಪ್ರೊಕ್ಯೂರ್‌ಮೆಂಟ್ ಆರ್ಥಿಕ ಬಿಡ್ ತೆರೆಯುವ (ಕ್ರ.ಸಂ 1 ರಿಂದ 5) ತಾಂತ್ರಿಕ ಬಿಡ್ ತೆರೆಯುವ (ಕ್ರ.ಸಂ 6 ರಿಂದ 18) (ಸಾಧ್ಯವಾದಲ್ಲಿ : ದಿನಾಂಕ: 15-06-2021ರ 17:31 ಗಂಟೆ ನಂತರ (3) ಇ-ಪ್ರೊಕ್ಯೂರ್‌ಮೆಂಟ್ ಆರ್ಥಿಕ ಬಿಡ್ ತೆರೆಯುವ (ಕ್ರ.ಸಂ 6 ರಿಂದ 18) (ಸಾಧ್ಯವಾದಲ್ಲಿ) : ದಿನಾಂಕ: 18-06-2021 ರ 10:30 ಗಂಟೆ ನಂತರ (4) ಪ್ರೀ ಬಿಡ್ ಮೀಟಿಂಗ್ ಸ್ಥಳ : Office of the Executive Engineer, Rural Drinking Water & Sanitation Division, Vidyanagar, Old ZP Compound, Haveri-581110. : ದಿನಾಂಕ : 09-06-2021 ರಂದು ಬೆಳಿಗ್ಗೆ 11:00 ಗಂಟೆಗೆ
ಇಂಡೆಂಟ್ ನಂ : (1) 33883/Call-2, (2) 33941/Call-2, (3) 33901/Call-2, (4) 33861/Call-2, (5) 33902/Call-2, (6) 33884/Call-2, (7) 33903/Call-2, (8) 33862/Call-2, (9) 33942/Call-2, (10) 33863/Call-2, (11) 33904/Call-2, (12) 33871/Call-2, (13) 33868/Call-2, (14) 33872/Call-2, (15) 33869/Call-2, (16) 33870/Call-2, (17) 33867/Call-2, (18) 33891/Call-2.
ಟೆಂಡರನಲ್ಲಿಯ ನಿಬಂಧನೆಗಳನ್ನು ಹಾಗೂ ಷರತ್ತುಗಳ ವಿವರಗಳನ್ನು E.GOK ಇ-ಪ್ರಕ್ಯೂರ್‌ಮೆಂಟ್ ಪ್ಲಾಟ್‌ಫಾರಂನಲ್ಲಿ www.eproc.karnataka.gov.in ರಲ್ಲಿ ಪಡೆಯಬಹುದು ಹಾಗೂ ವಿಭಾಗ ಕಛೇರಿಯಲ್ಲಿ ಹೆಚ್ಚಿನ ಮಾಹಿತಿಗಳನ್ನು ಪಡೆಯತಕ್ಕದ್ದು.
ಸಹಿ/- ಕಾರ್ಯನಿರ್ವಾಹಕ ಇಂಜನೀಯರ್,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಹಾವೇರಿ.
ವಾಸಾಸಂಇ/ಹಾವೇರಿ/ಎಂಸಿಎ/72/2021-22

ಜಿಲ್ಲಾ ಪಂಚಾಯತ್, ತುಮಕೂರು
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,
ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ-ಮಧುಗಿರಿ
ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ ಸಂಖ್ಯೆ:04/2020-21
ದಿನಾಂಕ: 19.05.2021
ಕರ್ನಾಟಕ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಮಧುಗಿರಿ ವ್ಯಾಪ್ತಿಯ ಪಾವಗಡ ತಾಲ್ಲೂಕಿನ ರಸ್ತೆ ಕಾಮಗಾರಿಗಳಿಗೆ ಇ-ಪ್ರೋಕ್ಯೂರ್‌ಮೆಂಟ್ ಟೆಂಡರ್ ಅನ್ನು ಕರೆಯಲಾಗಿದ್ದು, ಇ-ಪ್ರೋಕ್ಯೂರ್ ಮೆಂಟ್ ಟೆಂಡರ್‌ಗಾಗಿ ಅರ್ಹ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ಹಾಗೂ ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೊಂದಾಯಿಸಿರುವ ಅರ್ಹ ಗುತ್ತಿಗೆದಾರರಿಂದ ಅರ್ಜಿ ಸಲ್ಲಿಸಲು ಹಾಗೂ ಭರ್ತಿ ಮಾಡಿದ ಟೆಂಡರ್‌ಗಳನ್ನು ಸ್ವೀಕರಿಸಲು ಟೆಂಡರ್ ಗಳಿಗೆ ದಿ: 20.05.2021 ರಿಂದ ದಿ: 19.06.2021ರಂದು ಕೊನೆಯ ದಿನಾಂಕವಾಗಿರುತ್ತದೆ. ಹೆಚ್ಚಿನ ವಿವರಗಳಿಗೆ ದೂರವಾಣಿ ಸಂಖ್ಯೆ :080-25501216, 080-25501227 ರಲ್ಲಿ ಸಂಪರ್ಕಿಸಲು ಹಾಗೂ ವೆಬ್‌ಸೈಟ್ http://www.eproc.karnataka.gov.in ನಲ್ಲಿ ವಿವರಗಳನ್ನು ಪಡೆಯಬಹುದಾಗಿದೆ.
ಸಹಿ/- ಕಾರ್ಯನಿರ್ವಾಹಕ ಇಂಜಿನಿಯರ್,
ಪಂ.ರಾ.ಇಂ.ವಿಭಾಗ, ಮಧುಗಿರಿ
DIPR/TUM/71/MCA/2021-22
ಕೋವಿಡ್-19 ಆತಂಕ ಬೇಡ: ಮುನ್ನೆಚ್ಚರಿಕೆ ಇರಲಿ
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ದಾವಣಗೆರೆ ವಿಭಾಗ, ದಾವಣಗೆರೆ.
ಪ್ರಕಟಣೆ ಸಂ: ಐಎಫ್‌ಟಿ-02/ಎಇ-2/2021-22/329 ದಿನಾಂಕ:-02.06.2021
ಇ- ಪ್ರೊಕೂರ್‌ಮೆಂಟ್ ಟೆಂಡರ್ ಪ್ರಕಟಣೆ
ಉಲ್ಲೇಖ: ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ : ಕಾಅ/ದಾವಿದಾ/ಐ.ಎಫ್.ಟಿ-01/ಜೆಇ/2021-22 ದಿನಾಂಕ: 28.05.2021.
ಲೋಕೋಪಯೋಗಿ ಇಲಾಖೆ ವಿಭಾಗ ದಾವಣಗೆರೆ ವಿಭಾಗ ವ್ಯಾಪ್ತಿಯಲ್ಲಿನ ಹೊನ್ನಾಳಿ ತಾಲ್ಲೂಕಿಗೆ ಸಂಬಂಧಿಸಿದಂತೆ ಕೆಳಗೆ ಸಹಿ ಮಾಡಿರುವವರಿಂದ ಕರ್ನಾಟಕ ರಾಜ್ಯಪಾಲರ ಪರವಾಗಿ ಕೆಟಿಪಿಪಿ-2000ರನ್ವಯ ಮತ್ತು ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಯಮದಂತೆ 4059-ಇಲಾಖಾ ಕಟ್ಟಡಗಳು ಲೆಕ್ಕಶೀರ್ಷಿಕೆಗಳಡಿ ಕಾಮಗಾರಿಗಳಿಗೆ ಕರ್ನಾಟಕ ಸರ್ಕಾರದ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿ ಮಾಡಿದ ಅರ್ಹ ಟೆಂಡರ್‌ದಾರರಿಂದ ದ್ವಿಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.
ಒಂದು ಕಾಮಗಾರಿಯ ಅಂದಾಜು ಮೊತ್ತ ರೂ. 100.00 ಲಕ್ಷ ಟೆಂಡರ್ ಪ್ರಕ್ರಿಯೆಗೆ ಈ ಕೆಳಕಂಡಂತೆ ದಿನಾಂಕಗಳನ್ನು ನಿಗಧಿಪಡಿಸಲಾಗಿದೆ. ಕಾಮಗಾರಿಯ ಇಎಂಡಿ ಮೊತ್ತವನ್ನು ಮತ್ತು ಟೆಂಡರ್ ಪ್ರೋಸಸಿಂಗ್ ಬೆಲೆಯನ್ನು ಇ-ಪೋರ್ಟಲ್‌ನಲ್ಲಿ ಸೂಚಿಸಲಾಗಿದೆ.
(1) ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ: 21.06.2021 ಸಂಜೆ 4.00 ಗಂಟೆಯವರೆಗೆ
(2) ಟೆಂಡರ್ ತೆರೆಯುವ ದಿನಾಂಕ: 23.06.2021 ಸಂಜೆ 4.30 ಗಂಟೆಯವರೆಗೆ.
ಹೆಚ್ಚಿನ ವಿವರಗಳನ್ನು ಸದರಿ ಕಛೇರಿಯ ಕೆಲಸದ ವೇಳೆಯಲ್ಲಿ (: 08192 234951, 231530) ಅಥವಾ ವೆಬ್ ಸೈಟ್ http://eproc.karnataka.gov.in ನಲ್ಲಿ ಪಡೆಯಬಹುದು.
ವಾಸಾಇ/ಡಿವಿಜಿ/116/ಎಂಸಿಎ/2021-22
ಸಹಿ/- ಕಾರ್ಯಪಾಲಕ ಅಭಿಯಂತರರು,
ಲೋ.ಬಂ.ಒ.ಜ. ಇಲಾಖೆ ವಿಭಾಗ ದಾವಣಗೆರೆ

ಗುಲಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
ಸಂಖ್ಯೆ:-ಜೆಸ್ಕಾಂ/ಅಅ(ವಿ)/ಕಾನಿಅ(ವಿ)/ಸಕಾನಿಅ(ವಿ)/(ಖರೀದಿ)/2021-22/7983-87 ದಿನಾಂಕ:03.06.2021
ಟೆಂಡರ್ ಪ್ರಕಟಣೆ
1) ಕಾಮಗಾರಿ ವಿವರ : ಪಿಸಿ-1135, ಗು.ವಿ.ಸ.ಕಂ.ನಿ, ತಾಂತ್ರಿಕ ವಿವರಣೆಗಳನುಸಾರ ವಿದ್ಯುತ್ ಪರಿವರ್ತಕಗಳಿಗೆ ಬೇಕಾಗುವ ತೈಲ ತಯಾರಿಸುವುದು ಮತ್ತು ಒದಗಿಸುವುದು. 2) ಕಾಮಗಾರಿ ಅಂದಾಜು ಮೊತ್ತ : 5,81,52,750/-. 3) ಗುತ್ತಿಗೆದಾರರ ಅರ್ಹತೆ ವಿವರ : ಐ.ಎಫ್.ಬಿ ಪ್ರಕಾರ. 4) ಬಿಡ್ ದಾಖಲೆಗಳು ಲಭ್ಯವಿರುವ ದಿನಾಂಕ ಅಥವಾ ನಂತರ : 04-06-2021. 5) ಪ್ರೀ ಬಿಡ್ ಮಿಟಿಂಗ್ ದಿನಾಂಕ : 14-06-2021. 6) ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ : 05-07-2021 ಸಾಯಂಕಾಲ 17:30 Hrs. 7) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 07-07-2021 ಬೆಳಗ್ಗೆ 11:00 Hrs. 8) ಆರ್ಥಿಕ ಬಿಡ್ ತೆರೆಯುವ ದಿನಾಂಕ : 07-07-2021 ಬೆಳಗ್ಗೆ 11:00 Hrs. 9) ಹೆಚ್ಚಿನ ವಿವರಗಳಿಗೆ : ಕಾರ್ಯನಿರ್ವಾಹಕ ಅಭಿಯಂತರರು (ವಿ) ಖರೀದಿ ವಿಭಾಗ, ನಿಗಮ ಕಾರ್ಯಾಲಯ, ಗು.ವಿ.ಸ.ಕಂ.ನಿ. ಕಲಬುರಗಿ-585 102. 10) ಅಂತರಜಾಲತಾಣದ ವಿಳಾಸ : www.eproc.Karnataka.gov.in
ಸಹಿ/- ಅಧೀಕ್ಷಕ ಅಭಿಯಂತರರು (ವಿ).,
ಖರೀದಿ, ನಿಗಮ ಕಛೇರಿ, ಗು.ವಿ.ಸ.ಕಂ.ನಿ, ಕಲಬುರಗಿ.
ವಾ.ಸಾ.ಸಂ.ಇ/ಕಲಬುರಗಿ/231/ಎಂ.ಸಿ&ಎ/2021-22
ವಿದ್ಯುತ್ ಸಂಬಂಧಿತ ದೂರುಗಳಿಗೆ 1912 ಗೆ ಕರೆ ಮಾಡಿ URJA MITRA APP ಡೌನಲೋಡ್ ಮಾಡಿಕೊಳ್ಳಿ

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)
ಎಕ್ಸಿಕ್ಯೂಟಿವ್ ಇಂಜಿನೀಯರವರ ಕಚೇರಿ, ಕೃಭಾಜನಿನಿ, ನಾಬದಂಕಾ, ವಿಭಾಗ-5, ರೋಡಲಬಂಡಾ-584127,
ಸಂ.ಕೃಭಾಜನಿನಿ/ನಾಬದಂಕಾ/ವಿ-5/ಯೋಶಾ/21-22/146 ದಿನಾಂಕ:-29.05.2021
ಟೆಂಡರ ಪ್ರಕಟಣೆ (e-Tendering Mode only)
ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ (ನಿಯಮಿತ) ಬೆಂಗಳೂರು ಇವರಪರವಾಗಿ ಈ ಕೆಳಸಹಿದಾರರಿಂದ ಏಕ-ಲಕೋಟೆ ಪದ್ದತಿಯಲ್ಲಿ ಶೇಕಡಾವಾರು ಟೆಂಡರ್‌ಗಳನ್ನು ಈ ಕೆಳಗೆ ತಿಳಿಸಿರುವಂತೆ 2021-22ನೇ ಸಾಲಿನ ಸ್ಪೆಷಲ್ ರಿಪೇರ್ ಕಾಮಗಾರಿಗೆ ಅರ್ಹ ಗುತ್ತಿಗೆದಾರರಿಂದ ಇ-ಪ್ರೋಕ್ಯೂರ್‌ಮೆಂಟ್ ಮೂಲಕ ಆಹ್ವಾನಿಸಲಾಗಿದೆ.
1) ಲಕೋಟೆ ಪದ್ಧತಿ: ಏಕ ಲಕೋಟೆ. 2) ಇಂಡೆಂಟ್ ಸಂಖ್ಯೆ: 21300. 3) ಟೆಂಡರ್ ಅರ್ಜಿ ಪ್ರಾರಂಭವಾಗುವ ದಿನಾಂಕ: 02.06.2021. 4) ಟೆಂಡರ್ ಅರ್ಜಿಸಲ್ಲಿಸಲು ಕೊನೆಯ ದಿನಾಂಕ: 09.06.2021 ಸಾಯಂಕಾಲ 5.00 ಗಂಟೆಗೆ. 5) ಆರ್ಥಿಕ ಬಿಡ್ ತೆರೆಯುವ ದಿನಾಂಕ: 11.06.2021 ಬೆಳಿಗ್ಗೆ 11.00 ಗಂಟೆಗೆ.
ಎಲ್ಲಾ ಬಿಡ್‌ಗಳ ಟೆಂಡರ್‌ಗಳನ್ನು ಈ ಕೆಳಗೆಸಹಿಮಾಡಿದವರ ಕಚೇರಿಯಲ್ಲಿ ತೆರೆಯಲಾಗುವುದು. ಹೆಚ್ಚಿನ ಮಾಹಿತಿಯನ್ನು ಅಂತರ್ಜಾಲ ವಿಳಾಸ http://www.eproc.karnataka.gov.in ದಲ್ಲಿ ಅಥವಾ ಈ ಕೆಳಗೆ ಸಹಿದಾರರ ಕಚೇರಿಯಲ್ಲಿ ಕಚೇರಿ ವೇಳೆಯಲ್ಲಿ ಪಡೆಯಬಹುದು.
ಸಹಿ/- ಕಾರ್ಯಪಾಲಕ ಅಭಿಯಂತರರು,
ವಾ.ಸಾ.ಸಂ.ಇ/ರಾಯಚೂರು/73/ಎಂ.ಸಿ.&ಎ/2021-22 ಕೃಭಾಜನಿನಿ, ನಾಬದಂಕಾ ವಿಭಾಗ-05 ರೋಡಲಬಂಡಾ.

				261	ತರಿ	ಖಾಸಗಿ	43.30
				262	ತರಿ	ಖಾಸಗಿ	56.50
				264	ತರಿ	ಖಾಸಗಿ	467.40
				266	ತರಿ	ಖಾಸಗಿ	85.70
				267	ತರಿ	ಖಾಸಗಿ	55.60
				268	ತರಿ	ಖಾಸಗಿ	269.50
				282	ತರಿ	ಖಾಸಗಿ	639.80
				284	ತರಿ	ಖಾಸಗಿ	258.90
				285	ತರಿ	ಖಾಸಗಿ	498.30
				286	ತರಿ	ಖಾಸಗಿ	695.30
				287	ತರಿ	ಖಾಸಗಿ	14.30
				289	ತರಿ	ಖಾಸಗಿ	18.80
				290	ತರಿ	ಖಾಸಗಿ	360.30
				302	ತರಿ	ಖಾಸಗಿ	295.40
				303	ತರಿ	ಖಾಸಗಿ	503.80
				305	ತರಿ	ಖಾಸಗಿ	637.70
				311	ತರಿ	ಖಾಸಗಿ	50.40
				312	ತರಿ	ಖಾಸಗಿ	779.30
				315	ತರಿ	ಖಾಸಗಿ	612.80
				332	ತರಿ	ಖಾಸಗಿ	551.40
			ಒಟ್ಟು				8389.90
26	ಬೆಳಗಾವಿ	ನಿಪ್ಪಾಣಿ	ತವಂದಿ	10	ತರಿ	ಖಾಸಗಿ	6325.70
				17	ತರಿ	ಖಾಸಗಿ	342.50
				18	ತರಿ	ಖಾಸಗಿ	541.60
				19	ತರಿ	ಖಾಸಗಿ	463.60
				23	ತರಿ	ಖಾಸಗಿ	274.50
				24	ತರಿ	ಖಾಸಗಿ	987.50
				25	ತರಿ	ಖಾಸಗಿ	835.60
				26	ತರಿ	ಖಾಸಗಿ	846.70
				31	ತರಿ	ಖಾಸಗಿ	260.10
				7	ತರಿ	ಖಾಸಗಿ	4229.30
				8	ತರಿ	ಖಾಸಗಿ	16646.50
				9	ತರಿ	ಖಾಸಗಿ	23082.20
			ಒಟ್ಟು				54835.80
27	ಬೆಳಗಾವಿ	ನಿಪ್ಪಾಣಿ	ಯರ್ನಾಳ	18	ತರಿ	ಖಾಸಗಿ	698.90
				19	ತರಿ	ಖಾಸಗಿ	170.80
				191	ತರಿ	ಸರಕಾರಿ	30808.50
				20	ತರಿ	ಖಾಸಗಿ	1231.20
				21	ತರಿ	ಖಾಸಗಿ	124.00
				22	ತರಿ	ಖಾಸಗಿ	125.40
				23	ತರಿ	ಖಾಸಗಿ	657.10
				24	ತರಿ	ಖಾಸಗಿ	122.50
				25	ತರಿ	ಖಾಸಗಿ	192.30
				29	ತರಿ	ಖಾಸಗಿ	623.90
				30	ತರಿ	ಖಾಸಗಿ	221.60
				31	ತರಿ	ಖಾಸಗಿ	82.80
				33	ತರಿ	ಖಾಸಗಿ	368.90
			ಒಟ್ಟು				35427.90
			ಒಟ್ಟು ಮೊತ್ತ				464246.5

[F. No. NHAI/PIU-DWD/3a/6-laning Belgaum Maharashtra Border/3A]
RAJESH GUPTA, Director

ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ
ಸರ್ ಸಿದ್ದಪ್ಪ ಕಂಬಳಿ ರಸ್ತೆ ದೂರವಾಣಿ : 2213898, 2213888 website : www.hdmc.gov.in
ಕಾರ್ಯನಿರ್ವಾಹಕ ಅಭಿಯಂತರರು (ಧಾರವಾಡ)
ಪತ್ರ ಸಂಖ್ಯೆ ನಂ. ಎಚ್‌ಡಿಎಮ್‌ಸಿ/67/07/2020-21 ದಿನಾಂಕ : 03-06-2021
ಇ-ಟೆಂಡರ ಅಧಿಸೂಚನೆ
ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದೇಶ 1999-2000ರ ಪ್ರಕಾರ ಆ್ಯಕ್ಟ್ 2000 ನಿಯಮದಂತೆ ಸ್ಟ್ಯಾಂಡರ್ಡ ಬಿಡ್ ಡಾಕ್ಯುಮೆಂಟ್ ನಿಯಮದನ್ವಯ PWD/HDMC/ಇತರೇ ಸರ್ಕಾರಿ ಇಲಾಖೆಯಲ್ಲಿ ನೊಂದಾಯಿತರಾದ 1ನೇ ದರ್ಜೆ ಗುತ್ತಿಗೆದಾರರು ಇ-ಪ್ರೋಕ್ಯೂರಮೆಂಟ ಪೋರ್ಟಲ್ ಮುಖಾಂತರ ಪಾಲಿಕೆ ಅನುದಾನದ ಅಡಿಯಲ್ಲಿ ಮಂಜೂರಾದ ಈ ಕೆಳಕಂಡ ಅಭಿವೃದ್ಧಿ ಕಾಮಗಾರಿಗಳನ್ನು ನಿರ್ವಹಿಸಲು ಐಟಂವಾರು ಟೆಂಡರಗಳನ್ನು ಆಹ್ವಾನಿಸಲಾಗಿದೆ. ಕಾಮಗಾರಿಗಳಿಗೆ ದ್ವಿ ಲಕೋಟೆ ಪದ್ಧತಿ (Two Covers System) KW-4ರ ನಿಬಂಧನೆಗಳೊಂದಿಗೆ ಇ-ಪ್ರೋಕ್ಯೂರಮೆಂಟ್ ಮೂಲಕ ಅಹ್ವಾನಿಸಲಾಗಿದೆ. ಒಂದು ವೇಳೆ ತಾಂತ್ರಿಕ ಕಾರಣಗಳಿಂದ ಸದರಿ ಟೆಂಡರಿನಲ್ಲಿ ಯಾವುದಾದರೂ ಬದಲಾವಣೆಯಾದಲ್ಲಿ, ಸದರಿ ಬದಲಾವಣೆಯ ವಿವರಗಳನ್ನು ಇ-ಪ್ರೋಕ್ಯೂರಮೆಂಟನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಅ. ನಂ.	ಕೆಲಸದ ಹೆಸರು	ಇಂಡೆಂಟ್ ನಂಬರ್	ಅಂದಾಜು ಪತ್ರಿಕೆ ಮೊತ್ತ (ರೂ. ಲಕ್ಷಗಳಲ್ಲಿ)	ಕೆಲಸದ ಅವಧಿ	ಅರ್ಹ ಗುತ್ತಿಗೆದಾರರ ದರ್ಜೆ
1	ಧಾರವಾಡ ನಗರದ ವಾ.ನಂ 01, 02, 13ರಲ್ಲಿ ಬರುವ ಕೆಲಗೇರಿ ಮುಖ್ಯ ರಸ್ತೆಯ ದಾಸಕೊಪ್ಪ ವೃತ್ತದಿಂದ ಗೋವಾ ಹೆದ್ದಾರಿಯವರೆಗಿನ ರಸ್ತೆ ಮತ್ತು ಮಳೆ ನೀರು ತೆರೆದ ಚರಂಡಿ ಕಾಮಗಾರಿ	115000	500.00	6 ತಿಂಗಳು	1ನೇ ದರ್ಜೆ
2	ಧಾ.ವಿ.ವಾ.ನಂ17 ರಲ್ಲಿ ಸಿ.ಬಿ.ನಗರದಲ್ಲಿ ತೆರೆದ ಚರಂಡಿ ನಿರ್ಮಾಣ ಕಾಮಗಾರಿಯನ್ನು ಕೈಗೊಳ್ಳುವುದು.	115691	247.52	6 ತಿಂಗಳು	1ನೇ ದರ್ಜೆ
3	ಧಾ.ವಿ.ವಾ.ನಂ. 02 ಸಾದನಕೇರಿ ಹಾಗೂ ನಾರಾಯಣಪೂರ ಬಾಕಿ ಉಳಿದ ರಸ್ತೆಗಳನ್ನು ರಸ್ತೆ ಸುಧಾರಣೆ ಮಾಡುವುದು.	116929	375.00	6 ತಿಂಗಳು	1ನೇ ದರ್ಜೆ
4	ಧಾ.ವಿ.ವಾ.ನಂ. 17 ಸಿ.ಬಿ ನಗರದಲ್ಲಿ ಕಾಂಕ್ರೀಟ ರಸ್ತೆ ಕಾಮಗಾರಿಯನ್ನು ಕೈಗೊಳ್ಳುವುದು	115690	224.80	6 ತಿಂಗಳು	1ನೇ ದರ್ಜೆ
5	ಧಾ.ವಿ.ವಾ.ನಂ. 13 ಸಪ್ತಾಪೂರ ಬಾವಿಯಿಂದ ಸ್ಪಂದನಾ ಆಸ್ಪತ್ರೆ ಹಾಗೂ ರಾಣಿಚನ್ನಮ್ಮಾನಗರ ಸರ್ಕಾರಿ ಶಾಲೆಗೆ ಕೊಡುವ ರಸ್ತೆಯನ್ನು ಕಾಂಕ್ರೀಟ್ ರಸ್ತೆ ಅಭಿವೃದ್ಧಿಪಡಿಸುವುದು.	116790	150.00	3 ತಿಂಗಳು	1ನೇ ದರ್ಜೆ

1) ಟೆಂಡರ ಫಾರ್ಮನ ಬೆಲೆ ಇ-ಪ್ರೋಕ್ಯೂರಮೆಂಟ್‌ನಲ್ಲಿ ನಮೂದಿಸಿದಂತೆ ಇರುತ್ತದೆ. ಹೆಚ್ಚಿನ ಮಾಹಿತಿ ಕುರಿತು ಗುತ್ತಿಗೆದಾರರು ಕಾರ್ಯನಿರ್ವಾಹಕ ಅಭಿಯಂತರರು (ಧಾರವಾಡ) ಇವರ ಕಚೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ. ಟೆಂಡರ ದಾಖಲೆಗಳನ್ನು ಕರ್ನಾಟಕ ಸರಕಾರದ ಅಂತರ್ ಜಾಲ ಇ-ಪ್ರೋಕ್ಯೂರಮೆಂಟ್ ಮೂಲಕ ವೆಬ್ ಸೈಟ್ ವಿಳಾಸ http://www.eproc.karnataka.gov.in ರಲ್ಲಿ ದಿನಾಂಕ : 05-06-2021 ರಿಂದ ಪಡೆಯಬಹುದಾಗಿದೆ.
ಕ್ರಸಂ 1 ರಿಂದ 4ರ ವರೆಗಿನ ಕಾಮಗಾರಿಗಳ ಕುರಿತು. (1) ಸಂಭಾವ್ಯ ಬಿಡ್‌ದಾರರ ಪೂರ್ವಭಾವಿ ಸಭೆಯ ದಿನಾಂಕ : 21-06-2021 ರಂದು ಮು. 11.30 ಘಂಟೆ. (2) ಟೆಂಡರ ಸ್ವೀಕರಿಸುವ ಕೊನೆಯ ದಿನಾಂಕ : 03-07-2021 ರಂದು ಸಾ: 4.00 ಘಂಟೆ. (3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 05-07-2021 ರಂದು ಸಾ: 04.30 ಘಂಟೆ. (4) ಆರ್ಥಿಕ ಬಿಡ್ ತೆರೆಯುವ ದಿನಾಂಕ : 12-07-2021 ಸಾ: 04.30 ಘಂಟೆಗೆ ತೆರೆಯಲಾಗುವುದು.
ಕ್ರಸಂ 05 ರ ಕಾಮಗಾರಿ ಕುರಿತು. (1) ಟೆಂಡರ ಸ್ವೀಕರಿಸುವ ಕೊನೆಯ ದಿನಾಂಕ : 21-06-2021 ರಂದು ಸಾ: 4.00 ಘಂಟೆ. (2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 22-06-2021 ರಂದು ಸಾ: 04.30 ಘಂಟೆ. (3) ಆರ್ಥಿಕ ಬಿಡ್ ತೆರೆಯುವ ದಿನಾಂಕ : 28-06-2021 ಸಾ: 04.30 ಘಂಟೆಗೆ ತೆರೆಯಲಾಗುವುದು.
ಸಹಿ/- ಕಾರ್ಯನಿರ್ವಾಹಕ ಅಭಿಯಂತರರು (ಧಾರವಾಡ),
ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ, ಧಾರವಾಡ.
ವಾಸಾಸಂಇ/ಧಾ/ಎಂಸಿಎ/151/2021-22

‘ತ್ರಿದೇವಿ’ಗಾಗಿ ಕಳರಿಪಯಟ್ಟು ಕಲಿತ ಶುಭಾ ಪೂಂಜಾ

ಗ್ಲಾಮರಸ್, ಬಬ್ಲಿ ಬಬ್ಲಿ ಪಾತ್ರಗಳಿಂದಷ್ಟೇ ಗುರುತಿಸಿಕೊಂಡಿದ್ದ ನಟಿ ಶುಭಾ ಪೂಂಜಾ, ಬಿಗ್‌ಬಾಸ್ ಪಯಣದ ಬಳಿಕ ಬದಲಾಗಿದ್ದಾರೆ. ಪಾತ್ರಗಳ ಆಯ್ಕೆಯಲ್ಲಿ ಎಡವಿದ್ದೇನೆ ಎನ್ನುವ ಶುಭಾ, ಮುಂದಿನ ಸಿನಿಮಾ ಪಯಣದಲ್ಲಿ ಹೆಚ್ಚು ಕೌಟುಂಬಿಕ ಚಿತ್ರಗಳಲ್ಲಿ ಹಾಗೂ ವಿಭಿನ್ನ ಪಾತ್ರಗಳಲ್ಲಿ ನಟಿಸುತ್ತೇನೆ ಎಂದಿದ್ದಾರೆ. ತೆರೆ ಮೇಲೆ ಬರಲು ಸಜ್ಜಾಗಿರುವ ಅವರ ಮುಂದಿನ ಚಿತ್ರ ‘ತ್ರಿದೇವಿ’ಗಾಗಿ ಕಳರಿಪಯಟ್ಟು ಕಲಿತ ಅನುಭವವನ್ನು ‘ಸಿನಿಮಾ ಪುರವಣಿ’ ಜೊತೆಗೆ ಹಂಚಿಕೊಂಡಿದ್ದಾರೆ.

ಶುಭಾ ಪೂಂಜಾ

ಅಭಿಲಾಷ್ ಪಿ.ಎಸ್.

ಸಂದರ್ಶನ

• ಬಿಗ್‌ಬಾಸ್ ಗುಂಗಿನಿಂದ ಹೊರಬಂದಿದ್ದೀರಾ? ಹೇಗಿತ್ತು ಆ ಪಯಣ?

ಆ ಗುಂಗಿನಿಂದ ಹೊರಬರಲು ಸಾಧ್ಯವೇ ಇಲ್ಲ. ಅದೊಂದು ಅದ್ಭುತವಾದ ಪಯಣ. ಮನೆ ಒಳಗೆ ಪ್ರವೇಶಿಸುವ ಮೊದಲು ಭಯವಿತ್ತು. ಅದೆಲ್ಲ ಮಾಯವಾಗಿ, 72 ದಿನ ಕಳೆದ ಬಗೆ ಅವಿಸ್ಮರಣೀಯ. ನನ್ನ ಇಲ್ಲಿಯವರೆಗಿನ ಸಿನಿಮಾ ಪಯಣ, ವೈಯಕ್ತಿಕ ಜೀವನದಲ್ಲಿ ಇಂತಹ ಅನುಭವ ಬೇಕಾಗಿತ್ತು. ಮನೆಯೊಳಗೆ ಸಂತೋಷವಾಗಿದ್ದುಕೊಂಡು ಹಲವು ವಿಷಯಗಳನ್ನು ಕಲಿತೆ. ಎಲ್ಲರ ಜೊತೆಯೂ ಹೊಂದಾಣಿಕೆ ಇತ್ತು, ಯಾರೊಂದಿಗೂ ಭಿನ್ನಾಭಿಪ್ರಾಯ ಇರಲಿಲ್ಲ. ಇನ್ನೇನು ಮೂರೇ ವಾರ ಇರುವಾಗ ಈ ಪಯಣ ನಿಂತದಕ್ಕೆ ಬೇಸರವಾಯಿತು. ಆದರೆ, ಮನೆಯಿಂದ ಹೊರಬಂದ ಬಳಿಕ ಹೊರಗಿನ ಪರಿಸ್ಥಿತಿಯನ್ನು ನೋಡಿ, ಖಂಡಿತವಾಗಿಯೂ ಸೂಕ್ತ ನಿರ್ಧಾರ ತೆಗೆದುಕೊಂಡಿದ್ದಾರೆ ಎಂದೆನಿಸಿತು. ನಾವೆಲ್ಲರೂ ವಿಜೇತರಾಗಿ ಹೊರಬಂದೆವು. ನಾನು ಈ ಪಯಣವನ್ನು ಸಕಾರಾತ್ಮಕವಾಗಿಯೇ ತೆಗೆದುಕೊಂಡಿದ್ದೇನೆ.

• ಬಿಗ್‌ಬಾಸ್ ಶುಭಾ ಪೂಂಜಾ ಅವರ ಜೀವನ ಬದಲಾಯಿಸಿದ್ಯಾ?

ಖಂಡಿತವಾಗಿಯೂ. ಈ ಹಿಂದಿನ ಎಲ್ಲ ಬಿಗ್‌ಬಾಸ್ ಆವೃತ್ತಿಗೂ ನನ್ನನ್ನು ಸ್ಪರ್ಧಿಯಾಗಿ ಆಹ್ವಾನಿಸಿದ್ದರು. ಆ ಸಂದರ್ಭದಲ್ಲಿ ನನ್ನ ಮನಃಸ್ಥಿತಿ ಸಿದ್ಧವಾಗಿರಲಿಲ್ಲ. ಮನೆಯೊಳಗೆ ಪ್ರವೇಶಿಸಲು ಸಂಪೂರ್ಣವಾಗಿ ಸಿದ್ಧತೆ ಇರಬೇಕು. ಈ ಬಾರಿ ನಾನು ಸಂಪೂರ್ಣ ತಯಾರಾಗಿದ್ದೆ. ಜೊತೆಗೆ ನನ್ನ ಪತಿಯೂ ನನಗೆ ಹೆಚ್ಚಿನ ಆತ್ಮವಿಶ್ವಾಸ ತುಂಬಿದರು. ಒಂದು ಸಿನಿಮಾ ಚಿತ್ರೀಕರಣವನ್ನೂ ಪೂರ್ಣಗೊಳಿಸಿದ್ದೆ. ಹೀಗಾಗಿ ಒಪ್ಪಿಕೊಂಡೆ. ಬಿಗ್‌ಬಾಸ್ ಮನೆ ಏನೆಲ್ಲ ಹೇಳಿಕೊಡುತ್ತದೆ ಎನ್ನುವುದನ್ನು ಶಬ್ದಗಳಲ್ಲಿ ವಿವರಿಸಲು ಸಾಧ್ಯವಿಲ್ಲ. ಟೂತ್‌ಬ್ರೆಷ್‌ನಿಂದ ಹಿಡಿದು ಬೆಡ್‌ಶೀಟ್‌ನ ಮೌಲ್ಯವನ್ನೂ ಆ ಮನೆ ಕಲಿಸುತ್ತದೆ. ಜೀವನವನ್ನು ಹೇಗಾದರೂ ನಡೆಸಬಹುದು, ಎಷ್ಟೇ ಅನಾಮಿಕರ ಜೊತೆಗೂ ಬದುಕಬಹುದು ಎನ್ನುವ ವಿಶ್ವಾಸ ಬರುತ್ತದೆ.

• ‘ತ್ರಿದೇವಿ’ಯಲ್ಲಿ ನಿಮ್ಮ ಪಾತ್ರದ ಬಗ್ಗೆ ಹೇಳಿ... ಕಳರಿಪಯಟ್ಟು ಕಲಿತ ಅನುಭವ ಹೇಗಿತ್ತು?

ನಾನು ಯಾವತ್ತೂ ಸಾಹಸ ದೃಶ್ಯಗಳಲ್ಲಿ ಕಾಣಿಸಿಕೊಂಡಿರಲಿಲ್ಲ. ಎಲ್ಲವೂ ಗ್ಲ್ಯಾಮರಸ್ ಹಾಗೂ ಬಬ್ಲಿಬಬ್ಲಿಯಾದ ಪಾತ್ರಗಳೇ ಆಗಿದ್ದವು. ಹೀಗಾಗಿ ಕಳರಿಪಯಟ್ಟು ಕಲಿಯುವುದು ಬಹಳ ಸವಾಲಾಗಿತ್ತು. ಸಿನಿಮಾದಲ್ಲಿನ ನನ್ನ ಪಾತ್ರ ಕಳರಿಪಯಟ್ಟು ಕಲಿತ ಹೆಣ್ಣಿನ ಪಾತ್ರವಾಗಿದೆ. ತ್ರಿದೇವಿಯಲ್ಲಿ ನಟಿಯ ಪಾತ್ರ ಮಾಡುತ್ತಿದ್ದೇನೆ. ಈ ನಟಿಯ ಮುಂದಿನ ಸಿನಿಮಾ ಆ್ಯಕ್ಷನ್ ಸಿನಿಮಾ ಆಗಿರುತ್ತದೆ. ಹೀಗಾಗಿ ಕಳರಿಪಯಟ್ಟು ಕಲಿಯುತ್ತಾಳೆ. ಸಾಹಸ ದೃಶ್ಯಗಳ ಚಿತ್ರೀಕರಣದ ವೇಳೆ ನನ್ನ ಸಾಹಸ ನೈಜವಾಗಿ ಕಾಣಬೇಕಿತ್ತು. ಹೀಗಾಗಿ ಚಿತ್ರೀಕರಣ ಆರಂಭವಾಗುವ ಮುಂಚೆ ಒಂದು ತಿಂಗಳು ಕಳರಿಪಯಟ್ಟು ತರಬೇತಿ ಪಡೆದಿದ್ದೆ. ಕೇರಳದಿಂದ ಮೋತಿ ಎನ್ನುವ ಕಳರಿಪಯಟ್ಟು ಗುರುಗಳು ಬಂದು ವಯನಾಡ್ ಹಾಗೂ ಮಡಿಕೇರಿಯ ಸೋಮವಾರಪೇಟೆಯಲ್ಲಿ ತರಬೇತಿ ನೀಡಿದ್ದರು.

• ಪಾತ್ರಗಳ ಆಯ್ಕೆಯಲ್ಲಿ ಶುಭಾ ಪೂಂಜಾ ಎಡವಿದ್ದರೇ?

ಹೌದು, ಇದನ್ನು ಒಪ್ಪಿಕೊಳ್ಳುತ್ತೇನೆ. ಒಂದೇ ರೀತಿಯ ಪಾತ್ರಗಳನ್ನು ತುಂಬಾ ಮಾಡುತ್ತಾ ಬಂದಿದ್ದೇನೆ. ನನಗೂ ಇದರಿಂದ ಬೇಸರವಾಗಿತ್ತು. ಒಂದು ಗ್ಲ್ಯಾಮರಸ್ ಪಾತ್ರ ಮಾಡಿದ ಬಳಿಕ ಅದೇ ರೀತಿ ಪಾತ್ರಗಳ ಆಫರ್ ಬಂದು ಒಂದು ರೀತಿಯಲ್ಲಿ ನಾನು ಎಡವಿದ್ದೇನೆ. ಈ ಹಿಂದೆ ಇಂತಹ ಪಾತ್ರ ಮಾಡಿದ್ದೇನೆ, ಇದೇ ರೀತಿಯ ಪಾತ್ರ ಮುಂದೆ ಮಾಡುವುದಿಲ್ಲ, ಬೇರೆ ಮಾಡುತ್ತೇನೆ ಎನ್ನಬಹುದಿತ್ತು. ಆದರೆ ನಾನು ಈ ರೀತಿ ಹೇಳದೇ ಇದ್ದಿದ್ದು ತಪ್ಪಾಯಿತು ಎನ್ನಿಸಿದೆ. ಈ ತಪ್ಪನ್ನು ಮುಂದೆ ಮಾಡುವುದಿಲ್ಲ.

• ಮುಂದಿನ ಸಿನಿಮಾ ಪಯಣ ಯಾವ ರೀತಿ ಇರಲಿದೆ?

ನನ್ನ ಮುಂದಿನ ಸಿನಿಮಾ ಆಯ್ಕೆಗಳು ವಿಭಿನ್ನವಾಗಿರುತ್ತದೆ ಹಾಗೂ ಮಹಿಳಾ ಪ್ರಧಾನ ಸಿನಿಮಾಗಳನ್ನು ಮಾಡಬೇಕು ಎನ್ನುವ ನಿರ್ಧಾರ ಬಿಗ್‌ಬಾಸ್ ಮನೆ ಪ್ರವೇಶಿಸುವ ಮೊದಲೇ ಮಾಡಿದ್ದೆ. ಮುಂದಿನ ಸಿನಿಮಾ ಪಯಣದಲ್ಲಿ ವಿಭಿನ್ನ ಪಾತ್ರಗಳನ್ನು ಮಾಡುತ್ತೇನೆ. ಕೌಟುಂಬಿಕ ಚಿತ್ರಗಳಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುವ ಆಸೆ ನನಗಿದೆ. ಬಿಗ್‌ಬಾಸ್‌ಗೆ ಹೋಗುವ ಮೊದಲೇ ಒಪ್ಪಿಕೊಂಡ ಎರಡು ಸಿನಿಮಾಗಳು ಇವೆ. ‘ಅಂಬುಜಾ’ ಹಾಗೂ ‘ತ್ರಿದೇವಿ’ ತಂಡವೇ ನಿರ್ಮಿಸುತ್ತಿರುವ ಮತ್ತೊಂದು ಸಿನಿಮಾದಲ್ಲಿ ನಟಿಸಲಿದ್ದೇನೆ. ಹೊಸ ಆಫರ್‌ಗಳು ಇನ್ನೂ ಬಂದಿಲ್ಲ.

‘ತ್ರಿದೇವಿ’ ಚಿತ್ರದಲ್ಲಿ ಶುಭಾ

ಪಂಚ ಭಾಷೆಗಳಲ್ಲಿ 777 ಚಾರ್ಲಿ

ಸಿನಿ ಸಂಕ್ಷಿಪ್ತ

ನಟ ರಕ್ಷಿತ್ ಶೆಟ್ಟಿ ಅಭಿನಯದ ‘777 ಚಾರ್ಲಿ’ ಚಿತ್ರವು ಕನ್ನಡ, ತೆಲುಗು, ತಮಿಳು, ಮಲಯಾಳಂ ಹಾಗೂ ಹಿಂದಿ ಭಾಷೆಯಲ್ಲಿ ತೆರೆ ಮೇಲೆ ಬರಲಿದ್ದು, ಚಿತ್ರದ ಅಧಿಕೃತ ಟೀಸರ್ ‘ಲೈಫ್ ಆಫ್ ಚಾರ್ಲಿ’ ಜೂನ್ 6ರಂದು ಬಿಡುಗಡೆಯಾಗಲಿದೆ.

ರಕ್ಷಿತ್ ಶೆಟ್ಟಿ ಅವರ ಜನ್ಮದಿನದಂದೇ ಟೀಸರ್ ಬಿಡುಗಡೆಯಾಗುತ್ತಿದೆ. ಮಲಯಾಳಂನಲ್ಲಿ ಖ್ಯಾತ ನಟ ಪೃಥ್ವಿರಾಜ್ ಅವರ ಪ್ರೊಡಕ್ಷನ್ ಸಂಸ್ಥೆಯು ಈ ಸಿನಿಮಾ ಬಿಡುಗಡೆ ಮಾಡುತ್ತಿದೆ. ಟೀಸರ್‌ನಲ್ಲಿ ಬರುವ ಹಾಡಿಗೆ ಖ್ಯಾತ ನಟ, ನಿರ್ದೇಶಕ, ಗಾಯಕ ವಿನೀತ್ ಶ್ರೀನಿವಾಸನ್ ಅವರು ಧ್ವನಿಯಾಗಿದ್ದಾರೆ. ಈ ಚಿತ್ರವನ್ನು ಕಿರಣ್ ರಾಜ್ ಕೆ. ನಿರ್ದೇಶಿಸಿದ್ದು, ಜಿ.ಎಸ್.ಗುಪ್ತ ಹಾಗೂ ರಕ್ಷಿತ್ ಶೆಟ್ಟಿ ಇದರ ನಿರ್ಮಾಪಕರಾಗಿದ್ದಾರೆ. ಸಂಗೀತಾ ಶೃಂಗೇರಿ ಚಿತ್ರದ ನಾಯಕಿ. ನಟ, ನಿರ್ದೇಶಕ ರಾಜ್ ಬಿ.ಶೆಟ್ಟಿ, ಡ್ಯಾನಿಶ್ ಸೇಟ್ ತಾರಾಗಣದಲ್ಲಿದ್ದಾರೆ.



‘ಸೆಪ್ಟೆಂಬರ್ ಮೊದಲ ವಾರದಲ್ಲಿ ಚಿತ್ರವನ್ನು ಬಿಡುಗಡೆಗೊಳಿಸಲಾಗುವುದು’ ಎಂದು ನಟ ರಕ್ಷಿತ್ ಶೆಟ್ಟಿ ಈ ಹಿಂದೆ ತಿಳಿಸಿದ್ದರು. ಆದರೆ ಲಾಕ್‌ಡೌನ್ ಕಾರಣದಿಂದಾಗಿ ಏಪ್ರಿಲ್, ಮೇ ತಿಂಗಳಲ್ಲಿ ತೆರೆಕಾಣಬೇಕಿದ್ದ ಬಿಗ್ ಬಜೆಟ್ ಸಿನಿಮಾಗಳ ಬಿಡುಗಡೆ ಮುಂದಕ್ಕೆ ಹೋಗಿವೆ. ಹೀಗಾಗಿ ‘777 ಚಾರ್ಲಿ’ ಸಿನಿಮಾದ ಬಿಡುಗಡೆಯೂ ಮುಂದಕ್ಕೆ ಹೋಗುವ ಸಾಧ್ಯತೆ ಇದೆ.

ಮೂರು ಕನಸು ಬಿಚ್ಚಿಟ್ಟ ‘ಕನ್ನಡಿಗ’ ರವಿಚಂದ್ರನ್

ಕನಸುಗಾರ, ಕ್ರೇಜಿಸ್ಟಾರ್ ರವಿಚಂದ್ರನ್ ತಮ್ಮ 60ನೇ ಜನ್ಮದಿನದ ಸಂದರ್ಭದಲ್ಲಿ, ಮೂರು ಹೊಸ ಸಿನಿಮಾಗಳ ಘೋಷಣೆಯನ್ನು ವಿಭಿನ್ನವಾಗಿ ಕನ್ನಡದ ಪ್ರೇಕ್ಷಕರ ಎದುರಿಗೆ ಇಟ್ಟಿದ್ದಾರೆ. ಇದು ತಮ್ಮ ಜನ್ಮದಿನದ ಕೊಡುಗೆ ಎಂದಿದ್ದಾರೆ.

ರವಿಚಂದ್ರನ್ ನಟನೆಯ ಬಿ.ಎಂ.ಗಿರಿರಾಜ್ ನಿರ್ದೇಶನದ ‘ಕನ್ನಡಿಗ’ ಚಿತ್ರದ ಟೀಸರ್ ಮೇ 30ರಂದು ಬಿಡುಗಡೆಯಾಗಿತ್ತು. ಇದರಲ್ಲಿ ಲಿಪಿಕಾರನ ಪಾತ್ರಕ್ಕೆ ಬಣ್ಣಹಚ್ಚಿರುವ ರವಿಚಂದ್ರನ್, ಗಿರಿಜಾ ಮೀಸೆ ಹಾಗೂ ಮುಂಡಾಸು ಧರಿಸಿ ವಿಭಿನ್ನ ಲುಕ್‌ನಲ್ಲಿ ಕಾಣಿಸಿಕೊಂಡಿದ್ದಾರೆ. ಅದೇ ದಿನದಂದು ತಮ್ಮ 1n1ly ಯೂಟ್ಯೂಬ್ ಚಾನೆಲ್ ಮುಖಾಂತರ ರವಿಚಂದ್ರನ್ ಹೊಸ ಸಿನಿಮಾಗಳ ಕನಸು ಬಿಚ್ಚಿಟ್ಟಿದ್ದಾರೆ. 8 ನಿಮಿಷಗಳ ಒಂದೇ ವಿಡಿಯೊದಲ್ಲಿ ‘ಗಾಡ್’, ‘6T’ ಹಾಗೂ ‘ಬ್ಯಾಡ್‌ಬಾಯ್ಸ್’ ಹೀಗೆ ಮೂರು ಚಿತ್ರಗಳ ಝಲಕ್ ನೀಡಿದ್ದಾರೆ. ಈಗಾಗಲೇ ‘ಕನ್ನಡಿಗ’ ಚಿತ್ರದಲ್ಲಿ ನಾಯಕಿಯಾಗಿ ನಟಿಸಿರುವ ಪಾವನಾ ಗೌಡ, ‘6T–ಲಿವಿಂಗ್ ವಿದ್ ದಿ ಪಾಸ್ಟ್’ ಚಿತ್ರದಲ್ಲೂ ಗ್ಲ್ಯಾಮರಸ್ ಪಾತ್ರಕ್ಕೆ ಬಣ್ಣಹಚ್ಚಿದ್ದಾರೆ. ‘ಬ್ಯಾಡ್‌ಬಾಯ್ಸ್’ ಚಿತ್ರದಲ್ಲಿ ರವಿಚಂದ್ರನ್ ಪುತ್ರರಾದ ಮನೋರಂಜನ್ ಹಾಗೂ ವಿಕ್ರಮ್ ಕೂಡಾ ಕಾಣಿಸಿಕೊಂಡಿದ್ದಾರೆ.



ನಟನೆ ಜೊತೆ ನಿರ್ದೇಶನದಲ್ಲೂ ಯಶಸ್ಸು ಕಂಡಿರುವ ರವಿಚಂದ್ರನ್, ಸದ್ಯ ‘ರವಿ ಬೋಪಣ್ಣ’ ಚಿತ್ರದಲ್ಲಿ ತೊಡಗಿಸಿಕೊಂಡಿದ್ದಾರೆ. ಈ ಚಿತ್ರದಲ್ಲಿ ನಟ ಸುದೀಪ್ ಕೂಡಾ ವಿಶೇಷ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಲಾಕ್‌ಡೌನ್ ಸಡಿಲಿಕೆಯಾಗಿ ಚಿತ್ರಮಂದಿರಗಳು ತೆರೆದರೆ, ‘ಕನ್ನಡಿಗ’ ಹಾಗೂ ‘ರವಿ ಬೋಪಣ್ಣ’ ಚಿತ್ರವು ಇದೇ ವರ್ಷ ತೆರೆ ಕಾಣುವ ಸಾಧ್ಯತೆ ಇದೆ.

ಕನ್ನಡದಲ್ಲಿ ‘ನೇತಾಜಿ’ ಧಾರಾವಾಹಿ

ಕಿರುತೆರೆ

ಲಾಕ್‌ಡೌನ್‌ನಿಂದಾಗಿ ಹಲವು ಧಾರಾವಾಹಿಗಳ ಚಿತ್ರೀಕರಣ ಸ್ತಬ್ಧವಾಗಿರುವ ಬೆನ್ನಲ್ಲೇ ಹೊಸ ಧಾರಾವಾಹಿಯೊಂದನ್ನು ಜೀ ಕನ್ನಡ ಪ್ರಾರಂಭ ಮಾಡುತ್ತಿದೆ. ಬಂಗಾಳಿ ಮೂಲದ ಧಾರಾವಾಹಿಯ ಕನ್ನಡದ ಅವತರಣಿಕೆ ‘ನೇತಾಜಿ ಸುಭಾಷ್ ಚಂದ್ರ ಬೋಸ್’ ಜೂನ್ 7ರಿಂದ ಪ್ರಸಾರವಾಗಲಿದೆ.

ಪ್ರತೀ ಸೋಮವಾರದಿಂದ ಶುಕ್ರವಾರದವರೆಗೆ ಸಂಜೆ 5ರಿಂದ 6 ಗಂಟೆಯವರೆಗೆ ಒಂದು ಗಂಟೆ ಕಾಲ ಪ್ರಸಾರವಾಗಲಿರುವ ಈ ಧಾರಾವಾಹಿ, ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ಸ್ವತಃ ಸೈನ್ಯವನ್ನು ಕಟ್ಟಿ ಬ್ರಿಟಿಷರ ವಿರುದ್ಧ ಹೋರಾಟ ನಡೆಸಿದ ಧೀರ ನಾಯಕನ ಐತಿಹಾಸಿಕ ಕಥೆಯನ್ನು ಬಿಂಬಿಸುತ್ತದೆ.

ನೇತಾಜಿ ಸುಭಾಷ್ ಚಂದ್ರ ಬೋಸ್ ಪೋಸ್ಟರ್

‘ಈ ಹಿಂದೆ ‘ಅಂಬೇಡ್ಕರ್’ ಧಾರಾವಾಹಿ ಮುಖಾಂತರ ಕನ್ನಡಿಗರ ಮನೆ ಮಾತಾಗಿದ್ದ ಜೀ ಕನ್ನಡ, ಇದೀಗ ಸುಭಾಷ್ ಚಂದ್ರ ಬೋಸ್ ಅವರ ಜೀವನಗಾಥೆಯನ್ನು ಇತಿಹಾಸವನ್ನು ಮರು ಕಟ್ಟಿಕೊಡಲಿದೆ. ಸ್ವಾತಂತ್ರ್ಯ ಹೋರಾಟದ ಸ್ಫೂರ್ತಿಯ ಕಿಚ್ಚು ತುಂಬುವ ಈ ಧಾರಾವಾಹಿಯನ್ನು ವೀಕ್ಷಕರು ಈ ಹಿಂದಿನ ಎಲ್ಲ ಧಾರಾವಾಹಿಗಳಂತೆಯೇ ಸ್ವೀಕರಿಸುತ್ತಾರೆ ಎಂಬ ಭರವಸೆಯನ್ನು ಹೊಂದಿದ್ದೇವೆ’ ಎಂದು ತಂಡವು ತಿಳಿಸಿದೆ.

ನೆಟ್‌ಫ್ಲಿಕ್ಸ್‌ನಲ್ಲಿ ‘ಜಗಮೇ ತಂಧಿರಮ್’

ಧನುಷ್

ಒಟಿಟಿ

ಕೋವಿಡ್ ಎರಡನೇ ಅಲೆಯ ಕಾರಣದಿಂದಾಗಿ ಬಹುತೇಕ ರಾಜ್ಯಗಳಲ್ಲಿ ಲಾಕ್‌ಡೌನ್ ಹೇರಲಾಗಿದ್ದು, ಸದ್ಯಕ್ಕೆ ಯಾವುದೇ ಚಿತ್ರಮಂದಿರಗಳು ತೆರೆಯುವ ಲಕ್ಷಣಗಳು ಕಾಣುತ್ತಿಲ್ಲ. ಹೀಗಾಗಿ ಚಿತ್ರಮಂದಿರದಲ್ಲೇ ಬಿಡುಗಡೆಯಾಗಬೇಕಿದ್ದ ಕಾಲಿವುಡ್ ನಟ ಧನುಷ್ ಅವರ ಬಹುನಿರೀಕ್ಷಿತ ‘ಜಗಮೇ ತಂಧಿರಮ್’ ಇದೀಗ ಒಟಿಟಿ ಮುಖಾಂತರ ಬಿಡುಗಡೆಯಾಗುತ್ತಿದೆ.

ಲಾಕ್‌ಡೌನ್ ಕಾರಣದಿಂದ ಈ ಚಿತ್ರದ ಬಿಡುಗಡೆಯನ್ನು ಮುಂದೂಡಲಾಗಿತ್ತು. ಕಾರ್ತಿಕ್ ಸುಬ್ಬರಾಜು ನಿರ್ದೇಶನದ ಈ ಸಿನಿಮಾ ಇದೀಗ ಜೂನ್ 18ರಂದು ನೆಟ್‌ಫ್ಲಿಕ್ಸ್‌ನಲ್ಲಿ ಸ್ಟ್ರೀಮ್ ಆಗಲಿದೆ. ಒಟಿಟಿಯಲ್ಲಿ ಧನುಷ್ ಸಿನಿಮಾ ಬಿಡುಗಡೆಯಾಗುತ್ತಿರುವುದು ಇದೇ ಮೊದಲಾಗಿದೆ. ಚೆನ್ನೈ ಮೂಲದ ವೈನಾಟ್ ಸ್ಟುಡಿಯೋಸ್ ಮತ್ತು ರಿಲಯನ್ಸ್ ಎಂಟರ್ಟೈನ್ಮೆಂಟ್ ಈ ಚಿತ್ರಕ್ಕೆ ಬಂಡವಾಳ ಹೂಡಿದೆ. ಖ್ಯಾತ ಇಂಗ್ಲಿಷ್ ಸರಣಿ ‘ಗೇಮ್ ಆಫ್ ಥ್ರೋನ್ಸ್’ನ ನಟ ಜೇಮ್ಸ್ ಕೋಸ್ಮೋ, ಖ್ಯಾತ ಮಲಯಾಳಂ ನಟ ಜೋಜಿ ಜಾರ್ಜ್, ಐಶ್ವರ್ಯ ಲಕ್ಷ್ಮಿ, ಕಲೈಅರಸನ್ ಶರತ್ ರವಿ ತಾರಾಗಣದಲ್ಲಿದ್ದಾರೆ.

‘ಈ ಸಿನಿಮಾವನ್ನು ಹಿಂದಿ, ತೆಲುಗು, ಕನ್ನಡಕ್ಕೂ ಡಬ್ ಮಾಡಿ ನೆಟ್‌ಫ್ಲಿಕ್ಸ್‌ನಲ್ಲಿ ಬಿಡುಗಡೆ ಮಾಡಲಿದ್ದೇವೆ. ಧನುಷ್ ತಮ್ಮ ಪಾತ್ರದ ಮೂಲಕ ವಿಭಿನ್ನವಾಗಿ ತೆರೆಮೇಲೆ ಕಾಣಿಸುತ್ತಾರೆ’ ಎನ್ನುತ್ತಾರೆ ನಿರ್ದೇಶಕ ಕಾರ್ತಿಕ್.

‘H/34 ಪಲ್ಲವಿ ಟಾಕೀಸ್’ ಒಟಿಟಿಯಲ್ಲೇ ತೆರೆಗೆ

ನಟ ತಿಲಕ್ ಅಭಿನಯದ ‘H/34 ಪಲ್ಲವಿ ಟಾಕೀಸ್’ ಚಿತ್ರವು ಜೂನ್ ಎರಡನೇ ವಾರದಲ್ಲಿ ಒಟಿಟಿ ವೇದಿಕೆ ಮುಖಾಂತರ ತೆರೆ ಕಾಣಲಿದ್ದು, ಚಿತ್ರದ ಹಾಡೊಂದನ್ನು ಆನಂದ್ ಆಡಿಯೊ ಮೂಲಕ ಬಿಡುಗಡೆ ಮಾಡಲಾಗಿದೆ.

ಶ್ರೀನಿವಾಸ್ ಚಿಕ್ಕಣ್ಣ (ಸೀನಿ) ಅವರು ಬರೆದ ಈ ‘ಬರೆವೆ ಬರೆವೆ ಒಲವ ಕವನ’ ಹಾಡನ್ನು ಬಾಲಿವುಡ್‌ನ ಖ್ಯಾತ ಗಾಯಕ ಅಂಕಿತ್ ತಿವಾರಿ ಹಾಡಿದ್ದು, ಖ್ಯಾತ ಸಂಗೀತ ನಿರ್ದೇಶಕ ಅಜನೀಶ್ ಲೋಕನಾಥ್ ಸಂಗೀತ ನೀಡಿದ್ದಾರೆ. ಕಾಲಭೈರವ ಆರ್ಟ್ಸ್ ಲಾಂಛನದಲ್ಲಿ ಮಂಜುನಾಥ್ ಕೆ. ಹಾಗೂ ರವಿಕಿರಣ್ ಎಂ. ಗೌಡ ನಿರ್ಮಿಸಿರುವ ಈ ಚಿತ್ರವನ್ನು ಶ್ರೀನಿವಾಸ್ ಚಿಕ್ಕಣ್ಣ ನಿರ್ದೇಶಿಸಿದ್ದಾರೆ.



ತಿಲಕ್ ಹಾಗೂ ಯಜ್ಞಾ ಶೆಟ್ಟಿ

ಈ ಹಿಂದೆ ‘6ನೇ ಮೈಲಿ’ ಚಿತ್ರವನ್ನು ನಿರ್ದೇಶಿಸಿದ್ದ, ಶ್ರೀನಿವಾಸ್ ಚಿಕ್ಕಣ್ಣ ಅವರಿಗೆ ಇದು ಎರಡನೇ ಚಿತ್ರ. ಹಾರರ್ ಹಾಗೂ ಸಸ್ಪೆನ್ಸ್ ಥ್ರಿಲ್ಲರ್ ಆಧಾರಿತ ಈ ಚಿತ್ರಕ್ಕೆ ನಿರ್ದೇಶಕರೇ ಕಥೆ, ಚಿತ್ರಕಥೆ, ಸಂಭಾಷಣೆ ಬರೆದಿದ್ದಾರೆ. ಮನೋಹರ್ ಜೋಶಿ ಛಾಯಾಗ್ರಹಣ ಹಾಗೂ ಅಕ್ಷಯ್ ಪಿ. ರಾವ್ ಸಂಕಲನ ಈ ಚಿತ್ರಕ್ಕಿದೆ. ತಿಲಕ್ ಅವರಿಗೆ ನಾಯಕಿಯಾಗಿ ಯಜ್ಞಾ ಶೆಟ್ಟಿ ಅಭಿನಯಿಸಿದ್ದಾರೆ.

‘ಲವ್ ಮಿ ಆರ್ ಹೇಟ್ ಮಿ’ ಶೀರ್ಷಿಕೆ ವಿವಾದ

ಚಂದನವನದಲ್ಲಿ ಚಿತ್ರದ ಶೀರ್ಷಿಕೆ ವಿವಾದ ಹೊಸದೇನಲ್ಲ. ಇದಕ್ಕೆ ಮತ್ತೊಂದು ಸೇರ್ಪಡೆ ಎಂಬಂತೆ ನಟ ಡಾರ್ಲಿಂಗ್ ಕೃಷ್ಣ ಹಾಗೂ ನಟಿ ರಚಿತಾ ರಾಮ್ ಮೊದಲ ಬಾರಿಗೆ ಜೊತೆಯಾಗಿ ನಟಿಸುತ್ತಿರುವ ಚಿತ್ರದ ‘ಲವ್ ಮಿ OR ಹೇಟ್ ಮಿ’ ಶೀರ್ಷಿಕೆಯೂ ಇದೀಗ ವಿವಾದಕ್ಕೆ ಕಾರಣವಾಗಿದೆ.

ದೀಪಕ್ ಗಂಗಾಧರ್ ನಿರ್ದೇಶನದ ‘ಲವ್ ಮಿ OR ಹೇಟ್ ಮಿ’ ಶೀರ್ಷಿಕೆ ಇತ್ತೀಚೆಗಷ್ಟೇ ಬಿಡುಗಡೆಯಾಗಿತ್ತು. ಇದರ ಬೆನ್ನಲ್ಲೇ ಈ ಶೀರ್ಷಿಕೆಯನ್ನು ನಾವು ನೋಂದಣಿ ಮಾಡಿಕೊಂಡಿದ್ದೇವೆ ಎಂದು ‘ಸೈಕೋ’ ಚಿತ್ರದ ನಿರ್ದೇಶಕ ವಿ.ದೇವದತ್ತ ಹೇಳಿದ್ದಾರೆ. ಕನ್ನಡ ಚಲನಚಿತ್ರ ವಾಣಿಜ್ಯ ಮಂಡಳಿ ದೇವದತ್ತ ಅವರು ಈ ಶೀರ್ಷಿಕೆಯನ್ನು 2020ರ ನ.30ರಂದು ನೋಂದಣಿ ಮಾಡಿಕೊಂಡಿದ್ದರು. ‘ಶ್ರೀ ವೆಂಕಟೇಶ್ವರ ಇಂಟರ್‌ನ್ಯಾಷನಲ್’ ಎಂಬ ಸಂಸ್ಥೆಯಡಿ ರವಿಕಿರಣ್ ಬಿ.ಕೆ. ಎಂಬ ನಿರ್ಮಾಪಕರ ನಿರ್ಮಾಣದಲ್ಲಿ ಈ ಚಲನಚಿತ್ರವನ್ನು ನಿರ್ದೇಶಿಸಲು ಅಣಿಯಾಗಿದ್ದೆ. ಚಿತ್ರೀಕರಣಕ್ಕೆ ಸಂಬಂಧಪಟ್ಟಂತೆ ತಯಾರಿಯಲ್ಲಿ ಇರುವಾಗ ಲಾಕ್‌ಡೌನ್ ಕಾರಣದಿಂದ ಚಿತ್ರೀಕರಣವನ್ನು ಮುಂದೂಡಬೇಕಾಯಿತು. ಈ ಚಿತ್ರದ ಚಿತ್ರೀಕರಣವನ್ನು ಪ್ರಾರಂಭಿಸುವ ಉದ್ದೇಶದಿಂದ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಿಂದ 2021 ಏ.1ರಂದು ಸೂಕ್ತ ಅನುಮತಿಯನ್ನು ಪಡೆದಿದ್ದೇವೆ. ಲಾಕ್‌ಡೌನ್ ಮುಗಿದ ಬಳಿಕ ಚಿತ್ರಕ್ಕೆ ಸಂಬಂಧಿಸಿದ ಚಟುವಟಿಕೆಯನ್ನು ಆರಂಭಿಸಲು ಹೊರಟಾಗ ಈ ಘಟನೆ ನಡೆದಿದೆ’ ಎಂದು ದೇವದತ್ತ ಹೇಳಿದರು.

ಶೀರ್ಷಿಕೆ ನೋಂದಣಿಗೆ ಬೇರೆ ಬೇರೆ ವಾಣಿಜ್ಯ ಮಂಡಳಿಗಳಲ್ಲಿ ಅವಕಾಶವಿರುವುದೇ ಈ ವಿವಾದಕ್ಕೆ ಕಾರಣವಾಗಿದೆ. ಕನ್ನಡ ಚಲನಚಿತ್ರ ವಾಣಿಜ್ಯ ಮಂಡಳಿ ಹಾಗೂ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಎಂಬ ಪ್ರಮುಖ ಎರಡು ಮಂಡಳಿಗಳಿವೆ. ಒಂದು ಮಂಡಳಿಯಲ್ಲಿ ನೋಂದಣಿಯಾದ ಶೀರ್ಷಿಕೆ ಮತ್ತೊಂದಕ್ಕೆ ಸಿಗಲು ಯಾವುದೇ ವ್ಯವಸ್ಥೆ ಇಲ್ಲ. ‘ಈ ಸಮಸ್ಯೆಯನ್ನು ಮೊದಲು ಬಗೆಹರಿಸಿಕೊಳ್ಳಬೇಕು. ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯೇ ಈ ಕುರಿತು ಸೂಕ್ತ ಕ್ರಮ ಕೈಗೊಳ್ಳಬೇಕು. ಸಿನಿಮಾ ಮಾಡಲು ಆಸಕ್ತಿ ಇದ್ದವರಷ್ಟೇ ವಾರ್ತಾ ಇಲಾಖೆಯಿಂದ ಅನುಮತಿ ಪಡೆಯುತ್ತಾರೆ. ಶೀರ್ಷಿಕೆ ಬದಲಾಯಿಸಲು ದೀಪಕ್ ಅವರು ಮನವಿಮಾಡಿದ್ದು, ಈಗಾಗಲೇ ಸಿನಿಮಾದ ಸಿದ್ಧತೆ ಹಾಗೂ ವಿಭಿನ್ನವಾಗಿ ಶೀರ್ಷಿಕೆಯನ್ನು ವಿನ್ಯಾಸಗೊಳಿಸಿ ಪ್ರಚಾರಕ್ಕೆ ಅಣಿಯಾಗಿರುವ ಕಾರಣ ಶೀರ್ಷಿಕೆ ಬದಲಾವಣೆ ಸಾಧ್ಯವಿಲ್ಲ ಎಂದು ತಿಳಿಸಿದ್ದೇನೆ ಎನ್ನುತ್ತಾರೆ ದೇವದತ್ತ.

ಕೋವಿಡ್ ಕಾಲಕ್ಷೇಪದ ಎರಡು ಮಾದರಿಗಳು

ವಿಶಾಖ ಎನ್.

ಕೋವಿಡ್ ವ್ಯಾಪಿಸಿದ ಮೇಲೆ ಜನಪ್ರಿಯ ಸಿನಿಮಾದವರೆಲ್ಲ ಮತ್ತೆ ಬರತಾದ ಕಾಲ ಎಂದು ಕಾಯುತ್ತಿದ್ದರೆ, ಮಲಯಾಳಂ ಚಿತ್ರರಂಗದಲ್ಲಿ ಈ ಕಾಲವನ್ನೇ ‘ಕಾಲಕ್ಷೇಪ’ವಾಗಿಸಿ ಚಿತ್ರಗಳನ್ನು ಮಾಡುವ ಉತ್ಕಟತೆ ಕಾಣುತ್ತಿದೆ. ‘ಜೋಜಿ’ ಹಾಗೂ ‘ಆರ್‌ಕರಿಯಾಮ್’ ಎರಡು ತಾಜಾ ಉದಾಹರಣೆಗಳು.

‘ಕುಂಬಳಂಗಿ ನೈಟ್ಸ್’ ತರಹದ ಕಾವ್ಯಾತ್ಮಕವಾದ ಮನುಷ್ಯಾನುಸಂಧಾನದ ಸಿನಿಮಾ ಕೊಟ್ಟ ನಿರ್ದೇಶಕ ದಿಲೀಶ್ ಪೋಥನ್, ಶೇಕ್ಸ್‌ಪಿಯರ್‌ನ ‘ಮೆಕ್‌ಬೆತ್’ನ ಆತ್ಮ ಎತ್ತಿಕೊಂಡು ‘ಜೋಜಿ’ ಕಟ್ಟಿದ್ದಾರೆ. ಮಕ್ಕಳನ್ನೆಲ್ಲ ಅಂಕೆಯಲ್ಲಿಟ್ಟುಕೊಂಡ ಕಟ್ಟುಮಸ್ತು ತಂದೆ ಹಾಸಿಗೆ ಹಿಡಿಯುತ್ತಾನೆ. ಅವನ ಅನಾರೋಗ್ಯದ ಕುದಿಯಲ್ಲೇ ತಮ್ಮ ಇಷ್ಟಾರ್ಥ ಸಿದ್ಧಿಗೆ ಹಪಹಪಿಸುವ ಮಕ್ಕಳು. ಅಯೋಗ್ಯ ಎನಿಸಿಕೊಂಡ, ಎಂಜಿನಿಯರಿಂಗ್ ಕಾಲೇಜ್ ಡ್ರಾಪ್‌ಔಟ್ ಆದ ಚಿಕ್ಕ ಮಗ ಇಂತಹ ಸಂದರ್ಭದಲ್ಲಿ ಪರಮಯೋಗ್ಯನಾಗಿ ಮೆದುಳನ್ನು ಓಡಿಸಿ ಕೃತ್ರಿಮವನ್ನು ಹೊಸೆಯುವ ಪರಿಯನ್ನು ದಿಲೀಶ್ ಎಂದಿನ ತಮ್ಮ ತಣ್ಣದನಿಯಲ್ಲಿ ಹೇಳಿದ್ದಾರೆ.

ಹತಾಶ ಆಧುನಿಕ ಮನಸ್ಸುಗಳು ಹಾಗೂ ಅಂಕೆಯಲ್ಲಿಡುವ ಲಾಗಾಯ್ತಿನ ಯಾಜಮಾನ್ಯ ಧೋರಣೆಯನ್ನು ನಿರ್ದೇಶಕರು ಮುಖಾಮುಖಿಯಾಗಿಸುವಲ್ಲಿ ನಿರುದ್ವೇಗದ ರೂಪಕಗಳನ್ನು ಸೃಜಿಸಿರುವುದು ನಾಟುತ್ತದೆ. ಪ್ರತಿನಾಯಕನ ಸಕಲೇಷ್ಟ ಭಾವಗಳನ್ನೂ, ಕ್ರೋಧವನ್ನೂ ಆವಿರ್ಭವಿಸಿಕೊಂಡಂತೆ ನಟ ಫಹಾದ್ ಫಾಸಿಲ್ ನಟಿಸಿದ್ದಾರೆ. ಅವರ ಕಣ್ಣುಗಳಲ್ಲಿ ಕಾಣುವ ಷಡ್ಯಂತ್ರದ ಜೇಡರಬಲೆ, ಅಸ್ಥಿರವಾದ ಆಂಗಿಕ ಚಲನೆಗಳು ನಿರ್ದೇಶಕರ ಸೂಕ್ಷ್ಮ ಕಟ್ಟುವಿಕೆಗೆ ಉದಾಹರಣೆಗಳು.

‘ಆರ್‌ಕರಿಯಾಮ್’ ಚಿತ್ರದಲ್ಲಿ ಬಿಜು ಮೆನನ್, ಶರಾಫುದ್ದೀನ್, ಪಾರ್ವತಿ

ಸನು ವರ್ಗೀಸ್ ಚೊಚ್ಚಲ ನಿರ್ದೇಶನದ ‘ಆರ್‌ಕರಿಯಾಮ್’ (ಯಾರಿಗ್ಗೊತ್ತು) ಸಮಾಜೋ–ರಾಜಕೀಯ ಗಟ್ಟಿತನದ ದೃಷ್ಟಿಯಲ್ಲಿ ‘ಜೋಜಿ’ಗಿಂತ ಮೇಲೇಳುತ್ತದೆ. ಮುಂಬೈನಲ್ಲಿ ನೆಲೆಸಿದ ಮಗಳು–ಅಳಿಯ. ಬೋರ್ಡಿಂಗ್ ಸ್ಕೂಲ್‌ನಲ್ಲಿ ಓದುತ್ತಿರುವ ಮೊಮ್ಮಗಳು. ವ್ಯವಹಾರದ ಆರ್ಥಿಕ ಸಂಕಷ್ಟಕ್ಕೆ ಅಳಿಯ ಸಿಲುಕಿದ ಹೊತ್ತಲ್ಲೇ ಕೋವಿಡ್ ಕಾರಣಕ್ಕೆ ಲಾಕ್‌ಡೌನ್ ಆಗುತ್ತದೆ. ಆಗ ಮಗಳು–ಅಳಿಯ ಕೇರಳದ ತವರಿಗೆ ಬರುತ್ತಾರೆ. ಅವರನ್ನು ಬರಮಾಡಿಕೊಳ್ಳುವ ಇಳಿವಯಸ್ಸಿನ ವ್ಯಕ್ತಿಯೇ ಕಥನದ ಕೇಂದ್ರ ಪಾತ್ರ. ಮೊಮ್ಮಗಳು ಬೋರ್ಡಿಂಗ್ ಶಾಲೆಯಲ್ಲೇ ಉಳಿಯುವ ಅನಿವಾರ್ಯ. ಅವಳನ್ನು ಕರೆತರಲು ಅಮ್ಮನ ಇನ್ನಿಲ್ಲದ ಯತ್ನ. ಹೀಗೆ ಸಹಜವಾಗಿ ಎಲ್ಲರೂ ನಿತ್ಯ ವ್ಯಾಪಾರದಲ್ಲಿ ತೊಡಗಿಕೊಂಡು, ತವರಿನಲ್ಲಿ ಲಾಕ್‌ಡೌನ್ ಕಾಲದ ಸುಖ ಉಣ್ಣಬಹುದು ಎಂದು ನಾವು ಭಾವಿಸುವ ಹೊತ್ತಿಗೇ ನಿರ್ದೇಶಕರು ಭಯಂಕರ ಟ್ವಿಸ್ಟ್ ಸೃಷ್ಟಿಸುತ್ತಾರೆ.

‘ಜೋಜಿ’ ಚಿತ್ರದಲ್ಲಿ ಫಹಾದ್ ಫಾಸಿಲ್

ಈ ಎಲ್ಲ ಪಾತ್ರಗಳಿಗೂ ಒಂದೊಂದು ಗುಟ್ಟಿದೆ. ಮಗಳ ಈ ಗಂಡ ಎರಡನೆಯವನು. ಮೊದಲ ಗಂಡ ಹತನಾಗಿದ್ದಾನೆ. ಅಳಿಯನ ಆರ್ಥಿಕ ಸಂಕಷ್ಟ ಕರಗಿಸಲು ಮುಂದಾಗುವ ಮಾವ ಆ ಹತಕಥನದ ಖಳ ತಾನೇ ಎಂದು ಹೇಳುವ ಮೂಲಕ ದೊಡ್ಡ ಗುಟ್ಟನ್ನು ರಟ್ಟು ಮಾಡುತ್ತಾನೆ. ಒಂದೆಡೆ ತನ್ನ ಕಷ್ಟ ಕರಗಿತು ಎಂದುಕೊಳ್ಳುವ ಅಳಿಯನ ಮನದಲ್ಲಿ ಇನ್ನೊಂದು ಪಾಪಪ್ರಜ್ಞೆಯ ಗುಂಗಿಹುಳು. ಅನುಮಾನ ಮಡುಗಟ್ಟಿಸುವ ಭಯ. ಹೀಗೆ ಸಹಜವಾಗಿ ವರ್ತಿಸುವ ಪಾತ್ರಗಳ ಒಳಗಿನ ಅಸಹಜ ಗುಟ್ಟುಗಳು ಹಾಗೂ ಆ ಸಿಕ್ಕುಗಳನ್ನು ಬಿಡಿಸಲು ಹೊರಟ ಹಾದಿಯಲ್ಲಿ ಇದಿರಾಗುವ ‘ಎಲ್ಲವೂ ದೈವೇಚ್ಛೆ’ ಎಂಬ ನಂಬಿಕೆಯ ಸಾಲು–ಸಿನಿಮಾದ ಮನೋವ್ಯಾಪಾರದ ಮೌಲ್ಯವನ್ನು ಹೆಚ್ಚಿಸಿದೆ. ಬಿಜು ಮೆನನ್, ಪಾರ್ವತಿ, ಶರಾಫುದ್ದೀನ್ ಮೂವರೂ ಪಾತ್ರಗಳ ಒಳತೋಟಿಗಳನ್ನು ದಾಟಿಸುವ ಪರಿಯೇ ಅನನ್ಯ. ಸಸ್ಪೆನ್ಸ್ ಥ್ರಿಲ್ಲರ್ ಅನ್ನು ಹೀಗೆ ಮುರಿದುಕಟ್ಟುವ, ದುರಿತಕಾಲದಲ್ಲಿ ಗತದ ಸಿಕ್ಕುಗಳನ್ನು ಬಿಡಿಸುತ್ತಾ ಕೂರುವ ಭಾವ ಸಂವೇದನೆ ಆಸಕ್ತಿಕರ.

ಯಾವ ಹೊತ್ತಿನಲ್ಲೂ ನಡೆಯಬಹುದಾದ ಈ ಚಿತ್ರಕತೆಗಳನ್ನು ಕೋವಿಡ್ ಸಂದರ್ಭಕ್ಕೆ ಒಗ್ಗಿಸಿ ಹೇಳಿರುವ ಕ್ರಮದಲ್ಲಿ ಇರುವ ಜಾಣ್ಮೆಗೆ ಶಹಬ್ಬಾಸ್ ಹೇಳಬೇಕು. ನಿರ್ದೇಶಕ ಸನು ಹಿಂದಿ ಚಿತ್ರಗಳಿಗೆ ಸಿನಿಮಾಟೊಗ್ರಾಫರ್ ಆಗಿ ಕೆಲಸ ಮಾಡಿದವರು. ‘ಬಧಾಯಿ ಹೋ’ ಚಿತ್ರದ ಸೂಕ್ಷ್ಮ ಸಂವೇದನಾ ಹಾಸ್ಯವನ್ನು ಕಂಡು ಅವರೂ ಸಾಕಷ್ಟು ಕಲಿತಿದ್ದಾರೆ.

ಕಾಲಕ್ಷೇಪವನ್ನು ಕೋವಿಡ್ ಕಾಲದಲ್ಲೂ ಸಿನಿಮಾದಲ್ಲಿ ಹೇಗೆ ಅಳವಡಿಸಬಹುದು ಎನ್ನುವುದಕ್ಕೆ ಇವೆರಡೂ ಚಿತ್ರಗಳು ಒಳ್ಳೆಯ ಉದಾಹರಣೆಗಳು.

ಸುಭಾಷಿತ

ನಿಮ್ಮೊಳಗೆ ಅನಂತವಾಗಿ ಹುದುಗಿರುವುದನ್ನು ಕಂಡುಕೊಳ್ಳುವ, ನಿಮ್ಮ ಅರ್ಹತೆ ಮತ್ತು ಗುರಿಯನ್ನು ನಿರ್ಣಯಿಸುವ ಏಕೈಕ ವ್ಯಕ್ತಿ ನೀವೇ ಆಗಿರಬೇಕು.

–ದೀಪಕ್ ಚೋಪ್ರಾ

ಸಂಕಷ್ಟದಲ್ಲಿರುವ ರೈತರ ಬೆಂಬಲಕ್ಕೆ ನಿಲ್ಲುವುದು ಸರ್ಕಾರದ ಆದ್ಯತೆಯಾಗಬೇಕು

ಕೋವಿಡ್ ಪ್ರಕರಣಗಳ ನಿಯಂತ್ರಣಕ್ಕಾಗಿ ರಾಜ್ಯದಲ್ಲಿ ಎರಡನೇ ಬಾರಿಗೆ ಲಾಕ್‌ಡೌನ್ ಜಾರಿಯಲ್ಲಿದೆ. 2020ರ ಮಾರ್ಚ್‌ನಲ್ಲಿ ಭಾರತದಲ್ಲಿ ಕೊರೊನಾ ವೈರಾಣು ಸೋಂಕಿನ ಪ್ರಕರಣಗಳು ಕಾಣಿಸಿಕೊಳ್ಳುತ್ತಿದ್ದಂತೆಯೇ ಲಾಕ್‌ಡೌನ್ ಘೋಷಿಸಲಾಗಿತ್ತು. ಆಗ ಸುದೀರ್ಘ ಅವಧಿಗೆ ನಿರ್ಬಂಧಗಳು ಜಾರಿಯಲ್ಲಿದ್ದವು. 2021ರಲ್ಲಿ ಕೋವಿಡ್ ಎರಡನೇ ಅಲೆ ವ್ಯಾಪಕವಾಗಿ, ಸಾವಿನ ಸಂಖ್ಯೆ ಹೆಚ್ಚುತ್ತಿದ್ದಂತೆಯೇ ದೇಶದ ವಿವಿಧ ರಾಜ್ಯಗಳಲ್ಲಿ ಲಾಕ್‌ಡೌನ್ ಘೋಷಿಸಲಾಗಿದೆ. ಕರ್ನಾಟಕದಲ್ಲೂ ಮೇ 10ರಿಂದ ಲಾಕ್‌ಡೌನ್ ಜಾರಿಯಲ್ಲಿದೆ. ಕೋವಿಡ್ ಸೋಂಕು ನಿಯಂತ್ರಣ ಮತ್ತು ಸಾವಿನ ಸಂಖ್ಯೆಯನ್ನು ತಗ್ಗಿಸುವ ದೃಷ್ಟಿಯಿಂದ ಲಾಕ್‌ಡೌನ್ ಕೊನೆಯ ಆಯ್ಕೆಯಾಗಿತ್ತು. ಲಾಕ್‌ಡೌನ್ ಜಾರಿಯಾದ ಬಳಿಕ ವಲಸೆ ಕಾರ್ಮಿಕರು, ಅಸಂಘಟಿತ ವಲಯದ ಕಾರ್ಮಿಕರು ಸೇರಿದಂತೆ ದೊಡ್ಡ ಜನಸಮೂಹ ಸಂಕಷ್ಟಕ್ಕೆ ಸಿಲುಕಿದೆ. ಕಳೆದ ವರ್ಷದ ಲಾಕ್‌ಡೌನ್ ವೇಳೆ ಆದಂತೆಯೇ ಈ ಬಾರಿಯೂ ರಾಜ್ಯದ ರೈತರು ತಾವು ಬೆಳೆದ ಬೆಳೆಗಳನ್ನು ಮಾರಲಾಗದೆ ಆರ್ಥಿಕ ಸಂಕಷ್ಟದ ಸುಳಿಗೆ ಸಿಲುಕಿದ್ದಾರೆ. ಕಠಿಣ ನಿರ್ಬಂಧಗಳ ಪರಿಣಾಮವಾಗಿ ರಾಜ್ಯದ ಬಹುತೇಕ ಸಗಟು ಮಾರುಕಟ್ಟೆಗಳು ಬಂದ್ ಆಗಿವೆ. ಕೃಷಿ ಉತ್ಪನ್ನ ಮಾರುಕಟ್ಟೆಗಳ ವಹಿವಾಟು ಕೂಡಾ ನಿರ್ಬಂಧಕ್ಕೆ ಒಳಪಟ್ಟಿದೆ. ಬಹುಬೇಗ ಕೆಡುವಂತಹ ಹಣ್ಣು, ತರಕಾರಿ, ಹೂವು ಮತ್ತಿತರ ಬೆಳೆಗಳನ್ನು ಬೆಳೆದಿರುವ ರೈತರು ಮಾರುಕಟ್ಟೆಯೇ ಇಲ್ಲದೆ ಅಕ್ಷರಶಃ ಬೀದಿಗೆ ಬೀಳುವ ಸ್ಥಿತಿ ನಿರ್ಮಾಣವಾಗಿದೆ. ಟೊಮೆಟೊ ಸೇರಿದಂತೆ ತರಕಾರಿಗಳನ್ನು ಕೊಳ್ಳುವವರಿಲ್ಲದೇ ಬೆಳೆಗಾರರು ರಸ್ತೆಗೆ ಸುರಿದು ಹೋಗಿರುವುದು, ತರಕಾರಿ ಬೆಳೆಗಳನ್ನು ಹೊಲದಲ್ಲೇ ನಾಶ ಮಾಡಿರುವುದು, ಹಣ್ಣುಗಳನ್ನು ನದಿ- ಕೆರೆಗಳಿಗೆ ಎಸೆದಿರುವಂತಹ ವಿದ್ಯಮಾನಗಳು ಕೆಲವು ದಿನಗಳಿಂದ ನಿರಂತರವಾಗಿ ವರದಿಯಾಗುತ್ತಿವೆ. ಮಾರುಕಟ್ಟೆಯೇ ಇಲ್ಲದ್ದರಿಂದ ಹತಾಶರಾದ ಕೆಲವು ಕಲ್ಲಂಗಡಿ ಬೆಳೆಗಾರರು ಹಣ್ಣುಗಳನ್ನು ಹೊಲದಲ್ಲೇ ಕತ್ತರಿಸಿ ಹಾಕಿದ್ದಾರೆ. ಕೆಲವು ಕಡೆಗಳಲ್ಲಿ ಟ್ರ್ಯಾಕ್ಟರ್ ಬಳಸಿ ತರಕಾರಿ, ಹೂವಿನ ತೋಟಗಳನ್ನು ನಾಶ ಮಾಡಿರುವುದೂ ನಡೆದಿದೆ. ಇವೆಲ್ಲವೂ ಲಾಕ್‌ಡೌನ್‌ನಿಂದ ತಮ್ಮ ಉತ್ಪನ್ನವನ್ನು ಮಾರಲಾಗದೇ ರೈತ ಸಮುದಾಯವು ಆತ್ಮಸ್ಥೈರ್ಯ ಕಳೆದುಕೊಳ್ಳುತ್ತಿರುವುದರ ಮುನ್ಸೂಚನೆಯಂತೆ ಕಾಣಿಸುತ್ತಿವೆ. ಕೆಲವೇ ಸಾವಿರ ರೂಪಾಯಿ ಪರಿಹಾರ ಘೋಷಿಸುವುದರಿಂದ ರೈತರ ಹಿತವನ್ನು ರಕ್ಷಿಸಲು ಸಾಧ್ಯವಿಲ್ಲ.

ರೈತರು ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡಲು ಸರಿಯಾದ ವೇದಿಕೆಗಳನ್ನು ಸರ್ಕಾರ ತ್ವರಿತವಾಗಿ ಒದಗಿಸಬೇಕು

ರಾಜ್ಯಕ್ಕೆ ಲಾಕ್‌ಡೌನ್ ಹೊಸತೇನೂ ಅಲ್ಲ. ಕಳೆದ ಬಾರಿಯೂ ರೈತರು ಇಂತಹದ್ದೇ ಸಮಸ್ಯೆ ಎದುರಿಸಿದ್ದರು. ಆದರೆ, ಮೊದಲ ಲಾಕ್‌ಡೌನ್ ಸಂದರ್ಭದಲ್ಲಿ ಕೃಷಿ, ತೋಟಗಾರಿಕೆ ಇಲಾಖೆ, ಚುನಾಯಿತ ಪ್ರತಿನಿಧಿಗಳ ಕಡೆಯಿಂದ ರೈತರ ಉತ್ಪನ್ನಗಳಿಗೆ ಮಾರುಕಟ್ಟೆ ದೊರಕಿಸುವ ಪ್ರಯತ್ನಗಳು ನಡೆದಿದ್ದವು. ಹಲವು ಮಂದಿ ಜನಪ್ರತಿನಿಧಿಗಳು ಮತ್ತು ಉದ್ಯಮಿಗಳು ರೈತರ ಉತ್ಪನ್ನಗಳನ್ನು ಖರೀದಿಸಿ ಅಗತ್ಯ ಇರುವವರಿಗೆ ವಿತರಣೆ ಮಾಡಿದ್ದರು. ಇದರಿಂದಾಗಿ ಕೆಲವು ರೈತರು ಸಂಕಷ್ಟದ ಸುಳಿಯಿಂದ ಹೊರಬರಲು ತುಸು ನೆರವು ಸಿಕ್ಕಿತ್ತು. ಆದರೆ, ಈ ಬಾರಿ ಅತ್ತ ಮಾರುಕಟ್ಟೆಯೂ ಇಲ್ಲ, ಇತ್ತ ನೆರವೂ ಇಲ್ಲದಂತಹ ಸ್ಥಿತಿಗೆ ರೈತರು ತಲುಪಿದ್ದಾರೆ. ತರಕಾರಿ, ಹಣ್ಣು, ಹೂವು ಬೆಳೆಯಲು ಹೆಚ್ಚಿನ ಹಣ ವ್ಯಯಿಸಿರುವ ಕೃಷಿಕರು ಬೆಳೆಯನ್ನು ಮಾರಲಾಗದ ಪರಿಸ್ಥಿತಿಯಿಂದ ಕಂಗಾಲಾಗಿದ್ದಾರೆ. ಲಾಕ್‌ಡೌನ್ ಅಗತ್ಯ ಕಂಡುಬಂದಾಗಲೇ ರೈತರನ್ನು ಇಂತಹ ಸಂಕಷ್ಟಗಳಿಂದ ಪಾರು ಮಾಡುವ ಕ್ರಿಯಾಯೋಜನೆ ರೂಪಿಸಬೇಕಿತ್ತು. ರೈತರ ಉತ್ಪನ್ನಗಳಿಗೆ ಮಾರುಕಟ್ಟೆಯ ಭರವಸೆಯನ್ನು ಒದಗಿಸುವುದು ಜವಾಬ್ದಾರಿಯುತ ಸರ್ಕಾರಗಳ ಕರ್ತವ್ಯ ಕೂಡ. ಮೊದಲ ಲಾಕ್‌ಡೌನ್‌ನ ಅನುಭವಗಳ ಆಧಾರದಲ್ಲಿ ರೈತರ ಸಮಸ್ಯೆಗಳಿಗೆ ಪರಿಹಾರ ಒದಗಿಸಲು ರಾಜ್ಯ ಸರ್ಕಾರ ಯಾವ ಸಿದ್ಧತೆಯನ್ನೂ ಮಾಡಿಕೊಂಡಿರಲಿಲ್ಲ ಎಂಬುದನ್ನು ಈಗಿನ ಪರಿಸ್ಥಿತಿ ಜಾಹೀರುಗೊಳಿಸಿದೆ. ತರಕಾರಿ, ಹಣ್ಣು ಸೇರಿದಂತೆ ಕೃಷಿ ಉತ್ಪನ್ನಗಳಿಗೆ ಬೇಡಿಕೆ ಕುಸಿದಿಲ್ಲ. ಬೆಳೆಗಾರ, ಸಗಟು ಮಾರುಕಟ್ಟೆ, ಚಿಲ್ಲರೆ ವ್ಯಾಪಾರಿಗಳು ಮತ್ತು ಗ್ರಾಹಕರ ನಡುವಿನ ಮಾರುಕಟ್ಟೆ ಸರಪಳಿಯ ಕೊಂಡಿ ಕಳಚಿರುವುದೇ ಈ ಬಿಕ್ಕಟ್ಟಿಗೆ ಕಾರಣ. ದೇಶದ ಜನಸಂಖ್ಯೆಯ ಅರ್ಧಕ್ಕಿಂತ ಹೆಚ್ಚು ಮಂದಿ ಈಗಲೂ ಕೃಷಿಯನ್ನೇ ಅವಲಂಬಿಸಿದ್ದಾರೆ. ಸಂಕಷ್ಟದ ಸಂದರ್ಭದಲ್ಲಿ ಈ ಕ್ಷೇತ್ರಕ್ಕೆ ನೆರವು ಒದಗಿಸಬೇಕಾದುದು ಸರ್ಕಾರದ ಜವಾಬ್ದಾರಿ. ರೈತರು ಹತಾಶರಾಗಿ ಬೆಳೆ ನಾಶಕ್ಕೆ ಮುಂದಾಗುವುದನ್ನು ತಡೆಯಬೇಕಿದೆ. ಕೃಷಿಕರು ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡಲು ಸರಿಯಾದ ವೇದಿಕೆಗಳನ್ನು ತ್ವರಿತವಾಗಿ ಒದಗಿಸಬೇಕು. ಕೃಷಿ ಉತ್ಪನ್ನಗಳು ಕೆಡುವುದನ್ನು ತಡೆಯಲು ಶೈತ್ಯಾಗಾರಗಳನ್ನು ಒದಗಿಸುವ ವ್ಯವಸ್ಥೆ ಮಾಡಬೇಕು. ಆನ್‌ಲೈನ್ ಜಾಲತಾಣಗಳು, ಸಾಮಾಜಿಕ ಮಾಧ್ಯಮಗಳು ಸೇರಿದಂತೆ ಎಲ್ಲ ಸಾಧನಗಳನ್ನೂ ಬಳಸಿಕೊಂಡು ರೈತರು ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡಲು ಸರ್ಕಾರ ಬೆಂಬಲವಾಗಿ ನಿಲ್ಲಬೇಕು.

ದಿನದ ಟ್ವೀಟ್

ನಮ್ಮ ಒಳಿತಿಗಾಗಿ...

ವಿಶ್ವ ಬೈಸಿಕಲ್ ದಿನದ (ಜೂನ್ 3) ಈ ಸಂದರ್ಭದಲ್ಲಿ ಬೈಸಿಕಲ್‌ಗಳನ್ನು ನಮ್ಮ ಜೀವನಶೈಲಿಯ ಭಾಗವಾಗಿಸಿಕೊಳ್ಳಲು ಪ್ರಯತ್ನಿಸೋಣ. ಹಳೆಯ ಹವ್ಯಾಸಗಳಿಗೆ ಹಿಂದಿರುಗದಿರೋಣ. ಮಾನಸಿಕ ಒತ್ತಡ ನಿರ್ವಹಣೆ, ಆರೋಗ್ಯ, ಗಾಳಿಯ ಗುಣಮಟ್ಟ ವೃದ್ಧಿ ಮತ್ತು ನಮ್ಮ ನಗರಗಳ ಸುಧಾರಣೆಗಾಗಿ ಬೈಸಿಕಲ್ ಬಳಸೋಣ. ವಿಶ್ವ ಬೈಸಿಕಲ್ ದಿನಾಚರಣೆಯ ಶುಭಾಶಯಗಳು!

ನಿರುಪಮಾ ಬಿಳ್ಳಿ, ಲೇಖಕಿ

25 ವರ್ಷಗಳ ಹಿಂದೆ

ಮಂಗಳವಾರ, 4-6-1996

- **ಹಳ್ಳಿಗಳಿಗೆ ಸೌಕರ್ಯ, ನ್ಯಾಯ- ನೂತನ ಪ್ರಧಾನಿ ಸಂಕಲ್ಪ**

ಬೆಂಗಳೂರು, ಜೂನ್ 3– ‘ನಲವತ್ತೊಂಬತ್ತು ವರ್ಷಗಳಲ್ಲಿ ನ್ಯಾಯ ಸಿಗದವರಿಗೆ ನ್ಯಾಯ ದೊರಕಿಸಿಕೊಡುವುದು ನನ್ನ ಮೂಲ ಗುರಿ. ನಾನು ಅಧಿಕಾರದಲ್ಲಿ ಎಷ್ಟು ದಿನ ಇರುತ್ತೇನೆ ಎಂಬುದು ಮುಖ್ಯವಲ್ಲ. ಆದರೆ ಅಧಿಕಾರ ಬಿಟ್ಟು ಬರುವಾಗ ಈ ಸಾಮಾನ್ಯ ರೈತನ ಮಗ ಜನಸಾಮಾನ್ಯರಿಗೆ ಏನಾದರೂ ಒಳ್ಳೆಯದು ಮಾಡಿದ ಎನ್ನುವ ಭಾವನೆ ಮೂಡಿದರೆ ಸಾಕು’.

‘ಕುಡಿಯುವ ನೀರು, ತಲೆಯ ಮೇಲೊಂದು ಸೂರು, ಓಡಾಟಕ್ಕೆ ಒಳ್ಳೆಯ ರಸ್ತೆ, ಮಕ್ಕಳಿಗೆ ಶಾಲೆ- ಶಿಕ್ಷಕರಿಲ್ಲದೆ ನರಳುತ್ತಿರುವ ಹಳ್ಳಿಗಳಿಗೆ ಮೂಲಭೂತ ಸೌಲಭ್ಯ ಕಲ್ಪಿಸುವುದಕ್ಕೆ ನನ್ನ ಆದ್ಯತೆ. ಇದನ್ನು ವಿರೋಧಿಸುವವರು ಯಾರು?’

ದೇಶದ 12ನೇ ಪ್ರಧಾನಿಯಾಗಿ ಅಧಿಕಾರ ವಹಿಸಿಕೊಂಡಿರುವ ಹರದನಹಳ್ಳಿ ದೊಡ್ಡೇಗೌಡ ದೇವೇಗೌಡ ಅವರು ಕೇಳುವ ಪ್ರಶ್ನೆ ಇದು. ಮಾಜಿ ರಾಷ್ಟ್ರಪತಿ ನೀಲಂ ಸಂಜೀವ ರೆಡ್ಡಿ ಅವರ ಅಂತ್ಯಕ್ರಿಯೆಯಲ್ಲಿ ಭಾಗವಹಿಸಲು ಬೆಂಗಳೂರಿಗೆ ಬಂದಿದ್ದ ಪ್ರಧಾನಿಯವರು ಭಾನುವಾರ ರಾತ್ರಿ ‘ಪ್ರಜಾವಾಣಿ’ ಜತೆ ಮಾತನಾಡಿದರು.

- **ಸಚಿವರ ಪಟ್ಟಿ ಸಹಿತ ಪಟೇಲ್ ದೆಹಲಿಗೆ**

ಬೆಂಗಳೂರು, ಜೂನ್ 3– ಮಂತ್ರಿಮಂಡಲ ರಚನೆ ಬಗ್ಗೆ ಪ್ರಧಾನಿ ಎಚ್.ಡಿ. ದೇವೇಗೌಡ ಅವರ ಜತೆಗೆ ಚರ್ಚಿಸಿ, ಸಚಿವರಾಗುವವರ ಪಟ್ಟಿಗೆ ಒಪ್ಪಿಗೆ ಪಡೆದುಬರಲು ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಮತ್ತು ಉಪಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇಂದು ಸಂಜೆ ದೆಹಲಿಗೆ ತೆರಳಿದರು.

50 ವರ್ಷಗಳ ಹಿಂದೆ

ಶುಕ್ರವಾರ, 4-6-1971

- **ಸೂಡಾನಿನಿಂದ ಆಮದು ನಿಲ್ಲಿಸಿ ರಾಜ್ಯದಲ್ಲಿ ಹತ್ತಿ ಸಂಗ್ರಹ ಕರಗಿಸಲು ಕೇಂದ್ರಕ್ಕೆ ಸಲಹೆ**

ಬೆಂಗಳೂರು, ಜೂನ್ 3– ಮೈಸೂರು ರಾಜ್ಯದಲ್ಲಿ ವ್ಯಾಪಾರಿಗಳು ಮತ್ತು ಗಿರಣಿಗಳು ಕೊಳ್ಳದೆ ರೈತರಲ್ಲಿ ಕೋಟ್ಯಂತರ ರೂ. ಬೆಲೆ ಹತ್ತಿ ದಾಸ್ತಾನು ಉಳಿದಿರುವ ಬಗ್ಗೆ ಶೀಘ್ರ ಪರಿಹಾರ ಸೂಚಿಸುವ ಭರವಸೆಯನ್ನು ಕೇಂದ್ರವು ರಾಜ್ಯ ಸರ್ಕಾರಕ್ಕೆ ನೀಡಿದೆಯೆಂದು ತಿಳಿದುಬಂದಿದೆ.

ದೇಶದಲ್ಲಿಯೇ ಗಿರಣಿಗಳು ಕೊಳ್ಳದ ‘ಲಾಂಗ್ ಸ್ಟೇಪಲ್’ ಹತ್ತಿ ರೈತರ ಬಳಿ ಉಳಿದು ಹೋಗಿರುವಾಗ ಸೂಡಾನಿನಿಂದ ಹತ್ತಿ ಆಮದು ಮಾಡಿಕೊಳ್ಳುವ ಔಚಿತ್ಯವನ್ನು ರಾಜ್ಯ ಸರ್ಕಾರದ ವಲಯಗಳಲ್ಲಿ ಪ್ರಶ್ನಿಸಲಾಗುತ್ತಿದೆ.

- **ಚೀನಾದ ಖಂಡಾಂತರ ಕ್ಷಿಪಣಿ ಪ್ರಯೋಗ ಸಿದ್ಧತೆ: ರಾಜ್ಯಸಭೆ ಕಳವಳ**

ನವದೆಹಲಿ, ಜೂನ್ 3– ಹಿಂದೂ ಮಹಾಸಾಗರದಲ್ಲಿ ಚೀನಾ ಖಂಡಾಂತರ ಕ್ಷಿಪಣಿಯೊಂದರ ಪರೀಕ್ಷಾ ಪ್ರಯೋಗ ನಡೆಸಲಿದೆಯೆಂಬ ವರದಿಗಳ ಬಗೆಗೆ ರಾಜ್ಯಸಭೆಯಲ್ಲಿ ಇಂದು ಸದಸ್ಯರು ಕಳವಳ ವ್ಯಕ್ತಪಡಿಸಿದರು.

ಬೆಳೆಯುತ್ತಿರುವ ಚೀನಾದ ಅಣ್ವಸ್ತ್ರ ಶಕ್ತಿ ಮತ್ತು ಅದರಿಂದ ಭಾರತಕ್ಕಿರುವ ಅಪಾಯವನ್ನು ಸಕಾಲದಲ್ಲಿ ಅರಿತು ಸಣ್ಣದಾಗಿಯಾದರೂ ಅಣುಬಾಂಬ್ ತಯಾರಿಸುವ ಪ್ರಯತ್ನಕ್ಕೆ ಕೈ ಹಾಕುವಂತೆ ಅವರು ಸರ್ಕಾರವನ್ನು ಒತ್ತಾಯಪಡಿಸಿದರು.

ಜಗವೆಲ್ಲ ಆವರಿಸಿರುವ ಕೋವಿಡ್ ಕರಾಳತೆಗೆ ಭರವಸೆಯ ಬೆಳಕಾಗಬಲ್ಲುದೇ ಕ್ರೀಡೆ?

ಒಲಿಂಪಿಕ್ಸ್ ಜ್ಯೋತಿಯಲಿ ಕೊರೊನಾ ಅಳಿಯಲಿ

ವಿಶ್ಲೇಷಣೆ

ಗಿರೀಶ ದೊಡ್ಡಮನಿ

ಭಾರತದ ಟೆನಿಸ್ ಕ್ರೀಡೆಯ ದಿಗ್ಗಜ ಲಿಯಾಂಡರ್ ಪೇಸ್ 1996ರಲ್ಲಿ ಅಟ್ಲಾಂಟಾ ಒಲಿಂಪಿಕ್ಸ್‌ನಲ್ಲಿ ಗೆದ್ದ ಕಂಚಿನ ಪದಕಕ್ಕೆ ಈ ವರ್ಷ ಬೆಳ್ಳಿ ಮಹೋತ್ಸವದ ಸಂಭ್ರಮ. ಕೋವಿಡ್ ಸಾಂಕ್ರಾಮಿಕವು ಹೋದ ವರ್ಷ ವಿಶ್ವವನ್ನು ಕಾಡಿಸದೇ ಹೋಗಿದ್ದರೆ ಪೇಸ್ ಎಂಟು ಬಾರಿ ಒಲಿಂಪಿಕ್ಸ್‌ನಲ್ಲಿ ಆಡಿದ ವಿಶಿಷ್ಟ ಸಾಧನೆ ಮಾಡಿ ಒಂದು ವರ್ಷವಾಗಿರುತ್ತಿತ್ತು. ಆದರೆ ಟೋಕಿಯೊ ಒಲಿಂಪಿಕ್ಸ್ ಮುಂದಕ್ಕೆ ಹೋಯಿತು. 48ರ ಹರೆಯದ ಪೇಸ್ ಅವರಿಗೆ ಈಗಲೂ ಕಣಕ್ಕಿಳಿಯುವ ಮನಸ್ಸಿದೆ. ಆದರೆ, ಅವರಿಗೆ ಈ ಬಾರಿ ಅವಕಾಶ ಸಿಗುವುದು ಕಷ್ಟ. ಏಕೆಂದರೆ, ಅವರು ಒಲಿಂಪಿಕ್ಸ್‌ನ ಡಬಲ್ಸ್ ಮತ್ತು ಮಿಶ್ರ ಡಬಲ್ಸ್‌ನಲ್ಲಿ ಅರ್ಹತೆ ಪಡೆಯುವಷ್ಟು ಶ್ರೇಯಾಂಕ ಹೊಂದಿಲ್ಲ. ಜಗತ್ತಿನ ಅತಿದೊಡ್ಡ ಕ್ರೀಡಾಮೇಳ ಒಂದು ಬಾರಿ ಮುಂದೆ ಹೋಗಿದ್ದಕ್ಕೆ ಅಭೂತಪೂರ್ವ ದಾಖಲೆ ಬರೆಯುವ ಅವಕಾಶ ಭಾರತದ ಆಟಗಾರನಿಗೆ ಬಹುತೇಕ ಕೈತಪ್ಪಿದಂತಾಗಿದೆ. ವಿಶ್ವದಾದ್ಯಂತ ಅದೆಷ್ಟೋ ಕ್ರೀಡಾಪಟುಗಳಿಗೆ ಇಂತಹದೇ ನಿರಾಶೆ ಆಗಿರಬಹುದಲ್ಲವೇ?

ಮುಂದಿನ ತಿಂಗಳು ನಡೆಯಲಿರುವ ಒಲಿಂಪಿಕ್ಸ್‌ನಲ್ಲಿ ಸ್ಪರ್ಧಿಸುವ ಕನಸು ಕಾಣುತ್ತಿರುವ ನೂರಾರು ಅಥ್ಲೀಟ್‌ಗಳು ಕಠಿಣ ಪರಿಶ್ರಮವಹಿಸಿ ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆ. ಅವರೆಲ್ಲರ ದೃಷ್ಟಿ ಈಗ ಟೋಕಿಯೊದತ್ತ ನೆಟ್ಟಿದೆ. ಆದರೆ, ಕೋವಿಡ್ ಎರಡನೇ ಅಲೆಯ ಆರ್ಭಟದ ಮುಂದೆ ಈ ನಿರೀಕ್ಷೆಗಳು ಈಡೇರುವುವೇ ಎಂಬುದನ್ನು ಸದ್ಯ ಖಚಿತವಾಗಿ ಹೇಳಲಾಗದಂಥ ಸ್ಥಿತಿಯಿದೆ. ಕೂಟದ ಆರಂಭಕ್ಕೆ ಇನ್ನು 50 ದಿನಗಳು ಮಾತ್ರ ಉಳಿದಿವೆ.

ಅಂತರರಾಷ್ಟ್ರೀಯ ಒಲಿಂಪಿಕ್ ಸಂಸ್ಥೆ ಮತ್ತು ಜಪಾನ್ ಸರ್ಕಾರ ಮಾತ್ರ ‘ಏನೇ ಆಗಲಿ, ಈ ಸಲ ಕ್ರೀಡೆಗಳನ್ನು ನಡೆಸಿಯೇ ತೀರುತ್ತೇವೆ’ ಎಂಬ ಹೇಳಿಕೆಗಳನ್ನು ನೀಡುತ್ತ ಬಂದಿವೆ. ಆದರೆ ಜಪಾನ್‌ನಲ್ಲೇ ಆತಿಥ್ಯಕ್ಕೆ ತೀವ್ರ ವಿರೋಧ ವ್ಯಕ್ತವಾಗುತ್ತಿದೆ. ವಿಶ್ವದ ಬೇರೆ ಬೇರೆ ದೇಶಗಳಿಂದ ಕ್ರೀಡಾಪಟುಗಳು, ಸಿಬ್ಬಂದಿ, ಅಧಿಕಾರಿಗಳು, ಆಡಳಿತ ಪ್ರತಿನಿಧಿಗಳು ಮತ್ತು ಮಾಧ್ಯಮ ಪ್ರತಿನಿಧಿಗಳು ಸೇರಿ ಸುಮಾರು 80 ಸಾವಿರ ಜನರು ಒಲಿಂಪಿಕ್ ಗ್ರಾಮದಲ್ಲಿ ಸೇರುತ್ತಾರೆ. ಸೋಂಕು ಪ್ರಸರಣಕ್ಕೆ ಇದು ಕಾರಣವಾಗಬಹುದೆಂಬ ಆತಂಕ ವೈದ್ಯಕೀಯ ಸಮೂಹದ್ದು. ಕೂಟ ನಡೆಯಲಿರುವ ಟೋಕಿಯೊ ಮತ್ತು ಸುತ್ತಲಿನ ಪ್ರಮುಖ ನಗರಗಳಲ್ಲಿ ಜೂನ್ 20ರವರೆಗೆ ಕೋವಿಡ್ ತುರ್ತು ಪರಿಸ್ಥಿತಿ ವಿಸ್ತರಿಸಲಾಗಿದೆ. ಒಲಿಂಪಿಕ್ಸ್‌ಗೆ ಪ್ರಾಯೋಜಕತ್ವ ನೀಡಿರುವ ಇಲ್ಲಿಯ ಪ್ರಮುಖ ಪತ್ರಿಕೆ ‘ಅಸಾಹಿ ಶಿಂಬುನ್’ ಕೂಡ ಕೂಟವನ್ನು ರದ್ದು ಮಾಡಬೇಕು ಎಂದು ಈಚೆಗೆ ಸಂಪಾದಕೀಯ ಬರೆದಿದೆ. ಕೂಟ ಮುಂದೂಡುವಂತೆ ಅಥವಾ ರದ್ದು ಮಾಡುವಂತೆ ವಿವಿಧ ಸಮೀಕ್ಷೆಗಳಲ್ಲಿ ಶೇ 83ರಷ್ಟು ಮಂದಿ ಒತ್ತಾಯಿಸಿದ್ದಾರೆ. ಆದರೆ ಈಗಾಗಲೇ ಒಂದು ಬಾರಿ ಮುಂದೂಡಿರುವ ಕೂಟವನ್ನು ಮತ್ತೆ ಮುಂದೂಡಲು ಐಒಸಿಗೂ ಮನಸ್ಸಿಲ್ಲ. ಏಕೆಂದರೆ 2022ರಲ್ಲಿ ಬೀಜಿಂಗ್‌ನಲ್ಲಿ ಚಳಿಗಾಲದ ಒಲಿಂಪಿಕ್ಸ್ ನಡೆಯಲಿದೆ. ಇದನ್ನು 2023ಕ್ಕೆ ಮುಂದೂಡುವಂತೆಯೂ ಇಲ್ಲ. ಏಕೆಂದರೆ, 2024ರಲ್ಲಿ ಪ್ಯಾರಿಸ್‌ನಲ್ಲಿ ನಡೆಯಲಿರುವ ಕೂಟದ ಸಿದ್ಧತೆಗೆ ಅಡೆತಡೆಯುಂಟಾಗುತ್ತದೆ. ಅದರಿಂದಾಗಿ ಆಯೋಜಕರು ‘ಮಾಡು ಇಲ್ಲವೇ ಮಡಿ’ ಎಂಬ ಪರಿಸ್ಥಿತಿಯಲ್ಲಿ ಇದ್ದಾರೆ.

ಒಂದೊಮ್ಮೆ ಈ ಸಲ ರದ್ದುಪಡಿಸಿದರೆ ಅಪಾರವಾದ ಆರ್ಥಿಕ ನಷ್ಟವನ್ನು ಜಪಾನ್ ಮೈಮೇಲೆ ಎಳೆದುಕೊಳ್ಳಬೇಕಾಗುತ್ತದೆ. ಈ ಕೂಟದ ಆಯೋಜನೆಗೆ ಸುಮಾರು ₹ 92 ಸಾವಿರ ಕೋಟಿ ವೆಚ್ಚ ಆಗಬಹುದೆಂದು ಅಂದಾಜಿಸಲಾಗಿತ್ತು. ಆದರೆ ಮುಂದೂಡಿಕೆಯಿಂದ 20 ಸಾವಿರ ಕೋಟಿ ರೂಪಾಯಿಯ ಹೆಚ್ಚುವರಿ ಹೊರೆ ಬೀಳಲಿದೆ ಎಂಬ ಲೆಕ್ಕಾಚಾರ ಇದೆ. ಇದು ಆಯೋಜನೆಯ ಲೆಕ್ಕ ಮಾತ್ರ. ಆದರೆ ಬೇರೆ ಬೇರೆ ದೇಶಗಳು ಒಲಿಂಪಿಕ್ಸ್ ಸಿದ್ಧತೆಗಾಗಿ ಕಳೆದ ನಾಲ್ಕು ವರ್ಷಗಳಲ್ಲಿ ಮಾಡಿದ ವೆಚ್ಚ ಸಾಮಾನ್ಯವಾದುದೇನಲ್ಲ. ರಿಯೊ ಒಲಿಂಪಿಕ್ಸ್ ನಂತರ ಭಾರತವು ‘ಟಾಪ್ ಯೋಜನೆ’ಯ ಮೂಲಕ ಒಲಿಂಪಿಕ್ಸ್ ಸಿದ್ಧತೆಗೆ ಕೋಟ್ಯಂತರ ರೂಪಾಯಿ ವೆಚ್ಚ ಮಾಡಿದೆ. ವಿಶೇಷ ತರಬೇತಿಗಾಗಿ ಕ್ರೀಡಾಪಟುಗಳನ್ನು ವಿದೇಶಗಳಿಗೆ ಕಳಿಸಿದೆ.

ಇದೆಲ್ಲದರ ಆಚೆಗೆ ಆಯೋಜಕರು ಪ್ರಾಯೋಜಕರನ್ನು ಉಳಿಸಿಕೊಂಡು ಹೋಗಲು ಮಾಡಿರುವ ಹೆಣಗಾಟ ದೊಡ್ಡದು. ಪ್ರಸಾರ, ಪ್ರಾಯೋಜಕತ್ವದಿಂದ ಬರುವ ಆದಾಯದಲ್ಲಿ ಮುಂದೂಡಿಕೆಯಿಂದಾದ ನಷ್ಟವನ್ನಾದರೂ ಭರಿಸಿಕೊಳ್ಳುವ ಯೋಚನೆಯೂ ಇರಬಹುದು. ಇಂತಹ ಕಠಿಣ ಸನ್ನಿವೇಶಗಳನ್ನು ದಶಕಗಳಿಂದ ಎದುರಿಸುತ್ತಲೇ ಬಂದಿರುವ ಜಪಾನ್ ದೇಶದ ಛಲ ಜನಜನಿತವಾಗಿದೆ. ಎರಡನೇ ಮಹಾಯುದ್ಧದ ವೇಳೆ ಹಿರೋಶಿಮಾ–ನಾಗಾಸಾಕಿ ಮೇಲೆ ನಡೆದ ಬಾಂಬ್ ದಾಳಿಯಿಂದ ತತ್ತರಿಸಿದ್ದ ದೇಶವು ನಂತರ ಅಭಿವೃದ್ಧಿಯಲ್ಲಿ ಅಮೆರಿಕ, ಯುರೋಪ್ ರಾಷ್ಟ್ರಗಳಿಗೆ ಸಡ್ಡು ಹೊಡೆದಿರುವ ಯಶೋಗಾಥೆ ಮೈನವಿರೇಳಿಸುವಂತಹುದು. ಅಷ್ಟೇ ಏಕೆ, ಅಸಂಖ್ಯಾತ ಭೂಕಂಪ, ಚಂಡಮಾರುತ ಮತ್ತು ಸುನಾಮಿಗಳ ಹಾವಳಿಯ ಎದುರು ಪುಟಿದೆದ್ದು ದೇಶ ಕಟ್ಟಿದ್ದಾರೆ ಅಲ್ಲಿಯ ಜನ. ಆಗ ಅದೆಲ್ಲ ಸಾಧನೆಗೆ ದೇಶದ ಜನರ ಸಂಪೂರ್ಣ ಬೆಂಬಲ ಇತ್ತು.

ಆದರೆ ಈ ಬಾರಿ ಕಣ್ಣಿಗೆ ಕಾಣದ ಕೊರೊನಾ ವೈರಾಣುವಿನ ವಿರುದ್ಧದ ಹೋರಾಟಕ್ಕೆ ಸ್ಥಳೀಯರ ಬೆಂಬಲದ ಕೊರತೆ ಎದುರಾಗಿದೆ. ಅದಕ್ಕಾಗಿಯೇ ಲಸಿಕೆ ನೀಡುವ ಕಾರ್ಯಕ್ರಮವನ್ನು ಶರವೇಗದಲ್ಲಿ ಜಪಾನ್ ಕೈಗೊಂಡಿದೆ. ಒಲಿಂಪಿಕ್ಸ್‌ನಲ್ಲಿ ಭಾಗವಹಿಸಲು ಬರುವವರು ತಮ್ಮ ದೇಶಗಳಿಂದಲೇ ಲಸಿಕೆ ಹಾಕಿಸಿಕೊಂಡು ಬರುವುದನ್ನು ಕಡ್ಡಾಯಗೊಳಿಸಿದೆ. ಅಂತರರಾಷ್ಟ್ರೀಯ ವಿಮಾನಯಾನ ನಿರ್ಬಂಧಗಳ ನಡುವೆಯೂ ಕೂಟವನ್ನು ಯಶಸ್ವಿಯಾಗಿ ಆಯೋಜಿಸುವ ಭರವಸೆಯಲ್ಲಿ ಆಯೋಜಕರಿದ್ದಾರೆ. ಆದರೆ, ಇದು ಜಪಾನ್ ಪಾಲಿಗೆ ತಂತಿಯ ಮೇಲಿನ ನಡಿಗೆ. ಕಾಲು ಜಾರಿದರೆ ಪ್ರಪಾತಕ್ಕೆ ಬೀಳುವ ಅಪಾಯವಿದೆ. ದೇಶದ ಪ್ರತಿಷ್ಠೆ, ಕ್ರೀಡಾಪಟುಗಳು ಮತ್ತು ಜನರ ಪ್ರಾಣಕ್ಕೆ ಕುತ್ತು ಬರಬಹುದು. ಹಿಂದೆ ಮಹಾಯುದ್ಧಗಳ ಕಾರಣದಿಂದ 1916, 1940 ಮತ್ತು 1944ರಲ್ಲಿ ಒಲಿಂಪಿಕ್ಸ್ ರದ್ದಾಗಿದ್ದವು. ಆಗ ಇಷ್ಟೆಲ್ಲ ತಂತ್ರಜ್ಞಾನ, ಖರ್ಚು, ಆದಾಯಗಳ ಲೆಕ್ಕಾಚಾರಗಳು ಇರಲಿಲ್ಲ. ಆದರೆ ಈಗ ಕ್ರೀಡಾಲೋಕ ಬದಲಾಗಿದೆ. ವಾಣಿಜ್ಯೀಕರಣದ ಒಂದು ಭಾಗವೇ ಆಗಿಹೋಗಿದೆ. ಅದರಲ್ಲೂ ಒಲಿಂಪಿಕ್ಸ್‌ನಂತಹ ಬೃಹತ್ ಕ್ರೀಡಾಕೂಟ ಆತಿಥೇಯ ದೇಶದ ವಿತ್ತ ಭವಿಷ್ಯದ ಮೇಲೆ ಪರಿಣಾಮ ಬೀರುವಂಥದ್ದು.

ಆದರೂ ಭ್ರಾತೃತ್ವ, ಸಾಮರಸ್ಯ ಮತ್ತು ಮನೋಲ್ಲಾಸದ ಸಂದೇಶ ಸಾರುವ ಒಲಿಂಪಿಕ್ ಕ್ರೀಡೆಗಳು ನಡೆಯಬೇಕು ಎಂಬುದು ಕ್ರೀಡಾಪ್ರೇಮಿಗಳ ಆಸೆ. ಜಪಾನ್ ಸರ್ಕಾರವು ಅಂದುಕೊಂಡಂತೆ ಎಲ್ಲವೂ ನಡೆದರೆ, ಕೊರೊನಾ ವಿರುದ್ಧದ ಹೋರಾಟಕ್ಕೆ ಹೆಚ್ಚಿನ ಬಲ ಬರಬಹುದು.

ಇನ್ನು ಭಾರತದ ಮಟ್ಟಿಗೆ ಹೇಳುವುದಾದರೆ, ಇಂಗ್ಲೆಂಡ್‌ನಲ್ಲಿ ತರಬೇತಿ ಪಡೆಯುತ್ತಿರುವ ಪಿ.ವಿ. ಸಿಂಧು, ಯುರೋಪ್‌ನಲ್ಲಿರುವ ಶೂಟಿಂಗ್ ಪಟುಗಳು, ಅಥ್ಲೀಟ್ ನೀರಜ್ ಚೋಪ್ರಾ, ಬೆಂಗಳೂರಿನ ಅಶ್ವಾರೋಹಿ ಫವಾದ್ ಮಿರ್ಜಾ, ಕುಸ್ತಿಪಟು ಬಜರಂಗ್ ಪೂನಿಯಾ, ಸೇಲಿಂಗ್ ತಂಡ ಮತ್ತು ಬಾಕ್ಸಿಂಗ್ ಪ್ರತಿಭೆಗಳು ಒಲಿಂಪಿಕ್ಸ್ ಅಂಗಳದಲ್ಲಿ ಹೆಜ್ಜೆಗುರುತು ಮೂಡಿಸುವ ಕನಸು ಕಾಣುತ್ತಿದ್ದಾರೆ. ಕೊರೊನಾ ಕಾಲದಲ್ಲಿ ಮಾನಸಿಕವಾಗಿ ಸದೃಢವಾಗಿ ಉಳಿಯುವ ಕಠಿಣ ಸವಾಲು ಎದುರಿಸುತ್ತಿರುವ ಕ್ರೀಡಾಪಟುಗಳಿಗೆ ಲಿಯಾಂಡರ್ ಪೇಸ್ ಮೂರು ದಶಕಗಳಿಂದ ಮಾಡಿರುವ ಸಾಧನೆ ಪ್ರೇರಣೆಯಾಗಬಲ್ಲದು.

‘ಒಲಿಂಪಿಕ್ ಕ್ರೀಡೆಗಳಲ್ಲಿ ಗೆಲ್ಲುವುದೊಂದೇ ಮುಖ್ಯವಲ್ಲ. ಸ್ಪರ್ಧಿಸುವುದೇ ಮುಖ್ಯ. ಏಕೆಂದರೆ, ಜೀವನವೆಂದರೆ ಛಲದಿಂದ ಹೋರಾಟ ಮಾಡುವುದೆಂದು ಅರ್ಥ. ಸಾಧನೆಯೊಂದೇ ಮಾನದಂಡವಲ್ಲ’ ಎಂದು ಆಧುನಿಕ ಒಲಿಂಪಿಕ್ಸ್‌ನ ಪಿತಾಮಹ ಪಿಯರೆ ಡಿ ಕೂಬರ್ತಿ 1894ರಲ್ಲಿ ಹೇಳಿದ್ದ ಮಾತು ಇಂದಿಗೂ ಪ್ರಸ್ತುತ. ಕೋವಿಡ್ ಬಿಕ್ಕಟ್ಟಿನ ಕಾಲದಲ್ಲಿ ಪದಕ ಜಯದ ಸಂಭ್ರಮಕ್ಕಿಂತಲೂ ಸ್ಪರ್ಧಿಸುವ ಛಲವೇ ಮನುಕುಲದ ಭವಿಷ್ಯಕ್ಕೆ ಪ್ರೇರಣೆಯಾಗಲಿದೆ.

ಚುರುಮುರಿ

ಮಕ್ಕಳಿರಲವ್ವಾ...

• ಸುಧೀಂದ್ರ

‘**ನಿನ್ನಿಂದ** ಒಂದು ಹೆಲ್ಪ್ ಆಗ್ಬೇಕಿತ್ತಲ್ಲಾ’ ಅಂದ ಮಹದೇವನಿಗೆ, ‘ಅಪ್ಪಣೆಯಾಗಲಿ’ ಎಂದೆ. ‘ನೀನು ಡಿಪಾರ್ಟ್‌ಮೆಂಟ್‌ಗೆ ಸೇರೋಕೂ ಬಹಳ ಹಿಂದೆ, ಕುಟುಂಬ ನಿಯಂತ್ರಣ ಇಲಾಖೆ ಅಂತ ಇತ್ತು, ನೆನಪಿದೆಯಾ?’ ಅಂದ.

‘ಗೊತ್ತು, ಆ ಇಲಾಖೆಯ ಕೆಂಪು ತ್ರಿಕೋನ ಗುರುತಿರೋ ಜಾಹೀರಾತುಗಳು ಬಸ್ಸುಗಳಲ್ಲಿರ್ತಿದ್ದು. ತುಂಟ ಹುಡುಗರು ‘ನಾವಿಬ್ಬರು, ನಮಗಿಬ್ಬರೇ ಮಕ್ಕಳು’ ಸ್ಲೋಗನ್ನಿನಲ್ಲಿ ‘ನಮಗಿ’ ಅಕ್ಷರಗಳನ್ನು ಮತ್ತು ‘ಬ’ ಒತ್ತಕ್ಷರವನ್ನು ಕೆರೆದು ಹಾಕಿ ‘ಬರೇ ಮಕ್ಕಳು’ ಎಂದು ತಿದ್ದುತ್ತಿದ್ದರು’ ಎಂದೆ.

‘ಅದು ಬರೋಕ್ಕೆ ಮುಂಚೆ ‘ಒಂದು, ಎರಡು ಬೇಕು, ಮೂರು ಸಾಕು’ ಅನ್ನೋ ಜಾಹೀರಾತು ಬರ್ತಿತ್ತು. ಅದರ ಬೋರ್ಡುಗಳು, ಪಾಂಪ್ಲೆಟ್‌ಗಳು ಗೋಡೌನಿನಲ್ಲಿರಬಹುದು. ಸ್ಯಾಂಪಲ್ ಸಿಕ್ಕರೆ ತಂದ್ಕೊಡು’ ಎಂದ.

‘ನಮ್ಮ ಡಿಪಾರ್ಟ್‌ಮೆಂಟ್‌ನ ಹಳೇ ಕಸ ಇವನಿಗೇಕೆ?’ ಅಂದ್ಕೊಂಡು, ‘ಏನಪ್ಪಾ, ಗುಜರಿ ವ್ಯಾಪಾರಕ್ಕೆ ಇಳಿದಿದ್ದೀಯಾ?’ ಎಂದೆ. ‘ಇಲ್ಲ, ಚೀನಾದಲ್ಲಿ ಕುಟುಂಬ ನಿಯಂತ್ರಣ ಇಲಾಖೆಗೆ ಬೀಗ ಜಡಿದು, ಹೊಸತಾಗಿ ಕುಟುಂಬ ವಿಸ್ತರಣಾ ಇಲಾಖೆ ಆರಂಭಿಸ್ತಿದ್ದಾರಂತೆ. ಮೂವರು ಮಕ್ಕಳು ಮಾಡ್ಕೊಳ್ಳಿ ಅನ್ನೋ ಸಂದೇಶವಿರುವ ಸ್ಲೋಗನ್ನುಗಳು, ಪ್ರಚಾರ ಸಾಮಗ್ರಿಗಳನ್ನು ಮಾಡಿಕೊಡುವವರಿಗೆ ಭಾರಿ ಮೊತ್ತದ ಪ್ರೋತ್ಸಾಹಧನ ನೀಡ್ತಾರಂತೆ’, ಬಿಸಿನೆಸ್‌ಮನ್ ಸ್ಟೈಲಲ್ಲಿ ಪ್ರೆಸೆಂಟೇಶನ್ ಕೊಟ್ಟ.

‘ಚೀನಾ ಅಂದ ಮೇಲೆ ಹುಷಾರಾಗಿರು. ಕೋವಿಡ್ ಟೈಮಲ್ಲಿ ಬೇಕಾದಷ್ಟು ಜನ ಬಿಸಿನೆಸ್ ಕೊಲಾಬರೇಶನ್ ಅಂತ ಟೋಪಿ ಹಾಕ್ತಿದಾರೆ’ ಎಂದು ಬುದ್ಧಿ ಹೇಳಿದೆ.

ನಮ್ಮ ಮಾತುಕತೆ ನಡೆಯುತ್ತಿರುವಾಗಲೇ ‘ಅತ್ತಾರೆ ಅಳಲಿ, ಈ ಕೂಸು ನಮಗಿರಲಿ... ಮಕ್ಕಳಿರಲವ್ವಾ ಮನೆ ತುಂಬಾ...’ ಜನಪದ ಗೀತೆ ರೇಡಿಯೊದಲ್ಲಿ ಬಿತ್ತರವಾಗುತ್ತಿತ್ತು. ‘ಈ ಹಾಡನ್ನು ಚೈನೀ ಭಾಷೆಗೆ ಅನುವಾದ ಮಾಡಿಸಿ, ಹಾಡಿಸಿದರೆ ಮಹದೇವನ ಬಿಸಿನೆಸ್ ಹೆಚ್ಚಾಗಬಹುದು’ ಎಂದೆ. ‘ಮೊದಲು ಅವರ ಮನೆಯಲ್ಲಿ ಕೂಸೊಂದು ಅಳಲಿ. ನಿಮ್ಮ ಫ್ರೆಂಡ್‌ಗೆ ಮದುವೆಯಾಗಿ ಆಗ್ಲೇ ಐದು ವರ್ಷವಾಯಿತು’ ಎಂದಳು ಮಡದಿ.

ಸಂಗತ

ಮಕ್ಕಳ ಜೀವ ಪಣಕ್ಕಿಡದಿರಿ...

ಕೋವಿಡ್ ಸೋಂಕಿನಿಂದ ಮಕ್ಕಳನ್ನು ಪಾರು ಮಾಡಲು ತಕ್ಷಣವೇ ಸರ್ಕಾರ ಯುದ್ಧೋಪಾದಿಯಲ್ಲಿ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕಿದೆ

• ರೂಪ ಹಾಸನ

‘**ಕೋವಿಡ್** ಮೂರನೆಯ ಅಲೆ ಮಕ್ಕಳ ಮೇಲೆ ಹೆಚ್ಚಿನ ಪರಿಣಾಮ ಬೀರಲಿದೆ’ ಎಂದು ಕೆಲ ತಜ್ಞವೈದ್ಯರು ಹೇಳುತ್ತಿದ್ದಾರೆ. ಇನ್ನೊಂದೆಡೆ, ‘ಇದು ಮಕ್ಕಳ ಮೇಲೆ ಬೀರುವ ಪರಿಣಾಮ ಕಡಿಮೆ’ ಎಂದು ಕೇಂದ್ರ ಆರೋಗ್ಯ ಸಚಿವಾಲಯ ಹೇಳುತ್ತಿದೆ. ಆದರೆ ರಾಷ್ಟ್ರೀಯ ಮಕ್ಕಳ ಹಕ್ಕುಗಳ ಆಯೋಗವು ‘ಈ ಕುರಿತು ಇನ್ನೂ ಹೆಚ್ಚಿನ ಅಧ್ಯಯನ, ಸಂಶೋಧನೆಗಳು ನಡೆಯುತ್ತಿದ್ದು ಯಾವುದನ್ನೂ ಅಧಿಕೃತವಾಗಿ ಸ್ಪಷ್ಟಗೊಳಿಸಲಾಗದ ಕಾರಣ, ಕೇಂದ್ರ ಹಾಗೂ ರಾಜ್ಯಗಳು ಮಕ್ಕಳು ಮತ್ತು ಶಿಶುಗಳ ರಕ್ಷಣೆಗೆ ಅಗತ್ಯವಿರುವ ಸಿದ್ಧತೆ ಕೈಗೊಳ್ಳಬೇಕು’ ಎಂದು ಸಲಹೆ ನೀಡಿದೆ. ನಿಜಕ್ಕೂ ಆಗಬೇಕಿರುವುದು ಇದೇ!

ಕೋವಿಡ್ ಎರಡನೇ ಅಲೆಯ ತೀವ್ರತೆಯ ಕುರಿತು ತಜ್ಞರು ಎಚ್ಚರಿಸಿದ್ದರೂ ತಕ್ಕಷ್ಟು ವೈದ್ಯಕೀಯ ಸಿದ್ಧತೆ ನಡೆಸದ ಸರ್ಕಾರದ ನಿರ್ಲಕ್ಷ್ಯದಿಂದಾಗಿ ದೊಡ್ಡ ದುರಂತಕ್ಕೆ ತಲೆಯೊಡ್ಡಿದ್ದೇವೆ. ಸಹಸ್ರಾರು ಜೀವಗಳು ಬಲಿಯಾಗಿವೆ. ಆದರೆ ಇಂತಹ ನಿರ್ಲಕ್ಷ್ಯ ಮತ್ತು ಊಹಾಪೋಹಗಳನ್ನು ಆಧರಿಸಿ ಜೀವವನ್ನು ಪಣಕ್ಕಿಟ್ಟು ಉಡಾಫೆ ಮಾಡುವುದನ್ನು ಈ ಬಾರಿ ಮಕ್ಕಳ ವಿಷಯಕ್ಕಂತೂ ಸಹಿಸಲು ಸಾಧ್ಯವೇ ಇಲ್ಲ. ಏಕೆಂದರೆ ಈಗಾಗಲೇ ರಾಜ್ಯದಲ್ಲಿ 18 ವರ್ಷದೊಳಗಿನ ಒಂದು ಲಕ್ಷದಷ್ಟು ಮಕ್ಕಳು ಕೋವಿಡ್ ಸೋಂಕಿಗೂ ಕೆಲವು ಮಕ್ಕಳು ಸಾವಿಗೂ ಈಡಾಗಿದ್ದಾರೆ. ಜೊತೆಗೆ ಸದ್ಯ ರಾಜ್ಯದಲ್ಲಿ ಆರು ವರ್ಷದೊಳಗಿನ 4.43 ಲಕ್ಷ ಮಕ್ಕಳು ಅಪೌಷ್ಟಿಕತೆಯ ಸುಳಿಯಲ್ಲಿರುವುದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಅಂಕಿ ಅಂಶದಿಂದ ತಿಳಿದುಬರುತ್ತದೆ (ಪ್ರ.ವಾ., ಮೇ 21).

ಅಪೌಷ್ಟಿಕತೆ ಸಮಸ್ಯೆ ಹೆಚ್ಚಿರುವ ಮಕ್ಕಳಲ್ಲಿ ರೋಗನಿರೋಧಕ ಶಕ್ತಿ ಕಡಿಮೆ ಇರುವುದರಿಂದ, ಅವರಿಗೆ ಸೋಂಕು ತಗಲುವ ಮತ್ತು ಅಪಾಯಕಾರಿ ಹಂತವನ್ನು ತಲುಪುವ ಸಾಧ್ಯತೆ ಹೆಚ್ಚು ಎಂಬುದನ್ನಂತೂ ಎಲ್ಲ ತಜ್ಞರು ದೃಢಪಡಿಸಿದ್ದಾರೆ. ಇದು ನಿಜಕ್ಕೂ ಆತಂಕಕಾರಿ.

ಹೀಗಾಗಿ, ಸೋಂಕಿಗೀಡಾಗಬಹುದಾದ ಸಾಧ್ಯತೆ ಇರುವ ದುರ್ಬಲ ಮಕ್ಕಳನ್ನು ರಕ್ಷಿಸಲು ತಕ್ಷಣವೇ ಯುದ್ಧೋಪಾದಿಯಲ್ಲಿ ಸರ್ಕಾರ ಕೆಳಕಂಡ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಲೇಬೇಕಿದೆ:

- ಪ್ರತೀ ಮಗುವನ್ನು ಅಪೌಷ್ಟಿಕತೆಯಿಂದ ಹೊರತರಲು ಈಗಾಗಲೇ ಇರುವ ಯೋಜನೆಯೊಂದಿಗೆ ತುರ್ತು ವಿಶೇಷ ಕಾರ್ಯಯೋಜನೆಯನ್ನು ರೂಪಿಸಲು ಆಯಾ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ, ಸಂಬಂಧಿಸಿದ ಇಲಾಖೆ ಮತ್ತು ಆಸಕ್ತ ಸಾಮಾಜಿಕ ಕಾರ್ಯಕರ್ತರು, ಸ್ವಯಂಸೇವಾ ಸಂಸ್ಥೆಗಳು, ಮಕ್ಕಳ ತಜ್ಞರು, ಮಾನಸಿಕ ತಜ್ಞರು ಹಾಗೂ ದಾನಿಗಳನ್ನು ಒಳಗೊಂಡ ಸಮಿತಿಯೊಂದನ್ನು ತಕ್ಷಣವೇ ರಚಿಸಿ, ಅದರ ಸಲಹೆಯನ್ನು ಆಧರಿಸಿ ಯೋಜನೆ ರೂಪಿಸಿ ಅನುಷ್ಠಾನಗೊಳಿಸಬೇಕು.
- ವಿಭಿನ್ನ ಆರೋಗ್ಯ ಸಮಸ್ಯೆ, ಅಪೌಷ್ಟಿಕತೆ ಮತ್ತು ರಕ್ತಹೀನತೆಯ ತೀವ್ರತೆಯ ಆಧಾರದಲ್ಲಿ ಮಕ್ಕಳನ್ನು ಮೂರು ವಿಭಾಗ ಮಾಡಿ, ತುರ್ತು ವೈದ್ಯಕೀಯ ಅವಶ್ಯಕತೆಯ ಆದ್ಯತೆಯ ಮೇಲೆ ಪ್ರತೀ ಮಗುವನ್ನು ವೈದ್ಯರ ವೈಯಕ್ತಿಕ ನಿಗಾದಲ್ಲಿ ಇರಿಸಬೇಕು. ಮಗುವಿನ ತಪಾಸಣೆ ನಂತರ, ಅದರ ಆರೋಗ್ಯ ಸ್ಥಿತಿಯನ್ನು ಅನುಸರಿಸಿ ವೈದ್ಯರು ಪ್ರತ್ಯೇಕ ಪೌಷ್ಟಿಕಾಂಶದ ಟಾನಿಕ್, ಮಾತ್ರೆ ಮತ್ತು ಆಹಾರವನ್ನು ಸೂಚಿಸಬೇಕು. ಮಗುವಿನ ಆರೋಗ್ಯ ಸ್ಥಿತಿ, ನೀಡಲಾಗಿರುವ ಚಿಕಿತ್ಸೆ, ತೆಗೆದುಕೊಳ್ಳಬೇಕಿರುವ ಮುನ್ನೆಚ್ಚರಿಕೆ ಕ್ರಮಗಳನ್ನು ಮಗುವಿನ ಹೆಸರಲ್ಲಿ ಕಡತ ರೂಪಿಸಿ ನಮೂದಿಸಬೇಕು ಮತ್ತು ಈ ಕುರಿತು ಪೋಷಕರಿಗೆ ಅವಶ್ಯಕ ಎಚ್ಚರಿಕೆ ನೀಡಬೇಕು. ಈ ಯೋಜನೆಯ ಅನುಷ್ಠಾನಕ್ಕೆ ವೈದ್ಯರು, ನರ್ಸ್, ಅಂಗನವಾಡಿ, ಆಶಾ ಕಾರ್ಯಕರ್ತೆಯರ ಜೊತೆಗೆ ಆಸಕ್ತ ಸ್ವಯಂಸೇವಕರನ್ನೂ ಒಳಗೊಂಡು ವಿಕೇಂದ್ರೀಕೃತ ಕಾರ್ಯವಿಧಾನವನ್ನು ತಕ್ಷಣವೇ ರೂಪಿಸಬೇಕು. ಇದರ ಮೇಲ್ವಿಚಾರಣೆಯ ಜವಾಬ್ದಾರಿಯನ್ನು ಕಡ್ಡಾಯವಾಗಿ ಉನ್ನತಾಧಿಕಾರಿಗಳಿಗೆ ವಹಿಸಬೇಕು.

- ಕೋವಿಡ್ ಸೋಂಕಿಗೆ ಒಳಗಾಗದಂತೆ ಮುನ್ನೆಚ್ಚರಿಕೆ ವಹಿಸಲು ತೆಗೆದುಕೊಳ್ಳಬೇಕಾದ ಕ್ರಮಗಳನ್ನು ಮುದ್ರಿಸಿ, ಪೋಷಕರು ಮತ್ತು ಕಾರ್ಯಯೋಜನೆಯ ಸಿಬ್ಬಂದಿಗೆ ಹಂಚಬೇಕು. ಅದನ್ನು ಕಡ್ಡಾಯವಾಗಿ ಅನುಸರಿಸಲು ಮನೆ ಮನೆಗೆ ತೆರಳಿ ಜಾಗೃತಿ ಮೂಡಿಸಬೇಕು.
- ಅಂಚಿಗೆ ಒತ್ತರಿಸಲ್ಪಟ್ಟ, ನಿರ್ಗತಿಕ, ಬಡತನದ ಕುಟುಂಬದಲ್ಲಿರುವ, ಆರೋಗ್ಯ ಸಮಸ್ಯೆ ಇರುವ ಮಗುವನ್ನು ತಕ್ಷಣವೇ ಗುರುತಿಸಿ, ಮಗುವಿಗೆ ಸರ್ವತೋಮುಖ ಆರೈಕೆ ಪ್ರಾರಂಭಿಸಬೇಕು.
- ಪ್ರತೀ ಆಸ್ಪತ್ರೆ ಮತ್ತು ಚಿಕಿತ್ಸಾ ಕೇಂದ್ರವೂ ಮಕ್ಕಳ ಚಿಕಿತ್ಸೆಗಾಗಿ ಸರ್ವ ಸುಸಜ್ಜಿತಗೊಳ್ಳಬೇಕು. ಮಕ್ಕಳಿಗೆ ಅವಶ್ಯಕ ವೆಂಟಿಲೇಟರ್, ಆಕ್ಸಿಜನ್, ಐಸಿಯು ಬೆಡ್ ಇನ್ನಿತರ ವೈದ್ಯಕೀಯ ಸೌಲಭ್ಯಗಳನ್ನು ಗರಿಷ್ಠ ಪ್ರಮಾಣಕ್ಕೆ ಹೆಚ್ಚಿಸಬೇಕು.
- ಪ್ರತೀ ಆಸ್ಪತ್ರೆಯಲ್ಲಿ ಅಗತ್ಯ ಪ್ರಮಾಣದ ಮಕ್ಕಳ ತಜ್ಞರು, ವೈದ್ಯರು, ನರ್ಸ್ ಮತ್ತು ಸೇವಾ-ತಾಂತ್ರಿಕ ಸಿಬ್ಬಂದಿಯನ್ನು ತುರ್ತಾಗಿ ನೇಮಿಸಬೇಕು.
- ಮಕ್ಕಳ ಕೋವಿಡ್ ಸಮಸ್ಯೆ ಸಂಬಂಧಿತ ವೈದ್ಯಕೀಯ ಸಲಹೆ ಪಡೆಯಲು, 24 ಗಂಟೆ ಕಾರ್ಯ ನಿರ್ವಹಿಸುವ ವಿಕೇಂದ್ರೀಕೃತ ಆರೋಗ್ಯ ಸಹಾಯವಾಣಿಯನ್ನು ಆರಂಭಿಸಬೇಕು.
- ಅಪೌಷ್ಟಿಕತೆ ಮತ್ತು ಅನಾರೋಗ್ಯಕ್ಕೆ ಒಳಗಾಗುವ ಸಾಧ್ಯತೆ ಇರುವ ಸರ್ಕಾರಿ ಮತ್ತು ಖಾಸಗಿ ಮಕ್ಕಳ ಅನಾಥಾಶ್ರಮಗಳು, ದತ್ತು ಕೇಂದ್ರಗಳು, ಬಾಲಮಂದಿರಗಳು, ವೀಕ್ಷಣಾಮಂದಿರ, ವಸತಿಯುತ ಶಾಲೆಗಳಲ್ಲಿನ ಅಂಗವಿಕಲ ಮಕ್ಕಳನ್ನು ವೈದ್ಯಕೀಯ ತಪಾಸಣೆಗೆ ಒಳಪಡಿಸಬೇಕು. ಅವಶ್ಯಕತೆ ಇರುವ ಮಗುವಿಗೆ ನಿಯಮಿತ ಮತ್ತು ತುರ್ತಾಗಿ ವೈದ್ಯಕೀಯ ಸೌಲಭ್ಯ ನೀಡಲು ಪ್ರತ್ಯೇಕ ತಂಡಗಳನ್ನು ರಚಿಸಿ, ಯೋಜನೆ ರೂಪಿಸಿ ಅನುಷ್ಠಾನಗೊಳಿಸಬೇಕು.

ವಾಚಕರ ವಾಣಿ

ಸುಳ್ಳು ಸಂದೇಶಕ್ಕೆ ಸ್ಫೂರ್ತಿ?

ಸಾಮಾಜಿಕ ಜಾಲತಾಣಗಳಲ್ಲಿ ಇತ್ತೀಚೆಗಂತೂ ಹಲವು ಸಂದೇಶಗಳನ್ನು ಫೋಟೊಶಾಪ್ ಮಾಡಿ ವಿವಿಧ ನಾಯಕರ, ಪಕ್ಷಗಳ ತೇಜೋವಧೆ ಮಾಡಲಾಗುತ್ತಿದೆ. ಇದನ್ನು ಅವರವರ ಐ.ಟಿ ಸೆಲ್‌ಗಳು ಮಾಡುತ್ತಿರಬಹುದು. ಅವುಗಳನ್ನು ವ್ಯವಸ್ಥಿತವಾಗಿ ಅಭಿಮಾನಿಗಳು, ಭಕ್ತರು, ಕಾರ್ಯಕರ್ತರು ಹರಿಯಬಿಡುತ್ತಿದ್ದಾರೆ. ವಿಪರ್ಯಾಸವೆಂದರೆ, ಸಾಧನೆಗಳಿಗಿಂತ ಸುಳ್ಳನ್ನೇ ಸತ್ಯವೆಂಬಂತೆ ಬಿಂಬಿಸಲಾಗುತ್ತಿದೆ. ಕೀಳುಮಟ್ಟದ ಭಾಷೆಯನ್ನು ಸಹ ಬಳಸಲಾಗುತ್ತಿದೆ. ಅಂಗೈಯಲ್ಲಿ ವಿಶ್ವವನ್ನು ಕಾಣಿಸುವ ಮೊಬೈಲ್‌ಗಳು ಮನುಕುಲಕ್ಕೆ ಉತ್ತಮ ಸಂದೇಶ, ಮಾಹಿತಿ ಕೊಡುವುದಕ್ಕಿಂತ ಯುವಜನಾಂಗಕ್ಕೆ ಮಾರಕ ಸಂದೇಶಗಳನ್ನು ನೀಡುತ್ತಿರುವುದು ವಿಷಾದದ ಸಂಗತಿ.

ತೇಜೋವಧೆಗೆ ಒಳಪಟ್ಟವರು ಯಾವುದೇ ಕಾನೂನು ಕ್ರಮ ಜರುಗಿಸದೇ ಹೋಗುವುದು ಇವರುಗಳಿಗೆ ಇಂತಹ ಸುಳ್ಳು ಸಂದೇಶಗಳನ್ನು ಇನ್ನಷ್ಟು ಹೆಚ್ಚಿಗೆ ಹರಿಯಬಿಡಲು ಸ್ಫೂರ್ತಿಯಾಗಿರಬಹುದು. ಇಂತಹ ಬೆಳವಣಿಗೆ ಸರಿಯಲ್ಲ.

ನಗರ ಗುರುದೇವ್ ಭಂಡಾರ್ಕರ್, ಹೊಸನಗರ

‘ಸರ್ಕಾರಿ ವೈದ್ಯ’ರಿಗೊಂದು ಕೋಟಾ ಇರಲಿ

ಸರ್ಕಾರಿ ಆಸ್ಪತ್ರೆಗಳಲ್ಲಿ ವೈದ್ಯರ ತೀವ್ರ ಕೊರತೆ ಇರುವುದು ಎಲ್ಲರಿಗೂ ತಿಳಿದಿರುವ ಸಂಗತಿ. ಜಿಲ್ಲಾಸ್ಪತ್ರೆ ಮತ್ತು ತಾಲ್ಲೂಕು ಆಸ್ಪತ್ರೆಗಳಲ್ಲೇ ಹಲವು ವೈದ್ಯರ ಹುದ್ದೆಗಳು ಖಾಲಿ ಇವೆ. ಇನ್ನು ಸಮುದಾಯ ಆರೋಗ್ಯ ಕೇಂದ್ರ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಂತೂ ಕೇಳುವುದೇ ಬೇಡ. ಲಕ್ಷಾಂತರ ರೂಪಾಯಿ ಸಂಬಳ ನೀಡುತ್ತೇವೆಂದರೂ ವೈದ್ಯರು ಕೆಲಸಕ್ಕೆ ಬರುತ್ತಿಲ್ಲ. ಗ್ರಾಮೀಣ ಸೇವೆಯನ್ನು ಕಡ್ಡಾಯ ಮಾಡಲಾಗಿದ್ದರೂ ಇಂತಹ ಪರಿಸ್ಥಿತಿ ಇದೆ.

ವೈದ್ಯಕೀಯ ಕೋರ್ಸ್‌ನಲ್ಲಿಯೇ ‘ಸರ್ಕಾರಿ ವೈದ್ಯರ ಹುದ್ದೆ’ಗಳಿಗೆ ಎಂದು ಕೋಟಾ ನಿಗದಿಪಡಿಸಿದರೆ ಈ ಸಮಸ್ಯೆಗೆ ಸ್ವಲ್ಪಮಟ್ಟಿಗೆ ಪರಿಹಾರ ಸಿಗಬಹುದೇನೊ. ಪ್ರತಿವರ್ಷ ವೈದ್ಯಕೀಯ ಪದವಿಯ ಸೀಟ್‌ಗಳಲ್ಲಿ ಸರ್ಕಾರಿ ವೈದ್ಯರ ಹುದ್ದೆಗೆಂದೇ ಪ್ರತೀ ಕಾಲೇಜಿಗೆ ಕನಿಷ್ಠ ಒಂದು ಸೀಟ್ ಮೀಸಲಿರಿಸಿದರೂ ಐದು ವರ್ಷಗಳ ನಂತರ ಪ್ರತಿವರ್ಷ 30-40 ವೈದ್ಯರು ಸರ್ಕಾರಿ ಸೇವೆಗೆ ದೊರಕುತ್ತಾರೆ. ಆ ಕೋಟಾದಲ್ಲಿ ವೈದ್ಯಕೀಯ ಪದವಿ ಪಡೆದು ಬಂದವರು ಕಡ್ಡಾಯವಾಗಿ ಕೇವಲ ಸರ್ಕಾರಿ ಆಸ್ಪತ್ರೆಯಲ್ಲಿ ಕೆಲಸ ಮಾಡುವಂತಾಗಬೇಕು. ಸ್ವಲ್ಪ ವರ್ಷಗಳ ಸೇವೆಯ ಬಳಿಕ ಸ್ನಾತಕೋತ್ತರ ಪದವಿಗೆ ಕೂಡ ಅವಕಾಶ ಕಲ್ಪಿಸಬಹುದು. ಈ ಕೋಟಾದಲ್ಲಿ ಎಲ್ಲರಿಗೂ ಆಸಕ್ತಿ ಇಲ್ಲದಿದ್ದರೂ ಯಾರಾದರೂ ಪ್ರತಿಭಾವಂತ ಬಡ ವಿದ್ಯಾರ್ಥಿಗಳಂತೂ ಖಂಡಿತ ಬರುತ್ತಾರೆ. ಈ ದಿಸೆಯಲ್ಲಿ ಸರ್ಕಾರ ಯೋಚಿಸಿ ಸೂಕ್ತ ಕ್ರಮ ಕೈಗೊಂಡರೆ ಸರ್ಕಾರಿ ಆಸ್ಪತ್ರೆಗಳಲ್ಲಿ ವೈದ್ಯರ ಕೊರತೆಗೆ ಪರಿಹಾರ ಸಿಗಬಹುದೇನೊ.

ಮಂಜುನಾಥ ಎಸ್.ಎಸ್., ಬೆಂಗಳೂರು

ಕೇಳುವವರಾರು?

ನಮ್ಮನ್ನು ಆಳುತ್ತಿರುವವರು
ಭಾಷಣಪ್ರಿಯರು,
ನಾವಾದರೋ ಹಸಿದವರು,
ಯಾರಿದ್ದೀರಿ ನಮ್ಮಗಳ
ಮನ್ ಕೀ ಬಾತ್ ಕೇಳುವವರು?

ಗೋವಿಂದು, ಬೆಂಗಳೂರು

ಕ್ಯಾಸ್ಟ್ ಈಸ್ ದಿ ಕಿಂಗ್...

ಮುಖ್ಯಮಂತ್ರಿಯೊಂದಿಗೆ ಮುನಿಸಿಕೊಂಡಿರುವ ಸಿ.ಪಿ.ಯೋಗೇಶ್ವರ್ ಅವರು ದೆಹಲಿ ಭೇಟಿಯ ನಂತರ ಮಠಾಧೀಶರನ್ನು ಭೇಟಿ ಮಾಡಿದ್ದಾರೆ. ಇದು, ತಮ್ಮ ರಾಜಕೀಯ ಜೀವನದ ಮುಂದಿನ ಹೆಜ್ಜೆ ಕುರಿತು ಸಲಹೆ ಪಡೆಯುವ ಸಲುವಾಗಿ ಆಗಿರಬಹುದು. ಪ್ರಜಾಪ್ರಭುತ್ವದಲ್ಲಿ ಮತದಾರನೇ ಮಹಾಪ್ರಭು. ಮತದಾರನ ಕೃಪಾಕಟಾಕ್ಷವಿಲ್ಲದೆ ಯಾವ ರಾಜಕಾರಣಿಯೂ ಚಾಲ್ತಿಯಲ್ಲಿ ಇರುವುದಿಲ್ಲ. ಹಾಗಿದ್ದರೂ ಮತದಾರ ನೆನಪಾಗುವುದು ಚುನಾವಣೆಯಲ್ಲಿ ಮಾತ್ರ.

ಸರ್ಕಾರದಲ್ಲಿ ಮಂದಿರ, ಮಸೀದಿ, ಚರ್ಚುಗಳ ಪ್ರಭಾವ ಇರಬಾರದು ಎಂದು ಸಂವಿಧಾನ ಪ್ರತಿಪಾದಿಸುತ್ತದೆ. ಅಂತಹ ಸಂವಿಧಾನವನ್ನು ಜಾರಿಗೆ ತಂದು ಏಳು ದಶಕಗಳೇ ಕಳೆದಿದ್ದರೂ ನಾವು ಸಂವಿಧಾನ ಪಾಲನೆಯಲ್ಲಿ ಹಿಂದೆ ಬಿದ್ದಿದ್ದೇವೆ. ಸಂತೃಪ್ತ, ಅತೃಪ್ತ, ಮಾಜಿ, ಹಾಲಿ, ಭಾವಿ ರಾಜಕಾರಣಿಗಳೆಲ್ಲರೂ ಮಠಾಧೀಶರನ್ನು ಗೋಪ್ಯವಾಗಿ ಭೇಟಿ ಮಾಡುವುದು ಪ್ರಜಾಪ್ರಭುತ್ವದ ಹಿಮ್ಮುಖ ಚಲನೆಯಂತೆ ಭಾಸವಾಗುತ್ತದೆ. ಜೊತೆಗೆ ಇದರಿಂದ ‘ಕ್ಯಾಸ್ಟ್ ಈಸ್ ದಿ ಕಿಂಗ್ ಮೇಕರ್ ಆಫ್ ದಿಸ್ ಕಂಟ್ರಿ’ ಎಂಬ ಕುಹಕ ನುಡಿಗೆ ಇಂಬು ಕೊಟ್ಟಂತಾಗುತ್ತದೆ.

ಗಣಪತಿ ನಾಯ್ಕ್, ಕಾನಗೋಡ

ಉಪದೇಶ ಸಾಕುಮಾಡಿ, ಮಾದರಿಯಾಗಿ

ನೂತನವಾಗಿ ನೇಮಕಗೊಂಡ ವೈದ್ಯರೊಂದಿಗೆ ನಡೆಸಿದ ಸಂವಾದದಲ್ಲಿ ಮಾತನಾಡಿದ ರಾಜ್ಯ ಆರೋಗ್ಯ ಸಚಿವರು, ‘ಖಾಸಗಿ ಆಸ್ಪತ್ರೆಗಳಲ್ಲಿ ಸಿಗುವ ಗುಣಮಟ್ಟದ ವೈದ್ಯಕೀಯ ಸೇವೆಗಳು ಸರ್ಕಾರಿ ಆಸ್ಪತ್ರೆಗಳಲ್ಲಿ ಸಿಗುವುದಿಲ್ಲ ಎಂಬ ಭಾವನೆ ಜನರಲ್ಲಿದೆ. ಹೊಸ ವೈದ್ಯರು ಗ್ರಾಮೀಣ ಪ್ರದೇಶಗಳ ಆಸ್ಪತ್ರೆಗಳಲ್ಲಿ ಕೆಲಸ ಮಾಡಿ ಆ ಆಸ್ಪತ್ರೆಗಳನ್ನು ವಿಶ್ವ ದರ್ಜೆಯ ಆಸ್ಪತ್ರೆಗಳನ್ನಾಗಿ ಪರಿವರ್ತಿಸಬೇಕು. ಕಾರ್ಪೊರೇಟ್ ವಲಯದ ಮಾದರಿಯಲ್ಲಿ ಕಾರ್ಯನಿರ್ವಹಿಸಿ ಸರ್ಕಾರಿ ಆಸ್ಪತ್ರೆಗಳ ಗುಣಮಟ್ಟ ಹೆಚ್ಚಿಸುವ ಸಂಕಲ್ಪ ತೊಡಬೇಕು’ ಎಂದಿದ್ದಾರೆ (ಪ್ರ.ವಾ., ಜೂನ್ 3). ಹೀಗೆಲ್ಲಾ ಉಪದೇಶ ಮಾಡುವ ಸಚಿವರುಗಳು, ಜನಪ್ರತಿನಿಧಿಗಳೇ ತಮ್ಮ ಆರೋಗ್ಯದಲ್ಲಿ ಏರುಪೇರಾದಾಗ ಖಾಸಗಿ ಆಸ್ಪತ್ರೆಗಳತ್ತ ದೌಡಾಯಿಸುತ್ತಾರೆ. ಸರ್ಕಾರದ ಖರ್ಚಿನಲ್ಲಿ ಪುಗಸಟ್ಟೆ ಚಿಕಿತ್ಸೆ ಪಡೆದುಕೊಳ್ಳುವುದನ್ನು ರೂಢಿ ಮಾಡಿಕೊಂಡಿರುತ್ತಾರೆ. ಇದನ್ನು ಬಿಟ್ಟು ಎಲ್ಲಾ ಜನಪ್ರತಿನಿಧಿಗಳು ಹಾಗೂ ರಾಜಕೀಯ ಮುಖಂಡರು ಅನಾರೋಗ್ಯದ ಸಂದರ್ಭದಲ್ಲಿ ಚಿಕಿತ್ಸೆಗಾಗಿ ಸರ್ಕಾರಿ ಆಸ್ಪತ್ರೆಗಳಿಗೆ ಹೋಗುವುದನ್ನು ರೂಢಿ ಮಾಡಿಕೊಳ್ಳಲಿ. ಈ ವಿಷಯದಲ್ಲಿ ತಾವು ಮೊದಲು ಮಾದರಿಯಾಗಲಿ. ಇದರಿಂದ ಸರ್ಕಾರಿ ಆಸ್ಪತ್ರೆಗಳಲ್ಲಿನ ಅವ್ಯವಸ್ಥೆಯನ್ನು ತಕ್ಕ ಮಟ್ಟಿಗೆ ನಿವಾರಣೆ ಮಾಡಬಹುದು.

ಗ್ರಾಮೀಣ ಪ್ರದೇಶಗಳ ಆಸ್ಪತ್ರೆಗಳನ್ನು ವಿಶ್ವ ದರ್ಜೆಯ ಆಸ್ಪತ್ರೆಗಳನ್ನಾಗಿ ಪರಿವರ್ತಿಸುವ ಬದಲು ವೈದ್ಯರು ಮತ್ತು ವೈದ್ಯಕೀಯ ಸಿಬ್ಬಂದಿ ಸದಾಕಾಲ ಜನರಿಗೆ ದೊರೆಯುವಂತೆ ಆಗಬೇಕು. ಗ್ರಾಮೀಣ ಭಾಗದಲ್ಲಿ ಕಾರ್ಯನಿರ್ವಹಿಸುವ ವೈದ್ಯರು ಮತ್ತು ವೈದ್ಯಕೀಯ ಸಿಬ್ಬಂದಿಗೆ ನಗರ ಪ್ರದೇಶಗಳಲ್ಲಿಯ ವೈದ್ಯರು ಮತ್ತು ವೈದ್ಯಕೀಯ ಸಿಬ್ಬಂದಿಗೆ ನೀಡುವುದಕ್ಕಿಂತ ಹೆಚ್ಚಿನ ವೇತನ, ಭತ್ಯೆಯನ್ನು ನೀಡಿ, ಆಕರ್ಷಣೀಯ ಸೌಲಭ್ಯಗಳನ್ನು ಒದಗಿಸುವ ಬಗ್ಗೆ ಗಮನ ಹರಿಸುವುದು ಅತ್ಯಂತ ಸೂಕ್ತ ಮತ್ತು ಅವಶ್ಯಕ ಕೂಡ.

ಕೆ.ಪ್ರಭಾಕರ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಕೋವಿಡ್–19 ಸುಳ್ಳು ಸುದ್ದಿಗಳ ಸುತ್ತ

ಮಾಹಿತಿ ಸ್ಫೋಟ ಮತ್ತು ಸಾಮಾಜಿಕ ಜಾಲತಾಣಗಳ ಭರಾಟೆಯ ಈ ಸಂದರ್ಭದಲ್ಲಿ ಕೋವಿಡ್–19 ಪಿಡುಗಿನ ಸುತ್ತ ಹುಟ್ಟಿಕೊಂಡ ಮತ್ತು ಹರಿದಾಡಿದ ಸುಳ್ಳು ಸುದ್ದಿಗಳಿಗೆ ಲೆಕ್ಕವಿಲ್ಲ. ಕೋವಿಡ್‌ನಂತಹ ಪಿಡುಗಿನ ವಿಚಾರದಲ್ಲಿ ಸುಳ್ಳು ಸುದ್ದಿಗಳನ್ನು ಹರಡುವುದು ಮತ್ತು ಜನರು ಅದನ್ನು ನಂಬಿ ಅದಕ್ಕೆ ಅನುಗುಣವಾಗಿ ನಡೆದುಕೊಳ್ಳುವುದು ಅಪಾಯಕ್ಕೆ ಕಾರಣ ಆಗಬಹುದು. ಇಂತಹ ಸುಳ್ಳು ಸುದ್ದಿಗಳು ಹೇಳಿದಂತೆ ಮಾಡಿದ ಕಾರಣಕ್ಕಾಗಿ 2020ರ ಮೊದಲ ಮೂರು ತಿಂಗಳಲ್ಲಿ ಜಗತ್ತಿನಾದ್ಯಂತ ಆರು ಸಾವಿರಕ್ಕೂ ಹೆಚ್ಚು ಜನರು ಆಸ್ಪತ್ರೆಗೆ ದಾಖಲಾಗಬೇಕಾದ ಪರಿಸ್ಥಿತಿ ಉಂಟಾಗಿತ್ತು ಎಂದು ಇತ್ತೀಚಿನ ಅಧ್ಯಯನವೊಂದು ಹೇಳಿದೆ. ಕನಿಷ್ಠ 800 ಮಂದಿ ಮೃತಪಟ್ಟಿದ್ದಾರೆ ಎಂದೂ ಸಂಶೋಧಕರು ಮಾಹಿತಿ ನೀಡಿದ್ದಾರೆ.

ಕೊರೊನಾ ಎಂಬ ವೈರಾಣು ಇಲ್ಲ, ಕೋವಿಡ್ ಎಂಬ ರೋಗವೇ ಇಲ್ಲ ಎಂಬುದರಿಂದ ತೊಡಗಿ ಕೋವಿಡ್ ಲಸಿಕೆಯು ಅತ್ಯಂತ ಅಪಾಯಕಾರಿ ಎಂಬಲ್ಲಿವರೆಗೆ ಸುಳ್ಳುಸುದ್ದಿಗಳು ಹರಡಿವೆ. ಕೋವಿಡ್ ಲಸಿಕೆಯು ಮನುಷ್ಯನ ಡಿಎನ್‌ಎಯನ್ನೇ ಬದಲಾಯಿಸುತ್ತದೆ, ಜನರ ಸಂತಾನೋತ್ಪತ್ತಿ ಸಾಮರ್ಥ್ಯವನ್ನು ಇಲ್ಲವಾಗಿಸುತ್ತದೆ ಮುಂತಾದ ಸುಳ್ಳುಗಳು ಭಾರತದಲ್ಲಿ ಮಾತ್ರವಲ್ಲ ಜಗತ್ತಿನ ಎಲ್ಲೆಡೆಯೂ ಹರಿದಾಡುತ್ತಿದೆ. ಲಸಿಕೆ ಕುರಿತ ಸುಳ್ಳು ಸುದ್ದಿಗಳಿಂದಾಗಿ ಲಸಿಕೆ ಹಾಕಿಸಿಕೊಳ್ಳಲು ಜನರು ಹಿಂದೇಟು ಹಾಕುತ್ತಿದ್ದಾರೆ. ಕೋವಿಡ್ ತಡೆಗೆ ಇರುವ ಅತ್ಯಂತ ಪರಿಣಾಮಕಾರಿ ದಾರಿ ಲಸಿಕೆ ಹಾಕಿಸಿಕೊಳ್ಳುವುದು. ಸುಳ್ಳು ಸುದ್ದಿಯಿಂದಾಗಿ ಜನರು ಲಸಿಕೆ ಹಾಕಿಸಿಕೊಳ್ಳದೇ ಇದ್ದರೆ ಕೋವಿಡ್ ವಿರುದ್ಧದ ಹೋರಾಟವೇ ವಿಫಲವಾಗಬಹುದು.

ಈಗಿನ ಡಿಜಿಟಲ್ ಯುಗದಲ್ಲಿ ಕೋವಿಡ್‌ನಂತಹ ಸಾಂಕ್ರಾಮಿಕದ ಬಗ್ಗೆ ಸುದ್ದಿಗಳು ಹರಡುವುದನ್ನು ತಪ್ಪಿಸಲು ಸಾಧ್ಯವಿಲ್ಲ. ಆದರೆ, ಅದರ ಪರಿಣಾಮವನ್ನು ಕನಿಷ್ಠಗೊಳಿಸಬಹುದು. ಅದಕ್ಕಾಗಿ ಹಲವು ಸಂಘ-ಸಂಸ್ಥೆಗಳು ಕೆಲಸ ಮಾಡುತ್ತಿವೆ. ಹತ್ತಾರು ಜನರೂ ಇದಕ್ಕೆ ಕೈಜೋಡಿಸಿದ್ದಾರೆ. ಸುಳ್ಳು ಸುದ್ದಿಯನ್ನು ಪರಿಶೀಲಿಸಿ, ಸತ್ಯ ಏನು ಎಂಬುದನ್ನು ತಿಳಿಸುವ ಕೆಲಸವನ್ನು ಮಾಡಲಾಗುತ್ತಿದೆ. 2020ರ ಜನವರಿ–ಮಾರ್ಚ್ ಅವಧಿಯಲ್ಲಿ ಇಂಗ್ಲಿಷ್ ಭಾಷೆಯಲ್ಲಿ ಹರಿದಾಡಿದ ಸುಳ್ಳು ಸುದ್ದಿಗಳ ಪರಿಶೀಲನೆ ಪ್ರಮಾಣವು ಶೇ 900ರಷ್ಟು ಹೆಚ್ಚಿದೆ ಎಂದು ರಾಯಿಟರ್ಸ್ ಪತ್ರಿಕೋದ್ಯಮ ಅಧ್ಯಯನ ಸಂಸ್ಥೆಯು ಹೇಳಿದೆ.

ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ) ಕೂಡ ಸುಳ್ಳು ಸುದ್ದಿ ತಡೆಯುವುದಕ್ಕಾಗಿ ಶ್ರಮಿಸುತ್ತಿದೆ. 'ಸ್ಟಾಪ್ ದ ಸ್ಪ್ರೆಡ್' ಎಂಬ ಜಾಗೃತಿ ಅಭಿಯಾನವನ್ನೂ ನಡೆಸಿದೆ. ವಿವಿಧ ಸಾಮಾಜಿಕ ಜಾಲತಾಣಗಳಲ್ಲಿ ಪ್ರಕಟವಾದ ಸುದ್ದಿಗಳ ಸತ್ಯಾಸತ್ಯತೆಯನ್ನು ಪರಿಶೀಲಿಸುವುದು ಹೇಗೆ ಎಂಬ ಬಗ್ಗೆ ಜಾಗೃತಿಯನ್ನೂ ಮೂಡಿಸಿದೆ. ಆದರೆ, ಡಬ್ಲ್ಯುಎಚ್‌ಒ ಬಗ್ಗೆಯೇ ಹಲವು ಸುಳ್ಳು ಸುದ್ದಿಗಳನ್ನು ಹರಿಬಿಡಲಾಗಿದೆ. ಲಾಕ್‌ಡೌನ್‌ಗೆ ಸಂಬಂಧಿಸಿ ನಾಲ್ಕು ಹಂತಗಳ ಪ್ರಕ್ರಿಯೆಯನ್ನು ಭಾರತಕ್ಕೆ ಡಬ್ಲ್ಯುಎಚ್‌ಒ ಸೂಚಿಸಿದೆ ಎಂಬುದು ಅದರಲ್ಲಿ ಒಂದು. ಇಂತಹ ಯಾವುದೇ ಪ್ರಕ್ರಿಯೆಯನ್ನು ಸೂಚಿಸಿಲ್ಲ, ಇದು ಸುಳ್ಳು ಸುದ್ದಿ ಎಂಬುದನ್ನು ಡಬ್ಲ್ಯುಎಚ್‌ಒ ತನ್ನ ವೆಬ್‌ಸೈಟ್‌ನಲ್ಲಿಯೇ ಪ್ರಕಟಿಸಿದೆ.

ಸುಳ್ಳುಗಳ ಸರಮಾಲೆ

- ಲಸಿಕೆ ಹಾಕಿಸಿಕೊಂಡವರು ಎರಡು ವರ್ಷ ಮಾತ್ರ ಬದುಕುತ್ತಾರೆ ಎಂದು ನೊಬೆಲ್ ಪುರಸ್ಕೃತ ವಿಜ್ಞಾನಿ ಲುಚ್ ಮೊಂಟಾನಿಯರ್ ಹೇಳಿದ್ದಾರೆ ಎಂಬ ಸುದ್ದಿ ವೈರಲ್ ಆಗಿತ್ತು. ಅವರು ಹಾಗೆ ಹೇಳಿಲ್ಲ ಎಂದು ಕೆಲವು ಫ್ಯಾಕ್ಟ್‌ಚೆಕ್ ವೇದಿಕೆಗಳು ಸ್ಪಷ್ಟಪಡಿಸಿವೆ
- ಆಮ್ಲಜನಕ ಸಿಲಿಂಡರ್‌ಗೆ ನೆಬ್ಯುಲೈಸರ್ ಪರ್ಯಾಯ ಎಂಬುದಾಗಿ ವೈದ್ಯರೊಬ್ಬರು ಪ್ರಾತ್ಯಕ್ಷಿಕೆ ನೀಡುತ್ತಿರುವ ವಿಡಿಯೊ ವೈರಲ್ ಆಗಿತ್ತು. ಅವರು ನೆಬ್ಯುಲೈಸರ್ ಬಳಕೆ ವಿಧಾನ ತೋರಿಸಿದ್ದರೇ ವಿನಾ, ಅದು ಪರ್ಯಾಯ ಎಂದು ಹೇಳಿರಲಿಲ್ಲ
- 'ಮಾಸ್ಕ್‌ನಲ್ಲಿ ಬ್ಯಾಕ್ಟೀರಿಯಾಗಳಿದ್ದು, ಅದನ್ನು ಧರಿಸಿದರೆ ಕೋವಿಡ್ ತಗುಲುತ್ತದೆ. ಬಿಸಿ ಮಾಡಿದರೆ ಕೀಟಾಣುಗಳು ಹೊರಬರುತ್ತವೆ' ಎಂದು ಬಿಂಬಿಸುವ ವಿಡಿಯೊವೊಂದು ವೈರಲ್ ಆಗಿತ್ತು. ಆದರೆ, ಬಟ್ಟೆಯ ಎಳೆಗಳು ಬಿಸಿ ಮಾಡಿದಾಗ ಅಲುಗಾಡಿದಂತೆ ಕಾಣಿಸುತ್ತದೆ. ಅದು ವೈರಾಣು ಅಲ್ಲ ಎಂಬುದನ್ನು ನಂತರ ಸ್ಪಷ್ಟಪಡಿಸಲಾಗಿತ್ತು
- ಕೋಳಿಗಳಿಂದ ಕಪ್ಪು ಶಿಲೀಂಧ್ರ ಸೋಂಕು ಮನುಷ್ಯರಿಗೆ ಹರಡುತ್ತದೆ ಎಂಬ ಸುದ್ದಿ ಇತ್ತೀಚೆಗೆ ವ್ಯಾಪಕವಾಗಿ ಹರಿದಾಡಿತ್ತು. ಇದಕ್ಕೆ ವೈಜ್ಞಾನಿಕ ಪುರಾವೆಗಳಿಲ್ಲ
- ಲಸಿಕೆಯನ್ನು ಮಾನವನ ಮೇಲೆ ಪ್ರಯೋಗಕ್ಕೆ ಒಳಪಡಿಸಿದ ವೇಳೆ ಸ್ವಯಂಸೇವಕರೊಬ್ಬರು ಮೃತಪಟ್ಟರು ಎಂದು ವರದಿಯಾಗಿತ್ತು. ಅವರ ಸಾವಿಗೆ ಲಸಿಕೆ ಕಾರಣವಲ್ಲ ಎಂದು ತಯಾರಿಕಾ ಸಂಸ್ಥೆ ಖಚಿತಪಡಿಸಿತ್ತು
- ಕೋವಿಡ್ ಪ್ರಸರಣ ತಡೆಯಲು ಮಾಸ್ಕ್ ಧರಿಸುವಿಕೆ ಹಾಗೂ ಅಂತರ ಕಾಯ್ದುಕೊಳ್ಳುವುದು ಅಗತ್ಯವಿಲ್ಲ ಎಂದು ವಿಶ್ವ ಆರೋಗ್ಯ ಸಂಸ್ಥೆ ಹೇಳಿದೆ ಎಂಬ ಸುದ್ದಿಯೂ ವೈರಲ್ ಆಗಿತ್ತು. ಇಂತಹ ಹೇಳಿಕೆಯನ್ನು ಸಂಸ್ಥೆ ನೀಡಿರಲಿಲ್ಲ
- ಕೋವ್ಯಾಕ್ಸಿನ್ ಲಸಿಕೆಯನ್ನು 12 ವರ್ಷ ಮೇಲ್ಪಟ್ಟ ಮಕ್ಕಳಿಗೆ ನೀಡಲು ಸರ್ಕಾರ ಒಪ್ಪಿದೆ ಎಂಬ ಸುಳ್ಳು ಸುದ್ದಿಯೂ ಹರಿದಾಡಿತ್ತು
- ಕೋವಿಡ್ ತಗಲುವುದನ್ನು ತಡೆಯಲು ಹಲವು ಮನೆಮದ್ದುಗಳು ವೈರಲ್ ಆಗಿವೆ. ಬಿಸಿನೀರಿಗೆ ನಿಂಬೆರಸ ಹಾಗೂ ಅಡುಗೆ ಸೋಡಾ ಸೇರಿಸಿ ಕುಡಿದರೆ, ವೈರಾಣು ನಾಶವಾಗುತ್ತದೆ ಎಂಬುದು ಈ ಪೈಕಿ ಒಂದು. ಇದಕ್ಕೆ ವೈಜ್ಞಾನಿಕ ಪುರಾವೆಗಳು ಇಲ್ಲ ಎಂದು ಪಿಐಬಿ ಫ್ಯಾಕ್ಟ್ ಚೆಕ್ ವೇದಿಕೆ ತಿಳಿಸಿತ್ತು

5ಜಿ ಆರಂಭವೇ ಆಗಿಲ್ಲ, ವೈರಾಣು ಪ್ರಸರಣ ಹೇಗೆ?

2020ರ ಆರಂಭದಲ್ಲಿ ಕೋವಿಡ್ ಮೊದಲ ಅಲೆ ಜೋರಾಗಿದ್ದ ಸಮಯದಲ್ಲಿ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದ ಒಂದು ಧ್ವನಿಮುದ್ರಿಕೆಯು ಜನರನ್ನು ಭೀತಿಗೆ ತಳ್ಳಿತು. ಐದನೇ ತಲೆಮಾರಿನ ತಂತ್ರಜ್ಞಾನಕ್ಕೂ (5ಜಿ) ಕೋವಿಡ್ ವ್ಯಾಪಕವಾಗಿ ಪಸರಿಸುವುದಕ್ಕೂ ನಂಟಿದೆ ಎಂದು ಈ ಧ್ವನಿಮುದ್ರಿಕೆಯಲ್ಲಿ ಹೇಳಲಾಗಿತ್ತು. ಜನರು ಈ ಪರಿ ಕೋವಿಡ್‌ಗೆ ಒಳಗಾಗುತ್ತಿರುವುದಕ್ಕೆ 5ಜಿ ತರಂಗಾಂತರಗಳು ಕಾರಣ ಎಂಬ ವದಂತಿ ಹಬ್ಬಿತು. ಭಾರತದಲ್ಲಿ 5ಜಿ ತಂತ್ರಜ್ಞಾನ ಜಾರಿ ಮಾಡಲು ಸಿದ್ಧತೆಗಳು ಭರದಿಂದ ಸಾಗಿರುವಾಗ ಅಪ್ಪಳಿಸಿದ ಈ ಸುದ್ದಿ ಸಾಕಷ್ಟು ಚರ್ಚೆಗೆ ಗ್ರಾಸವಾಯಿತು.

ಇದು ಭಾರತಕ್ಕೆ ಮಾತ್ರ ಸಂಬಂಧಿಸಿದ ಸುದ್ದಿ ಆಗಿರಲಿಲ್ಲ. ಇಂಗ್ಲೆಂಡ್‌ನಲ್ಲಿ 50ಕ್ಕೂ ಹೆಚ್ಚು 5ಜಿ ಮೊಬೈಲ್ ಗೋಪುರಗಳನ್ನು ನೆಲಸಮ ಮಾಡಲಾಯಿತು. ನ್ಯೂಜಿಲೆಂಡ್, ಅಮೆರಿಕ ಹಾಗೂ ಯುರೋಪ್‌ನ ಕೆಲವೆಡೆ ಗೋಪುರಗಳನ್ನು ಸುಡಲಾಯಿತು. ಉತ್ತರ ಪ್ರದೇಶದ ಕೆಲವೆಡೆ ಟವರ್‌ಗಳಿಗೆ ಹಾನಿ ಮಾಡಲಾಯಿತು.

ಕೋವಿಡ್‌ಗೂ 5ಜಿ ತರಂಗಾಂತರಗಳಿಗೂ ಸಂಬಂಧವಿಲ್ಲ ಎಂದು ವಿಶ್ವ ಆರೋಗ್ಯ ಸಂಸ್ಥೆ ವದಂತಿಗೆ ತೆರೆ ಎಳೆಯಿತು. ವೈರಸ್‌ಗಳು ರೇಡಿಯೊ ತರಂಗಾಂತರ ಅಥವಾ ಮೊಬೈಲ್ ಗೋಪುರಗಳ ಮೂಲಕ ಸಂಚರಿಸುವುದಿಲ್ಲ ಎಂದು ಭಾರತದ ಸೆಲ್ಯುಲಾರ್ ಆಪರೇಟರ್ ಸಂಘಟನೆ (ಸಿಒಎಐ) ಸ್ಪಷ್ಟನೆ ನೀಡಿತು. 'ದೇಶದಲ್ಲಿ 5ಜಿ ಪ್ರಾಯೋಗಿಕ ಪರೀಕ್ಷೆಯೇ ಶುರುವಾಗಿಲ್ಲ. ಹೀಗಿರುವಾಗ 5ಜಿ ತರಂಗಾಂತರಗಳು ಕೊರೊನಾ ವೈರಸ್ ಅನ್ನು ಹೊತ್ತೊಯ್ಯುವುದು ಹೇಗೆ ಸಾಧ್ಯ' ಎಂದು ಕೇಂದ್ರ ದೂರಸಂಪರ್ಕ ಇಲಾಖೆ ತನ್ನ ವಾದ ಮುಂದಿಟ್ಟಿತು.

ಇತ್ತೀಚೆಗೆ, ಬಾಲಿವುಡ್ ನಟಿ ಜೂಹಿ ಚಾವ್ಲಾ ಅವರು 5ಜಿ ಜಾರಿ ಬೇಡ ಎಂದು ಆಗ್ರಹಿಸಿ ಕೋರ್ಟ್ ಮೊರೆ ಹೋಗಿದ್ದಾರೆ. ಮನುಷ್ಯರು, ಪ್ರಾಣಿಗಳು, ಪಕ್ಷಿಗಳ ಮೇಲೆ 5ಜಿ ತರಂಗಾಂತರಗಳು ಹಾನಿ ಮಾಡುತ್ತದೆಯೇ ಎಂಬ ಬಗ್ಗೆ ಅಧ್ಯಯನವೊಂದು ನಡೆಯುವ ಅಗತ್ಯವಿದೆ ಎಂದು ಅವರು ಪ್ರತಿಪಾದಿಸಿದ್ದಾರೆ.

ಆಧಾರ: ವಿಶ್ವ ಆರೋಗ್ಯ ಸಂಸ್ಥೆ

'ಕೊರೊನಾ ವೈರಾಣು ಮಾನವ ನಿರ್ಮಿತವಲ್ಲ'

'ಕೋವಿಡ್-19ಗೆ ಕಾರಣವಾಗಿರುವ ಕೊರೊನಾ ವೈರಾಣುವನ್ನು ಚೀನಾದ ಪ್ರಯೋಗಾಲಯದಲ್ಲಿ ಅಭಿವೃದ್ಧಿಪಡಿಸಲಾಗಿದೆ. ಈ ವೈರಾಣು ಮಾನವ ನಿರ್ಮಿತ. ವಿಶ್ವದ ಆರ್ಥಿಕತೆಯನ್ನು ಸಂಕಷ್ಟಕ್ಕೆ ಈಡು ಮಾಡಲು ಚೀನಾ ಈ ವೈರಾಣುವನ್ನು ಅಭಿವೃದ್ಧಿಪಡಿಸಿದೆ' ಎಂಬ ಸುದ್ದಿ, ಕೋವಿಡ್ ಬಂದಾಗಿನಿಂದಲೂ ಪ್ರಚಲಿತದಲ್ಲಿ ಇದೆ. 2020ರಲ್ಲಿ ಅಮೆರಿಕದ ಅಂದಿನ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸಹ ಇದನ್ನೇ ಹೇಳಿದ್ದರು. 'ಚೀನಾದ ವುಹಾನ್‌ನ ವೈರಾಣು ವಿಜ್ಞಾನ ಪ್ರಯೋಗಾಲಯದಲ್ಲಿ ಇದನ್ನು ಅಭಿವೃದ್ಧಿಪಡಿಸಲಾಗಿದೆ' ಎಂದು ಟ್ರಂಪ್ ಆರೋಪಿಸಿದ್ದರು.

ಜಗತ್ತಿನ ಎಲ್ಲೆಡೆಯಿಂದ ಇದೇ ಆರೋಪ ಕೇಳಿಬಂದ ಕಾರಣಕ್ಕೆ, ಕೊರೊನಾ ವೈರಾಣುವಿನ ಮೂಲವನ್ನು ಪತ್ತೆ ಮಾಡಲು ವಿಶ್ವ ಆರೋಗ್ಯ ಸಂಸ್ಥೆಯು ಜಾಗತಿಕ ಮಟ್ಟದ ತಜ್ಞರ ತಂಡವನ್ನು ರಚಿಸಿತು. ಈ ತಂಡವು ಚೀನಾದ ವುಹಾನ್‌ಗೆ ಭೇಟಿ ನೀಡಿ, ಹಲವು ತಿಂಗಳ ಕಾಲ ಪರಿಶೀಲನೆ ನಡೆಸಿತು. ಜತೆಗೆ ವಿಶ್ವದ ಕೆಲವು ವಿಶ್ವವಿದ್ಯಾಲಯಗಳೂ ಈ ಬಗ್ಗೆ ಸಂಶೋಧನೆ ನಡೆಸಿದ್ದವು.

ಕೋವಿಡ್-19ಗೆ ಕಾರಣವಾಗುವ ಕೊರೊನಾ ವೈರಾಣುವಿನ ಪೂರ್ಣ ಹೆಸರು 'ಸಿವಿಯರ್ ಅಕ್ಯೂಟ್ ರೆಸ್ಪಿರೇಟರಿ ಸಿಂಡ್ರೋಮ್ ಕೊರೊನಾ ವೈರಸ್-2 (ಸಾರ್ಸ್ ಕೋವ್-2)'. ಕೊರೊನಾ ವೈರಾಣುಗಳು ಸಾಮಾನ್ಯವಾಗಿ ಬಾವಲಿಗಳಲ್ಲಿ ಮಾತ್ರವೇ ಇರುತ್ತವೆ. ಚೀನಾದ ವುಹಾನ್‌ನಿಂದ 300 ಕಿ.ಮೀ. ದೂರದಲ್ಲಿರುವ ಕಾಡಿನಲ್ಲಿ ಹಾರ್ಸ್‌ಷೂ ಬಾವಲಿಗಳು ಇವೆ. ಸಾರ್ಸ್ ಕೋವ್-2 ವೈರಾಣು ಈ ಬಾವಲಿಗಳಲ್ಲೇ ವಿಕಾಸವಾಗಿದೆ ಎಂದು ಈ ಸಂಶೋಧನಾ ವರದಿಗಳು ಹೇಳಿದವು. ಆದರೆ, ಬಾವಲಿಗಳಿಂದ ಈ ವೈರಾಣುಗಳು ಮನುಷ್ಯನಿಗೆ ನೇರವಾಗಿ ಹರಡುವುದಿಲ್ಲ. ಹೀಗಿದ್ದಾಗ ಸಾರ್ಸ್ ಕೋವ್-2 ಮನುಷ್ಯನಿಗೆ ಹೇಗೆ ಹರಡಿತು ಎಂಬುದಕ್ಕೆ ಸಾಕ್ಷ್ಯಸಹಿತ ಸಮರ್ಥನೆ ದೊರೆತಿಲ್ಲ. ಆದರೆ ಬಾವಲಿಗಳಿಂದ ಚಿಪ್ಪುಹಂದಿ ಅಥವಾ ಪುನುಗುಬೆಕ್ಕಿಗೆ ಈ ವೈರಾಣುಗಳು ಹರಡಿಕೊಂಡಿರಬೇಕು. ಈ ಪ್ರಾಣಿಗಳು ಈ ವೈರಾಣುವಿನ ವಾಹಕಗಳಂತೆ ಕೆಲಸ ಮಾಡಿರುವ ಸಾಧ್ಯತೆ ಅತ್ಯಧಿಕವಾಗಿದೆ. ವುಹಾನ್‌ನ ಜೀವಂತ ಕಾಡುಪ್ರಾಣಿ ಮಾರುಕಟ್ಟೆಯಲ್ಲಿ ಚಿಪ್ಪುಹಂದಿ ಅಥವಾ ಪುನುಗುಬೆಕ್ಕಿನಿಂದ ಮನುಷ್ಯನಿಗೆ ಈ ವೈರಾಣು ತಗುಲಿದೆ ಎಂದು ಈಗ ಪ್ರತಿಪಾದಿಸಲಾಗುತ್ತಿದೆ.

ಕೊರೊನಾ ವೈರಾಣು ಮನುಷ್ಯ ನಿರ್ಮಿಸಿದ್ದಲ್ಲ ಎಂಬುದನ್ನು ಈ ಸಂಶೋಧನೆಗಳು ಸಾಬೀತು ಮಾಡಿವೆ. ಜತೆಗೆ ಚೀನಾದ ವುಹಾನ್‌ನಲ್ಲೇ ಇದು ಮೊದಲು ಕಾಣಿಸಿಕೊಂಡಿದ್ದು ಎಂಬುದನ್ನೂ ಸಾಬೀತು ಮಾಡಿವೆ. ಆದರೆ, ಬಾವಲಿಯಿಂದ ಮನುಷ್ಯನಿಗೆ ಈ ವೈರಾಣುವನ್ನು ಹರಡಿಸಿದ ವಾಹಕ ಪ್ರಾಣಿ ಯಾವುದು ಎಂಬುದು ಇನ್ನಷ್ಟೇ ಪತ್ತೆಯಾಗಬೇಕಿದೆ.

ಆಧಾರ: WHO-convened Global Study of Origins of SARS-CoV-2: China Part

ಗಾಳಿಯ ಮೂಲಕ ಹರಡುವುದಿಲ್ಲ

'ಕೋವಿಡ್-19ಗೆ ಕಾರಣವಾಗುವ ಕೊರೊನಾ ವೈರಾಣು ಗಾಳಿಯ ಮೂಲಕ ಹರಡುತ್ತದೆ' ಎಂಬ ಸುದ್ದಿ ಆರಂಭದ ದಿನಗಳಿಂದಲೂ ಪ್ರಚಲಿತದಲ್ಲಿದೆ. ಗಾಳಿಯ ಮೂಲಕ ವೈರಾಣು ಹರಡುತ್ತದೆಯೇ ಎಂಬುದನ್ನು ಪತ್ತೆ ಮಾಡುವ ಉದ್ದೇಶದಿಂದ ಹಲವು ಸಂಶೋಧನೆಗಳು ನಡೆದಿವೆ. ಗಾಳಿಯ ಮೂಲಕ ಈ ವೈರಾಣು ಹರಡುವುದಿಲ್ಲ ಎಂಬುದನ್ನು ಈ ಸಂಶೋಧನೆಗಳು ಸಾಬೀತು ಮಾಡಿವೆ. ವಿಶ್ವ ಆರೋಗ್ಯ ಸಂಸ್ಥೆಯು ಸಹ ಕೊರೊನಾ ವೈರಾಣು ಗಾಳಿಯ ಮೂಲಕ ಹರಡುವುದಿಲ್ಲ ಎಂಬುದನ್ನು ದೃಢಪಡಿಸಿದೆ.

'ಕೊರೊನಾ ವೈರಾಣು ಮನುಷ್ಯನ ಮೂಗು ಮತ್ತು ಗಂಟಲಿನ ದ್ರವದಲ್ಲಿ ಇರುತ್ತದೆ. ಸೋಂಕಿತ ವ್ಯಕ್ತಿ ಸೀನಿದಾಗ, ಆತನ ಮೂಗು ಮತ್ತು ಬಾಯಿಯಿಂದ ಸಿಡಿಯುವ ಕಣಗಳಲ್ಲಿ ಈ ವೈರಾಣು ಇರುತ್ತದೆ. ಈ ಕಣಗಳ ಸಂಪರ್ಕಕ್ಕೆ ಬಂದವರಿಗೆ ಸೋಂಕು ತಗಲುತ್ತದೆ' ಎಂದು ಬಹುತೇಕ ಎಲ್ಲಾ ಸಂಶೋಧನೆಗಳು ಪ್ರತಿಪಾದಿಸಿವೆ. 'ಮನುಷ್ಯ ಸೀನಿದಾಗ ಅವನ ಮೂಗಿನಿಂದ ಮತ್ತು ಬಾಯಿಯಿಂದ ಸಿಡಿಯುವ ಕಣಗಳು ಗರಿಷ್ಠ 3-4 ಅಡಿ ದೂರದವರೆಗೆ ಹರಡುತ್ತವೆ. ಈ ಕಣಗಳ ತೂಕ ಹೆಚ್ಚಿರುವ ಕಾರಣ ಅವು ನೆಲಕ್ಕೆ ಬೀಳುತ್ತವೆ, ಗಾಳಿಯಲ್ಲಿ ತೇಲುವುದಿಲ್ಲ. ಹೀಗಾಗಿ ವೈರಾಣು ಗಾಳಿಯಲ್ಲಿ ಹರಡುವ ಸಾಧ್ಯತೆ ಇಲ್ಲವೇ ಇಲ್ಲ' ಎಂದು ಈ ಸಂಶೋಧನೆಗಳು ಹೇಳಿವೆ.

ಆದರೆ ಕೆಲವು ಸಂಶೋಧನೆಗಳು ಮಾತ್ರ ಗಾಳಿಯ ಮೂಲಕವೂ ಈ ವೈರಾಣು ಹರಡುತ್ತವೆ ಎಂಬುದನ್ನು ಪ್ರತಿಪಾದಿಸಿವೆ. ಆದರೆ ಸಂಶೋಧನೆಗೆ ಆಯ್ಕೆಮಾಡಿಕೊಂಡ ಮಾದರಿಗಳ ಸಂಖ್ಯೆ (ಸ್ಯಾಂಪಲ್ ಸೈಜ್) ಎರಡಂಕಿಯನ್ನು ದಾಟದ ಕಾರಣ, ಈ ಸಂಶೋಧನೆಯ ಪ್ರತಿಪಾದನೆಗಳನ್ನು ಮಾನ್ಯ ಮಾಡಿಲ್ಲ.



ಗ್ರಾಮೀಣ ಭಾಗದಲ್ಲಿ ಬೆಳವಣಿಗೆ ಚುರುಕು

2025ರಲ್ಲಿ 90 ಕೋಟಿ ಇಂಟರ್‌ನೆಟ್ ಬಳಕೆದಾರರು

ನವದೆಹಲಿ (ಪಿಟಿಐ): 2025ರ ವೇಳೆಗೆ ಭಾರತದಲ್ಲಿ ಇಂಟರ್‌ನೆಟ್‌ನ ಸಕ್ರಿಯ ಬಳಕೆದಾರರ ಪ್ರಮಾಣ ಶೇ 45ರಷ್ಟು ಹೆಚ್ಚಳವಾಗಿ 90 ಕೋಟಿ ತಲುಪಲಿದೆ ಎಂದು ಗುರುವಾರ ಬಿಡುಗಡೆಯಾದ ಐಎಎಂಎಐ-ಕಾಂಟರ್ ಕ್ಯೂಬ್ ವರದಿ ತಿಳಿಸಿದೆ. ಕಳೆದ ವರ್ಷ 62.2 ಕೋಟಿ ಬಳಕೆದಾರರು ಇದ್ದರು.

2025ರ ವೇಳೆಗೆ ನಗರ ಪ್ರದೇಶಗಳಿಗೆ ಹೋಲಿಸಿದರೆ, ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚು ಇಂಟರ್‌ನೆಟ್ ಬಳಕೆದಾರರು ಇರಲಿದ್ದಾರೆ. ದೇಶದಲ್ಲಿ ಡಿಜಿಟಲ್ ಮೂಲಸೌಕರ್ಯ ಬಲಪಡಿಸುವ ಅಗತ್ಯವನ್ನು ಈ ದತ್ತಾಂಶಗಳು ಸೂಚಿಸುತ್ತವೆ ಎಂದು ಭಾರತೀಯ ಅಂತರ್ಜಾಲ ಮತ್ತು ಮೊಬೈಲ್ ಸಂಘಟನೆ ವರದಿ ತಿಳಿಸಿದೆ.

ಗ್ರಾಮೀಣ ಭಾಗದಲ್ಲಿ ಇಂಟರ್‌ನೆಟ್‌ನ ಸಕ್ರಿಯ ಬಳಕೆದಾರರ ಸಂಖ್ಯೆ ದಿನದಿಂದ ದಿನಕ್ಕೆ ವೃದ್ಧಿಸುತ್ತಿದೆ. ಆದರೆ ಇಂಟರ್‌ನೆಟ್ ಸಂಕೇತಗಳ ನುಗ್ಗುವಿಕೆಯ ವೇಗವು (ಪೆನಿಟ್ರೇಷನ್) ಗ್ರಾಮೀಣ ಭಾಗಕ್ಕೆ ಹೋಲಿಸಿದರೆ ನಗರದಲ್ಲಿ ದುಪ್ಪಟ್ಟು ಇದೆ ಎಂದು ಇಂಟರ್‌ನೆಟ್ ಸಂಸ್ಥೆಗಳ ಸಂಘಟನೆ ಐಎಎಂಎಐ ತಿಳಿಸಿದೆ.

2020ರ ಅಂಕಿ–ಅಂಶಗಳ ಪ್ರಕಾರ, ಇಂಟರ್‌ನೆಟ್ ಬಳಕೆದಾರರ ಬೆಳವಣಿಗೆ ಪ್ರಮಾಣವು ನಗರದಲ್ಲಿ ಶೇ 4, ಗ್ರಾಮೀಣ ಭಾಗದಲ್ಲಿ ಶೇ 13ರಷ್ಟು ಕಂಡುಬಂದಿದೆ. ನಗರದ ಜನಸಂಖ್ಯೆಯ ಶೇ 67ರಷ್ಟು ಮಂದಿ ಹಾಗೂ ಗ್ರಾಮೀಣ ಭಾಗದ ಶೇ 31ರಷ್ಟು ಮಂದಿ ಇಂಟರ್‌ನೆಟ್ ಬಳಕೆ ಮಾಡುತ್ತಿದ್ದಾರೆ ಎಂದು ವರದಿ ತಿಳಿಸಿದೆ.

ಗ್ರಾಮೀಣ ಮತ್ತು ನಗರ ಸೇರಿ ಶೇ 43ರಷ್ಟು ಜನರು ಮಾತ್ರ ಈಗ ಇಂಟರ್‌ನೆಟ್ ಬಳಕೆ ಮಾಡುತ್ತಿದ್ದು, ಗ್ರಾಮೀಣ ಭಾಗಗಳಲ್ಲಿ ಅಗತ್ಯ ಸೌಲಭ್ಯ ದೊರೆಯುತ್ತಿಲ್ಲ. ಹೀಗಾಗಿ ಗ್ರಾಮೀಣ ಭಾಗದ ಡಿಜಿಟಲ್ ಮೂಲಸೌಕರ್ಯ ಹೆಚ್ಚಳಕ್ಕೆ ಮುಂದಿನ ದಿನಗಳಲ್ಲಿ ಹೆಚ್ಚಿನ ಒತ್ತು ನೀಡಬೇಕಾದ ಅಗತ್ಯವಿದೆ ಎಂದು ವರದಿ ಅಭಿಪ್ರಾಯಪಟ್ಟಿದೆ.

ಅಂಕಿ-ಅಂಶ

107 ನಿಮಿಷ — ಇಂಟರ್‌ನೆಟ್‌ನ ಸಕ್ರಿಯ ಬಳಕೆದಾರನೊಬ್ಬ ದಿನಕ್ಕೆ ಅಂತರ್ಜಾಲ ಬಳಸುವ ಸರಾಸರಿ ಅವಧಿ (1.8 ಗಂಟೆ)

33% — ಅಗ್ರ 9 ಮೆಟ್ರೊ ನಗರಗಳಲ್ಲಿ ಸಕ್ರಿಯ ಇಂಟರ್‌ನೆಟ್ ಬಳಕೆದಾರರ ಪ್ರಮಾಣ



ಪ್ರಜಾವಾಣಿ ಗ್ರಾಫಿಕ್ಸ್

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ: 9606038256

'ಲಸಿಕೆ ಹಾಕಿಸಿಕೊಂಡ ಜಾಗದಲ್ಲಿ ಎಲ್‌ಇಡಿ ಬಲ್ಬ್ ಇರಿಸಿದರೆ ಅದರಲ್ಲಿ ಬೆಳಕು ಮೂಡುತ್ತದೆ'! ಹೌದೇ?, ಇಂತಹದ್ದೊಂದು ವಿಚಿತ್ರ ಸಂಗತಿ ಇರುವ ವಿಡಿಯೊ ವೈರಲ್ ಆಗಿದ್ದು, ಅಚ್ಚರಿಗೆ ಕಾರಣವಾಗಿದೆ. ವಿಡಿಯೊದಲ್ಲಿರುವ ವ್ಯಕ್ತಿಯೊಬ್ಬರು ತಾವು ಲಸಿಕೆ ಹಾಕಿಸಿಕೊಂಡ ಕೈಗೆ ತಾಗಿಸಿ ಈ ಎಲ್‌ಇಡಿ ಬಲ್ಬ್ ಇರಿಸುತ್ತಾರೆ. ಅದು ತಕ್ಷಣ ಹೊತ್ತಿಕೊಳ್ಳುತ್ತದೆ. ದೇಹದ ಇತರ ಭಾಗಗಳಲ್ಲಿ ಇಟ್ಟರೆ ಅದು ಹೊತ್ತುವುದಿಲ್ಲ ಎಂದು ಸ್ವತಃ ಅವರೇ ಹೇಳುತ್ತಾರೆ. ತಮ್ಮ ಸ್ನೇಹಿತರ ಜೊತೆ ಹಂಚಿಕೊಂಡ ಈ ವಿಡಿಯೊ ವೈರಲ್ ಆಗುತ್ತಿದ್ದಂತೆ ಎಚ್ಚೆತ್ತ ಅವರು, ಅದು 'ತಮಾಷೆ'ಗೆ ಮಾಡಿದ್ದು ಎಂದು ಸ್ಪಷ್ಟನೆ ನೀಡಿ ವಿಷಾದಿಸಿದ್ದಾರೆ.

ಕೈ ಮೇಲೆ ಇರಿಸಿದ ಬಲ್ಬ್ ಹೊತ್ತಿಕೊಂಡಿದ್ದರ ಕಾರಣವನ್ನು 'ದಿ ಕ್ವಿಂಟ್' ಫ್ಯಾಕ್ಟ್ ಚೆಕ್ ತಾಣ ಪತ್ತೆಹಚ್ಚಿದೆ. ಅದು ರೀಚಾರ್ಜಬಲ್ ಎಲ್‌ಇಡಿ ಆಗಿರುವ ಕಾರಣ, ತೇವಾಂಶ, ಅಲ್ಯೂಮಿನಿಯಂ ಚೂರು ಅಥವಾ ಕಾಗದದ ಚೂರು ತಾಗಿದರೆ ಹೊತ್ತಿಕೊಳ್ಳುವುದು ಅದರ ಗುಣ. ಇಂತಹ ಉತ್ಪನ್ನವು ನಾಲ್ಕೈದು ವರ್ಷಗಳಿಂದ ಮಾರುಕಟ್ಟೆಯಲ್ಲಿದ್ದು, ಇದರಲ್ಲಿ ಹೊಸತನವೇನೂ ಇಲ್ಲ. ವಿದ್ಯುತ್ ಕಡಿತವಾದಾಗ ಮನೆಗಳಲ್ಲಿ ಇಂತಹ ಬಲ್ಬ್‌ಗಳನ್ನು ಬಳಸಲಾಗುತ್ತದೆ ಎಂದು ಲ್ಯೂಮಿನೈಟ್ ಎಲ್‌ಇಡಿ ಸಂಸ್ಥೆಯು ತಿಳಿಸಿದೆ. ಇಂತಹ ವಿಡಿಯೊಗಳಿಂದ ಲಸಿಕೆ ಹಾಕಿಸಿಕೊಳ್ಳಲು ಜನರು ಹಿಂದೇಟು ಹಾಕುವ ಸಾಧ್ಯತೆಯಿದೆ ಎಂದು ತಜ್ಞರು ಹೇಳಿದ್ದಾರೆ.

ಗುಂಡಣ್ಣ

ಬೆರಗಿನ ಬೆಳಕು

ಗುರುರಾಜ ಕರಜಗಿ

ಬೋಧಿಸತ್ವನ ಜನನ

ಪುಸತಿ ಶಕ್ರನಿಂದ ವರ ಪಡೆದು ದೇವಲೋಕದಿಂದ ಕೆಳಗಿಳಿದು ಮದ್ರರಾಜನ ಪಟ್ಟದರಸಿಯ ಗರ್ಭವನ್ನು ಪ್ರವೇಶಿಸಿದಳು. ಆಕೆ ಹುಟ್ಟಿದಾಗ ಚಂದನದ ಸುವಾಸನೆ ಅರಮನೆಯನ್ನು ತುಂಬಿದ್ದರಿಂದ ಆಕೆಗೆ 'ಪುಸತಿ' ಎಂದೇ ಹೆಸರಿಟ್ಟರು. ಆಕೆ ವೈಭವದಿಂದ ಬೆಳೆದು ಹದಿನಾರನೆಯ ವರ್ಷದಲ್ಲಿ ಅತ್ಯಂತ ರೂಪವತಿಯಾದಳು. ಆಗ ಸಿವಿರಾಜ ಅವಳನ್ನು ತನ್ನ ಮಗ ಸಂಜಯಕುಮಾರನಿಗೆ ಸರಿಯಾದ ಜೋಡಿ ಎಂದು ತಿಳಿದು ಮದುವೆ ಮಾಡಿಸಿದ. ಪುಸತಿಯನ್ನು ಹದಿನಾರು ಸಾವಿರ ಸ್ತ್ರೀಯರಲ್ಲಿ ಶ್ರೇಷ್ಠಳೆಂದು ತೀರ್ಮಾನಮಾಡಿ ಆಕೆಯನ್ನು ಪಟ್ಟದರಾಣಿಯನ್ನಾಗಿ ಮಾಡಿದ. ಶಕ್ರ ಇದನ್ನು ದಿವ್ಯದೃಷ್ಟಿಯಿಂದ ನೋಡಿ ಪುಸತಿಯ ಇನ್ನೊಂದು ಅಪೇಕ್ಷೆ ಉಳಿದಿರುವುದನ್ನು ತಿಳಿದ. ಅದು ಬುದ್ಧನಂತಹ ಮಗನಿಗೆ ತಾನು ತಾಯಿಯಾಗಬೇಕೆಂದು ಪ್ರಾರ್ಥಿಸಿದ್ದು. ಆಗ ಬೋಧಿಸತ್ವ ತ್ರಯೋತ್ರಿಂಶ ದೇವಲೋಕದಲ್ಲಿದ್ದ.

ಅಲ್ಲಿ ಅವನ ಆಯುಸ್ಸು ಮುಗಿಯಲು ಬಂದಿತ್ತು. ಶಕ್ರ ಅವನ ಬಳಿಗೆ ಹೋಗಿ, 'ಬೋಧಿಸತ್ವ, ಇಲ್ಲಿ ನಿನ್ನ ಸಮಯ ಮುಗಿದಿದೆ. ನೀನು ಮನುಷ್ಯಲೋಕಕ್ಕೆ ಹೋಗಿ ಸಿವಿರಾಜನ ಪಟ್ಟದರಸಿ ಪುಸತಿಯ ಗರ್ಭದಲ್ಲಿ ಜನಿಸಬೇಕು. ನಿನ್ನೊಂದಿಗೆ ಚ್ಯುತರಾಗುವ ಅರವತ್ತು ಸಾವಿರ ದೇವಪುತ್ರರೂ ನಿನ್ನೊಂದಿಗೆ ಅದೇ ರಾಜ್ಯದಲ್ಲಿ ಜನಿಸುತ್ತಾರೆ'. ಬೋಧಿಸತ್ವ ಪುಸತಿಯ ಗರ್ಭಕ್ಕೆ ಇಳಿದ. ಉಳಿದ ದೇವಪುತ್ರರೂ ಸಾವಿರ ಅಮಾತ್ಯರ, ನಾಯಕರ ಮನೆಗಳಲ್ಲಿ ಹುಟ್ಟಿದರು. ಬೋಧಿಸತ್ವ ಗರ್ಭಕ್ಕೆ ಬಂದೊಡನೆ ತಾಯಿ ಪುಸತಿಗೆ ಬಯಕೆಗಳು ಉಂಟಾಗತೊಡಗಿದವು. ಆಕೆಗೆ ಕೇವಲ ದಾನಮಾಡುವ ಬಯಕೆ. ಅದರಂತೆ ನಗರದ ನಾಲ್ಕು ದ್ವಾರಗಳ ಬದಿಯಲ್ಲಿ, ನಗರದ ಮಧ್ಯೆ ಮತ್ತು ಅರಮನೆಯ ಮಹಾದ್ವಾರದಲ್ಲಿ ದಾನಶಾಲೆಗಳನ್ನು ನಿರ್ಮಾಣ ಮಾಡಿಸಿ, ನಿತ್ಯ ದಾನ ಮಾಡಲು ರಾಜ ನೇಮಿಸಿದ. ಪುರೋಹಿತರು, 'ಮಹಾರಾಜಾ, ಯಾವುದೋ ಉದಾತ್ತವಾದ ಜೀವ ರಾಣಿಯ ಗರ್ಭವನ್ನು ಸೇರಿದೆ. ಅದಕ್ಕಾಗಿಯೇ ಈ ದಾನದ ಗುಣ ಬಂದದ್ದು. ಈ ದಾನದಿಂದ ಆ ಜೀವಕ್ಕೆ ತೃಪ್ತಿಯಾಗುತ್ತದೆ' ಎಂದರು.

ಪುಸತಿ ರಾಣಿಯ ಗರ್ಭ ಬೆಳೆಯುವುದನ್ನು ಇಡೀ ನಗರ ಸಂಭ್ರಮದಿಂದ ಗಮನಿಸುತ್ತಿತ್ತು. ಆಕೆಗೂ ತುಂಬ ಸಂತೋಷ. ಹತ್ತು ತಿಂಗಳು ಪೂರ್ಣಗೊಂಡ ಮೇಲೆ ಒಂದು ದಿನ ಆಕೆ ನಗರ ಪ್ರದಕ್ಷಿಣೆಗೆ ಮನಸ್ಸು ತೋರಿದಳು. ರಾಜ ಇಡೀ ನಗರವನ್ನು ದೇವನಗರಿಯಂತೆ ಅಲಂಕರಿಸಿ, ಅವಳನ್ನು ನಾಲ್ಕು ಕುದುರೆಗಳಿಂದ ಹೂಡಿದ ಶ್ರೇಷ್ಠ ರಥದಲ್ಲಿ ಕೂರಿಸಿಕೊಂಡು ನಗರ ಪ್ರದಕ್ಷಿಣೆ ಮಾಡಿಸಿದ. ಆಕೆಗೆ ದಿನ ತುಂಬಿತ್ತು. ರಥ ವೈಶ್ಯರ ಬೀದಿಯಲ್ಲಿ ಬರುತ್ತಿದ್ದಂತೆ, ಆಕೆಗೆ ಪ್ರಸವವೇದನೆ ಪ್ರಾರಂಭವಾಯಿತು. ಆಗ ರಾಜ ಅಲ್ಲಿಯೇ ವೈಶ್ಯರ ಬೀದಿಯಲ್ಲಿಯೇ ಹೆರಿಗೆಯ ವ್ಯವಸ್ಥೆಯನ್ನು ಮಾಡಿದ. ಬೋಧಿಸತ್ವ ಅಲ್ಲಿಯೇ ಹುಟ್ಟಿದ. ಅವನು ವೈಶ್ಯರ ಬೀದಿಯಲ್ಲಿ ಹುಟ್ಟಿದ್ದರಿಂದ ಅವನಿಗೆ ವೆಸ್ಸಂತರ ಎಂದು ಹೆಸರು ಬಂತು. ಬೋಧಿಸತ್ವ ಹುಟ್ಟಿದೊಡನೆ ಕಣ್ತೆರೆದು, 'ಅಮ್ಮಾ, ನಾನು ದಾನ ಮಾಡಬೇಕು. ಏನಾದರೂ ಕೊಡು' ಎಂದ. ಆಕೆ ಸಾವಿರ ನಾಣ್ಯಗಳ ಚೀಲವನ್ನು ಅವನ ಮುಂದಿಟ್ಟಾಗ ಅವನ್ನೆಲ್ಲ ದಾನವಾಗಿ ನೀಡಿಬಿಟ್ಟ. ಮಗು ಹುಟ್ಟಿದ ಕೂಡಲೆ ಮಾತನಾಡಿದ್ದು ಮತ್ತು ದಾನ ಮಾಡಿದ್ದು ಅತ್ಯಂತ ಅಪರೂಪವೆಂದು ಪುರೋಹಿತರು ಹೇಳಿದರು. ಬೋಧಿಸತ್ವ ಹುಟ್ಟಿದೊಡನೆ ದೇಶದಲ್ಲೆಲ್ಲ ಮಂಗಳವಾದ್ಯಗಳು ಮೊಳಗಿದವು, ಅವನನ್ನು ಸ್ವಾಗತಿಸಿದವು. ❖

ದಿನ ಭವಿಷ್ಯ

ಶುಕ್ರವಾರ ಜೂನ್ 4, 2021

ಶ್ರೀ ಪ್ಲವ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ವೈಶಾಖ ಮಾಸ ಕೃಷ್ಣ ಪಕ್ಷ ಮಳೆ ನಕ್ಷತ್ರ ರೋಹಿಣಿ ದಶಮೀ ಗಂ. 60-00 (ದಿನಪೂರ್ತಿ) ಶುಕ್ರವಾರ ನಿತ್ಯ ನಕ್ಷತ್ರ ಉತ್ತರಾ ಭಾದ್ರ ಗಂ. 43-7 (ರಾ. 11-16) ಆಯುಃ ನಾಮ ಯೋಗ ಗಂ. 58-15 ವಣಿಜ ಕರಣ ಗಂ. 29-9 ವಿಷಾಭಾವಃ ಅಮೃತ ಗಂ. 30-58 : ರಾಹುಕಾಲ ಬೆ ಗಂ. 10-30 ರಿಂದ 12-00 ಗುಳಿಕ ಬೆ ಕಾಲ ಗಂ 7-30 ರಿಂದ 9-00 ಯಮಗಂಡ ಕಾಲ ಮ ಗಂ 3-00 ರಿಂದ 4-30 ಸೂರ್ಯೋದಯ: 5-56 ಸೂರ್ಯಾಸ್ತ: 6-40 ಅದೃಷ್ಟ ಸಂಖ್ಯೆ 2 7

ಮೇಷ: ಉದ್ಯೋಗದಲ್ಲಿರುವವರು ಸಹೋದ್ಯೋಗಿಗಳೊಂದಿಗೆ ಹೊಂದಾಣಿಕೆಯಿಂದಿರುವುದು ಒಳ್ಳೆಯದು. ನ್ಯಾಯಾಲಯಗಳಲ್ಲಿ ತೀರ್ಪಿನಲ್ಲಿ ವಿಳಂಬವಾಗುವ ಸಾಧ್ಯತೆ. ಪ್ರತಿಭಾವಂತರಿಗೆ ವಿಪುಲ ಅವಕಾಶ.

ವೃಷಭ: ವ್ಯವಹಾರದಲ್ಲಿ ನೈಪುಣ್ಯತೆ ಮೆರೆಯಲಿದ್ದೀರಿ. ಅಧಿಕಾರಿಗಳಿಂದ ಮಾನಸಿಕ ಹಿಂಸೆ. ಆತ್ಮೀಯರಿಂದ ಸಮಸ್ಯೆಗಳಿಗೆ ಪರಿಹಾರ. ಮಹಿಳೆಯರಿಗೆ ತಾಳ್ಮೆಯ ಅಗತ್ಯ.

ಮಿಥುನ: ಹೊಸ ಉದ್ಯಮವೊಂದರ ಬಗ್ಗೆ ಚಿಂತನೆ. ವಿದ್ಯುತ್, ಬೆಂಕಿ ಮುಂತಾದವುಗಳ ವಿಷಯದಲ್ಲಿ ಹೆಚ್ಚಿನ ಜಾಗೃತಿ ಅಗತ್ಯ. ಲಲಿತಕಲೆಗಳಲ್ಲಿ ತೊಡಗಿಕೊಂಡವರಿಗೆ ಕೀರ್ತಿ. ಮಕ್ಕಳಿಂದ ನೆಮ್ಮದಿ. ಆಸ್ತಿ ಗಳಿಕೆ.

ಕರ್ಕಾಟಕ: ದೈನಂದಿನ ಕೆಲಸ ಕಾರ್ಯಗಳಲ್ಲಿ ಆಸಕ್ತಿ. ತಲೆದೋರಿರುವ ವಿವಾದಗಳಿಗೆ ಮುಕ್ತಿ. ದೂರದ ಪ್ರಯಾಣ ಸಾಧ್ಯತೆ. ಹಿರಿಯರ ಆರೋಗ್ಯದಲ್ಲಿ ವ್ಯತ್ಯಯ ಉಂಟಾಗಲಿದೆ

ಸಿಂಹ: ಸಾಮಾಜಿಕ ಕ್ಷೇತ್ರದಲ್ಲಿರುವವರಿಗೆ ಕೀರ್ತಿ. ವೈಯುಕ್ತಿಕ ಸಮಸ್ಯೆಗಳಿಗೆ ಪರಿಹಾರದ ಸಾಧ್ಯತೆ. ರಾಜಕೀಯ ಜೀವನದಲ್ಲಿ ಸಂತೃಪ್ತಿ. ದೇವತಾರಾಧನೆಯಿಂದ ನೆಮ್ಮದಿ. ಧಾನ್ಯ ವ್ಯಾಪಾರದಲ್ಲಿ ಪ್ರಗತಿ.

ಕನ್ಯಾ: ವ್ಯವಹಾರದ ವಿಷಯದಲ್ಲಿ ಮಹತ್ತರ ನಿರ್ಣಯವೊಂದನ್ನು ತೆಗೆದುಕೊಳ್ಳಲಿದ್ದೀರಿ. ಮಾತೃವರ್ಗದವರಿಂದ ನೆಮ್ಮದಿ. ಆಂತರಿಕ ಸಮಸ್ಯೆಗಳಿಂದ ಮುಕ್ತಿ. ಅಮೂಲ್ಯ ವಸ್ತುಗಳ ಸಂಗ್ರಹದ ಸಾಧ್ಯತೆ.

ತುಲಾ: ಕೌಟುಂಬಿಕ ಸಮಸ್ಯೆಗಳಿಗೆ ಪರಿಹಾರ. ವ್ಯವಹಾರದಲ್ಲಿ ಪ್ರಗತಿ. ಹಿರಿಯರ ಆರೋಗ್ಯದ ಬಗ್ಗೆ ವೆಚ್ಚ ಭರಿಸಬೇಕಾದೀತು. ಪುಣ್ಯ ಕ್ಷೇತ್ರ ದರ್ಶನ ಭಾಗ್ಯವಿದೆ. ಮಹಿಳೆಯರಿಗೆ ಸಾಮಾಜಿಕ ಕ್ಷೇತ್ರದಲ್ಲಿ ಗೌರವಾದರಗಳು ಪ್ರಾಪ್ತಿ.

ವೃಶ್ಚಿಕ: ವೈದ್ಯಕೀಯ ಕ್ಷೇತ್ರದಲ್ಲಿರುವವರಿಗೆ ಉತ್ತಮ ಆದಾಯ. ಆರ್ಥಿಕ ಸಂಪನ್ಮೂಲಗಳ ವೃದ್ಧಿ. ನಿರೀಕ್ಷಿಸಿದ ವ್ಯಕ್ತಿಗಳಿಂದ ಸಹಕಾರ ಲಭ್ಯವಾಗುವುದು. ಹಿತಶತ್ರುಗಳಿಂದ ಮೋಸಹೋಗುವ ಸಾಧ್ಯತೆ. ಆರೋಗ್ಯದ ಬಗ್ಗೆ ಗಮನ ಅಗತ್ಯ.

ಧನು: ಹೊಸ ಆಸ್ತಿ, ಮನೆ ಖರೀದಿ ಸಾಧ್ಯತೆ. ಉದ್ಯೋಗ ಕ್ಷೇತ್ರದಲ್ಲಿ ನಿಷ್ಠೆಯಿಂದಾಗಿ ಪ್ರೋತ್ಸಾಹ ಪ್ರಶಂಸೆಗಳು. ಆರ್ಥಿಕ ಸಮಸ್ಯೆಗಳಿಗೆ ಪರಿಹಾರ ದೊರಕುವ ದಿನ.

ಮಕರ: ಅನಾವಶ್ಯಕ ವ್ಯವಹಾರಗಳಿಂದ ದೂರ ಇರುವುದು ಉತ್ತಮ. ಆರೋಗ್ಯದಲ್ಲಿ ಪ್ರಗತಿಯಿಂದಾಗಿ ತೃಪ್ತಿ. ರಾಜಕೀಯ ವ್ಯಕ್ತಿಗಳಿಗೆ ಶುಭ ಸಮಾಚಾರಗಳು.

ಕುಂಭ: ಯೋಜಿತ ಕಾರ್ಯಗಳಲ್ಲಿ ಯಶಸ್ಸು. ಮೇಲಾಧಿಕಾರಿಗಳ ಪ್ರಶಂಸೆಗೆ ಪಾತ್ರರಾಗುವಿರಿ. ದಾಯಾದಿಗಳೊಂದಿಗಿನ ಹೊಂದಾಣಿಕೆಯಿಂದ ಆಸ್ತಿ ತಗಾದೆಗಳು ತೀರ್ಮಾನವಾಗಲಿವೆ. ಆರೋಗ್ಯದದಲ್ಲಿ ವ್ಯತ್ಯಯ ಸಾಧ್ಯತೆ.

ಮೀನ: ಯಾವುದೇ ಕೆಲಸ ಪ್ರಾರಂಭಿಸುವ ಮುನ್ನ ಮತ್ತೊಮ್ಮೆ ಯೋಚಿಸುವುದು ಉತ್ತಮ. ಮಹಿಳಾ ಉದ್ಯಮಿಗಳಿಗೆ ಯಶಸ್ಸು. ಋಣಬಾಧೆಯಿಂದ ಮುಕ್ತಿ ದೊರಕುವ ಸಾಧ್ಯತೆ.

ನಿಮ್ಮ ಜನ್ಮದಿನ 4-ಜೂನ್: ಈ ದಿನವು ಅತ್ಯಂತ ಶುಭಕರವಾಗಿದ್ದು, ಸಾಮಾಜಿಕ ಕಾರ್ಯಗಳಲ್ಲಿ ಲವಲವಿಕೆಯಿಂದ ತೊಡಗಿಕೊಳ್ಳುವಿರಿ. ನಿಮ್ಮ ಒಳಿತಿಗಾಗಿ ಉದ್ಯೋಗದಲ್ಲಿ, ಮಿತ್ರಲ್ಲಿ ಕ್ಷಿಪ್ರಗತಿಯಲ್ಲಿ ಹೊಂದಾಣಿಕೆ ಮಾಡಿಕೊಂಡು ಉನ್ನತಿ ಸಾಧಿಸುವಿರಿಸಾಮಾಜಿಕ ಕಾರ್ಯಗಳಲ್ಲಿ ತೊಡಗಿಕೊಂಡಲ್ಲಿ ಉತ್ತಮ ಯಶಸ್ಸನ್ನು ಕಾಣುವಿರಿ.

ಪದಬಂಧ 4617 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
3.ವಾಮನನ ಎಡಭಾಗ! (2)
5.ಯಾವುದಾದರೂ ವಿಷಯ ಸತ್ಯವಲ್ಲವೆಂದು ಹೇಳುವುದು (5)
6.ಮಿತಿ ಮೀರಿದ ಸಿಟ್ಟು (3)
7.ರಾಣಿ ಹಿಡಿದಿರುವ ಅಡ್ಡಣಿಗೆ (3)
8.ಸಂಸ್ಥೆಗಳ ಹಕ್ಕಿನ ಮೇಲೆ ಸರ್ಕಾರದ ಸ್ವಾಮ್ಯ (5)
9.ಒಳ್ಳೆಯ ಅವಕಾಶ (3)
10.ತಾಲೂಕಿನ ಅಥವಾ ಅದರ ಭಾಗದ ಮುಖ್ಯಸ್ಥಳ (3)
13.ಇತರರನ್ನು ಆಶ್ರಯಿಸಿ ಬದುಕುವಿಕೆ (5)
14.ಅಜ್ಞಾತದಲ್ಲಿದ್ದರೂ ವಿಷಯವನ್ನು ಬಲ್ಲವನು! (2)

ಮೇಲಿಂದ ಕೆಳಕ್ಕೆ
1.ಕೃಷ್ಣನಿಗೆ ಪ್ರಿಯವಾದ ಕೊಳಲು (4)
2.ಉತ್ಪತ್ತಿ ಸ್ಥಾನ (3)
4.ಮಣಿಸರ ಧರಿಸಿರುವ ಚಕ್ರವರ್ತಿನಿ (4)
5.ಯಾವುದೇ ಅಪರಾಧವನ್ನು ಮಾಡದಿರುವವ (5)
7.ಗುಣವನ್ನು ಹೊಗಳುವುದು (5)
9.ಒಳ್ಳೆಯ ನಡತೆ (4)
11.ಬೆಳಕಿಗಾಗಿ ಮಾಡಿರುವ ಗವಾಕ್ಷ (4)
12.ವರ ಪಡೆದಿರುವ ಮಂತ್ರಿ (3)



4616ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಶೋಧಕ 3.ಸೆರೆವಾಸ 5.ರಿಪು 6.ಡಬ್ಬುಗಾತಿ 7.ಅತಿಕ್ರಮಪ್ರವೇಶ 10.ಪರಿಮಾಣ 11.ಮಾಟ 13.ತಿಗ್ಮಕರ 14.ನಿಷ್ಕರ್ಷೆ

ಮೇಲಿಂದ ಕೆಳಕ್ಕೆ: 1.ಶೋಕ 2.ಕದಪು 4.ಸವತಿ 5.ರಿಚ್ಛಲ 6.ಡಚಂಪ್ರ 8.ಕ್ರಮೇಣ 9.ಶಕಟ 10.ಪದಾತಿ 11. ಮಾನಿನಿ 12.ಈರ್ಷೆ

ಸುಡೊಕು 5003

7	9			3			6	
4					7		2	9
	8	3		9		1		7
		4			9		8	
	2			5				3
8			2				4	
	4			2		8		
			9					5
2		8		7			3	4

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5002 ಸುಡೊಕು

7	9	4	3	5	8	6	2	1
3	8	5	2	6	1	7	9	4
2	1	6	4	9	7	8	3	5
5	2	7	8	3	9	1	4	6
4	6	1	7	2	5	3	8	9
9	3	8	6	1	4	5	7	2
1	5	2	9	8	3	4	6	7
8	4	9	5	7	6	2	1	3
6	7	3	1	4	2	9	5	8

ಚೋಕ್ಸಿಗೆ ಜಾಮೀನು ನಿರಾಕರಣೆ

ನವದೆಹಲಿ (ಪಿಟಿಐ): ಅಕ್ರಮವಾಗಿ ಕೆರಿಬಿಯನ್ ದ್ವೀಪ ರಾಷ್ಟ್ರಕ್ಕೆ ಪ್ರವೇಶಿಸಿದ ಆರೋಪಕ್ಕೆ ಸಂಬಂಧಿಸಿದಂತೆ ವಜ್ರ ಉದ್ಯಮಿ ಮೆಹುಲ್ ಚೋಕ್ಸಿಗೆ ಡೊಮಿನಿಕಾ ಮ್ಯಾಜಿಸ್ಟ್ರೇಟ್ ನ್ಯಾಯಾಲಯ ಜಾಮೀನು ನಿರಾಕರಿಸಿದೆ ಎಂದು ಸ್ಥಳೀಯ ಮಾಧ್ಯಮ ವರದಿ ಮಾಡಿದೆ.

ಹೇಬಿಯಸ್ ಕಾರ್ಪಸ್ ಅರ್ಜಿಯ ವಿಚಾರಣೆ ವೇಳೆ ಡೊಮಿನಿಕಾ ಹೈಕೋರ್ಟ್ ನೀಡಿದ್ದ ಅನುಸಾರ ಚೋಕ್ಸಿ ಅವರನ್ನು ಮ್ಯಾಜಿಸ್ಟ್ರೇಟ್ ನ್ಯಾಯಾಲಯದ ಮುಂದೆ ಹಾಜರುಪಡಿಸಲಾಯಿತು.

ಕೋವಿಡ್‌ನಿಂದ ತೊಂದರೆಗೆ ಒಳಗಾದವರ ರಕ್ಷಣೆ– ಪಾಲನೆ ಸಂಬಂಧ ಹೊಣೆಗಾರಿಕೆ ನಿಗದಿ

ಮಕ್ಕಳ ಪಾಲನೆಗೆ ಮಾರ್ಗಸೂಚಿ

ನವದೆಹಲಿ (ಪಿಟಿಐ): ಕೋವಿಡ್–19 ನಿಂದಾಗಿ ತೊಂದರೆಗೆ ಒಳಗಾಗಿರುವ ಮಕ್ಕಳ ರಕ್ಷಣೆ ಹಾಗೂ ಪಾಲನೆಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ಮಾರ್ಗಸೂಚಿಗಳನ್ನು ಬಿಡುಗಡೆ ಮಾಡಿದೆ.

ಮಕ್ಕಳ ಪಾಲನೆ-ರಕ್ಷಣೆಗೆ ಸಂಬಂಧಿಸಿ ರಾಜ್ಯಗಳು, ಜಿಲ್ಲಾಧಿಕಾರಿಗಳು, ಪೊಲೀಸ್ ಅಧಿಕಾರಿಗಳು, ಪಂಚಾಯಿತಿ ಹಾಗೂ ನಗರ ಸ್ಥಳೀಯ ಸಂಸ್ಥೆಗಳಿಗೆ ಹೊಣೆಗಾರಿಕೆಯನ್ನು ನಿಗದಿ ಮಾಡಲಾಗಿದೆ. ಕೈಗೊಳ್ಳಬೇಕಾದ ಕ್ರಮಗಳ ಕುರಿತು ಈ ಮಾರ್ಗಸೂಚಿಗಳಲ್ಲಿ ವಿವರಿಸಲಾಗಿದೆ.

ಕೇಂದ್ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯದ ಕಾರ್ಯದರ್ಶಿ ರಾಮಮೋಹನ್ ಮಿಶ್ರಾ ಅವರು ಈ ಸಂಬಂಧ ಎಲ್ಲ ರಾಜ್ಯಗಳ ಮುಖ್ಯ ಕಾರ್ಯದರ್ಶಿಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ ಪತ್ರ ಬರೆದಿದ್ದಾರೆ.

ಸಂಕಷ್ಟಕ್ಕೆ ಸಿಲುಕಿರುವ ಮಕ್ಕಳನ್ನು ರಾಜ್ಯಗಳು ಗುರುತಿಸಬೇಕು. ಪ್ರತಿ ಮಗುವಿನ ವಿವರಗಳನ್ನು ಒಳಗೊಂಡ ಡೇಟಾಬೇಸ್ ಸಿದ್ಧಪಡಿಸಬೇಕು. ಮಕ್ಕಳ ನಿರ್ದಿಷ್ಟ ಅಗತ್ಯಗಳನ್ನು ಪಟ್ಟಿ ಮಾಡಬೇಕು ಹಾಗೂ ಈ ವಿವರಗಳನ್ನು 'ಟ್ರ್ಯಾಕ್ ಚೈಲ್ಡ್' ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಬೇಕು ಎಂದು ಅವರು ಪತ್ರದಲ್ಲಿ ಸೂಚಿಸಿದ್ದಾರೆ.

ತಂದೆ ಅಥವಾ ತಾಯಿ ಇಲ್ಲವೇ ಇಬ್ಬರೂ ಕೋವಿಡ್‌ನಿಂದಾಗಿ ಆಸ್ಪತ್ರೆಗೆ ದಾಖಲಾಗಿದ್ದರೆ, ಆಸ್ಪತ್ರೆಗಳು ಆ ಕುಟುಂಬದ ನಂಬಿಕಸ್ಥ ವ್ಯಕ್ತಿಯೊಬ್ಬರ ವಿವರಗಳನ್ನು ರೋಗಿಗಳಿಂದ ಪಡೆದು, ಅದನ್ನು ದಾಖಲೆಗಳಲ್ಲಿ ನಮೂದಿಸಬೇಕು. ಮಕ್ಕಳನ್ನು ನೋಡಿಕೊಳ್ಳಬೇಕಾದ ಸಂದರ್ಭ ಎದುರಾದಾಗ, ಆ ವ್ಯಕ್ತಿಯನ್ನು ಸಂಪರ್ಕಿಸಲು ಇದರಿಂದ ಅನುಕೂಲವಾಗುವುದು ಎಂದು ಮಿಶ್ರಾ ತಿಳಿಸಿದರು.

ತೊಂದರೆಗೆ ಒಳಗಾದ ಮಕ್ಕಳಿಗಾಗಿ 'ಮಕ್ಕಳ ಆರೈಕೆ ಕೇಂದ್ರ'ಗಳನ್ನು (ಸಿಸಿಐ) ಆರಂಭಿಸಬೇಕು. ಒಂದು ವೇಳೆ ಮಕ್ಕಳಿಗೂ ಕೋವಿಡ್–19 ತಗುಲಿದರೆ, ಅಂಥವರಿಗಾಗಿ ಸಿಸಿಐಗಳಲ್ಲೇ ಪ್ರತ್ಯೇಕ ವಾಸಕ್ಕೆ ಸೌಲಭ್ಯ ಒದಗಿಸಬೇಕು. ಮಕ್ಕಳ ಮನೋವೈದ್ಯರು ಅಥವಾ ಆಪ್ತಸಮಾಲೋಚಕರು ಈ ಕೇಂದ್ರಗಳಿಗೆ ನಿಯಮಿತವಾಗಿ ಭೇಟಿ ನೀಡಿ, ಮಕ್ಕಳೊಂದಿಗೆ ಸಂವಾದ ನಡೆಸಿ, ಅವರಲ್ಲಿ ಸ್ಥೈರ್ಯ ತುಂಬಬೇಕು ಎಂದೂ ಸೂಚಿಸಲಾಗಿದೆ.

ದೇಶದಲ್ಲಿ 9,346 ಮಕ್ಕಳು ತಮ್ಮ ಪಾಲಕರ ಪೈಕಿ ಒಬ್ಬರನ್ನು ಕೋವಿಡ್‌ನಿಂದಾಗಿ ಕಳೆದುಕೊಂಡಿದ್ದಾರೆ. 1,700 ಮಕ್ಕಳು ತಂದೆ–ತಾಯಿ ಇಬ್ಬರನ್ನೂ ಕಳೆದುಕೊಂಡಿದ್ದಾರೆ ಎಂದು ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಇತ್ತೀಚೆಗೆ ಸುಪ್ರೀಂಕೋರ್ಟ್‌ಗೆ ಸಲ್ಲಿಸಿರುವ ಪ್ರಮಾಣಪತ್ರದಲ್ಲಿ ತಿಳಿಸಿದೆ.

ಕೋವಿಡ್–19– ಪಕ್ಷ ಸಂಘಟನೆಯ ವಿಷಯ ಪ್ರಸ್ತಾಪ

ನಡ್ಡಾ ಜತೆ ವಿಜಯೇಂದ್ರ ಚರ್ಚೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಮೂರು ದಿನಗಳಿಂದ ದೆಹಲಿಯಲ್ಲೇ ಬೀಡು ಬಿಟ್ಟಿರುವ ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ಬಿ.ವೈ. ವಿಜಯೇಂದ್ರ ಗುರುವಾರ ಸಂಜೆ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರನ್ನು ಭೇಟಿ ಮಾಡಿ ಚರ್ಚಿಸಿದ್ದಾರೆ.

ರಾಜ್ಯದಲ್ಲಿನ ಕೋವಿಡ್–19 ಸ್ಥಿತಿಗತಿ ಹಾಗೂ ಪಕ್ಷ ಸಂಘಟನೆ ಕುರಿತು ನಡ್ಡಾ ಅವರೊಂದಿಗೆ ಚರ್ಚಿಸಲಾಯಿತು ಎಂದು ಟ್ವೀಟ್ ಮಾಡಿದ್ದಾರೆ.

'ಕೋವಿಡ್–19ರಿಂದ ಪೀಡಿತರಾದ ಜನರ ದುಃಖ-ದುಮ್ಮಾನಗಳಿಗೆ ಪಕ್ಷದ ಕಾರ್ಯಕರ್ತರು ಸ್ಪಂದಿಸಬೇಕಾದ ಅಗತ್ಯದ ಕುರಿತು ನಡ್ಡಾ ಸಲಹೆ, ಮಾರ್ಗದರ್ಶನ ನೀಡಿದ್ದಾರೆ. ಈ ಭೇಟಿ ನನ್ನಲ್ಲಿ ಇನ್ನಷ್ಟು ಉತ್ಸಾಹ ಹಾಗೂ ಆತ್ಮವಿಶ್ವಾಸ ಹೆಚ್ಚಿಸಿದೆ' ಎಂದು ಹೇಳಿಕೊಂಡಿದ್ದಾರೆ.

ಉಭಯ ಮುಖಂಡರು ಅರ್ಧ ಗಂಟೆ ಮಾತುಕತೆ ನಡೆಸಿದ್ದಾರೆ. ನಾಯಕತ್ವ ಬದಲಾವಣೆಗೆ ಆಗ್ರಹಿಸುತ್ತ, ಭಿನ್ನಮತೀಯ ಚಟುವಟಿಕೆಯಲ್ಲಿ ಪಾಲ್ಗೊಂಡಿರುವ ಸಚಿವರು, ಶಾಸಕರ ವಿರುದ್ಧ ಶಿಸ್ತು ಕ್ರಮ ಕೈಗೊಂಡು ಗೊಂದಲ ನಿವಾರಿಸಬೇಕು ಎಂದು ವಿಜಯೇಂದ್ರ ಮನವಿ ಸಲ್ಲಿಸಿದ್ದಾರೆ ಎಂದು ಪಕ್ಷದ ಉನ್ನತ ಮೂಲಗಳು ಹೇಳಿವೆ.

'ನಮ್ಮ ಕುಟುಂಬ ಸದಸ್ಯರ ವಿರುದ್ಧ ಮಾಡಲಾದ ಭ್ರಷ್ಟಾಚಾರದ ಆರೋಪಗಳಿಗೆ ಪೂರಕ ಸಾಕ್ಷಾಧಾರಗಳಿಲ್ಲ. ಅಂಥ ಆಧಾರರಹಿತ ಆರೋಪಗಳನ್ನು ಮಾಡುವವರ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದೂ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ಪುತ್ರ ವಿಜಯೇಂದ್ರ ಕೋರಿದ್ದಾರೆ ಎನ್ನಲಾಗಿದೆ.

ಮಂಗಳವಾರ, ಬುಧವಾರ ಪಕ್ಷದ ರಾಜ್ಯ ಉಸ್ತುವಾರಿ ಅರುಣ್ ಸಿಂಗ್ ಅವರನ್ನು ಭೇಟಿ ಮಾಡಿದ್ದ ವಿಜಯೇಂದ್ರ ರಹಸ್ಯ ಮಾತುಕತೆ ನಡೆಸಿದ್ದರು.

ಲಸಿಕೆಗೆ ಕಾತರ...

ನವದೆಹಲಿಯಲ್ಲಿ ಗುರುವಾರ ಕೋವಿಡ್ ಲಸಿಕೆಯ ಎರಡನೇ ಡೋಸ್ ಪಡೆಯಲು ಲಸಿಕೆ ಕೇಂದ್ರದ ಮುಂದೆ ಕಾಯುತ್ತಿರುವ ಜನರು –ಪಿಟಿಐ ಚಿತ್ರ

ಸುದ್ದಿ 2 ನಿಮಿಷ

ಕೇಂದ್ರದ ನೋಟಿಸ್‌ಗೆ ಆಲಾಪನ್ ಉತ್ತರ

ಕೋಲ್ಕತ್ತ (ಪಿಟಿಐ): ಯಸ್ ಚಂಡಮಾರುತದಿಂದ ಹಾನಿಯ ಪರಿಶೀಲನೆಗೆ ಪ್ರಧಾನಿ ನರೇಂದ್ರ ಮೋದಿ ಅವರ ಜತೆ ಮೇ 28ರಂದು ನಿಗದಿಯಾಗಿದ್ದ ಸಭೆಗೆ ಗೈರಾಗಿದ್ದನ್ನು ಪ್ರಶ್ನಿಸಿ ವಿಪತ್ತು ನಿರ್ವಹಣಾ ಕಾಯ್ದೆಯಡಿ ಕೇಂದ್ರ ಸರ್ಕಾರದ ನೀಡಿದ್ದ ನೋಟಿಸ್‌ಗೆ ಪಶ್ಚಿಮ ಬಂಗಾಳದ ಮಾಜಿ ಮುಖ್ಯಕಾರ್ಯದರ್ಶಿ ಆಲಾಪನ್ ಬಂದೋಪಾಧ್ಯಾಯ ಅವರು ಗುರುವಾರ ಉತ್ತರ ನೀಡಿದ್ದಾರೆ.

'ಪರಿಶೀಲನಾ ಸಭೆಯಲ್ಲಿ ಸ್ವಲ್ಪ ಹೊತ್ತು ಭಾಗಿಯಾದ ಬಳಿಕ, ಮುಖ್ಯಮಂತ್ರಿ ಮಮತಾ ಬ್ಯಾನರ್ಜಿಯವರ ನಿರ್ದೇಶನದಂತೆ ಪೂರ್ವ ಮೇದಿನಿಪುರ ಜಿಲ್ಲೆಯಲ್ಲಿ ತೀವ್ರ ಹಾನಿಗೆ ಒಳಗಾಗಿದ್ದ ದಿಘಾ ಎಂಬಲ್ಲಿ ಪರಿಶೀಲನೆಗೆ ತೆರಳಿದ್ದೆ' ಎಂದು ಆಲಾಪನ್ ತಿಳಿಸಿದ್ದಾರೆ. ಆಲಾಪನ್ ಅವರು ಸಭೆಗೆ ಗೈರಾದ ವಿಚಾರವು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ನಡುವೆ ಸಂಘರ್ಷಕ್ಕೆ ಕಾರಣವಾಗಿತ್ತು.

ಸಭೆಗೆ ಗೈರಾದ ಆಲಾಪನ್ ಅವರನ್ನು ಕೇಂದ್ರ ಸೇವೆಗೆ ವರ್ಗಾಯಿಸಲಾಗಿತ್ತು. ಆದರೆ ಅವರು ರಾಜೀನಾಮೆ ನೀಡಿದರು. ಬಳಿಕ ಅವರು ಮುಖ್ಯಮಂತ್ರಿಗಳ ಮುಖ್ಯ ಸಲಹೆಗಾರರಾಗಿ ನೇಮಕವಾದರು.

ಅಮೆರಿಕ ದೂತಾವಾಸದಲ್ಲಿ ರೇನ್‌ಬೋ ಧ್ವಜಾರೋಹಣ

ಚೆನ್ನೈ: ಚೆನ್ನೈನಲ್ಲಿರುವ ಅಮೆರಿಕ ದೂತಾವಾಸ ಕಚೇರಿಯಲ್ಲಿ ಸಲಿಂಗಾಸಕ್ತರು ಮತ್ತು ಲಿಂಗಪರಿವರ್ತಿತರ ಮಾಸಾಚರಣೆ ಅಂಗವಾಗಿ ಬುಧವಾರ 'ರೇನ್‌ಬೋ' ಧ್ವಜಾರೋಹಣ ಮಾಡಲಾಗಿದೆ. ಜೂನ್ 30ರಂದು ಈ ಮಾಸಾಚರಣೆ ಮುಗಿಯಲಿದ್ದು, ಅಲ್ಲಿಯವರೆಗೆ ಇಲ್ಲಿನ ಕಚೇರಿಯ ಆವರಣದಲ್ಲಿ ಈ ಧ್ವಜವು ಹಾರಾಡಲಿದೆ.

'ಈ ಸಮುದಾಯದವರ ಹಕ್ಕುಗಳ ರಕ್ಷಣೆ ಬಗ್ಗೆ ತನಗಿರುವ ಬದ್ಧತೆಯನ್ನು ಪ್ರದರ್ಶಿಸಲು ಈ ಧ್ವಜವನ್ನು ಹಾರಿಸಲಾಗಿದೆ. ಈ ಸಮುದಾಯದವರ ಹಕ್ಕುಗಳನ್ನು ಅಮೆರಿಕವು ಬೆಂಬಲಿಸುತ್ತದೆ. ಇದರಲ್ಲಿ ನೀವೂ ಜತೆಯಾಗಿ' ಎಂದು ಅಮೆರಿಕದ ಇಲ್ಲಿನ ಕಚೇರಿಯ ಕಾನ್ಸಲ್ ಜನರಲ್ ಜುಡಿತ್ ರೇವಿನ್ ಕರೆ ನೀಡಿದ್ದಾರೆ.

ಗ್ರೀನ್ ಕಾರ್ಡ್: ದೇಶಗಳ ಮೇಲಿನ ಮಿತಿ ತೆಗೆಯುವ ಮಸೂದೆ ಮಂಡನೆ

ವಾಷಿಂಗ್ಟನ್ (ಪಿಟಿಐ): ಉದ್ಯೋಗ ಆಧಾರಿತ 'ಗ್ರೀನ್ ಕಾರ್ಡ್' ಪಡೆಯುವಲ್ಲಿ ಪ್ರತಿ ದೇಶಗಳ ಮೇಲೆ ನಿಗದಿಪಡಿಸಿರುವ ಮಿತಿಯನ್ನು ತೆಗೆಯುವ ಕುರಿತ ಮಸೂದೆಯೊಂದು ಅಮೆರಿಕದ ಜನಪ್ರತಿನಿಧಿ ಸಭೆಯಲ್ಲಿ (ಹೌಸ್ ಆಫ್ ರೆಪ್ರೆಸೆಂಟೆಟಿವ್ಸ್) ಮಂಡನೆಯಾಗಿದೆ.

ಸಂಸದರಾದ ಜೋ ಲೋಫ್‌ಗ್ರೆನ್ ಮತ್ತು ಜಾನ್ ಕರ್ಟಿಸ್ ಅವರು 'ಕಾನೂನು ಬದ್ಧ ಉದ್ಯೋಗಕ್ಕಾಗಿ ಗ್ರೀನ್ ಕಾರ್ಡ್‌ಗಳಿಗೆ ಸಮಾನ ಪ್ರವೇಶ' ಮಸೂದೆ ಮಂಡಿಸಿದ್ದಾರೆ. ಇದು ಕಾಯ್ದೆಯಾಗಿ ಜಾರಿಯಾದಲ್ಲಿ ದಶಕಗಳಿಂದ ಗ್ರೀನ್ ಕಾರ್ಡ್ ನಿರೀಕ್ಷೆಯಲ್ಲಿರುವ ಭಾರತೀಯ ಐಟಿ ವೃತ್ತಿಪರರಿಗೆ ಪ್ರಯೋಜನವಾಗುತ್ತದೆ ಎಂದು ಹೇಳಲಾಗಿದೆ. ಕುಟುಂಬ ಪ್ರಾಯೋಜಿತ ವೀಸಾಗಳಿಗೆ ಸಂಬಂಧಿಸಿದಂತೆ ದೇಶಗಳ ಮೇಲಿನ ಮಿತಿಯನ್ನು ಶೇ 7ರಿಂದ 15ಕ್ಕೆ ಏರಿಸುವ ಪ್ರಸ್ತಾವವೂ ಮಸೂದೆಯಲ್ಲಿದೆ.

ಕೋವಿಡ್: 514 ಮಂದಿ ಮರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ 24 ಗಂಟೆಗಳ ಅವಧಿಯಲ್ಲಿ 18,324 ಮಂದಿ ಸೋಂಕಿತರಾಗಿದ್ದು, 514 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ.

ಸೋಂಕು ದೃಢ ಪ್ರಮಾಣವು ಶೇ 12.20ಕ್ಕೆ ಇಳಿಕೆಯಾಗಿದೆ. ಆದರೆ, ಮರಣ ಪ್ರಮಾಣ ದರ ಶೇ 3ರ ಗಡಿಯ (ಶೇ 2.80) ಆಸುಪಾಸಿನಲ್ಲಿಯೇ ಇದೆ. ಹೊಸದಾಗಿ ದೃಢಪಟ್ಟ ಕೋವಿಡ್ ಮರಣ ಪ್ರಕರಣಗಳಲ್ಲಿ ಸುಮಾರು ಅರ್ಧದಷ್ಟು ಮಂದಿ 50 ವರ್ಷದೊಳಗಿನವರಾಗಿದ್ದಾರೆ. ಮೃತರು ಶೀತಜ್ವರ ಮಾದರಿಯ ಅನಾರೋಗ್ಯ ಸಮಸ್ಯೆ (ಐಎಲ್‌ಐ) ಹಾಗೂ ತೀವ್ರ ಉಸಿರಾಟದ ಸಮಸ್ಯೆ (ಸಾರಿ) ಎದುರಿಸಿದ್ದಾರೆ. ಈ ತಿಂಗಳ ಮೂರು ದಿನಗಳ ಅವಧಿಯಲ್ಲಿ 1,441 ಮಂದಿ ಮೃತಪಟ್ಟಿರುವುದು ಖಚಿತಪಟ್ಟಿದೆ. ಈವರೆಗೆ ಕೋವಿಡ್‌ಗೆ ಸಾವಿಗೀಡಾದವರ ಒಟ್ಟು ಸಂಖ್ಯೆ 30,531ಕ್ಕೆ ಏರಿಕೆಯಾಗಿದೆ.

ಕೋವಿಡ್ ಪೀಡಿತರಲ್ಲಿ ಮತ್ತೆ 24,036 ಮಂದಿ ಗುಣಮುಖರಾಗಿದ್ದಾರೆ. ಈವರೆಗೆ ಚೇತರಿಕೆ ಹೊಂದಿದವರ ಸಂಖ್ಯೆ 23.36 ಲಕ್ಷ ದಾಟಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ ಮತ್ತಷ್ಟು ಇಳಿಕೆ ಕಂಡಿದ್ದು, 2.86 ಲಕ್ಷ ಸೋಂಕಿತರು ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. ಈವರೆಗೆ ಕೋವಿಡ್ ಪೀಡಿತರಾದವರ ಸಂಖ್ಯೆ 26.53 ಲಕ್ಷ ದಾಟಿದೆ.

ಯಾದಗಿರಿ ಹೊರತುಪಡಿಸಿ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಹೊಸದಾಗಿ ಮರಣ ಪ್ರಕರಣಗಳು ವರದಿಯಾಗಿವೆ.

ಬೆಂಗಳೂರಿನಲ್ಲಿ ಮತ್ತೆ 347 ಮಂದಿ ಮೃತಪಟ್ಟಿದ್ದಾರೆ. ಹಾಸನ ಹಾಗೂ ಮಂಡ್ಯದಲ್ಲಿ ತಲಾ 14 ಮಂದಿ, ಮೈಸೂರಿನಲ್ಲಿ 12 ಮಂದಿ, ಉತ್ತರ ಕನ್ನಡ ಹಾಗೂ ಬೆಂಗಳೂರು ಗ್ರಾಮಾಂತರದಲ್ಲಿ ತಲಾ 11 ಮಂದಿ, ಕೊಪ್ಪಳ, ಚಾಮರಾಜನಗರ ಹಾಗೂ ಬೆಳಗಾವಿಯಲ್ಲಿ ತಲಾ 10 ಮಂದಿ ಸಾವಿಗೀಡಾಗಿರುವುದು ದೃಢಪಟ್ಟಿದೆ.

ಬೆಂಗಳೂರಿನಲ್ಲಿ ಕೋವಿಡ್ ಹೊಸ ಪ್ರಕರಣಗಳ ಸಂಖ್ಯೆ ಮತ್ತಷ್ಟು ಇಳಿಕೆಯಾಗಿದೆ. 24 ಗಂಟೆಗಳ ಅವಧಿಯಲ್ಲಿ 3,533 ಮಂದಿ ಕೋವಿಡ್ ಪೀಡಿತರಾಗಿರುವುದು ಖಚಿತಪಟ್ಟಿದೆ. ಹಾಸನ (2,078), ಮೈಸೂರು (1,573) ಜಿಲ್ಲೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಹೊಸ ಪ್ರಕರಣಗಳು ವರದಿಯಾಗಿವೆ. 15 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ 500ಕ್ಕಿಂತ ಕಡಿಮೆ ವರದಿಯಾಗಿವೆ.

3 ಕೋಟಿ ದಾಟಿದ ಪರೀಕ್ಷೆ

ರಾಜ್ಯದಲ್ಲಿ ಕೋವಿಡ್ ಪರೀಕ್ಷೆಗಳ ಸಂಖ್ಯೆ ಮತ್ತೆ ಏರುಗತಿ ಪಡೆದಿದೆ. ಗುರವಾರ 1.50 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಇದರಿಂದಾಗಿ ಈವರೆಗೆ ನಡೆಸಲಾದ ಕೋವಿಡ್ ಪರೀಕ್ಷೆಗಳ ಸಂಖ್ಯೆ 3 ಕೋಟಿ ಗಡಿ (3.01ಕೋಟಿ) ದಾಟಿದೆ. ಇದರಲ್ಲಿ 51.27 ಲಕ್ಷ ಪರೀಕ್ಷೆಗಳನ್ನು ರ್‍ಯಾಪಿಡ್ ಆ್ಯಂಟಿಜೆನ್ ವಿಧಾನದಲ್ಲಿ ನಡೆಸಲಾಗಿದೆ. 2.50 ಕೋಟಿ ಮಾದರಿಗಳನ್ನು ಆರ್‌ಟಿ–ಪಿಸಿಆರ್ ಹಾಗೂ ಇತರ ವಿಧಾನದಲ್ಲಿ ಪರೀಕ್ಷೆ ಮಾಡಲಾಗಿದೆ.

ದೇಶದಲ್ಲಿ ಅಧಿಕ ಸಂಖ್ಯೆಯಲ್ಲಿ ಕೋವಿಡ್ ಪರೀಕ್ಷೆಗಳನ್ನು ನಡೆಸಿದ ರಾಜ್ಯಗಳ ಪಟ್ಟಿಯಲ್ಲಿ ಕರ್ನಾಟಕ ಮೂರನೇ ಸ್ಥಾನದಲ್ಲಿದೆ. ಮೊದಲ ಸ್ಥಾನದಲ್ಲಿ ಉತ್ತರ ಪ್ರದೇಶ ಹಾಗೂ ಎರಡನೇ ಸ್ಥಾನದಲ್ಲಿ ಮಹಾರಾಷ್ಟ್ರ ಇದೆ. ರಾಜ್ಯದಲ್ಲಿ ಭಾರತೀಯ ವೈದ್ಯಕೀಯ ಸಂಶೋಧನಾ ಪರಿಷತ್ತಿನಿಂದ (ಐಸಿಎಂಆರ್) ಮಾನ್ಯತೆ ಪಡೆದ 196 ಪ್ರಯೋಗಾಲಯಗಳು ಕಾರ್ಯನಿರ್ವಹಿಸುತ್ತಿವೆ. ಸಂಗ್ರಹಿಸಲಾದ ಒಟ್ಟು ಮಾದರಿಗಳಲ್ಲಿ ಶೇ 62 ರಷ್ಟು ಮಾದರಿಗಳನ್ನು ಸರ್ಕಾರಿ ಪ್ರಯೋಗಾಲಯಗಳಲ್ಲಿಯೇ ಪರೀಕ್ಷೆ ನಡೆಸಲಾಗಿದೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ.

58.71 ಲಕ್ಷ ಡೋಸ್ ಲಸಿಕೆ ಪೂರೈಕೆ

'ಜೂನ್ ತಿಂಗಳಲ್ಲಿ ರಾಜ್ಯಕ್ಕೆ ಕೇಂದ್ರ ಸರ್ಕಾರದಿಂದ 45 ಲಕ್ಷ ಡೋಸ್ ಲಸಿಕೆ ಪೂರೈಕೆಯಾಗಲಿದೆ. ಅದೇ ರೀತಿ, ರಾಜ್ಯ ಸರ್ಕಾರ ಖರೀದಿಸಿದ ಲಸಿಕೆಯಲ್ಲಿ 13.7 ಲಕ್ಷ ಡೋಸ್ ಲಭ್ಯವಾಗಲಿದೆ. ಹೀಗಾಗಿ, ಈ ತಿಂಗಳು ರಾಜ್ಯಕ್ಕೆ ಒಟ್ಟು 58.71 ಲಕ್ಷ ಡೋಸ್ ಲಸಿಕೆ ಪೂರೈಕೆಯಾಗುತ್ತದೆ' ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ತಿಳಿಸಿದ್ದಾರೆ.

ಚಿಂದಿ ಆಯುವವರಿಗೆ ಪಡಿತರ ಚೀಟಿ ಕೊಡಿ: ರಾಜ್ಯಗಳಿಗೆ ಸೂಚನೆ

ನವದೆಹಲಿ (ಪಿಟಿಐ): ಸಮಾಜದ ಅತ್ಯಂತ ದುರ್ಬಲ ವರ್ಗದವರಿಗೆ ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆ ಅಡಿ ಪಡಿತರ ಚೀಟಿಗಳನ್ನು ವಿತರಿಸುವ ಅಭಿಯಾನಕ್ಕೆ ಕೂಡಲೇ ಚಾಲನೆ ನೀಡಬೇಕು ಎಂದು ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶ ಸರ್ಕಾರಗಳಿಗೆ ಕೇಂದ್ರ ಸರ್ಕಾರವು ಸೂಚನೆ ನೀಡಿದೆ. ಬಡವರು ಸಬ್ಸಿಡಿ ದರದಲ್ಲಿ ಆಹಾರ ಧಾನ್ಯಗಳನ್ನು ಪಡೆಯಲು ಹಲವಾರು ಅಡಚಣೆಗಳನ್ನು ಎದುರಿಸುತ್ತಿದ್ದಾರೆ ಎಂಬುದರ ಕುರಿತು ವರದಿಗಳು ಬರುತ್ತಿರುವ ಬೆನ್ನಲ್ಲೇ ಕೇಂದ್ರ ಸರ್ಕಾರ ಈ ಸೂಚನೆ ಹೊರಡಿಸಿದೆ.

ಚಿಂದಿ ಆಯುವವರು, ಬೀದಿಯಲ್ಲಿ ವಾಸಿಸುವವರು, ವಲಸೆ ಕಾರ್ಮಿಕರು ಸೇರಿ ಗ್ರಾಮ ಮತ್ತು ನಗರ ಪ್ರದೇಶಗಳ ಹಲವಾರು ಬಡವರು ವಿಳಾಸದ ದಾಖಲೆಗಳಿಲ್ಲ ಎಂಬ ಕಾರಣಕ್ಕೆ ಪಡಿತರ ಚೀಟಿಯನ್ನು ಪಡೆದಿಲ್ಲ. ವಿಶೇಷ ಅಭಿಯಾನ ನಡೆಸಿ, ಪಡಿತರ ಚೀಟಿ ಹೊಂದಿಲ್ಲದವರನ್ನು ಗುರುತಿಸಿ, ಅವರಿಗೆ ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆ (ಎನ್‌ಎಫ್‌ಎಸ್‌ಎ) ಅಡಿ ಪಡಿತರ ಚೀಟಿ ವಿತರಿಸಬೇಕು. ಈ ಕೆಲಸ ಕೂಡಲೇ ಆಗಬೇಕು ಎಂದು ಕೇಂದ್ರ ಆಹಾರ ಮತ್ತು ಸಾರ್ವಜನಿಕ ವಿತರಣಾ ಸಚಿವಾಲಯವು ಹೇಳಿದೆ.

ಪಡಿತರ ಚೀಟಿ ಪಡೆಯಲು ವಿಳಾಸದ ದಾಖಲೆ ಹೊಂದಿಲ್ಲದ ಕಡುಬಡವರಿಗೆ ಪಡಿತರ ಪಡೆಯಲು ಸಾಧ್ಯವಾಗುತ್ತಿಲ್ಲ. ಅಂಥವರು ಸಾರ್ವಜನಿಕ ವಿತರಣಾ ವ್ಯವಸ್ಥೆಯಿಂದ ವಂಚಿತರಾಗುತ್ತಿದ್ದಾರೆ ಎಂದು ಸರ್ಕಾರ ಹೇಳಿದೆ.

ಸಾರ್ವಜನಿಕ ವಿತರಣಾ ವ್ಯವಸ್ಥೆಯ 80 ಕೋಟಿ ಫಲಾನುಭವಿಗಳಿಗೆ ಮೇ 1ರಿಂದ ಎರಡು ತಿಂಗಳ ಕಾಲ 5 ಕಿಲೊ ಉಚಿತ ಆಹಾರ ಧಾನ್ಯ ನೀಡುವುದಾಗಿ ಕೇಂದ್ರ ಸರ್ಕಾರ ಏಪ್ರಿಲ್‌ನಲ್ಲಿ ಘೋಷಿಸಿತ್ತು. ಹೆಚ್ಚುವರಿ ಆಹಾರ ಧಾನ್ಯಗಳನ್ನು ಪ್ರಧಾನ ಮಂತ್ರಿ ಗರೀಬ್ ಕಲ್ಯಾಣ ಅನ್ನ ಯೋಜನೆ (ಪಿಎಂಜಿಕೆಎವೈ) ಅಡಿ ನ್ಯಾಯ ಬೆಲೆ ಅಂಗಡಿ ಅಥವಾ ಸಾರ್ವಜನಿಕ ವಿತರಣಾ ವ್ಯವಸ್ಥೆ ಮೂಲಕ ಹಂಚಲಾಗುತ್ತದೆ. 80 ಲಕ್ಷ ಟನ್ ಆಹಾರ ಧಾನ್ಯಗಳನ್ನು 2 ತಿಂಗಳ ಅವಧಿಯಲ್ಲಿ ಹಂಚಲು ಕೇಂದ್ರ ಸರ್ಕಾರ ನಿರ್ಧರಿಸಿದೆ. ಇದರಿಂದ ಸರ್ಕಾರದ ಬೊಕ್ಕಸಕ್ಕೆ ₹26,000 ಕೋಟಿ ವೆಚ್ಚವಾಗಲಿದೆ ಎನ್ನಲಾಗಿದೆ.

ಶಿಕ್ಷಕರ ವರ್ಗ: ತಿದ್ದುಪಡಿ ಕಾಯ್ದೆ ಕರಡು ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: 2019–20ನೇ ಸಾಲಿನಲ್ಲಿ ಕಡ್ಡಾಯ ಮತ್ತು ಹೆಚ್ಚುವರಿ ವರ್ಗಾವಣೆಗೆ ಒಳಗಾಗಿ ತೊಂದರೆ ಅನುಭವಿಸುತ್ತಿರುವ ಶಿಕ್ಷಕರಿಗೆ ವಿಶೇಷ ಕೌನ್ಸೆಲಿಂಗ್ ಮೂಲಕ ಒಂದು ಬಾರಿ ವರ್ಗಾವಣೆಗೆ ಅವಕಾಶ ಮಾಡಿಕೊಡುವ 'ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಕಾಯ್ದೆ–2020'ಯ ತಿದ್ದುಪಡಿಯ ಕರಡನ್ನು ರಾಜ್ಯಪತ್ರದಲ್ಲಿ ಪ್ರಕಟಿಸಲಾಗಿದೆ.

ಈ ತಿದ್ದುಪಡಿಯಿಂದ, ಕಡ್ಡಾಯ ಅಥವಾ ಹೆಚ್ಚುವರಿ ವರ್ಗಾವಣೆಗೆ ಒಳಗಾದವರಿಗೆ, ವರ್ಗಾವಣೆಗೂ ಮೊದಲು ಕೆಲಸ ನಿರ್ವಹಿಸುತ್ತಿದ್ದ ಸ್ಥಳ ಆಯ್ಕೆ ಮಾಡಿಕೊಳ್ಳಲು (ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಸಂಬಂಧಪಟ್ಟ ತಾಲ್ಲೂಕು, ಪ್ರೌಢ ಶಾಲಾ ಶಿಕ್ಷಕರಿಗೆ ಸಂಬಂಧಪಟ್ಟ ಜಿಲ್ಲೆ) ಅವಕಾಶ ಆಗಲಿದೆ. ವರ್ಗಾವಣೆಗೂ ಮೊದಲು ತಾಲ್ಲೂಕು ಅಥವಾ ಜಿಲ್ಲೆಯಲ್ಲಿ ಖಾಲಿ ಹುದ್ದೆಗಳ ಲಭ್ಯತೆಗೆ ಅನುಗುಣವಾಗಿ ಸ್ಥಳ ಆಯ್ಕೆ ಮಾಡಿಕೊಳ್ಳಬೇಕು.

ಇಂಥ ಶಿಕ್ಷಕರಿಗೆ ವರ್ಗಾವಣೆ ಕೌನ್ಸೆಲಿಂಗ್‌ನ್ನು ಈ ಹಿಂದೆ (2019–20ರಲ್ಲಿ) ನಡೆದ ಹಂತದಲ್ಲಿಯೇ ನಡೆಸಬೇಕು. ವಿಶೇಷ ಕೌನ್ಸೆಲಿಂಗ್‌ಗೆ ಲಭ್ಯವಿರುವ ಖಾಲಿ ಹುದ್ದೆಗಳ ಪಟ್ಟಿ ಪ್ರಕಟಿಸಿದ ನಂತರ ಇದಕ್ಕೆ ಆನ್‌ಲೈನ್‌ನಲ್ಲಿ ಅರ್ಜಿ ಆಹ್ವಾನಿಸಬೇಕು. ಬಳಿಕ 2019–20ರಲ್ಲಿನ ಕೌನ್ಸೆಲಿಂಗ್ ಕ್ರಮಾಂಕ ಪರಿಗಣಿಸಿ ಜ್ಯೇಷ್ಠತಾ ಪಟ್ಟಿ ಸಿದ್ಧಪಡಿಸಿ, ಆಕ್ಷೇಪಣೆ ಆಹ್ವಾನಿಸಿ ಅಂತಿಮಗೊಳಿಸಬೇಕು ಎಂದು ನಿಯಮದಲ್ಲಿದೆ.

ಹೆಚ್ಚುವರಿ ವರ್ಗಾವಣೆಯಾದವರಿಗೆ ವಲಯದ ನಿರ್ಬಂಧ ಇಲ್ಲ. ಕಡ್ಡಾಯ ವರ್ಗಾವಣೆಗೊಂಡ ಶಿಕ್ಷಕರು 'ಬಿ' ಅಥವಾ 'ಸಿ' ವಲಯದ ಶಾಲೆಗಳನ್ನು ಆಯ್ಕೆ ಮಾಡಿಕೊಳ್ಳಬಹುದು. 'ಬಿ' ಅಥವಾ 'ಸಿ' ವಲಯದಲ್ಲಿ ಖಾಲಿ ಹುದ್ದೆ ಲಭ್ಯವಿಲ್ಲದೇ ಇದ್ದರೆ 'ಎ' ವಲಯದ ಲಭ್ಯ ಶಾಲೆ ಆಯ್ಕೆ ಮಾಡಿಕೊಳ್ಳಬಹುದು ಎಂದೂ ಸ್ಪಷ್ಟಪಡಿಸಲಾಗಿದೆ. ತಿದ್ದುಪಡಿಗೆ ಆಕ್ಷೇಪಣೆ ಸಲ್ಲಿಸಲು ಏಳು ದಿನಗಳ ಅವಕಾಶ ನೀಡಲಾಗಿದೆ.

ಲಸಿಕೆ: 30 ಕೋಟಿ ಡೋಸ್‌ಗೆ ಕೇಂದ್ರ ಒಪ್ಪಂದ

ನವದೆಹಲಿ (ಪಿಟಿಐ): ಹೈದರಾಬಾದ್ ಮೂಲದ ಲಸಿಕೆ ತಯಾರಕ ಕಂಪನಿಯಾದ 'ಬಯೋಲಾಜಿಕಲ್-ಇ' ಜೊತೆ ಕೋವಿಡ್–19ರ 30 ಕೋಟಿ ಲಸಿಕಾ ಡೋಸ್‌ಗಳನ್ನು ಕಾಯ್ದಿರಿಸುವುದಕ್ಕೆ ಕೇಂದ್ರ ಆರೋಗ್ಯ ಸಚಿವಾಲಯವು ಒಪ್ಪಂದ ಮಾಡಿಕೊಂಡಿದೆ. ಇದಕ್ಕಾಗಿ ಮುಂಗಡವಾಗಿ ₹1500 ಕೋಟಿಯನ್ನು ಕೇಂದ್ರ ಪಾವತಿಸಲಿದೆ.

ಈ ಲಸಿಕೆಯ ಡೋಸ್‌ಗಳನ್ನು ಈ ವರ್ಷದ ಆಗಸ್ಟ್‌ನಿಂದ ಡಿಸೆಂಬರ್‌ವರೆಗೆ 'ಬಯೋಲಾಜಿಕಲ್-ಇ' ತಯಾರಿಸುತ್ತದೆ ಮತ್ತು ಸಂಗ್ರಹಿಸುತ್ತದೆ ಎಂದು ಗುರುವಾರ ಸಚಿವಾಲಯದ ಪ್ರಕಟಣೆ ತಿಳಿಸಿದೆ.

ಕಪ್ಪು ಶಿಲೀಂಧ್ರ: ಔಷಧ ಕೊರತೆ ಸರಿಪಡಿಸಲು ನಿರ್ದೇಶನ

ಬೆಂಗಳೂರು: ಕಪ್ಪು ಶಿಲೀಂಧ್ರ ಸೋಂಕಿಗೆ ಒಳಗಾದವರ ಚಿಕಿತ್ಸೆಗೆ ಔಷಧ ಕೊರತೆ ಆಗದಂತೆ ಎಚ್ಚರಿಕೆ ವಹಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶನ ನೀಡಿದೆ.

ಕಪ್ಪು ಶಿಲೀಂಧ್ರ ಸೋಂಕಿನ ಚಿಕಿತ್ಸೆಗೆ ಚುಚ್ಚುಮದ್ದು ಕೊರತೆ ಇದೆ ಎಂದು ವಕೀಲ ಪಿ. ರವೀಂದ್ರ ಅವರು ಬರೆದಿದ್ದ ಪತ್ರ ಆಧರಿಸಿ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ ಈ ಆದೇಶ ನೀಡಿತು.

'ಕಪ್ಪು ಶಿಲೀಂಧ್ರ ಸೋಂಕಿಗೆ ಒಳಗಾದವರ ಸಂಖ್ಯೆ ಎಷ್ಟು, ಚಿಕಿತ್ಸೆಗೆ ಲಭ್ಯ ಇರುವ ಔಷಧದ ಪ್ರಮಾಣ ಎಷ್ಟು' ಎಂಬ ವಿವರ ಸಲ್ಲಿಸುವಂತೆ ಪೀಠ ಸೂಚಿಸಿತು. 'ರಾಜ್ಯದಲ್ಲಿ ಚುಚ್ಚುಮದ್ದು ಕೊರತೆ ಇದೆ. ಈ ವಿಷಯವನ್ನು ರಾಜ್ಯ ಸರ್ಕಾರ ಗಂಭೀರವಾಗಿ ಪರಿಗಣಿಸಿ ಕೊರತೆ ಸರಿದೂಗಿಸಲು ಪ್ರಯತ್ನಿಸುತ್ತಿದೆ' ಎಂದು ಅಡ್ವೊಕೇಟ್ ಜನರಲ್ ಮಾಹಿತಿ ನೀಡಿದರು.

'ಕಪ್ಪು ಶಿಲೀಂಧ್ರ ಚಿಕಿತ್ಸೆಗೆ ಔಷಧ ಭಾರತದಲ್ಲಿ ತಯಾರಾಗದ ಕಾರಣ ವಿದೇಶಗಳಿಂದ ಆಮದು ಮಾಡಿಕೊಳ್ಳಬೇಕಿದೆ' ಎಂದು ಕೇಂದ್ರ ಸರ್ಕಾರದ ಪರ ವಕೀಲರು ಮಾಹಿತಿ ನೀಡಿದರು.

ಕಪ್ಪು ಶಿಲೀಂಧ್ರ ಸೋಂಕಿನಿಂದ ಎಷ್ಟು ಜನರ ಬಳಲುತ್ತಿದ್ದಾರೆ ಎಂಬುದರ ಕುರಿತು ಜಿಲ್ಲಾವಾರು ಮಾಹಿತಿ ನೀಡುವಂತೆ ತಿಳಿಸಿದ ಪೀಠ, 'ಔಷಧ ಕೊರತೆಯನ್ನು ಕೂಡಲೇ ಸರಿದೂಗಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳೆರಡೂ ಕ್ರಮ ಕೈಗೊಳ್ಳಬೇಕು' ಎಂದು ತಿಳಿಸಿತು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

Part-Time Jobs

ಮನೆಯಿಂದಲೇ ಕುಳಿತು ಆಫ್‌ಲೈನ್ ಡೇಟಾ ಎಂಟ್ರಿ, ಕನ್ನಡ,ಇಂಗ್ಲೀಷ್ ಬುಕ್ ರೈಟಿಂಗ್ ಫಾರಂ ಫಿಲ್ಲಿಂಗ್ ಕೆಲಸ ಗಳಿಸಿ 15,000-18,000/-. ಕೊರಿಯರ್,ಬುಕ್,ಪೆನ್ ಚಾರ್ಜಸ್ ನಾವೇ ಕೊಡುತ್ತೇವೆ.9686114647, 9900229091

ಭವಿಷ್ಯ

Astrology

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ 100% ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್.ಉಚಿತ ಭವಿಷ್ಯ ಖಚಿತ ಪರಿಹಾರ ಶ್ರೀಕ್ಷೇತ್ರ ಧರ್ಮಸ್ಥಳ, 7022443071

★॥ಸಿಗಂದೂರು ಚೌಡೇಶ್ವರಿ॥★ ವಶೀಕರಣಆಗಬೇಕಾದವರಿಗೆ ಹಚ್ಚುವುದಾಗಲಿ,ತಿನ್ನಿಸುವುದಾಗಲಿ, ಬಟ್ಟೆ,ಫೋಟೋ, ಕೂದಲು ಇಲ್ಲದಿದ್ದರೂ ಸ್ತ್ರೀಪುರುಷ ಲೈಂಗಿಕ ವಶೀಕರಣ, ಸ್ತ್ರೀಯರಿಗೆ 7ಗಂಟೆಗಳಲ್ಲಿ ಉಚಿತ ಪರಿಹಾರ.9845153558

★॥ಸ್ತ್ರೀವಶೀಕರಣ ಸ್ಪೆಷಲಿಸ್ಟ್॥★ ಕೇರಳ ಅಘೋರಿ_ನಾಗಸಾಧು, ಕಾಳಿಕಾದೇವಿ ದಿವ್ಯಶಕ್ತಿಯಿಂದ ನಿಮ್ಮ ಸಮಸ್ಯೆಗಳಿಗೆ ಶೀಘ್ರದಲ್ಲಿ ಪರಿಹಾರ. ಇದುನಿಜ ನಂಬಿ_ಕರೆಮಾಡಿ. ಪಂಡಿತ್.ರಾವ್. 9901724082

★ವಶೀಕರಣ ಸ್ಪೆಷಲಿಸ್ಟ್ ಗುರೂಜಿ. 9663631199★ ಓಂ ಶ್ರೀ ದುರ್ಗಾದೇವಿ ಅನುಗ್ರಹ ಜ್ಯೋತಿಷ್ಯಾಲಯ ಕಟೀಲು ದುರ್ಗಾಪರಮೇಶ್ವರಿ ಅಮ್ಮನವರ ಆರಾಧಕರು. ಪಂಡಿತ್ ಮೋಹನ್ ದಾಸ್ ಶರ್ಮ ಗುರೂಜಿ (ಉಡುಪಿ) ನಿಮ್ಮ ಕುಟುಂಬದ ಸಮಸ್ಯೆಗಳಾದ ನಿಮ್ಮ ಮಕ್ಕಳ ವಿದ್ಯಾಭ್ಯಾಸದಲ್ಲಿ ಬುದ್ಧಿ ಜ್ಞಾನಶಕ್ತಿ ಆರೋಗ್ಯ ಸಮಸ್ಯೆ ತೊಂದರೆ ಇದ್ದರೆ, ನಿಮ್ಮ ಗಂಡ ಪರಸ್ತ್ರೀಯಿಂದ ನಿಮ್ಮ ಸಂಸಾರದಲ್ಲಿತೊಂದರೆ, ನಿಮ್ಮ ಅತ್ತೆ, ಸೊಸೆ, ನಾದಿನಿಯಿಂದ ನಿಮ್ಮ ಸಂಸಾರದಲ್ಲಿ ತೊಂದರೆ ಆಗುತ್ತಿದೆಯೇ? ಪ್ರೀತಿಯಲ್ಲಿ ನಂಬಿ ಮೋಸ ಹೋಗಿದ್ದೀರಾ, ನೀವು ಇಷ್ಟಪಟ್ಟಂತಹ ಸ್ತ್ರೀ/ಪುರುಷ ನಿಮ್ಮಂತೆ ವಶೀಕರಣ ಆಗಲು ನಿಮ್ಮ ಜನ್ಮಲಗ್ನದಲ್ಲಿ ಮದುವೆ ವಿಚಾರದಲ್ಲಿ ಕಂಕಣ ತೊಂದರೆ ಆಗುತ್ತಿದ್ದರೆ,ಗಂಡಹೆಂಡತಿ ಕಿರಿಕಿರಿ ಇಂದ ಡೈವರ್ಸ್ ಪ್ರಾಬ್ಲಮ್ ಇರುವುದರಿಂದ ನಿಮ್ಮ ಸಂಸಾರ ಹಾಳಾಗುತ್ತಿದೆ , ಅಣ್ಣ- ತಮ್ಮಂದಿರ ಆಸ್ತಿಯಲ್ಲಿ ತೊಂದರೆ, ಶತ್ರುಗಳಿಂದ ನಿಮ್ಮ ಕುಟುಂಬಕ್ಕೆ ತೊಂದರೆ,ನಿಮ್ಮ ಕುಟುಂಬದಲ್ಲಿ ಮಾಟ ಮಂತ್ರ ಪ್ರಯೋಗದಿಂದ ನಿಮ್ಮ ಕುಟುಂಬ ಸರ್ವನಾಶ ಆಗುತ್ತಿದೆ, ನಿಮ್ಮ ಎಲ್ಲಾ ಕಠಿಣ ಸಮಸ್ಯೆಗಳಿಗೂ ತಾಯಿ ಕೇರಳ ಭಗವತಿ ದೇವಿ ಮತ್ತು ಕಟೀಲು ದುರ್ಗಾಪರಮೇಶ್ವರಿದೇವಿ ಅಮ್ಮನವರ ಪೂಜಾ ಶಕ್ತಿಯಿಂದ ಅಮಾವಾಸ್ಯೆ ಹುಣ್ಣಿಮೆ ಸೂರ್ಯಚಂದ್ರ ಗ್ರಹಣದಿಂದ ಜಪ ಸಿದ್ದಿಗಳಿಂದ ಕೇವಲ ೧ದಿನದಲ್ಲಿ ೧೦೦% ಶಾಶ್ವತ ಪರಿಹಾರ ಮಾಡುತ್ತಾರೆ. ಮಲ್ಲೇಶ್ವರಂ, ಬೆಂಗಳೂರು

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

★ಅಂಭಭವಾನಿ ಜ್ಯೋತಿಷ್ಯಾಲಯ★ ಕೊಳ್ಳೆಗಾಲದ ನಂ.1 ವಶೀಕರಣ ಸ್ಪೆಷಲಿಸ್ಟ್ ದೇವಿಪ್ರಸಾದ್ (ಉಚಿತ ಭವಿಷ್ಯ ಖಚಿತ ಪರಿಹಾರ)ನಿಮ್ಮ ಸಮಸ್ಯೆಗಳೇನೆಯಿರಲಿ 2ದಿನದಲ್ಲಿ ಪರಿಹಾರ. 9886755306

ಉಚಿತ ಭವಿಷ್ಯ ಶ್ರೀ ಕೇರಳ ದುರ್ಗಾಂಬಿಕಾದೇವಿ ಆರಾಧಕರು ಪ್ರಧಾನ ತಾಂತ್ರಿಕರು ಮೋಡಿ ಮಾಂತ್ರಿಕರು. ದೈವಶಕ್ತಿ ಜ್ಯೋತಿಷ್ಯರು ಪಂಡಿತ್ ಗುರೂಜಿ ವಶೀಕರಣ ಸ್ಪೆಷಲಿಸ್ಟ್ ನಿಮ್ಮಾವುದೇ ಸುಖದುಃಖ ಮನನೊಂದ ಯಾವುದೇ ಗುಪ್ತಸಮಸ್ಯೆಗಳಿಗೂ 1ದಿನದಲ್ಲಿ ಪರಿಹಾರ.9743010743

DH ಪ್ರಜಾವಾಣಿ
BOOK YOUR CLASSIFIEDS ONLINE
5 EASY STEP TO BOOK YOUR CLASSIFIEDS ADS ONLINE
condition apply*
5 Easy steps to book your ads
1 LOG INTO WWW.DHCLASSIFIEDS.COM
2 CHOOSE THE CATEGORY
3 CHOOSE THE AD DATES
4 COMPOSE THE MATTER
5 CONFIRM AND PAY
REAL ESTATE JOB NOTICE NAME CHANGE ANY OTHER CATEGORY
WWW.DHCLASSIFIEDS.COM
9880856233
9886213331
E-mail: dhclassified@deccanherald.co.in

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Tanveer : 9886213331
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿ
https://homages.deccanherald.com
ಅಥವಾ scan the QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಸವಿನೆನಪು

ವಿ. ಕಲ್ಯಾಣಮ್ಮ
ಕೆ. ಎ. ವೆಂಕಟೇಶ ರೆಡ್ಡಿ ಅವರ ಧರ್ಮಪತ್ನಿ
4–6–2002
ನಿಮ್ಮ ನೆನಪು ಸದಾ ಹಸಿರು. ನಿಮ್ಮ ಆತ್ಮಕ್ಕೆ ಭಗವಂತನು ಚಿರಶಾಂತಿ ನೀಡಲೆಂದು ಪ್ರಾರ್ಥಿಸುವ
ಕೆ. ಎ. ವೆಂಕಟೇಶ ರೆಡ್ಡಿ
ಕುಡ್ಲು, ಬೆಂಗಳೂರು
Class - I 'A' K.P.W.D. Contractor
ಮತ್ತು ಮಕ್ಕಳು
S.B.W. Asphalts & Co.

FOR ADVERTISEMENT QUERIES
Contact } Santhosh : 9880856233 Vishal : 9845114560 Ravi : 9606912256

11ನೇ ದಿನದ ಪುಣ್ಯ ಸ್ಮರಣೆ

ಶ್ರೀ ಆರ್.ಎನ್. ಗೋವಿಂದರಾಜ್
ಜನ್ಮ ದಿನಾಂಕ : 10.05.1949
ಇವರು ದಿನಾಂಕ: 25.05.2021 ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಅವರ ಆತ್ಮಕ್ಕೆ ಭಗವಂತನು ಚಿರಶಾಂತಿ ಕರುಣಿಸಲೆಂದು ಪ್ರಾರ್ಥಿಸುತ್ತೇವೆ.
ಇಂತಿ ದುಃಖತಪ್ತ ಕುಟುಂಬವರ್ಗದವರು ಹಾಗೂ ಬಂಧುಮಿತ್ರರು

FOR ADVERTISEMENT QUERIES
• OBITUARY
• REMEMBRANCES
Contact:
Santhosh: 9880856233
Vishal : 9845114560
Ravi : 9606912256

ಗ್ರಾಮಾರೋಗ್ಯ; ಆಗಲಿ ಇನ್ನಷ್ಟು ಯೋಗ್ಯ



ರಾಜಧಾನಿಯ ಅಂಚಿನಲ್ಲೇ 'ಆರೋಗ್ಯ' ಅಯೋಮಯ

• ಗುರು ಪಿ.ಎಸ್.

ಬೆಂಗಳೂರು: ಕೊರೊನಾ ವೈರಾಣು ರೂಪಾಂತರಗೊಂಡಂತೆ ಅದು ಮುಂದಿಡುತ್ತಿರುವ ಸವಾಲುಗಳು ಬದಲಾಗುತ್ತಿವೆ. ಈ ಸವಾಲುಗಳಿಗೆ ತಕ್ಕಂತೆ ಸೌಲಭ್ಯಗಳೂ ರೂಪಾಂತರಗೊಳ್ಳದಿರುವುದು ಬೆಂಗಳೂರು ಗ್ರಾಮಾಂತರ ಜಿಲ್ಲೆ ಮತ್ತು ರಾಜಧಾನಿಯ ಅಕ್ಕ-ಪಕ್ಕದ ಗ್ರಾಮಗಳಲ್ಲಿ ಓಡಾಡಿದಾಗ ಕಂಡ ವಾಸ್ತವ.

ಕೊರೊನಾ ಪೂರ್ವದ ವರ್ಷಗಳಲ್ಲಿ 'ಆರೋಗ್ಯ ಪ್ರವಾಸೋದ್ಯಮ' ಎಂಬ ಹೊಸ ಪರಿಕಲ್ಪನೆ ಶುರುವಾಗಿತ್ತು. ಜಗತ್ತಿನಲ್ಲೇ ಈ ಉದ್ಯಮಕ್ಕೆ ಬೆಂಗಳೂರು ರಾಜಧಾನಿ ಎಂಬ ಹಣೆಪಟ್ಟಿಯೂ ಬಿದ್ದಿತು. ರಾಜಧಾನಿಯ ಈ ನಂಟು ಅತ್ತ ಹಳ್ಳಿಯೂ ಅಲ್ಲದ, ಇತ್ತ ಪೂರ್ಣ ಪೇಟೆಯೂ ಅಲ್ಲದ ಗ್ರಾಮೀಣ ಪ್ರದೇಶಕ್ಕೆ ವರವೂ-ಶಾಪವೂ ಆಗಿ ಪರಿಣಮಿಸಿದೆ. ಬೆಂಗಳೂರಿಗೆ ಹತ್ತಿರದಲ್ಲಿರುವ ದೇವನಹಳ್ಳಿ, ಆನೇಕಲ್‌ನ ಸರ್ಕಾರಿ ಆಸ್ಪತ್ರೆಗಳಲ್ಲಿ ಸೌಲಭ್ಯ-ಸೇವೆ ಸುಧಾರಿಸಿದ್ದರೆ, ಹಳ್ಳಿಗಾಡಿಗೆ ಸೌಲಭ್ಯ ತಲುಪಿಲ್ಲ. ಆದರೆ ಸೋಂಕೇ ಹೆಚ್ಚಿನ ಪ್ರಮಾಣದಲ್ಲಿ ಪಸರಿಸಿದೆ.

ಹೊಸಕೋಟೆ, ದೊಡ್ಡಬಳ್ಳಾಪುರ, ನೆಲಮಂಗಲ ಹಾಗೂ ದಾಬಸ್‌ಪೇಟೆಯ ಸರ್ಕಾರಿ ಆಸ್ಪತ್ರೆಗಳಲ್ಲಿ ಮೇಲ್ನೋಟಕ್ಕೆ ಎಲ್ಲವೂ ಸರಿ ಇದೆ ಎನ್ನುವಂತೆಯೇ ಕಾಣುತ್ತದೆ. ವೈದ್ಯರು, ವೈದ್ಯಕೀಯ ಸಿಬ್ಬಂದಿ ಮತ್ತು 'ಮಾಧ್ಯಮ' ಎದುರು ಯಾವುದೇ ಸಮಸ್ಯೆ ಇಲ್ಲ ಎಂದೇ ಹೇಳುವ ರೋಗಿಗಳ ಸಂಬಂಧಿಕರು, ನಮ್ಮ ಗುರುತು ಹೇಳಿಕೊಳ್ಳದೇ ವಿಚಾರಿಸಿದಾಗ, 'ರಾತ್ರಿಯಾದರೆ ಇಲ್ಲಿ ನರಕ ಸೃಷ್ಟಿಯಾಗುತ್ತೆ. ಕೋವಿಡ್ ವಾರ್ಡ್‌ಗಳಲ್ಲಿ, ಶೌಚಾಲಯಗಳಲ್ಲಿ ಸ್ವಚ್ಛತೆ ಇಲ್ಲ. ವೈದ್ಯಕೀಯ ಸಿಬ್ಬಂದಿಯೂ ಇರುವುದಿಲ್ಲ. ಏನಾದರೂ ಹೆಚ್ಚು ಕಡಿಮೆಯಾದರೆ ದೇವರೇ ಕಾಪಾಡಬೇಕು' ಎಂದು ಆತಂಕದಿಂದಲೇ ಮಾಹಿತಿ ಬಿಡಿಸಿಡುತ್ತಾರೆ.

ಐಸಿಯು ಬೇಕು: ಸರ್ಕಾರಿ ಆಸ್ಪತ್ರೆಗಳಲ್ಲಿ, ಆರೈಕೆ ಕೇಂದ್ರಗಳಲ್ಲಿ ಸಾಮಾನ್ಯ ಹಾಸಿಗೆಗಳು ಸಾಕಷ್ಟಿವೆ. ಹಳ್ಳಿಗಳಲ್ಲಿ ಅನೇಕ ಜನ ಮನೆ ಆರೈಕೆಯಲ್ಲಿದ್ದು, ಚೇತರಿಸಿಕೊಳ್ಳುತ್ತಿದ್ದಾರೆ.

ಹೊಸಕೋಟೆ ತಾಲ್ಲೂಕು ಆಸ್ಪತ್ರೆಯ ಆವರಣದಲ್ಲಿಯೇ ಸಾವಿರ ಲೀಟರ್ ಸಾಮರ್ಥ್ಯದ ದ್ರವ ಆಮ್ಲಜನಕ ಘಟಕ ಸ್ಥಾಪಿಸಲಾಗಿದೆ. 75 ಜಂಬೋ ಸಿಲಿಂಡರ್‌ಗಳನ್ನೂ ಕಾಯ್ದಿರಿಸಲಾಗಿದೆ. ಕೋವಿಡ್ ಪರೀಕ್ಷೆ ಮಾಡಲು ಉತ್ತಮ ವ್ಯವಸ್ಥೆ ಮಾಡಲಾಗಿದೆ. ಆದರೆ, ಇಲ್ಲಿರುವ ತೀವ್ರ ನಿಗಾ ಘಟಕದ (ಐಸಿಯು) ಹಾಸಿಗೆಗಳ ಸಂಖ್ಯೆ ಕೇವಲ 3.

ಜಿಲ್ಲೆಯಲ್ಲಿಯೇ ಹೆಚ್ಚು ಜನಸಂಖ್ಯೆ ಹೊಂದಿರುವ ದೊಡ್ಡಬಳ್ಳಾಪುರದ ಸರ್ಕಾರಿ ಆಸ್ಪತ್ರೆಯಲ್ಲಿ ದಿನಕ್ಕೆ ಮೂರರಿಂದ ನಾಲ್ವರು ಕೋವಿಡ್‌ನಿಂದ ಸಾವಿಗೀಡಾಗುತ್ತಿದ್ದಾರೆ. ಗಂಭೀರ ಸ್ಥಿತಿಯಲ್ಲಿರುವ ರೋಗಿಗಳು ಖಾಸಗಿ ಆಸ್ಪತ್ರೆಗಳನ್ನೇ ಆಶ್ರಯಿಸಬೇಕಾಗಿದೆ.

ವೆಂಟಿಲೇಟರ್ ಸೌಲಭ್ಯ ಒದಗಿಸಲು ಈ ಭಾಗದ ಶಾಸಕರು, ಸಂಸದರು ಸಿದ್ಧರಿದ್ದರೂ, ಅದನ್ನು ನಿರ್ವಹಿಸಲು ಬೇಕಾದ ಮಾನವ ಸಂಪನ್ಮೂಲದ ಕೊರತೆ ಇದೆ. ಹೆಚ್ಚಿನ ಸಂಖ್ಯೆಯಲ್ಲಿ ವೈದ್ಯಕೀಯ ಸಿಬ್ಬಂದಿ, ತಜ್ಞ ವೈದ್ಯರ ಅಗತ್ಯವಿದೆ.

ನೆಲಮಂಗಲದ ಸರ್ಕಾರಿ ಕ್ಷೇತ್ರ ಮಾದರಿ ಹಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿ ಕೋವಿಡ್ ಲಸಿಕೆಗಾಗಿ ಅಂತರವಿಲ್ಲದೆ ನೂರಾರು ಜನ ನಿಂತಿರುವ ದೃಶ್ಯ
ಪ್ರಜಾವಾಣಿ ಚಿತ್ರ/ಎಂ.ಎಸ್.ಮಂಜುನಾಥ್

ಕಪ್ಪು ಶಿಲೀಂಧ್ರ ಚಿಕಿತ್ಸೆಗೆ ಸಿದ್ಧತೆಯೇ ಇಲ್ಲ!

ಗ್ರಾಮೀಣ ಭಾಗದ ಅನೇಕರಲ್ಲಿ ಕಪ್ಪು ಶಿಲೀಂಧ್ರ ರೋಗದ ಸಮಸ್ಯೆ ಕಾಣಿಸಿಕೊಳ್ಳುತ್ತಿದೆ. ಕೋವಿಡ್‌ನಿಂದ ಚೇತರಿಸಿಕೊಂಡಿರುವ ಹಲವರಲ್ಲಿ ಈ ತೊಂದರೆ ಕಾಣಿಸಿಕೊಳ್ಳುತ್ತಿದ್ದು, ಇದು ಯಾವ ರೋಗ ಎಂಬ ತಿಳಿವಳಿಕೆಯೂ ಹೆಚ್ಚಿನವರಿಗಿಲ್ಲ.

ಇದರ ಚಿಕಿತ್ಸೆಗಾಗಿ ತಾಲ್ಲೂಕು ಮತ್ತು ಜಿಲ್ಲಾ ಕೇಂದ್ರಗಳಿಗೇ ಬರಬೇಕಾಗಿದೆ. ಆದರೆ, ಇಲ್ಲಿಯೂ ಈ ಚಿಕಿತ್ಸೆಗೆ ಬೇಕಾದ ಲೈಪೊಸೋಮಲ್ ಆ್ಯಂಫೊಟೆರಿಸಿನ್ ಬಿ ಚುಚ್ಚುಮದ್ದು ಕೊರತೆ ಇದೆ. ರಾಜಧಾನಿಯೊಳಗೆ ಸೇರುತ್ತಿರುವ ದೇವನಹಳ್ಳಿ ಸರ್ಕಾರಿ ಆಸ್ಪತ್ರೆಯಲ್ಲಿಯೂ ಇದಕ್ಕೆ ಚಿಕಿತ್ಸೆ ದೊರೆಯುತ್ತಿಲ್ಲ.

'ಹೆಚ್ಚಿನ ಪ್ರಮಾಣದಲ್ಲಿ ಇಂಜೆಕ್ಷನ್ ಬೇಕು. ಈ ಚಿಕಿತ್ಸೆ ನೀಡಲು ಕಣ್ಣು, ಮೂಗು ಮತ್ತು ಗಂಟಲು (ಇಎನ್‌ಟಿ) ತಜ್ಞರನ್ನು ತಾಲ್ಲೂಕು ಆಸ್ಪತ್ರೆಗಳಲ್ಲಿ ನೇಮಕ ಮಾಡಿಕೊಳ್ಳಬೇಕಾಗಿದೆ' ಎಂದು ವೈದ್ಯರೊಬ್ಬರು ಹೇಳಿದರು.

ಸೂಕ್ತ ಆಹಾರವಿಲ್ಲದೆ ಚೇತರಿಕೆ ನಿಧಾನ

'32 ವರ್ಷದ ಮಗ ಮುರಳಿ ಗಟ್ಟಿಮುಟ್ಟಾಗಿದ್ದ. ಸ್ವಲ್ಪ ಜ್ವರ ಬಂದಿತ್ತು. ಹೊಸಕೋಟೆ ಸರ್ಕಾರಿ ಆಸ್ಪತ್ರೆಗೆ ಬೈಕ್‌ನಲ್ಲಿಯೇ ಕರೆದುಕೊಂಡು ಹೋಗಿದ್ದೆವು. ಕೋವಿಡ್ ಎಂದು ದಾಖಲಿಸಿಕೊಂಡರು. ಒಂದೇ ವಾರದಲ್ಲಿ ಅವನ ಶವ ಮನೆಗೆ ಬಂತು. ಊಟ, ನೀರು ಏನೂ ಕೊಡುತ್ತಿರಲಿಲ್ಲ. ಊಟ, ಊಟ ಎಂದು ಕೇಳುತ್ತಲೇ ಜೀವ ಬಿಟ್ಟ' ಎಂದು ಕಣ್ಣೀರಾದರು ಹೊಸಕೋಟೆ ತಾಲ್ಲೂಕಿನ ದೊಡ್ಡದುನ್ನಸಂದ್ರ ನಿವಾಸಿಗಳಾದ ಕೃಷ್ಣಪ್ಪ-ಶಾಂತಮ್ಮ ದಂಪತಿ.

ಇದು ಈ ದಂಪತಿಯ ಕೊರಗು ಮಾತ್ರವಲ್ಲ. ಕೋವಿಡ್‌ನಿಂದ ಸಾವಿಗೀಡಾಗಿರುವ ಸಂಬಂಧಿಕರ, ಗುಣಮುಖವಾದವರ ಸಾಮಾನ್ಯ ದೂರು. 'ಕೋವಿಡ್ ರೋಗಿಗಳಿಗೆ ಸರ್ಕಾರಿ ಆಸ್ಪತ್ರೆಗಳಲ್ಲಿ ಸರಿಯಾಗಿ ಊಟದ ವ್ಯವಸ್ಥೆ ಆಗುತ್ತಿಲ್ಲ. ರಾತ್ರಿ ವೇಳೆ ಹಸಿವಿನಿಂದ ಕೂಗಿದರೂ ಯಾರೂ ಕೇಳಿಸಿಕೊಳ್ಳುವುದಿಲ್ಲ' ಎಂದು ಕೋವಿಡ್‌ನಿಂದ ಗುಣಮುಖರಾದ ವ್ಯಕ್ತಿಯೊಬ್ಬರು ದೂರಿದರು.

ದೇವನಹಳ್ಳಿಯ ಕೋವಿಡ್ ಆಸ್ಪತ್ರೆ ಬಿಟ್ಟು ಉಳಿದ ಸರ್ಕಾರಿ ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಊಟದ ವ್ಯವಸ್ಥೆ ಮಾಡುವ ಬಗ್ಗೆ ಹೆಚ್ಚಿನ ಆಸಕ್ತಿ ಇರುವುದು ಕಾಣಲಿಲ್ಲ.

ಕೋವಿಡ್ ಪರೀಕ್ಷೆ, ಲಸಿಕೆ ವಿತರಣೆಗೆ ಹೆಚ್ಚಿನ ಸಿಬ್ಬಂದಿ ನೇಮಕ ಮಾಡಿದರೆ ಪ್ರತಿ ಗ್ರಾಮಗಳಿಗೂ ತೆರಳಿ ಪರೀಕ್ಷಾ ಕಾರ್ಯ ಕೈಗೊಳ್ಳಬಹುದಾಗಿದೆ
ಅಂಜನಮ್ಮ, ಹಿರಿಯ ಆರೋಗ್ಯ ಸಹಾಯಕಿ , ದಾಬಸ್‌ಪೇಟೆ ನಿವಾಸಿ

ದೊಡ್ಡಬಳ್ಳಾಪುರದಲ್ಲಿ ಐಸಿಯು ಹಾಸಿಗೆಗಳು ಕಡಿಮೆ ಇವೆ. ಗಂಭೀರ ಸ್ಥಿತಿಯಲ್ಲಿರುವ ರೋಗಿಗಳು ಅನಿವಾರ್ಯವಾಗಿ ಖಾಸಗಿ ಆಸ್ಪತ್ರೆಯನ್ನೇ ಅವಲಂಬಿಸಬೇಕಾಗಿದೆ
ಬಿ.ಪಿ. ಆಂಜನೇಯ
ದೊಡ್ಡಬಳ್ಳಾಪುರ ನಿವಾಸಿ

ಲಸಿಕೆ ಧಾವಂತ: ಗ್ರಾಮ ಪಂಚಾಯಿತಿಗಳ ಮಟ್ಟದಲ್ಲಿ ಕೋವಿಡ್ ಪರೀಕ್ಷೆ ಮಾಡಿಸಿಕೊಳ್ಳಿ ಎಂದು ಸಿಬ್ಬಂದಿ ಪ್ರಚಾರ ನಡೆಸಬೇಕಾದ, ಒತ್ತಾಯಿಸಬೇಕಾದ ಪರಿಸ್ಥಿತಿ ಇದ್ದರೆ, ತಾಲ್ಲೂಕು ಕೇಂದ್ರಗಳಲ್ಲಿ ಜನರು ಲಸಿಕೆಗಾಗಿ ಮುಗಿಬೀಳುತ್ತಿದ್ದಾರೆ. ದಿನವಿಡೀ ಕಾದರೂ ಲಸಿಕೆ ಸಿಗುತ್ತಿಲ್ಲ.

'ಕೊವ್ಯಾಕ್ಸಿನ್' ಎರಡನೇ ಡೋಸ್ ಪಡೆಯುವವರ ಪಟ್ಟಿಯಲ್ಲಿ ನಮ್ಮ ಹೆಸರಿದೆಯೇ ಎಂದು ಮಕ್ಕಳು ಪರೀಕ್ಷೆ ಫಲಿತಾಂಶ ನೋಡುವ ರೀತಿಯಲ್ಲಿ ಪಿಎಚ್‌ಸಿಗಳ ಎದುರು ಹಿರಿಯ ನಾಗರಿಕರು ತಮ್ಮ ಹೆಸರನ್ನು ಹುಡುಕುತ್ತಿದ್ದಾರೆ. ಲಸಿಕೆ ಸಿಗದವರು ಸರ್ಕಾರಿ ಆಸ್ಪತ್ರೆ, ಪಿಎಚ್‌ಸಿಗಳ ಸಿಬ್ಬಂದಿ ಮೇಲೆ ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.

ಬೆಂಗಳೂರು ಗ್ರಾಮಾಂತರ
ಕೋವಿಡ್ ಅಂಕಿ-ಅಂಶ

54,751 ಒಟ್ಟು ಸೋಂಕಿತರು

ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು
8,160	45,894	697

ದಿನದ ಏರಿಕೆ

ಹೊಸ ಪ್ರಕರಣ	760
ಗುಣಮುಖ	243
ಸಾವು	11

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಕೋವಿಡ್ ಪರೀಕ್ಷೆ ಮಾಡಿಸಿಕೊಂಡವರು ತಪ್ಪು ದೂರವಾಣಿ ಸಂಖ್ಯೆ, ವಿಳಾಸ ನೀಡುತ್ತಿದ್ದಾರೆ. ಇಂಥವರ ನಿರ್ಲಕ್ಷ್ಯ-ಭಯದಿಂದ ಗ್ರಾಮಗಳಲ್ಲಿ ಕೋವಿಡ್ ಹೆಚ್ಚುತ್ತಿದೆ
ಕೆ.ಎಸ್. ಹೊನ್ನಪ್ಪ, ಕರಿಮಣ್ಣೆ ದಾಬಸ್‌ಪೇಟೆ

ಪತಿಯ ಕೋವಿಡ್ ಪರೀಕ್ಷೆಯ ಫಲಿತಾಂಶ ಏಳು ದಿನಗಳ ನಂತರ ಬಂತು. ಅಷ್ಟರಲ್ಲಾಗಲೇ ಅವರ ಸ್ಥಿತಿ ಗಂಭೀರವಾಗಿ ತೀರಿಕೊಂಡರು.
ಅಭಿಲಾಷ, ಬಾಣಾರಹಳ್ಳಿ

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಗ್ರಾಮೀಣ ಆರೋಗ್ಯಕ್ಕೇ ಅನಾರೋಗ್ಯ!

• ಜೆ.ಆರ್.ಗಿರೀಶ್

ಕೋಲಾರ: ಜಿಲ್ಲೆಯ ಕುಗ್ರಾಮಗಳಿಗೂ ನುಸುಳಿರುವ 'ಕೋವಿಡ್' ಗ್ರಾಮೀಣ ಭಾಗದ ಜನರ ಬದುಕನ್ನು ಅಯೋಮಯ ಮಾಡಿದೆ. ಇದು ರೋಗಗ್ರಸ್ತ ಗ್ರಾಮೀಣ ಆರೋಗ್ಯ ವ್ಯವಸ್ಥೆಯ ಸತ್ಯ ದರ್ಶನ ಮಾಡಿಸುತ್ತಿದೆ.

ಜಿಲ್ಲೆಯಲ್ಲಿ ನಗರ ಪ್ರದೇಶಕ್ಕೆ ಹೋಲಿಸಿದರೆ ಹಳ್ಳಿಗಳಲ್ಲೇ ಕೊರೊನಾ ಸೋಂಕು ಹರಡುವಿಕೆ ಪ್ರಮಾಣ ಹೆಚ್ಚಿದ್ದು, ಗ್ರಾಮೀಣ ಭಾಗದ ಯಾವುದೇ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಹೋದರೂ ಕೋವಿಡ್ ಲಸಿಕೆಗಾಗಿ ಜನರು ಸಾಲುಗಟ್ಟಿ ನಿಂತಿರುವ ದೃಶ್ಯವೇ ಎದುರಾಗುತ್ತದೆ. ಜನರು ಕೋವಿಡ್ ಪರೀಕ್ಷೆಗೆ ದಿನಗಟ್ಟಲೇ ಕಾಯುವ ಪರಿಸ್ಥಿತಿಯಿದೆ.

ಗ್ರಾಮೀಣ ಭಾಗದಲ್ಲಿ ಆರೋಗ್ಯ ಸೇವೆಯ ವಸ್ತುಸ್ಥಿತಿ ತಿಳಿಯಲು ಹೊರಟ 'ಪ್ರಜಾವಾಣಿ'ಗೆ ಆಸ್ಪತ್ರೆಗಳ ಅವ್ಯವಸ್ಥೆಯ ದಿಗ್ದರ್ಶನವಾಯಿತು. ಸೋಂಕಿನ ಪ್ರಮಾಣ ಇಳಿಕೆಯಾಗಿದೆ ಎಂದು ತೋರಿಸಲು ಆರೋಗ್ಯ ಇಲಾಖೆಯು ಕೋವಿಡ್ ಪರೀಕ್ಷೆ ಪ್ರಮಾಣವನ್ನೇ ಕಡಿಮೆ ಮಾಡಿ 'ಕಳ್ಳಾಟ'ವಾಡುತ್ತಿರುವ ಸಂಗತಿ ಬಯಲಾಯಿತು.

ವೈದ್ಯಕೀಯ ಸಿಬ್ಬಂದಿ ಕೊರತೆ, ವಿದ್ಯುತ್, ಸ್ವಚ್ಛತೆ, ಕುಡಿಯುವ ನೀರು, ಶೌಚಾಲಯ, ಔಷಧ, ಮಾತ್ರೆ ಕೊರತೆ ಸೇರಿದಂತೆ ಆಸ್ಪತ್ರೆಗಳಲ್ಲಿ ಸಮಸ್ಯೆಗಳ ಸರಮಾಲೆಯೇ ಕಂಡುಬಂತು. ಶಿಥಿಲಾವಸ್ಥೆಯ ಕಟ್ಟಡಗಳಲ್ಲಿ ವೈದ್ಯಕೀಯ ಸಿಬ್ಬಂದಿ ಪ್ರತಿನಿತ್ಯ ಜೀವ ಭಯದಲ್ಲೇ ಕರ್ತವ್ಯ ನಿರ್ವಹಿಸುತ್ತಿರುವುದೂ ಗೋಚರಿಸಿತು.

'ತಾಯಿಗೆ ಎರಡನೇ ಡೋಸ್ ಲಸಿಕೆ ಹಾಕಿಸಲು ಬಂದಿದ್ದೇನೆ. ಆಸ್ಪತ್ರೆ ಸಿಬ್ಬಂದಿ ಲಸಿಕೆ ನೀಡಿಕೆ ಬಗ್ಗೆ ಸರಿಯಾಗಿ ಮಾಹಿತಿ ಕೊಡುತ್ತಿಲ್ಲ. ಲಸಿಕೆ ಬಂದರೆ ಮಧ್ಯಾಹ್ನ ಕೊಡುತ್ತೇವೆ ಎಂದು ವೈದ್ಯರು ಹೇಳುತ್ತಾರೆ. ಜನ ಸುಮ್ಮನೆ ಆಸ್ಪತ್ರೆ ಬಳಿ ಬಂದು ಲಸಿಕೆಗಾಗಿ ದಿನವಿಡೀ ಕಾಯುವಂತಾಗಿದೆ' ಎಂದು ಮಾಲೂರು ತಾಲ್ಲೂಕಿನ ಇರಬನಹಳ್ಳಿಯ ವಸಂತರೆಡ್ಡಿ ಅಸಹನೆ ವ್ಯಕ್ತಪಡಿಸಿದರು.

ಲಸಿಕೆ ಪೂರೈಕೆಯಾಗುತ್ತಿಲ್ಲ:

'ತಾಲ್ಲೂಕಿನಲ್ಲಿ ನರಸಾಪುರ ಮತ್ತು ಮಾಲೂರು ಕೈಗಾರಿಕಾ ಪ್ರದೇಶ ಇರುವುದರಿಂದ ಜನರ ಓಡಾಟ ಹೆಚ್ಚಿದೆ. ಕಾರ್ಮಿಕರು ಕೆಲಸಕ್ಕಾಗಿ ಪ್ರತಿನಿತ್ಯ ಬೆಂಗಳೂರಿನಿಂದ ಕೈಗಾರಿಕೆಗಳಿಗೆ ಬಂದು ಹೋಗುತ್ತಾರೆ. ಇದರಿಂದ ಕೈಗಾರಿಕಾ ಪ್ರದೇಶ ಮತ್ತು ಅಕ್ಕಪಕ್ಕದ ಗ್ರಾಮಗಳಲ್ಲಿ ಸೋಂಕು ಹರಡುವಿಕೆ ಹೆಚ್ಚಿದೆ' ಎಂದು ದೊಡ್ಡಶಿವಾರ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದಾಧಿಕಾರಿ ಡಾ.ಮಂಜುಳಾ ಅವರು ವಸ್ತುಸ್ಥಿತಿ ವಿವರಿಸಿದರು.

'ಆಸ್ಪತ್ರೆಯಲ್ಲಿ ಸಿಬ್ಬಂದಿ ಕೊರತೆಯಿದ್ದು, ಹಳ್ಳಿಗಳಲ್ಲಿ ಮನೆ ಮನೆ ಸರ್ವೆಗೆ ಸಮಸ್ಯೆಯಾಗಿದೆ. ಸಿಬ್ಬಂದಿ ರಜೆ ಪಡೆಯದೆ ಕಾರ್ಯನಿರ್ವಹಿಸುತ್ತಿದ್ದು, ಕೆಲಸದ ಒತ್ತಡ ಹೆಚ್ಚಿದೆ. ಬೇಡಿಕೆಗೆ ತಕ್ಕಂತೆ ಕೋವಿಡ್ ಲಸಿಕೆ ಪೂರೈಕೆಯಾಗುತ್ತಿಲ್ಲ. ಇದರಿಂದ ಜನರು ಆಕ್ರೋಶಗೊಳ್ಳುತ್ತಿದ್ದು, ಗೊಂದಲ ಸೃಷ್ಟಿಯಾಗುತ್ತಿದೆ' ಎಂದು ಅಸಹಾಯಕತೆ ವ್ಯಕ್ತಪಡಿಸಿದರು.

ಸೋಂಕಿತರ ಓಡಾಟ:

'ಕೋವಿಡ್ ಮೊದಲ ಅಲೆಯಲ್ಲಿ ಸೋಂಕಿತರ ಮನೆ ಮುಂದೆ ನೋಟಿಸ್ ಅಂಟಿಸಿ, ಸೋಂಕಿತರ ಕೈಗೆ ಸೀಲ್ ಹಾಕಲಾಗುತ್ತಿತ್ತು. ಸೋಂಕಿತರು ಹೆಚ್ಚಿರುವ ಪ್ರದೇಶವನ್ನು ಕಂಟೈನ್‌ಮೆಂಟ್ ವಲಯವಾಗಿ ಮಾಡಲಾಗುತ್ತಿತ್ತು. ಆದರೆ, ಈಗ ಆರೋಗ್ಯ ಇಲಾಖೆ ಈ ಕೆಲಸ ಮಾಡುತ್ತಿಲ್ಲ. ಸೋಂಕಿತರು ಮನೆಯಿಂದ ಹೊರ ಬಂದು ಗ್ರಾಮದಲ್ಲೆಲ್ಲಾ ಮನಸೋಇಚ್ಛೆ ಓಡಾಡುತ್ತಿದ್ದಾರೆ. ಇದು ಸೋಂಕು ಹೆಚ್ಚಳಕ್ಕೆ ದಾರಿ ಮಾಡಿಕೊಡುತ್ತಿದೆ' ಎಂದು ಲಕ್ಕೂರು ಗ್ರಾಮಸ್ಥ ಸಂತೋಷ್ ಬಾಬು ಅಸಮಾಧಾನ ಹೊರಹಾಕಿದರು.

'ಲಸಿಕೆಗೆ ಸರ್ಕಾರ ವಿಧಿಸಿರುವ ಕೆಲ ಷರತ್ತುಗಳು ಅಸಂಬದ್ಧವಾಗಿವೆ. ಕೂಲಿ ಕಾರ್ಮಿಕರಿಗೆ ಮೊದಲ ಆದ್ಯತೆಯಾಗಿ ಲಸಿಕೆ ನೀಡಬೇಕೆಂದು ಸರ್ಕಾರ ಹೇಳಿದೆ. ಕೂಲಿ ಕಾರ್ಮಿಕರು ಲಸಿಕೆ ಪಡೆಯಲು ಹೋದರೆ ವೈದ್ಯರು ಗುರುತಿನ ಚೀಟಿ ಕೇಳುತ್ತಾರೆ. ಸರ್ಕಾರ ಕೂಲಿ ಕಾರ್ಮಿಕರಿಗೆ ಗುರುತಿನ ಚೀಟಿಯನ್ನೇ ಕೊಟ್ಟಿಲ್ಲ. ಪರಿಸ್ಥಿತಿ ಹೀಗಿರುವಾಗ ಅವರು ಲಸಿಕೆ ಪಡೆಯುವುದು ಹೇಗೆ?' ಎಂದು ಲಕ್ಕೂರು ಗ್ರಾಮ ಪಂಚಾಯಿತಿ ಅಧ್ಯಕ್ಷ ಚೇತನ್‌ಗೌಡ ಪ್ರಶ್ನಿಸಿದರು.

ಕೋಲಾರ ಜಿಲ್ಲೆ ಕೆಜಿಎಫ್ ತಾಲ್ಲೂಕಿನ ಘಟ್ಟರಾಗಡಹಳ್ಳಿಯಲ್ಲಿ 11 ಮಕ್ಕಳಿಗೆ ಕೊರೊನಾ ಸೋಂಕು ಹರಡಿರುವುದು ದೃಢಪಟ್ಟಿರುವ ಹಿನ್ನೆಲೆಯಲ್ಲಿ ಗ್ರಾಮವನ್ನು ಸೀಲ್‌ಡೌನ್ ಮಾಡಲಾಗಿದೆ.

ಕೂಲಿ ಇಲ್ಲ; ಬದುಕೋದು ಹೇಗೆ?

'ಗ್ರಾಮದಲ್ಲಿ ಕೊರೊನಾ ಸೋಂಕಿತರು ಪತ್ತೆಯಾಗಿರುವುದರಿಂದ ಅಕ್ಕಪಕ್ಕದ ಗ್ರಾಮದವರು ಕೂಲಿಗೆ ಕರೆದುಕೊಳ್ಳುತ್ತಿಲ್ಲ. ಗ್ರಾಮ ಸೀಲ್‌ಡೌನ್ ಮಾಡಿ ಹೋದ ಅಧಿಕಾರಿಗಳು ಮತ್ತೆ ಇತ್ತ ತಿರುಗಿ ನೋಡಿಲ್ಲ. ಔಷಧ, ಮಾತ್ರೆ, ಆಹಾರ ಪದಾರ್ಥಗಳು ಪೂರೈಕೆಯಾಗುತ್ತಿಲ್ಲ. ನಾವು ಬದುಕುವುದು ಹೇಗೆ?' ಎಂದು ಕೆಜಿಎಫ್ ತಾಲ್ಲೂಕಿನ ಘಟ್ಟರಾಗಡಹಳ್ಳಿಯ ಮಂಜುನಾಥ್ ಅಸಹನೆ ಹೊರಹಾಕಿದರು.

'ಗ್ರಾಮದ ಬಹುಪಾಲು ಮಂದಿ ಕೂಲಿ ಮಾಡಿ ಬದುಕು ಸಾಗಿಸುತ್ತಿದ್ದಾರೆ. ಜಮೀನುಗಳಲ್ಲಿ ಕೆಲಸಕ್ಕೆ ಹೋದರೆ ಮಹಿಳೆಯರಿಗೆ ದಿನಕ್ಕೆ ₹ 200 ಕೂಲಿ ಸಿಗುತ್ತದೆ. ಗ್ರಾಮದ ಜನರಿಗೆ ಸೋಂಕು ದೃಢಪಟ್ಟ ನಂತರ ಕೂಲಿ ಕೆಲಸ ಇಲ್ಲವಾಗಿದೆ. ಗ್ರಾಮದಿಂದ ಹೊರ ಹೋದರೆ ದೂರು ದಾಖಲಿಸುವುದಾಗಿ ಆರೋಗ್ಯ ಇಲಾಖೆಯವರು ಬೆದರಿಸುತ್ತಾರೆ. ಗ್ರಾಮ ಪಂಚಾಯಿತಿಯವರು 5 ಕೆ.ಜಿ ಅಕ್ಕಿ ಮತ್ತು ಟೊಮೆಟೊ ಕೊಟ್ಟು ಕೈ ತೊಳೆದುಕೊಂಡಿದ್ದಾರೆ. ಸಮಸ್ಯೆ ಹೇಳಲು ತಹಶೀಲ್ದಾರ್‌ಗೆ ಕರೆ ಮಾಡಿದರೆ ಸ್ವೀಕರಿಸುತ್ತಿಲ್ಲ' ಎಂದು ಗ್ರಾಮಸ್ಥರು ಅಳಲು ತೋಡಿಕೊಂಡರು.

ಕೇಂದ್ರದ ಕಾರ್ಯ ವ್ಯಾಪ್ತಿ ತುಂಬಾ ವಿಸ್ತಾರವಾಗಿದೆ. 4 ಗ್ರಾ.ಪಂಗಳ 45 ಹಳ್ಳಿಗಳು ಕೇಂದ್ರದ ವ್ಯಾಪ್ತಿಯಲ್ಲಿವೆ. ಗ್ರಾ.ಪಂ ಸದಸ್ಯರಿಂದ ಲಸಿಕೆಗಾಗಿ ಹೆಚ್ಚಿನ ಒತ್ತಡವಿದೆ
ಡಾ.ಶರಣ್, ಕೋಲಾರ ತಾಲ್ಲೂಕಿನ ವಕ್ಕಲೇರಿ ಪಿಎಚ್‌ಸಿ ವೈದ್ಯಾಧಿಕಾರಿ

ಕೋವಿಡ್ ಲಸಿಕೆ ಪಡೆಯಲು ಏಳೆಂಟು ಕಿ.ಮೀ ದೂರದಿಂದ ಬಂದಿದ್ದೇವೆ. ಆಸ್ಪತ್ರೆಯಲ್ಲಿ ಲಸಿಕೆ ನೀಡಿಕೆಗೆ ನಿರ್ದಿಷ್ಟ ಸಮಯ ನಿಗದಿಪಡಿಸಿಲ್ಲ. ಪ್ರತಿನಿತ್ಯ ಸಂಜೆವರೆಗೆ ಕಾದು ಲಸಿಕೆ ಸಿಗದೆ ವಾಪಸ್ ಹೋಗುತ್ತಿದ್ದೇವೆ
ಪ್ರಫುಲ್ಲಾ, ಆಲಂಬಾಡಿ ಗ್ರಾಮಸ್ಥೆ

ಕೋಲಾರ ಜಿಲ್ಲಾ
ಕೋವಿಡ್ ಅಂಕಿ-ಅಂಶ

39,818 ಒಟ್ಟು ಸೋಂಕಿತರು

ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು
6,273	33,156	389

ದಿನದ ಏರಿಕೆ

ಹೊಸ ಪ್ರಕರಣ	317 ▲
ಗುಣಮುಖ	705 ▼
ಸಾವು	02 ▲

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಘಟ್ಟರಾಗಡಹಳ್ಳಿಯಲ್ಲಿ 11 ಮಕ್ಕಳಿಗೆ ಕೊರೊನಾ ಸೋಂಕು ಬಂದಿದ್ದು, ಗ್ರಾಮಸ್ಥರು ಆತಂಕಗೊಂಡಿದ್ದಾರೆ. ಉಳಿದ ಮಕ್ಕಳ ಸುರಕ್ಷತೆ ಬಗ್ಗೆ ಪೋಷಕರು ಚಿಂತಿತರಾಗಿದ್ದಾರೆ. ಮಕ್ಕಳು ಮನೆಯಿಂದ ಹೊರಬರಲು ಭಯಪಡುತ್ತಿದ್ದಾರೆ
ಎಂ. ವಿಮಲಾಕುಮಾರಿ, ಆಶಾ ಕಾರ್ಯಕರ್ತೆ

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಆಸ್ಪತ್ರೆ, ಔಷಧವೆಂದರೇ ಹಳ್ಳಿಗರಿಗೆ ಭಯ!

ಒಂದನೇ ಪುಟದಿಂದ

'ಜ್ವರ, ಶೀತ, ಕೆಮ್ಮು ಇರುವವರಿಗೆ ಕೋವಿಡ್ ಪರೀಕ್ಷೆ ಮಾಡುತ್ತೇವೆ ಎಂಬ ಕಾರಣಕ್ಕೆ ಸರ್ಕಾರಿ ಆಸ್ಪತ್ರೆಗೆ ಜನ ಬರುತ್ತಿಲ್ಲ. ಮೊದಲೆಲ್ಲ ಪ್ರತಿ ದಿನ 200 ಜನ ಬರುತ್ತಿದ್ದರು. ಈಗ 20 ಜನರೂ ಬರುತ್ತಿಲ್ಲ. ಬಿಎಎಂಎಸ್ ವೈದ್ಯರ ಬಳಿ ಹೋಗುತ್ತಾರೆ. ಗಂಭೀರ ಆದ ತಕ್ಷಣ ನಗರಗಳಲ್ಲಿರುವ ಆಸ್ಪತ್ರೆಗಳಿಗೆ ಹೋಗುತ್ತಾರೆ' ಎಂದು ದೂರಿದರು.

ಇಂಜೆಕ್ಷನ್‌ನಿಂದಲೇ ಸಾವು: 'ಊರಾಗ ಸರ್ಕಾರಿ ದವಾಖಾನಿ ಅದ. ಅಲ್ಲಿ ಎಂಥದ್ದೋ ಎಣ್ಣಿ ತಂದು ಇಂಜೆಕ್ಷನ್ ಮಾಡ್ತ್ಯಾರಾ, ಮಂದಿ ಸತ್ತಾರ' ಎಂದು ಇಂಡಿ ತಾಲ್ಲೂಕಿನ ಹಿರೇರೂಗಿ ಗ್ರಾಮದ ರೈತ ಮಲ್ಲಪ್ಪ ಬಸಪ್ಪ ಅಗಸರ ತಮ್ಮ ಅಪನಂಬಿಕೆಯನ್ನು ಹೊರಹಾಕಿದ್ದರು.

'ಪ್ಯಾಟ್ಯಾಗ ಸಂಡಾಸ ರೂಮು, ಬಾತ್ ರೂಮು ಎಲ್ಲ ಮನ್ಯಾಗ ಕಟ್ಟಿಶ್ಯಾರ. ಮನಿ ಒಳಗ ಎಲ್ಲ ಮಾಡ್ತಾರ, ಪ್ಯಾಟ್ಯಾಗಿನ ಮಂದಿಗ ಜಡ್ಡು ಬಂದದ. ಸಮಯಕ್ಕೆ ಸರಿಯಾಗಿ ಊಟ ಮಾಡದೇ, ಜಳಕ ಮಾಡದೆ, ಸಂಸಾರ ಬಿಟ್ಟು ಊರೂರು ಅಲೆಯೋರು ಬಿಸಿಲು ಹೆಚ್ಚಾಗಿ, ಶಕ್ತಿ ಕಡಿಮೆಯಾಗಿ ಜಡ್ಡು ಬಂದು ಸಾಯ್ತಾರ' ಎಂದು ವಿಶ್ಲೇಷಿಸುತ್ತಲೇ ಬಯಲು ಶೌಚ ಪರವಾಗಿಯೂ ಮಾತನಾಡುತ್ತಾರೆ.

ತೋಟ, ಅಡವಿ ವಸ್ತಿಯಲ್ಲಿ ವಾಸ: ಜಿಲ್ಲೆಯಲ್ಲಿ ಸ್ಥಿತಿವಂತರು, ಅನುಕೂಲ ಇರುವವರು ಕೋವಿಡ್ ಸೋಂಕಿನಿಂದ ಪಾರಾಗಲು ಹಾಗೂ ಜನ ಸಂಪರ್ಕದಿಂದ ದೂರವಿರಲು ತಮ್ಮ ತೋಟದ ವಸ್ತಿ, ಅಡವಿ ವಸ್ತಿಗಳಲ್ಲಿ ತಾತ್ಕಾಲಿಕವಾಗಿ ಆಶ್ರಯ ಕಂಡುಕೊಂಡಿದ್ದಾರೆ.

ಇಂಡಿ ತಾಲ್ಲೂಕಿನ ಹಂಜಗಿ ಗ್ರಾಮದ ತೋಟದಲ್ಲಿ ಒಂದೂವರೆ ತಿಂಗಳಿಂದ ಆಶ್ರಯ ಪಡೆದುಕೊಂಡಿರುವ ವಿಜಯಪುರ ನಗರದ ಸುರೇಶ ಕಲಾದಗಿ, 'ವಯಸ್ಸಾದ ತಂದೆ, ತಾಯಿ, ಮಕ್ಕಳ ಸುರಕ್ಷತೆಗಾಗಿ ತೋಟದ ಮನೆಗೆ ಬಂದೆವು. ಇಲ್ಲಿರುವುದರಿಂದ ಯಾವುದೇ ತೊಂದರೆಯಾಗಿಲ್ಲ' ಎಂದರು.

ವೈದ್ಯ ಸಿಬ್ಬಂದಿ ಕೊರತೆ: ಜಿಲ್ಲೆಯಲ್ಲಿ 50 ಪ್ರಾಥಮಿಕ ಆರೋಗ್ಯ ಕೇಂದ್ರಗಳು, 8 ಸಮುದಾಯ ಆರೋಗ್ಯ ಕೇಂದ್ರಗಳು, 4 ತಾಲ್ಲೂಕು ಆಸ್ಪತ್ರೆಗಳು, 5 ಯುಪಿಎಚ್‌ಸಿ ಇವೆ. ಆದರೆ, ಕಾಯಂ ವೈದ್ಯರು, ನರ್ಸ್‌ಗಳು, ಪ್ರಯೋಗಾಲಯ ಸಿಬ್ಬಂದಿ ಕೊರತೆ ಎದ್ದು ಕಾಣುತ್ತಿದೆ. ಎಲ್ಲೆಡೆ ಗುತ್ತಿಗೆ ಸಿಬ್ಬಂದಿಯನ್ನು ನೇಮಕ ಮಾಡಲಾಗಿದ್ದು, ಅವರೇ ಸದ್ಯದ ಕೋವಿಡ್ ಪರಿಸ್ಥಿತಿಯನ್ನು ನಿಯಂತ್ರಣಕ್ಕೆ ತರಲು ಶಕ್ತಿ ಮೀರಿ ಎದುರಿಸುತ್ತಿದ್ದಾರೆ.

ಬಾರದ ವೈದ್ಯ ಸಿಬ್ಬಂದಿ:

ನಾಗಠಾಣ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ವೈದ್ಯರು, ನರ್ಸ್‌ಗಳು ಇದ್ದರೂ ಸಮಯಕ್ಕೆ ಸರಿಯಾಗಿ ಬರುತ್ತಿಲ್ಲ. 'ಪ್ರಜಾವಾಣಿ' ಪ್ರತಿನಿಧಿ ಈ ಆರೋಗ್ಯ ಕೇಂದ್ರಕ್ಕೆ ಬೆಳಿಗ್ಗೆ 10ಕ್ಕೆ ಭೇಟಿ ನೀಡಿದಾಗಲೂ ಅಲ್ಲಿ ಯಾವೊಬ್ಬ ವೈದ್ಯರು, ನರ್ಸ್‌ಗಳು ಇರಲಿಲ್ಲ. ಹತ್ತಾರು ಮಂದಿ ರೋಗಿಗಳು ವೈದ್ಯರು, ನರ್ಸ್ ಬರುವ ದಾರಿಯನ್ನು ಎದುರು ನೋಡುತ್ತಾ ಕುಳಿತಿದ್ದರು.

ಇದೇ ರೀತಿ ಇಂಡಿ ತಾಲ್ಲೂಕಿನ ಹಂಜಗಿ ಗ್ರಾಮಕ್ಕೆ ಭೇಟಿ ನೀಡಿದಾಗಲೂ ಸಹ ಪ್ರಾಥಮಿಕ ಆರೋಗ್ಯ ಕೇಂದ್ರದ ಬಾಗಿಲು ಮುಚ್ಚಿರುವುದು ಕಂಡುಬಂದಿತು. ಇದು ಜಿಲ್ಲೆಯ ಬಹುತೇಕ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸ್ಥಿತಿಯಾಗಿದೆ.

ವಿಜಯಪುರ ಜಿಲ್ಲಾ
ಕೋವಿಡ್ ಅಂಕಿ-ಅಂಶ

33,862 ▲ ಒಟ್ಟು ಸೋಂಕಿತರು

ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು
1,876 ▲	31,526 ▲	424 ▲

ದಿನದ ಏರಿಕೆ

ಹೊಸ ಪ್ರಕರಣ	255 ▲
ಗುಣಮುಖ	233 ▲
ಸಾವು	04 ▲

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಹಳ್ಳಿಯಲ್ಲಿ ಬಿರುಸುಗೊಂಡ ಚಟುವಟಿಕೆ

ವಿಜಯಪುರ: ಹೋಂ ಐಸೋಲೇಷನ್ ಆಗಿರುವ ಕುಟುಂಬಗಳಿಗೆ ಗ್ರಾಮ ಪಂಚಾಯ್ತಿಯಿಂದ ಆಹಾರ ಕಿಟ್ ಒದಗಿಸಲಾಗುತ್ತಿದೆ. ಆಶಾ, ಅಂಗನವಾಡಿ ಮತ್ತು ಆರೋಗ್ಯ ಸಿಬ್ಬಂದಿ ಜಿಲ್ಲೆಯ ಗ್ರಾಮೀಣ ಪ್ರದೇಶದ ಮನೆ, ಮನೆಗೆ ಭೇಟಿ ನೀಡಿ ಕೋವಿಡ್ ಸೋಂಕಿತರ ಪತ್ತೆ ಕಾರ್ಯ ಬಿರುಸುಗೊಳಿಸಿದ್ದಾರೆ.

ಕೋವಿಡ್ ಲಕ್ಷಣ ಇರುವವರನ್ನು ಪತ್ತೆ ಹಚ್ಚಿ, ಗಂಭೀರ ಇರುವವರನ್ನು ಆಸ್ಪತ್ರೆಗೆ, ಸಾಧಾರಣ ಲಕ್ಷಣ ಇರುವವರಿಗೆ ಮನೆಯಲ್ಲೇ ಔಷಧ ನೀಡುತ್ತಿದ್ದಾರೆ. ಮುನ್ನೆಚ್ಚರಿಕೆ ಕ್ರಮಗಳ ಬಗ್ಗೆ ಜಾಗೃತಿ ಮೂಡಿಸುತ್ತಿದ್ದಾರೆ. ಹೆಚ್ಚು ಪ್ರಕರಣಗಳು ಕಂಡುಬರುವ ಪ್ರದೇಶವನ್ನು ಸೀಲ್‌ಡೌನ್ ಮಾಡುವ ಕಾಯಕದಲ್ಲಿ ನಿರತವಾಗಿದ್ದಾರೆ.

ಗ್ರಾಮ ಪಂಚಾಯ್ತಿಯಿಂದ ಇಡೀ ಗ್ರಾಮದಲ್ಲಿ ಸ್ಯಾನಿಟೈಸ್ ಮಾಡಿಸುತ್ತಿದ್ದಾರೆ. ಗ್ರಾಮೀಣ ಪ್ರದೇಶದಲ್ಲೂ ಲಾಕ್‌ಡೌನ್ ನಿಯಮಗಳ ಜಾರಿಗೆ ಬೀಟ್ ಪೊಲೀಸರು ಕ್ರಮಕೈಗೊಂಡಿದ್ದಾರೆ.

ಗ್ರಾಮ ಪಂಚಾಯ್ತಿ ಮಟ್ಟದಲ್ಲಿ ಕೋವಿಡ್ ಕಾರ್ಯಪಡೆಗಳನ್ನು ನೇಮಿಸಲಾಗಿದ್ದು, ಕಾರ್ಯಪಡೆ ಪದಾಧಿಕಾರಿಗಳು ಜನರಿಗೆ ಕೋವಿಡ್ ಬಗ್ಗೆ ಜಾಗೃತಿ ಮೂಡಿಸುತ್ತಿದ್ದಾರೆ. ಪರಿಣಾಮ ದಿನದಿಂದ ದಿನಕ್ಕೆ ಸೋಂಕಿನ ಪ್ರಮಾಣ ಇಳಿಕೆಯಾಗತೊಡಗಿದೆ.

ವೈದ್ಯರು ದೂರದ ವಿಜಯಪುರದಲ್ಲಿ ಮನೆ ಮಾಡಿಕೊಂಡು ವಾಸವಾಗಿರುತ್ತಾರೆ. ಇವರನ್ನು ನಂಬಿಕೊಂಡು ಆಸ್ಪತ್ರೆಗೆ ಬರುವಂತಿಲ್ಲ. ತುರ್ತು, ಗಂಭೀರ ಸಮಸ್ಯೆ ಇದ್ದರೆ ವಿಜಯಪುರ ಇಲ್ಲವೇ ನೆರೆಯ ಸೊಲ್ಲಾಪುರ, ಮಿರಜ್‌ಗೆ ಹೋಗುತ್ತೇವೆ
ರೇವಣ ಸಿದ್ಧ ಹಂಡಿ, ನಾಗಠಾಣ

ಹೊಲದಾಗ ಮೈ ಬೆವರಿಸಿ ಶೇತ್ಕಿರಿ ಮಾಡೋರಿಗೆ ಕೊರೊನಾ ಬಂದಿಲ್ಲ, ಹರಾಮಿ ಅನ್ನ ಯಾವ ತಿಂತಾನ ಅವ ಮೂಗು ಕಟ್ಟಿಕೊಳ್ತಾನಾ, ಅಂತೋರಿಗೆ ಬರಬಾರದ ಜಡ್ಡು ಬಂದಾದ
ಮಲ್ಲಪ್ಪ ಅಗಸರ, ರೈತ, ಹಿರೇರೂಗಿ

ಲಸಿಕೆ ತೆಗೆದುಕೊಂಡೇ ಜನ ಸಾಯುತ್ತಿದ್ದಾರೆ ಎಂಬ ತಪ್ಪು ಕಲ್ಪನೆ. ಜೊತೆಗೆ ಆಸ್ಪತ್ರೆಯಲ್ಲಿ ನೀಡುವ ಚಿಕಿತ್ಸೆ ಬಗ್ಗೆ ತಪ್ಪು ಸಂದೇಶ ಗ್ರಾಮೀಣ ಪ್ರದೇಶದಲ್ಲಿ ಹೆಚ್ಚು ಹರಿದಾಡುತ್ತಿದೆ
ಡಾ.ಚಂದ್ರಶೇಖರ ತಾಳಿಕೋಟೆ, ವೈದ್ಯಾಧಿಕಾರಿ, ಪ್ರಾಥಮಿಕ ಆರೋಗ್ಯ ಕೇಂದ್ರ, ಅಥರ್ಗಾ

'ಸಮ್ಮತಿ ಪಡೆಯಲು ವಾಟ್ಸ್‌ಆ್ಯಪ್ ಕುಯುಕ್ತಿ'

ನವದೆಹಲಿ (ಪಿಟಿಐ): 'ಬಳಕೆದಾರರ ಖಾಸಗಿ ಮಾಹಿತಿಯನ್ನು ಸಂಗ್ರಹಿಸುವ ನೂತನ ಖಾಸಗಿ ನೀತಿಯನ್ನು ಒಪ್ಪಿಕೊಳ್ಳುವಂತೆ ವಾಟ್ಸ್‌ಆ್ಯಪ್ ತನ್ನ ಗ್ರಾಹಕರ ಮೇಲೆ ಒತ್ತಡ ಹೇರುತ್ತಿದೆ. ಈ ಬಗ್ಗೆ ಪ್ರತಿದಿನ ನಿರಂತರವಾಗಿ ಸೂಚನೆ ಕಳುಹಿಸುತ್ತಿದೆ. ಸರ್ಕಾರವು ತರಲು ಹೊರಟಿರುವ ಖಾಸಗಿ ಮಾಹಿತಿ ಭದ್ರತಾ ಮಸೂದೆ ಜಾರಿಗೆ ಬರುವ ಮುನ್ನವೇ ಬಳಕೆದಾರರ ಸಂಪೂರ್ಣ ಮಾಹಿತಿಯನ್ನು ಸಂಗ್ರಹಿಸಲು ವಾಟ್ಸ್‌ಆ್ಯಪ್ ಕುಯುಕ್ತಿ ಮಾಡುತ್ತಿದೆ' ಎಂದು ಕೇಂದ್ರ ಸರ್ಕಾರವು ಆರೋಪಿಸಿದೆ.

'ಬಳಕೆದಾರರ ಮಾಹಿತಿಯನ್ನು ತನ್ನ ಮಾತೃ ಸಂಸ್ಥೆ ಫೇಸ್‌ಬುಕ್ ಮತ್ತು ಮೂರನೇ ಸಂಸ್ಥೆಗಳ ಜತೆ ಹಂಚಿಕೊಳ್ಳುವ ಸಂಬಂಧ ವಾಟ್ಸ್‌ಆ್ಯಪ್ ತರಲು ಹೊರಟಿರುವ ನೂತನ ಖಾಸಗಿತನ ನೀತಿಯು ಬಳಕೆದಾರರ ಖಾಸಗಿ ಮಾಹಿತಿಯನ್ನು ಸಂಗ್ರಹಿಸುತ್ತದೆ. ಇದು ಖಾಸಗಿತನದ ಹಕ್ಕಿನ ಉಲ್ಲಂಘನೆ' ಎಂದು ದೆಹಲಿ ಹೈಕೋರ್ಟ್‌ನಲ್ಲಿ ಚೈತನ್ಯ ರೋಹಿಲ್ಲಾ ಅವರು ಅರ್ಜಿ ಸಲ್ಲಿಸಿದ್ದರು. ಈ ಅರ್ಜಿಯ ವಿಚಾರಣೆ ವೇಳೆ ಕೇಂದ್ರ ಸರ್ಕಾರವು ಈ ಆರೋಪ ಮಾಡಿದೆ. ಹೈಕೋರ್ಟ್‌ಗೆ ಸಲ್ಲಿಸಿರುವ ಪ್ರಮಾಣಪತ್ರದಲ್ಲಿ ಈ ಆರೋಪವಿದೆ.

'ಫೇಸ್‌ಬುಕ್ ಮತ್ತು ಮೂರನೇ ಸಂಸ್ಥೆಯ ಜತೆಗೆ ಮಾಹಿತಿ ಹಂಚಿಕೊಳ್ಳಬಾರದು ಎಂಬ ಆಯ್ಕೆಗೆ ಅವಕಾಶವೇ ಇಲ್ಲ. ಯಾವ ಮಾಹಿತಿ ಹಂಚಿಕೊಳ್ಳಲಾಗುತ್ತದೆ ಎಂಬುದು ಸ್ಪಷ್ಟವಾಗಿಲ್ಲ. ಜತೆಗೆ ಯಾವ ಮಾಹಿತಿ ಹಂಚಿಕೊಳ್ಳಬೇಕು ಮತ್ತು ಯಾವ ಮಾಹಿತಿ ಹಂಚಿಕೊಳ್ಳಬಾರದು ಎಂಬುದನ್ನು ಆಯ್ಕೆ ಮಾಡಿಕೊಳ್ಳಲು ಅವಕಾಶವಿಲ್ಲ. ಸರ್ಕಾರದ ಮೇಲ್ವಿಚಾರಣೆ ಇಲ್ಲದೆಯೇ ಬಳಕೆದಾರರ ಸಂಪೂರ್ಣ ಮಾಹಿತಿಯನ್ನು ವಾಟ್ಸ್‌ಆ್ಯಪ್ ಪಡೆದುಕೊಳ್ಳುತ್ತದೆ. ಇದರಿಂದ ಬಳಕೆದಾರರ ಖಾಸಗಿತನಕ್ಕೆ ಧಕ್ಕೆಯಾಗುತ್ತದೆ' ಎಂಬುದು ಅರ್ಜಿದಾರರ ಕಳವಳವಾಗಿತ್ತು.

'ವಾಟ್ಸ್‌ಆ್ಯಪ್‌ನ ಈ ನೀತಿಯನ್ನು ಹೇರಲು, ಸೇವೆ ಸ್ಥಗಿತಗೊಳಿಸುವ ಬೆದರಿಕೆ ತಂತ್ರದ ಮೊರೆ ಹೋಗಿದೆ' ಎಂದು ಅರ್ಜಿದಾರರು ದೂರಿದ್ದರು.

'ಸೇವೆ ಸೀಮಿತಗೊಳಿಸುವುದಿಲ್ಲ'

'ನಮ್ಮ ನೂತನ ಖಾಸಗಿ ನೀತಿಯನ್ನು ಒಪ್ಪಿಕೊಳ್ಳದ ಬಳಕೆದಾರರ ಖಾತೆಯ ಸೇವೆಯನ್ನು ಸೀಮಿತಗೊಳಿಸುವುದಿಲ್ಲ. ಆದರೆ ಅವರು ನೀತಿಯನ್ನು ಒಪ್ಪಿಕೊಳ್ಳುವವರೆಗೂ ಸೂಚನೆಗಳನ್ನು ಕಳುಹಿಸುತ್ತಿರುತ್ತೇವೆ' ಎಂದು ವಾಟ್ಸ್‌ಆ್ಯಪ್ ಹೇಳಿದೆ.

ಈ ನೀತಿಯ ಸಂಬಂಧ ದೆಹಲಿ ಹೈಕೋರ್ಟ್‌ನಲ್ಲಿ ಕೇಂದ್ರ ಸರ್ಕಾರವು ಪ್ರಮಾಣ ಪತ್ರ ಸಲ್ಲಿಸಿದ ಬೆನ್ನಲ್ಲೇ ವಾಟ್ಸ್‌ಆ್ಯಪ್ ಈ ಹೇಳಿಕೆ ಬಿಡುಗಡೆ ಮಾಡಿದೆ.

'ಬಳಕೆದಾರರ ಖಾಸಗಿತನದ ರಕ್ಷಣೆ ನಮ್ಮ ಆದ್ಯತೆ ಎಂಬುದನ್ನು ನಾವು ಈಗಾಗಲೇ ಭಾರತ ಸರ್ಕಾರಕ್ಕೆ ತಿಳಿಸಿದ್ದೇವೆ. ಅದನ್ನು ಮನವರಿಕೆ ಸಹ ಮಾಡಿಕೊಟ್ಟಿದ್ದೇವೆ. ಇದನ್ನು ಒಪ್ಪಿಕೊಳ್ಳದೇ ಇರುವವರ ಖಾತೆಗಳ ಸೇವೆಯಲ್ಲಿ ಯಾವುದೇ ವ್ಯತ್ಯಾಸ ಆಗುವುದಿಲ್ಲ. ನೂತನ ಖಾಸಗಿ ನೀತಿಯು ಬಳಕೆದಾರರ ಖಾಸಗಿ ಸಂದೇಶಗಳು, ಚಿತ್ರಗಳು, ವಿಡಿಯೊ, ಕರೆ ವಿವರಗಳನ್ನು ಕಲೆಹಾಕುವುದಿಲ್ಲ. ವಾಣಿಜ್ಯ ಸಂಸ್ಥೆಗಳ ಜತೆ ನಮ್ಮ ಬಳಕೆದಾರರು ಹೇಗೆ ವರ್ತಿಸಬಹುದು ಎಂಬುದರ ಬಗೆ ಹೆಚ್ಚುವರಿ ಮಾಹಿತಿಯನ್ನಷ್ಟೇ ಸಂಗ್ರಹಿಸಲು ಈ ನೀತಿ ಅವಕಾಶ ಮಾಡಿಕೊಡುತ್ತದೆ. ಮಾಹಿತಿ ಹಂಚಿಕೊಳ್ಳಲು ಮತ್ತು ವಾಣಿಜ್ಯ ಸಂಸ್ಥೆಗಳು ನಮ್ಮ ಬಳಕೆದಾರರನ್ನು ಸಂಪರ್ಕಿಸದೇ ಇರುವಂತೆ ಆಯ್ಕೆ ಮಾಡಿಕೊಳ್ಳಲು ಅವಕಾಶವಿದೆ' ಎಂದು ವಾಟ್ಸ್‌ಆ್ಯಪ್ ಸ್ಪಷ್ಟಪಡಿಸಿದೆ.

ವಿನೋದ್ ದುವಾ ವಿರುದ್ಧದ ಪ್ರಕರಣ ರದ್ದು

ನವದೆಹಲಿ (ಪಿಟಿಐ): ಕಳೆದ ವರ್ಷ ತಮ್ಮ ಯೂಟ್ಯೂಬ್ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಮಾಡಿದ್ದ ಆರೋಪಕ್ಕೆ ಸಂಬಂಧಿಸಿದಂತೆ ಪತ್ರಕರ್ತ ವಿನೋದ್ ದುವಾ ವಿರುದ್ಧ ದಾಖಲಾಗಿದ್ದ ದೇಶದ್ರೋಹ ಪ್ರಕರಣವನ್ನು ಸುಪ್ರೀಂ ಕೋರ್ಟ್ ರದ್ದುಪಡಿಸಿದೆ.

1962ರ ಕೇದಾರ್‌ನಾಥ್ ಸಿಂಗ್ ತೀರ್ಪು ಪ್ರತಿಯೊಬ್ಬ ಪ್ರತ್ರಕರ್ತನನ್ನೂ ಇಂತಹ ಪ್ರಕಣಗಳಿಂದ ರಕ್ಷಿಸಿದೆ ಎಂದು ನ್ಯಾಯಾಲಯ ಹೇಳಿದೆ.

ಕಳೆದ ವರ್ಷ ವಿನೋದ್ ದುವಾ ಅವರು ತಮ್ಮ ಯೂಟ್ಯೂಬ್ ಚಾನೆಲ್‌ನಲ್ಲಿ ಪ್ರಧಾನಿ ನರೇಂದ್ರ ಮೋದಿ ಕುರಿತು ನಡೆಸಿದ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಹಿಮಾಚಲ ಪ್ರದೇಶ ಬಿಜೆಪಿಯ ಸ್ಥಳೀಯ ಮುಖಂಡರೊಬ್ಬರು ದುವಾ ವಿರುದ್ಧ ದೇಶದ್ರೋಹದ ಪ್ರಕರಣ ದಾಖಲಿಸಿದ್ದರು.

ಕನ್ನಡ 'ಕೊಳಕು' ಎಂದ ಗೂಗಲ್ !

ಒಂದನೇ ಪುಟದಿಂದ...

'ಯಾವುದೇ ಸಂಸ್ಥೆಯು ಕನ್ನಡಕ್ಕೆ ಅಪಮಾನ ಎಸಗಿದರೆ ಅವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುತ್ತೇವೆ' ಎಂದೂ ಅವರು ಎಚ್ಚರಿಕೆ ನೀಡಿದ್ದಾರೆ.

ಕ್ಷಮೆಯಾಚನೆ: ಭಾರತದ ಕೊಳಕು ಭಾಷೆ (ಅಗ್ಲಿಯೆಸ್ಟ್) ಯಾವುದು ಎಂದು ಗೂಗಲ್‌ನಲ್ಲಿ ಯಾರೋ ಹುಡುಕಿದಾಗ ಅದು ಕನ್ನಡ ಎಂದು ತೋರಿಸಿತ್ತು. ರಷ್ಯಾ ಮೂಲದ್ದು ಎನ್ನಲಾದ debtconsolidationsquad.com ವೆಬ್‌ಸೈಟ್‌ನ ಪುಟದಲ್ಲಿ ಈ ಅಂಶ ಇತ್ತು. ಕನ್ನಡವನ್ನು ಹೀಗಳೆಯುವ ಈ ಅವಮಾನಕರ ಮಾಹಿತಿ ಕುರಿತು ಸಾವಿರಾರು ಜನ ಈ ಬಗ್ಗೆ ದೂರು ನೀಡುತ್ತಿದ್ದಂತೆ (ರಿಪೋರ್ಟ್ ಮಾಡುತ್ತಿದ್ದಂತೆಯೇ) ಈ ಪುಟವನ್ನೇ ಗೂಗಲ್ ತೆಗೆದು ಹಾಕಿತು. ತೆಗೆದುಹಾಕಿದರೆ ಸಾಲದು, ಸಂಸ್ಥೆ ಕ್ಷಮೆಯಾಚಿಸಬೇಕು ಎಂಬ ಆಗ್ರಹ ಸಾಮಾಜಿಕ ಜಾಲತಾಣಗಳಲ್ಲಿ ಮಾರ್ದನಿಸಿತ್ತು.

ಇದಕ್ಕೆ ಪ್ರತಿಕ್ರಿಯಿಸಿರುವ ಗೂಗಲ್, 'ಸರ್ಚ್ ಮಾಡಿದಾಗ ತೋರುವ ಎಲ್ಲ ಅಂಶಗಳೇ ಅಂತಿಮ ಎಂದಲ್ಲ. ಸರ್ಚ್ ಮಾಡುವಾಗ ಬಳಸುವ ಕೆಲವು ಪದಗಳಿಂದ ಇಂತಹ ಅಂಶಗಳು ಗೋಚರವಾಗಿಬಿಡುತ್ತವೆ. ಆದರೂ ಇದು ಸರಿಯಲ್ಲ ಎಂಬುದು ನಮಗೆ ಗೊತ್ತು. ತಪ್ಪುಗಳನ್ನು ಎತ್ತಿ ತೋರಿಸಿದಾಗ ಅದನ್ನು ನಾವು ತಿದ್ದಿಕೊಳ್ಳುತ್ತೇವೆ. ವೆಬ್‌ಸೈಟ್‌ನಲ್ಲಿ ಉಲ್ಲೇಖಿತವಾದ ಅಂಶ ಗೂಗಲ್‌ನ ಅಭಿಪ್ರಾಯವಲ್ಲ. ಆದರೂ, ಯಾರದೇ ಭಾವನೆಗಳಿಗೆ ಧಕ್ಕೆಯುಂಟಾಗಿದ್ದರೆ, ನೋವಾಗಿದ್ದರೆ ನಾವು ಕ್ಷಮೆ ಕೇಳುತ್ತೇವೆ' ಎಂದು ಹೇಳಿತು.

'2,500ಕ್ಕೂ ಹೆಚ್ಚು ವರ್ಷಗಳ ಇತಿಹಾಸವಿರುವ, ಎಂಟು ಜ್ಞಾನಪೀಠ ಪ್ರಶಸ್ತಿಗಳನ್ನು ಪಡೆದಿರುವ ಕನ್ನಡವನ್ನು 'ಅಗ್ಲಿ ಲಾಂಗ್ವೇಜ್' ಎಂದು ಜರೆದಿರುವುದು ಸರಿಯಲ್ಲ. ಕಾನೂನು ಕ್ರಮ ಅನಿವಾರ್ಯವಾಗುತ್ತದೆ' ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ, ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ. ಸಿ. ಸೋಮಶೇಖರ ಕೂಡ ಎಚ್ಚರಿಸಿದ್ದರು.

'ಮಾಹಿತಿ ಮತ್ತು ತಂತ್ರಜ್ಞಾನಕ್ಕೆ ಸಂಬಂಧಿಸಿದ ಇಂತಹ ವಿಷಯಗಳು ಕೇಂದ್ರ ಸರ್ಕಾರದ ವ್ಯಾಪ್ತಿಗೆ ಬರುತ್ತವೆ. ಕನ್ನಡ ಅಥವಾ ಯಾವುದೇ ಪ್ರಾದೇಶಿಕ ಭಾಷೆಗೆ ಹೀಗೆ ಅವಹೇಳನವಾದರೆ ಅವರು ತಲೆ ಕೆಡಿಸಿಕೊಳ್ಳುವುದಿಲ್ಲ. ಕರ್ನಾಟಕದಲ್ಲಿ ಇಂತಹ ವಿಷಯಗಳ ವಿರುದ್ಧ ಕ್ರಮ ಕೈಗೊಳ್ಳುವುದಕ್ಕೆಂದೇ ಪ್ರತ್ಯೇಕವಾದ ಸಂಸ್ಥೆ ಯಾವುದೂ ಇಲ್ಲ. ಕರ್ನಾಟಕ, ಕನ್ನಡ ಭಾಷೆಗೆ ಅವಮಾನ, ತಪ್ಪು ಮಾಹಿತಿ ಹರಡುವುದನ್ನು ಪತ್ತೆ ಹಚ್ಚಲು ಮತ್ತು ಕ್ರಮ ಕೈಗೊಳ್ಳಲು ಪ್ರತ್ಯೇಕ ಇಲಾಖೆಯನ್ನು ಸ್ಥಾಪಿಸಬೇಕಾದ ಅಗತ್ಯವಿದೆ' ಎಂದು ಹಲವರು ಸಾಮಾಜಿಕ ಜಾಲತಾಣದಲ್ಲಿ ಒತ್ತಾಯಿಸಿದರು.

ಪ್ರಜಾವಾಣಿ DH DECCAN HERALD
ಕೋವಿಡ್ ಪರಿಹಾರ ನಿಧಿ

ಆಸ್ಪತ್ರೆಗಳ ಮುಂದೆ ಏದುಸಿರು ಬಿಡುವ ರೋಗಿಗಳನ್ನು ಹೊತ್ತುನಿಂತ ಆಂಬುಲೆನ್ಸ್‌ಗಳು, ಆಪ್ತರ ಜೀವ ಉಳಿಸಲು ಪ್ರಾಣವಾಯುವಿಗಾಗಿ ಅಂಗಲಾಚುವವರು, ಚಿತಾಗಾರಗಳ ಮುಂದೆ ಸಾಲು ಸಾಲು ಮೃತದೇಹಗಳು... ರಾಜ್ಯದಲ್ಲಿ ಕಳೆದ ಕೆಲವು ವಾರಗಳಿಂದ ಇಂತಹದ್ದೇ ಹೃದಯವಿದ್ರಾವಕ ನೋಟಗಳು. ಕೋವಿಡ್–19 ಕಾಣಿಸಿಕೊಂಡ ದಿನದಿಂದ ಇಲ್ಲಿಯವರೆಗೂ 26 ಲಕ್ಷಕ್ಕೂ ಅಧಿಕ ಜನ ಕಾಯಿಲೆಪೀಡಿತರಾಗಿದ್ದು, 30 ಸಾವಿರಕ್ಕೂ ಅಧಿಕ ಜನ ಮೃತಪಟ್ಟಿದ್ದಾರೆ. ಈ ಅಂಕಿ–ಸಂಖ್ಯೆಗಳು ಅಧಿಕೃತ ಮಾಹಿತಿಯಷ್ಟೆ. ನೈಜ ಚಿತ್ರಣ ಇನ್ನೂ ಕರಾಳವಾಗಿದೆ. ಎರಡನೇ ಅಲೆ ಪ್ರಾರಂಭವಾಗಿ ಈಗಾಗಲೇ ಎರಡು ತಿಂಗಳಿಗೂ ಅಧಿಕ ಸಮಯ ಕಳೆದಿದೆ.

ಇಂತಹ ಸನ್ನಿವೇಶದಲ್ಲಿ, ಕೋವಿಡ್ ಪರಿಹಾರ ಕಾರ್ಯದಲ್ಲಿ ತೊಡಗಿಸಿಕೊಂಡಿರುವ ಸ್ವಯಂಸೇವಾ ಸಂಸ್ಥೆಗಳಿಗೆ 'ಡೆಕ್ಕನ್ ಹೆರಾಲ್ಡ್' ಹಾಗೂ 'ಪ್ರಜಾವಾಣಿ' ಪತ್ರಿಕೆಗಳು ಬೆಂಬಲ ನೀಡಲು ನಿರ್ಧರಿಸಿವೆ. ನೀವು ನೀಡುವ ದೇಣಿಗೆಯ ಪ್ರತೀ ಪೈಸೆಯೂ ಸಂಕಷ್ಟಕ್ಕೆ ಒಳಗಾಗಿರುವ ಅರ್ಹ ಫಲಾನುಭವಿಗೆ ನೇರವಾಗಿ ಸೇರಿ, ಅವರ ಕಣ್ಣೀರು ಒರೆಸಲು ನೆರವಾಗಲಿದೆ.

₹ 1000 ಮತ್ತು ಅದಕ್ಕಿಂತ ಹೆಚ್ಚಿನ ದೇಣಿಗೆ ನೀಡಿದವರ ಹೆಸರನ್ನು ಪತ್ರಿಕೆಯಲ್ಲಿ ಪ್ರಕಟಸಲಾಗುವುದು. ಈ ದೇಣಿಗೆಗೆ 80ಜಿ ಅನ್ವಯ ಆದಾಯ ತೆರಿಗೆಯಲ್ಲಿ ವಿನಾಯಿತಿ ಸಿಗಲಿದೆ.

ಹೀಗಾಗಿ, ನಿಮ್ಮ ಕೈಲಾದ ದೇಣಿಗೆಯನ್ನು (ಅದರ ಪ್ರಮಾಣ ಎಷ್ಟೇ ಇರಲಿ) ನೀಡಿ ಸಂಕಷ್ಟದಲ್ಲಿ ಸಿಲುಕಿದವರ ಬೆಂಬಲಕ್ಕೆ ನಿಲ್ಲುವ ಮಾನವೀಯ ಕಾರ್ಯದಲ್ಲಿ ಕೈಜೋಡಿಸುವಂತೆ ಕೋರುತ್ತೇವೆ.

ಆನ್‌ಲೈನ್ ಹಣ ವರ್ಗಾವಣೆ ಮೂಲಕ ಡೆಕ್ಕನ್ ಹೆರಾಲ್ಡ್–ಪ್ರಜಾವಾಣಿ ಪರಿಹಾರ ನಿಧಿ ಟ್ರಸ್ಟ್‌ಗೆ ದೇಣಿಗೆ ನೀಡಬಹುದು:
(Canara Bank, Cantonment Branch; A/C NO.0404101200385, IFSC CODE : CNRB0000404)

ಡೆಬಿಟ್/ಕ್ರೆಡಿಟ್ ಕಾರ್ಡ್, ಯುಪಿಐ, ಇ-ವ್ಯಾಲೆಟ್ ಅಥವಾ ನೆಟ್‌ಬ್ಯಾಂಕಿಂಗ್ ಮೂಲಕ ಪಾವತಿಸುವವರು QR ಕೋಡ್ ಸ್ಕ್ಯಾನ್ ಮಾಡಿ ಅಥವಾ ಈ ಕೆಳಗಿನ ಲಿಂಕ್‌ಗೆ ಭೇಟಿ ಮಾಡಿ: **https://bit.ly/3uKxGny**

ದೇಣಿಗೆದಾರರು ತಾವು ನೀಡಿದ ದೇಣಿಗೆ ವಿವರದ ಜತೆಗೆ ಹೆಸರು, ವಿಳಾಸ ಹಾಗೂ ಸಂಪರ್ಕ ಸಂಖ್ಯೆಯನ್ನು dept.finc@printersmysore.co.in ಈ ಇ–ಮೇಲ್‌ಗೆ ಕಳುಹಿಸಲು ವಿನಂತಿ. ಇದರಿಂದ ದೇಣಿಗೆದಾರರಿಗೆ ರಸೀದಿ ಕಳಿಸಲು ಅನುಕೂಲವಾಗುತ್ತದೆ.

ದೇಣಿಗೆ ಕೊಟ್ಟವರ ವಿವರ

ಸಂ	ಹೆಸರು, ವಿಳಾಸ	ದೇಣಿಗೆ ₹ಗಳಲ್ಲಿ
1	**ಕೆ.ಎನ್. ಗುರುಸ್ವಾಮಿ ಎಜುಕೇಷನಲ್ ಮತ್ತು ಚಾರಿಟಬಲ್ ಟ್ರಸ್ಟ್**, ಬೆಂಗಳೂರು	25,00,000
2	**ಕೆ.ಎನ್ ತಿಲಕ್ ಕುಮಾರ್**, ಬಸವನಗುಡಿ, ಬೆಂಗಳೂರು	10,00,000
3	**ಟಿ.ಎಸ್.ಗೋಪಾಲ್ ಮೊದಲಿಯಾರ್**, #171, 'ವಿಜಯಶ್ರೀ', 3ನೇ ಮುಖ್ಯರಸ್ತೆ, 3ನೇ ಅಡ್ಡರಸ್ತೆ, ಲಾಲ್ ಬಹದ್ದೂರ್ ಶಾಸ್ತ್ರಿ ನಗರ, ಸವಳಂಗ ರಸ್ತೆ, ಶಿವಮೊಗ್ಗ	10,001
4	**ನಮಿತಾ ಮತ್ತು ಪ್ರದೀಪ್**, ಬೆಂಗಳೂರು	10,000
5	**ಲಕ್ಷ್ಮೀನಾರಾಯಣ ಹೆಗಡೆ**, ನಂ.241, 1ನೇ ಅಡ್ಡರಸ್ತೆ, ಟಿಜಿಎನ್ ಲೇಔಟ್, ಮೀನಾಕ್ಷಿ ಭವನ ಹಿಂಬದಿ, ಶಿವಮೊಗ್ಗ	10000
6	**ಅಂಬೇಕರ್ ಸರ್ವೋತ್ತಮ ವೈ**, #51, 3ನೇ ಅಡ್ಡರಸ್ತೆ, ಜಯನಗರ, ಧಾರವಾಡ	10,000
7	**ಜಿ. ಶ್ರೀನಿವಾಸ ಮೂರ್ತಿ**, 27 ಮಾತೃ ಕೃಪ, 2ನೇ ಎ ಮುಖ್ಯರಸ್ತೆ, ವಿಜ್ಞಾನನಗರ, ತಿಪ್ಪಸಂದ್ರ ಪೋಸ್ಟ್, ಬೆಂಗಳೂರು	10,000
8	**ಪ್ರಸಾದ್ ಎನ್.**, ಇಂಗ್ಲಿಷ್ ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಪಿರಿಯಾಪಟ್ಟಣ, ಮೈಸೂರು ಜಿಲ್ಲೆ	7,000
9	**ಪಿ.ವಿ.ಅಲಮೇಲು**, ಬೆಂಗಳೂರು	5,000
10	**ಹರೀಶ್ ಕುಮಾರ್ ಆರ್**, ನಂ 10, 5ನೇ ಮುಖ್ಯರಸ್ತೆ, 7ನೇ ಅಡ್ಡರಸ್ತೆ, ಶ್ರೀನಿಧಿ ಲೇಔಟ್, ಜೆ.ಪಿ ನಗರ, 7ನೇ ಹಂತ,ಬೆಂಗಳೂರು	5,000
11	**ತಾರ್ಸೆಮ್ ಸಿಂಗ್**, 196, ಮೊದಲನೇ ಮುಖ್ಯರಸ್ತೆ, ಇಸ್ರೊ ಲೇಔಟ್, ಬೆಂಗಳೂರು	5,000
12	**ತಾರಾ ವೇದಾಂತನ್**, ಬ್ಲಾಕ್ 41, 303 ಅಪಾರ್ಟ್‌ಮೆಂಟ್, ವಿಬಿಎಚ್‌ಸಿ ವೇದಾಂತ ಎಸ್‌ಆರ್ ಲಿವಿಂಗ್ ಅಪಾರ್ಟ್‌ಮೆಂಟ್ ಅಪಾರ್ಟ್‌ಮೆಂಟ್ಸ್, ಚಂದಾಪುರ, ಆನೇಕಲ್ ರಸ್ತೆ, ಬೆಂಗಳೂರು	2,500
13	**ಬಿ.ಎಸ್. ಅನಂತ ಪದ್ಮನಾಭ**, ನಂ.30/1, 6ನೇ ಅಡ್ಡರಸ್ತೆ, 9ನೇ ಮುಖ್ಯರಸ್ತೆ, ಮೈಸೂರು ಅನಂತಸ್ವಾಮಿ ರಸ್ತೆ, ಹನುಮಂತನಗರ, ಬೆಂಗಳೂರು	2,500
14	**ಹೊನ್ನೇಶ್ವರಪ್ಪ ಸಿ.**, ಸಿ.ಕೆ. ಪುರ ಗ್ರಾಮ, ಪಾವಗಡ ತಾಲ್ಲೂಕು, ತುಮಕೂರು ಜಿಲ್ಲೆ	2,008
15	**ಸಿದ್ದಣ್ಣ ಎಸ್. ಯದ್ಲಾಪುರ**, ಪ್ಲಾಟ್ ನಂ 252, ರಕ್ಷಾ ನಿಲಯ, ಗೋದುತಾಯಿ ನಗರ, ಕಲಬುರ್ಗಿ	2,000
16	**ಎಚ್.ಆರ್. ಸುದರ್ಶನಪ್ರಸಾದ್**, ಬಿ-1003, ಚಾರ್ಟರ್ಡ್ ಬೆವರ್ಲಿ ಹಿಲ್ಸ್, ಸುಬ್ರಮಣ್ಯಪುರ, ಬೆಂಗಳೂರು	2,000
17	**ಕೆ.ಎಚ್.ದೇವರಾಜ**, ಎಲ್‌ಐಸಿ ಬ್ರ್ಯಾಂಚ್ ಮ್ಯಾನೇಜರ್, ಕಾಮಾಕ್ಷಿ ಸ್ಟ್ರೀಟ್, ಶಿವಮೊಗ್ಗ	2,000
18	**ಮೊನಪ್ಪ ರೆಡ್ಡಿ**, ಅರಣ್ಯ ಅಧಿಕಾರಿ, ದೇವದುರ್ಗ	2,000
19	**ಗುರುಸಿದ್ದಪ್ಪ ಸಂಗಪ್ಪ ಸಾಸನೂರು**, ನಂ 2523, ಸುಹಾಗ್ ಕಾಲೋನಿ, ಹಳೆ ಬಾಗಲಕೋಟೆ ರಸ್ತೆ, ವಿಜಯಪುರ	2,000
20	**ರಾಜೇಂದ್ರ ಹೆಗಡೆ**, ಎಂ.ಎಂ.ಕಾಲೇಜು, ಶಿರಸಿ, ಉತ್ತರ ಕನ್ನಡ	2,000
21	**ಎಸ್.ಟಿ.ಗೌಡ**, ಎಇ(ನಿವೃತ್ತ), ವರ್ಣಿಕಾ, ಫ್ಲ್ಯಾಟ್ ನಂ. ವಿ-10, 4ನೇ ಫ್ಲೋರ್, ಹಳೆ ಕಿನ್ನಿಮುಲ್ಕಿ ರಸ್ತೆ, ಉಡುಪಿ	2,000
22	**ಕಾಂತನರಸಿಂಹ ಎಸ್.ಕೆ.**, ಬೆಂಗಳೂರು	1,500
23	**ಟಿ.ರಂಗನಾಥ್**, #557/ಬಿ, 9ನೇ ಅಡ್ಡರಸ್ತೆ, 7ನೇ ಬ್ಲಾಕ್, ಜಯನಗರ ವೆಸ್ಟ್, ಬೆಂಗಳೂರು	1,500
24	**ಮಲ್ಲಿಕಾರ್ಜುನಪ್ಪ ಟಿ.**, #1789/47, 14ನೇ ಅಡ್ಡರಸ್ತೆ, ಸಿದ್ಧವೀರಪ್ಪ ಲೇಔಟ್, ದಾವಣಗೆರೆ	1,500
25	**ಜಿ.ಕೆ.ಸುಲಗನ್ನಿ**, ಸಿದ್ಧಾರೂಢ ನಗರ, 2ನೇ ಅಡ್ಡರಸ್ತೆ, ರಾಣೇಬೆನ್ನೂರು	1,100
26	**ಗಣಪತಿರಾಮನ್ ಎನ್.** ನಂ.403, ಮಾತಾ ಸಾಯಿ ಗಾರ್ಡನ್, ಮಿಸ್ಕಿತ್ ಆಸ್ಪತ್ರೆ ಹತ್ತಿರ, ಕಾನ ಸುರತ್ಕಲ್	1,051
27	**ನಾಡಗೌಡ ಪಿ.ಜಿ.ಎಂ**, ಬೆಂಗಳೂರು	1,001
28	**ಎಚ್.ವಿ ನಾಗರಾಜನ್**, ಸಂಪಿಗೆ ರಸ್ತೆ, ಚಾಮರಾಜನಗರ	1,001
29	**ಮೊಹಮ್ಮದ್ ಹುಸೇನ್ ಆದಂ ಶೇಖ್**, ಸಂ.74, ಫಾರೆಸ್ಟ್ ಕಾಲೋನಿ, ರಾಜ್ ನಗರ, ಹುಬ್ಬಳ್ಳಿ	1,001
30	**ಜೆ.ಬಿ.ಮಂಜುನಾಥ**, ಉಪನ್ಯಾಸಕರು, ನಂ.31, ಬನ್ನಾರಿಯಮ್ಮ ದೇವಸ್ಥಾನ ರಸ್ತೆ, ಜೆ.ಬಿ ನಗರ, ಪಾಂಡವಪುರ ಪಟ್ಟಣ, ಮಂಡ್ಯ ಜಿಲ್ಲೆ	1,000
	ಒಟ್ಟು ಹಣ	36,03,663
	ಇದುವರೆಗೆ ಸಂಗ್ರಹವಾದ ಒಟ್ಟು ಮೊತ್ತ	91,11,000

ಕಾನ್ವೆ ದ್ವಿಶತಕ

ಲಂಡನ್ (ಎಪಿ): ಆರಂಭಿಕ ಬ್ಯಾಟ್ಸ್‌ಮನ್ ಡೆವನ್ ಕಾನ್ವೆ ಅಮೋಘ ದ್ವಿಶತಕ ಬಾರಿಸಿದರು. ಆದರೆ, ನ್ಯೂಜಿಲೆಂಡ್ ತಂಡವು ಇಂಗ್ಲೆಂಡ್ ವಿರುದ್ಧದ ಮೊದಲ ಟೆಸ್ಟ್‌ನ ಪ್ರಥಮ ಇನಿಂಗ್ಸ್‌ನಲ್ಲಿ ಬೃಹತ್ ಮೊತ್ತ ಪೇರಿಸಲಿಲ್ಲ.

ಪಂದ್ಯದ ಮೊದಲ ದಿನವಾದ ಬುಧವಾರ ಕಾನ್ವೆ ಏಕಾಂಗಿ ಹೋರಾಟ ಮಾಡಿ ಶತಕ ಗಳಿಸಿ ಕ್ರೀಸ್‌ನಲ್ಲಿದ್ದರು. ಗುರುವಾರ ಕೂಡ ಉತ್ತಮವಾಗಿ ಆಡಿ ದ್ವಿಶತಕದ ಗಡಿ ತಲುಪಿದರು. ಕಾನ್ವೆ ಮತ್ತು ಹೆನ್ರಿ ನಿಕೊಲ್ಸ್ (61; 175ಎ, 4ಬೌಂ) ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 174 ರನ್ ಸೇರಿಸಿದರು. ಕಾನ್ವೆ 347 ಎಸೆತಗಳಲ್ಲಿ 22 ಬೌಂಡರಿ ಮತ್ತು ಒಂದು ಸಿಕ್ಸರ್ ಬಾರಿಸಿ ದ್ವಿಶತಕ ಪೂರೈಸಿದರು. ತಂಡವು 122.4 ಓವರ್‌ಗಳಲ್ಲಿ 378 ರನ್ ಗಳಿಸಿತು. ಕಾನ್ವೆ ರನ್‌ಔಟ್ ಆಗುವುದರೊಂದಿಗೆ ಇನಿಂಗ್ಸ್‌ಗೆ ತೆರೆಬಿತ್ತು.

ಸಂಕ್ಷಿಪ್ತ ಸ್ಕೋರು: ನ್ಯೂಜಿಲೆಂಡ್: 122.4 ಓವರ್‌ಗಳಲ್ಲಿ 378 (ಡೆವನ್ ಕಾನ್ವೆ 200, ಹೆನ್ರಿ ನಿಕೊಲ್ಸ್ 61, ಜೇಮ್ಸ್ ಆ್ಯಂಡರ್ಸನ್ 83ಕ್ಕೆ2, ಒಲಿ ರಾಬಿನ್ಸನ್ 75ಕ್ಕೆ4, ಮಾರ್ಕ್ ವುಡ್ 81ಕ್ಕೆ3) **ಇಂಗ್ಲೆಂಡ್:**43 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 111 (ರೋರಿ ಬರ್ನ್ಸ್ ಬ್ಯಾಟಿಂಗ್ 59, ಜೋ ರೂಟ್ ಬ್ಯಾಟಿಂಗ್ 42).

ಫ್ರೆಂಚ್ ಓಪನ್ ಟೆನಿಸ್ ಟೂರ್ನಿ: ರೋಜರ್ ಫೆಡರರ್, ಸೋಫಿಯಾ ಕೆನಿನ್ ಮೂರನೇ ಸುತ್ತಿಗೆ

ಎಲಿನಾ, ಜೊಕೊವಿಚ್‌ಗೆ ಗೆಲುವು

ಪ್ಯಾರಿಸ್ (ರಾಯಿಟರ್ಸ್): ವಿಶ್ವ ಕ್ರಮಾಂಕದಲ್ಲಿ ಆರನೇ ಸ್ಥಾನದಲ್ಲಿರುವ, ಉಕ್ರೇನ್ ಆಟಗಾರ್ತಿ ಎಲಿನಾ ಸ್ವಿಟೋಲಿನಾ ಅವರು ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯ ಮಹಿಳೆಯರ ವಿಭಾಗದ ಮೂರನೇ ಸುತ್ತು ಪ್ರವೇಶಿಸಿದರು.

ಪುರುಷರ ವಿಭಾಗದ ಕಳೆದ ಬಾರಿಯ ರನ್ನರ್ ಅಪ್ ನೊವಾಕ್ ಜೊಕೊವಿಚ್ ಹಾಗೂ ಮಹಿಳಾ ವಿಭಾಗದ ರನ್ನರ್ ಅಪ್ ಸೋಫಿಯಾ ಕೆನಿನ್ ಕೂಡ ಮೂರನೇ ಸುತ್ತಿಗೆ ಲಗ್ಗೆ ಇರಿಸಿದರು. ಸ್ವಿಟ್ಜರ್ಲೆಂಡ್‌ನ ರೋಜರ್ ಫೆಡರರ್ ಅವರೂ ಗೆಲುವು ಸಾಧಿಸಿದರು. ಆದರೆ ಪಾಯಿಂಟ್‌ಗಳ ಮಧ್ಯದಲ್ಲಿ ಹೆಚ್ಚು ಸಮಯ ವ್ಯಯ ಮಾಡಿದ್ದಕ್ಕೆ ಅವರಿಗೆ ಅಂಪೈರ್ ಎಚ್ಚರಿಕೆ ನೀಡಿದರು.

ಗುರುವಾರ ನಡೆದ ಪಂದ್ಯದಲ್ಲಿ ಎಲಿನಾ, ಅಮೆರಿಕದ ಆ್ಯನ್ ಲೀ ವಿರುದ್ಧ 6–0, 6–4ರಲ್ಲಿ ಜಯ ಗಳಿಸಿದರು. ಮೊದಲ ಸೆಟ್‌ನಲ್ಲಿ ಏಕಪಕ್ಷೀಯ ವಾಗಿ ಗೆದ್ದ ಎಲಿನಾಗೆ ಎರಡನೇ ಸೆಟ್‌ನ ಆರಂಭದಲ್ಲಿ ಲೀ ತಿರುಗೇಟು ನೀಡಿದರು. ಆದರೆ ಎಲಿನಾ ಪಟ್ಟು ಬಿಡದೆ ಜಯದತ್ತ ಸಾಗಿದರು. ನೊವಾಕ್ ಜೊಕೊವಿಚ್ 6–3, 6–2, 6–4ರಲ್ಲಿ ಉರುಗ್ವೆಯ ಪ್ಯಾಬ್ಲೊ ಕುವೆಯಾಸ್ ಎದುರು ಜಯ ಗಳಿಸಿದರು. ಮರಿನ್ ಸಿಲಿಕ್ ಎದುರು 6–2, 2–6, 7–6(4), 6–2ರಲ್ಲಿ ಜಯ ಸಾಧಿಸಿ ಫೆಡರರ್ ಮೂರನೇ ಸುತ್ತು ಪ್ರವೇಶಿಸಿದರು.

ಅಮೆರಿಕದ ಹೇಲಿ ಬ್ಯಾಪ್ಟಿಸ್ಟ್ ವಿರುದ್ಧ 7-5, 6-3ರಲ್ಲಿ ಸೋಫಿಯಾ ಕೆನಿನ್ ಜಯ ಸಾಧಿಸಿದರು. ಈ ವರ್ಷ ವಿವಿಧ ಟೂರ್ನಿಗಳಲ್ಲಿ ನೀರಸ ಪ್ರದರ್ಶನ ನೀಡಿರುವ ಸೋಫಿಯಾ ಮೊದಲ ಸೆಟ್‌ನಲ್ಲಿ ಪ್ರಯಾಸದ ಜಯ ಗಳಿಸಿದರು. ಆದರೆ ಎರಡನೇ ಸೆಟ್‌ನಲ್ಲಿ ಚೇತರಿಕೆಯ ಆಟವಾಡಿ ಎದುರಾಳಿಯನ್ನು ಕಂಗೆಡಿಸಿದರು.

ಸೋಫಿಯಾ ಕೆನಿನ್ ಚೆಂಡನ್ನು ರಿಟರ್ನ್ ಮಾಡಿದ ರೀತಿ –ಎಎಫ್‌ಪಿ ಚಿತ್ರ

ಬಾರ್ಟಿ ನಿವೃತ್ತಿ; ಕೆರಳಿದ ಕುತೂಹಲ

ವಿಶ್ವ ಕ್ರಮಾಂಕದಲ್ಲಿ ಒಂದನೇ ಸ್ಥಾನದಲ್ಲಿರುವ ಆ್ಯಶ್ಲಿ ಬಾರ್ಟಿ ಪಂದ್ಯದ ನಡುವೆ ಗಾಯಗೊಂಡು ಗುರುವಾರ ಟೂರ್ನಿಯಿಂದ ನಿವೃತ್ತರಾದರು. 2019ರ ಫ್ರೆಂಚ್ ಓಪನ್ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದಿದ್ದ ಆಸ್ಟ್ರೇಲಿಯಾ ಆಟಗಾರ್ತಿ ಬಾರ್ಟಿ ಪೋಲೆಂಡ್‌ನ ಮಗ್ದಾ ಲಿನೆಟ ಎದುರಿನ ಪಂದ್ಯದ (6-1, 2-2) ಎರಡನೇ ಸೆಟ್‌ನಲ್ಲಿ ನಿವೃತ್ತರಾದರು.

ಪತ್ರಿಕಾಗೋಷ್ಠಿ ಬಹಿಷ್ಕರಿಸಲು ನಿರ್ಧರಿಸಿದ್ದಕ್ಕೆ ದಂಡ ವಿಧಿಸಿದ್ದರಿಂದ ಬೇಸರಗೊಂಡು ನವೊಮಿ ಒಸಾಕ ಮೊದಲ ಸುತ್ತಿನ ನಂತರ ಟೂರ್ನಿಯನ್ನು ಬಹಿಷ್ಕರಿಸಿದ್ದರು. ಅವರು ವಿಶ್ವ ಕ್ರಮಾಂಕದದಲ್ಲಿ ಎರಡನೇ ಸ್ಥಾನದಲ್ಲಿದ್ದಾರೆ. ಇವರಿಬ್ಬರು ಹೊರನಡೆದ ಕಾರಣ ಮಹಿಳಾ ವಿಭಾಗದಲ್ಲಿ ಕುತೂಹಲ ಕೆರಳಿದೆ.

ಪ್ರಿ ಕ್ವಾರ್ಟರ್‌ಫೈನಲ್‌ಗೆ ಬೋಪಣ್ಣ–ಸುಗೊರ್

ಭಾರತದ ರೋಹನ್ ಬೋಪಣ್ಣ ಮತ್ತು ಕ್ರೊವೇಷಿಯಾದ ಫ್ರಾಂಕೊ ಸುಗೊರ್ ಜೋಡಿ ಪುರುಷರ ಡಬಲ್ಸ್ ವಿಭಾಗದ ಪ್ರಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು. ಅಮೆರಿಕದ ಫ್ರಾನ್ಸಿಸ್ ಟಿಯಾಫೊ ಮತ್ತು ನಿಕೋಲಸ್ ಮೊನ್ರೆ ಜೋಡಿಯನ್ನು ಅವರು ಗುರುವಾರ 6-4, 7-5ರಲ್ಲಿ ಮಣಿಸಿದರು. ಪಂದ್ಯ ಒಂದು ತಾಸು 20 ನಿಮಿಷಗಳಲ್ಲಿ ಮುಗಿಯಿತು.

ಒಲಿಂಪಿಕ್ಸ್‌ನಲ್ಲಿ ಭಾರತದ ಕ್ರೀಡಾಪಟುಗಳು ಧರಿಸುವ ಪೋಷಾಕನ್ನು ಕಾರ್ಯಕ್ರಮದಲ್ಲಿ ಬಿಡುಗಡೆ ಮಾಡಲಾಯಿತು –ಸಾಯ್ ಟ್ವಿಟರ್ ಚಿತ್ರ

ಭರವಸೆ ತುಂಬಿದ 'ಕೌಂಟ್‌ಡೌನ್' ಕಾರ್ಯಕ್ರಮ

ಬೆಂಗಳೂರು: ಟೋಕಿಯೊ ಒಲಿಂಪಿಕ್ಸ್‌ಗೆ ಐವತ್ತು ದಿನಗಳು ಉಳಿದಿರುವ ಹಿನ್ನೆಲೆಯಲ್ಲಿ ಭಾರತ ಒಲಿಂಪಿಕ್ ಸಂಸ್ಥೆ (ಐಒಎ) ಗುರುವಾರ ದೆಹಲಿಯಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ, ಭಾರತದ ಕ್ರೀಡಾಪಟುಗಳು ಧರಿಸಲಿರುವ ಪೋಷಾಕು ಬಿಡುಗಡೆ ಮಾಡಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಐಒಎ ಅಧ್ಯಕ್ಷ ನರಿಂದರ್ ಬಾತ್ರಾ 'ಅಧಿಕಾರಿಗಳು ಸೇರಿದಂತೆ ಒಟ್ಟು 200 ಮಂದಿಯ ತಂಡವನ್ನು ಭಾರತದಿಂದ ಕಳುಹಿಸಲಾಗುವುದು. 44 ಮಹಿಳೆಯರು ಸೇರಿದಂತೆ 100 ಮಂದಿ ಈ ವರೆಗೆ ಅರ್ಹತೆ ಗಳಿಸಿದ್ದಾರೆ. ಇನ್ನೂ 25ರಿಂದ 35 ಮಂದಿ ಆಯ್ಕೆಯಾಗುವ ಸಾಧ್ಯತೆ ಇದೆ' ಎಂದರು.

'ಎಲ್ಲರಿಗೂ ಕೋವಿಡ್ ಲಸಿಕೆಯ ಮೊದಲ ಡೋಸ್ ಹಾಕಿಸಲಾಗಿದೆ. ಒಲಿಂಪಿಕ್ಸ್‌ಗೆ ಹೋಗುವ ಮುನ್ನ ಎರಡನೇ ಡೋಸ್ ಹಾಕಲು ಕೇಂದ್ರ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಬೇಕು' ಎಂದು ಅವರು ಆಗ್ರಹಿಸಿದರು.

ಸ್ಪರ್ಧೆಗಳ ಸಂದರ್ಭದಲ್ಲಿ ಧರಿಸುವ ಮತ್ತು ಸಮಾರಂಭದಲ್ಲಿ ಪಾಲ್ಗೊಳ್ಳುವಾಗ ತೊಡುವ ಪೋಷಾಕನ್ನು ಸಚಿವ ಕಿರಣ್ ರಿಜಿಜು ಬಿಡುಗಡೆ ಮಾಡಿದರು. 'ಒಲಿಂಪಿಕ್ಸ್‌ಗೆ ಸಂಬಂಧಿಸಿ ಪ್ರಧಾನಮಂತ್ರಿ ಗುರುವಾರ ಪ್ರಗತಿ ಪರಿಶೀಲನಾ ಸಭೆ ನಡೆಸಿದ್ದು ಎಲ್ಲ ಸೌಲಭ್ಯಗಳನ್ನು ಒದಗಿಸಲು ಸೂಚಿಸಿದ್ದಾರೆ' ಎಂದು ಅವರು ತಿಳಿಸಿದರು.

ಇಂಗ್ಲೆಂಡ್ ತಲುಪಿದ ಭಾರತ ತಂಡಗಳು

ಲಂಡನ್ (ಪಿಟಿಐ): ಇದೇ ತಿಂಗಳು ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್ ಪಂದ್ಯದಲ್ಲಿ ನ್ಯೂಜಿಲೆಂಡ್ ವಿರುದ್ಧ ಆಡಲಿರುವ ಭಾರತ ಕ್ರಿಕೆಟ್ ತಂಡವು ಗುರುವಾರ ಇಂಗ್ಲೆಂಡ್ ತಲುಪಿತು.

ಇದೇ ಸಂದರ್ಭದಲ್ಲಿ ಇಂಗ್ಲೆಂಡ್ ವಿರುದ್ಧ ಸರಣಿಯ ಆಡಲಿರುವ ಭಾರತ ಮಹಿಳಾ ಕ್ರಿಕೆಟ್ ತಂಡವೂ ಇಂಗ್ಲೆಂಡ್ ಗೆ ಬಂದಿಳಿಯಿತು.

ಭಾರತ ಪುರುಷರ ತಂಡದ ಆಟಗಾರ ಕೆ.ಎಲ್. ರಾಹುಲ್ ಅವರು, 'ತಲುಪಿದೆವು' ಎಂಬ ಸಂದೇಶದೊಂದಿಗೆ ಚಿತ್ರವನ್ನೂ ಟ್ವೀಟ್ ಮಾಡಿದ್ದಾರೆ. ಉಭಯ ತಂಡಗಳು ವಿಶೇಷ ವಿಮಾನದಲ್ಲಿ ಇಂಗ್ಲೆಂಡ್‌ಗೆ ಪ್ರಯಾಣಿಸಿವೆ. ತಂಡಗಳು ಲಂಡನ್‌ನಿಂದ ಸೌತಾಂಪ್ಟನ್‌ಗೆ ತೆರಳಿದವು. ಅಲ್ಲಿ ಆಟಗಾರರು ಕಡ್ಡಾಯ ಕ್ವಾರಂಟೈನ್ ನಿಯಮ ಪಾಲಿಸುವರು. ಪ್ರತ್ಯೇಕವಾಸದ ಅವಧಿ ಮುಗಿದ ನಂತರ ಕೋವಿಡ್ –19 ಸೋಂಕು ಪತ್ತೆ ಪರೀಕ್ಷೆಗೊಳಗಾಗುವರು.

ಜೂನ್ 18ರಂದು ಸೌತಾಂಪ್ಟನ್‌ನಲ್ಲಿಯೇ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್ ನಡೆಯಲಿದೆ.

ಆಗಸ್ಟ್ ನಾಲ್ಕರಿಂದ ನಾಟಿಂಗ್‌ಹ್ಯಾಮ್‌ನಲ್ಲಿ ಭಾರತವು ಇಂಗ್ಲೆಂಡ್ ವಿರುದ್ಧ ಟೆಸ್ಟ್ ಸರಣಿ ಆಡಲಿದೆ. ಆಟಗಾರರಿಗೆ ತಮ್ಮ ಕುಟುಂಬದ ಸದಸ್ಯರೊಂದಿಗೆ ತೆರಳಲು ಇಂಗ್ಲೆಂಡ್ ಮತ್ತು ವೇಲ್ಸ್ ಕ್ರಿಕೆಟ್ ಮಂಡಳಿಯು ಅನುಮತಿ ನೀಡಿದೆ.

ಭಾರತ ಮತ್ತು ಇಂಗ್ಲೆಂಡ್ ಮಹಿಳಾ ತಂಡಗಳ ನಡುವಣ ಟೆಸ್ಟ್ ಮತ್ತು ಸೀಮಿತ ಓವರ್‌ಗಳ ಸರಣಿಯು ಜುಲೈ 15ರಂದು ಮುಕ್ತಾಯವಾಗಲಿದೆ.

ಹಿತಾಸಕ್ತಿ ಸಂಘರ್ಷದಲ್ಲಿ ರೂಪಾ

ನವದೆಹಲಿ: ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ (ಬಿಸಿಸಿಐ) ಮಾಜಿ ಅಧ್ಯಕ್ಷ ಎನ್.ಶ್ರೀನಿವಾಸನ್ ಅವರ ಪುತ್ರಿ ಹಾಗೂ ತಮಿಳುನಾಡು ಕ್ರಿಕೆಟ್ ಸಂಸ್ಥೆಯ ಅಧ್ಯಕ್ಷೆ ರೂಪಾ ಗುರುನಾಥ್ ಅವರು ಹಿತಾಸಕ್ತಿ ಸಂಘರ್ಷದಲ್ಲಿ ಸಿಲುಕಿರುವುದಾಗಿ ಬಿಸಿಸಿಐ ನೀತಿ ಅಧಿಕಾರಿ ನಿವೃತ್ತ ನ್ಯಾಯಮೂರ್ತಿ ಡಿ.ಕೆ.ಜೈನ್ ಪತ್ತೆ ಹಚ್ಚಿದ್ದಾರೆ.

ಈ ಕುರಿತು ಗುರುವಾರ ಅವರು ತೀರ್ಪು ನೀಡಿದ್ದಾರೆ.

ರಾಜ್ಯ ಕ್ರಿಕೆಟ್ ಸಂಸ್ಥೆಯೊಂದರ ಮೊದಲ ಅಧ್ಯಕ್ಷೆ ಎಂಬ ಹೆಗ್ಗಳಿಕೆ ಇರುವ ರೂಪಾ ಅವರು ಇಂಡಿಯಾ ಸಿಮೆಂಟ್ಸ್‌ನ ನಿರ್ದೇಶಕರೂ ಆಗಿದ್ದಾರೆ.

ಐಪಿಎಲ್‌ನಲ್ಲಿ ಆಡುವ ಚೆನ್ನೈ ಸೂಪರ್ ಕಿಂಗ್ಸ್ ತಂಡದ ಮಾಲೀಕತ್ವ ಹೊಂದಿರುವ ಚೆನ್ನೈ ಸೂಪರ್ ಕಿಂಗ್ಸ್ ಕ್ರಿಕೆಟ್ ಲಿಮಿಟೆಡ್ಸ್ ಸಂಸ್ಥೆಯೊಂದಿಗೆ ಇಂಡಿಯಾ ಸಿಮೆಂಟ್ಸ್ ನಂಟು ಹೊಂದಿರುವುದರಿಂದ ಅವರು ಪರೋಕ್ಷವಾಗಿ ಹಿತಾಸಕ್ತಿ ಸಂಘರ್ಷದಲ್ಲಿ ಭಾಗಿಯಾಗಿದ್ದಾರೆ ಎಂದು 13 ಪುಟಗಳ ತೀರ್ಪಿನಲ್ಲಿ ಉಲ್ಲೇಖಿಸಲಾಗಿದೆ.

ಮೇನಲ್ಲಿ ಸೇವಾ ವಲಯದ ಚಟುವಟಿಕೆ ಕುಸಿತ

ನವದೆಹಲಿ (ಪಿಟಿಐ): ದೇಶದ ಸೇವಾ ವಲಯದ ಚಟುವಟಿಕೆಗಳು ಮೇ ತಿಂಗಳಲ್ಲಿ ನಕಾರಾತ್ಮಕ ಮಟ್ಟ ತಲುಪಿವೆ. ಕೋವಿಡ್ ಪ್ರಕರಣಗಳು ಹೆಚ್ಚಾಗಿದ್ದು ಹಾಗೂ ಲಾಕ್‌ಡೌನ್ ನಿರ್ಬಂಧಗಳು ಜಾರಿಗೆ ಬಂದಿದ್ದು ಮುಖ್ಯ ಕಾರಣ.

ಏಪ್ರಿಲ್‌ನಲ್ಲಿ 54ರಷ್ಟು ಇದ್ದ ದೇಶದ ಸೇವಾ ವಲಯದ ಚಟುವಟಿಕೆಗಳ ಸೂಚ್ಯಂಕವು ಕೋವಿಡ್–19 ಸಾಂಕ್ರಾಮಿಕವು ತೀವ್ರಗೊಂಡ ಪರಿಣಾಮವಾಗಿ ಮೇ ತಿಂಗಳಲ್ಲಿ 46.4ಕ್ಕೆ ಕುಸಿದಿದೆ. ಸೂಚ್ಯಂಕವು 50ಕ್ಕಿಂತ ಹೆಚ್ಚಿನ ಮಟ್ಟದಲ್ಲಿ ಇದ್ದರೆ ಅದನ್ನು ಬೆಳವಣಿಗೆ ಎಂದು ಗುರುತಿಸಲಾಗುತ್ತದೆ. 50ಕ್ಕಿಂತ ಕಡಿಮೆ ಇದ್ದರೆ, ಅದು ಕುಸಿತ ಎಂದು ತೀರ್ಮಾನಿಸಲಾಗುತ್ತದೆ.

'ಕೋವಿಡ್ ಸಾಂಕ್ರಾಮಿಕವು ತೀವ್ರಗೊಂಡ ಕಾರಣದಿಂದಾಗಿ ಚಟುವಟಿಕೆಗಳ ಮೇಲೆ ನಿರ್ಬಂಧಗಳು ಜಾರಿಗೆ ಬಂದವು. ಇದರಿಂದಾಗಿ ದೇಶಿ ಮಾರುಕಟ್ಟೆಯಲ್ಲಿ ಹಾಗೂ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಭಾರತದ ಕಂಪನಿಗಳು ನೀಡುವ ಸೇವೆಗಳಿಗೆ ಬೇಡಿಕೆ ಕಡಿಮೆ ಆಯಿತು. ಎಂಟು ತಿಂಗಳ ಅವಧಿಯಲ್ಲಿ ಇದೇ ಮೊದಲ ಬಾರಿಗೆ ಸೇವಾ ವಲಯದ ವಹಿವಾಟು ತಗ್ಗಿತು' ಎಂದು ಐಎಚ್‌ಎಸ್ ಮರ್ಕಿಟ್ ಸಂಸ್ಥೆಯ ಅರ್ಥಶಾಸ್ತ್ರದ ಸಹಾಯಕ ನಿರ್ದೇಶಕಿ ಪಾಲಿಯಾನಾ ಡಿ ಲಿಮಾ ತಿಳಿಸಿದರು.

'ಹೊಸ ವಹಿವಾಟುಗಳ ಸಂಖ್ಯೆ ಕಡಿಮೆ ಆಗಿದೆ. ಹಾಗಾಗಿ ಕಂಪನಿಗಳು ತಮ್ಮ ವೆಚ್ಚಗಳ ಮೇಲೆ ನಿಯಂತ್ರಣ ಇರಿಸಲು ಯತ್ನಿಸುತ್ತಿವೆ. ಸೇವಾ ವಲಯದ ಕಂಪನಿಗಳು ತಮ್ಮ ಉದ್ಯೋಗಿಗಳ ಸಂಖ್ಯೆಯನ್ನು ತೀವ್ರವಾಗಿ ಕಡಿಮೆ ಮಾಡಿದವು. ಮುಂದಿನ ದಿನಗಳ ಕುರಿತ ಚಿಂತೆಯು ಉದ್ಯೋಗ ಸೃಷ್ಟಿಗೆ ಅಡ್ಡಿಯಾಗಬಹುದು' ಎಂದು ಅವರು ಅಭಿಪ್ರಾಯ ವ್ಯಕ್ತಪಡಿಸಿದರು.

ಸೇವಾ ವಲಯ ಹಾಗೂ ತಯಾರಿಕಾ ವಲಯದ ಚಟುವಟಿಕೆಗಳ ಸ್ಥಿತಿಯನ್ನು ತಿಳಿಸುವ ಕಾಂಪೊಸಿಟ್ ಪಿಎಂಐ ಔಟ್‌ಪುಟ್ ಸೂಚ್ಯಂಕವು ಏಪ್ರಿಲ್ ತಿಂಗಳಿನಲ್ಲಿ 55.4 ಇದ್ದುದು ಮೇ ತಿಂಗಳಲ್ಲಿ 48.1ಕ್ಕೆ ಇಳಿದಿದೆ. ಇದು ದೇಶದ ಖಾಸಗಿ ವಲಯದ ಚಟುವಟಿಕೆಗಳು ಮತ್ತೆ ಕುಸಿತ ಕಂಡಿರುವುದನ್ನು ಸೂಚಿಸುತ್ತಿದೆ. ಖಾಸಗಿ ವಲಯದಲ್ಲಿ ಉದ್ಯೋಗಗಳ ಸಂಖ್ಯೆಯು ಸತತ 15ನೆಯ ತಿಂಗಳಿನಲ್ಲಿಯೂ ಕಡಿಮೆ ಆಗಿದೆ.

ನಿಫ್ಟಿ, ಸೆನ್ಸೆಕ್ಸ್ ಹೊಸ ದಾಖಲೆ

ಮುಂಬೈ (ಪಿಟಿಐ): ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ ಹಾಗೂ ರಾಷ್ಟ್ರೀಯ ಷೇರುಪೇಟೆ ಸಂವೇದಿ ಸೂಚ್ಯಂಕ ನಿಫ್ಟಿ ಗುರುವಾರದ ವಹಿವಾಟಿನಲ್ಲಿ ಸಾರ್ವಕಾಲಿಕ ದಾಖಲೆಯ ಗರಿಷ್ಠ ಮಟ್ಟ ತಲುಪಿದವು. ಬ್ಯಾಂಕಿಂಗ್, ಹಣಕಾಸು ಮತ್ತು ಮೂಲಸೌಕರ್ಯ ವಲಯದ ಷೇರುಗಳ ಖರೀದಿಯು ಜೋರಾಗಿ ನಡೆಯಿತು.

382 ಅಂಶ ಏರಿಕೆ ಕಂಡ ಸೆನ್ಸೆಕ್ಸ್, 52,232 ಅಂಶದಲ್ಲಿ ವಹಿವಾಟು ಕೊನೆಗೊಳಿಸಿತು. ಫೆಬ್ರುವರಿ 15ರಂದು ತಲುಪಿದ್ದ 52,154 ಅಂಶಗಳ ದಾಖಲೆಯ ಮಟ್ಟವನ್ನು ಮೀರಿತು. 114 ಅಂಶ ಜಿಗಿದ ನಿಫ್ಟಿ ದಾಖಲೆಯ 15,690 ಅಂಶಗಳಲ್ಲಿ ವಹಿವಾಟು ಕೊನೆಗೊಳಿಸಿತು. ಸೆನ್ಸೆಕ್ಸ್‌ನಲ್ಲಿ ಟೈಟಾನ್ ಷೇರುಗಳು ಅತಿ ಹೆಚ್ಚಿನ ಗಳಿಕೆಯನ್ನು ಕಂಡವು. ಭಾರತೀಯ ರಿಸರ್ವ್ ಬ್ಯಾಂಕ್‌ನ ಹಣಕಾಸು ನೀತಿ ಸಮಿತಿಯ (ಎಂಪಿಸಿ) ಸಭೆಯ ತೀರ್ಮಾನಗಳು ಶುಕ್ರವಾರ ಪ್ರಕಟವಾಗಲಿವೆ. ಹಣದುಬ್ಬರದ ಮೇಲೆ ಒಂದು ಕಣ್ಣು ಇರಿಸಿ, ಆರ್‌ಬಿಐ ಹೊಂದಾಣಿಕೆಯ ನೀತಿಯನ್ನು ಮುಂದುವರಿಸಲಿದೆ ಎಂಬ ನಿರೀಕ್ಷೆ ಹೂಡಿಕೆದಾರರಿಗೆ ಇದೆ ಎಂದು ಎಲ್‌ಕೆಪಿ ಸೆಕ್ಯುರಿಟೀಸ್‌ನ ಸಂಶೋಧನಾ ಮುಖ್ಯಸ್ಥ ಎಸ್. ರಂಗನಾಥನ್ ಹೇಳಿದರು.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲದ ಬೆಲೆಯಲ್ಲಿ ಶೇ 0.18ರಷ್ಟು ಕಡಿಮೆ ಆಗಿದೆ. ಕಚ್ಚಾ ತೈಲವು ಪ್ರತಿ ಬ್ಯಾರೆಲ್‌ಗೆ 71.22 ಡಾಲರ್‌ಗೆ ಮಾರಾಟವಾಗಿದೆ. ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯದಲ್ಲಿ 18 ಪೈಸೆ ಏರಿಕೆ ಆಗಿದೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	15,576
ಇಂದಿನ ಅಂತ್ಯ	15,690
▲	114
ದಿನದ ಗರಿಷ್ಠ	15,705

ವಿನಿಮಯ ದರ

$ ಡಾಲರ್	72.91
£ ಪೌಂಡ್	103.42
€ ಯುರೊ	88.86
¥ ಯೆನ್ (100ಕ್ಕೆ)	66.32

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹550
12 ಮೊಟ್ಟೆಗೆ	₹72
ಮೈಸೂರು	
100 ಮೊಟ್ಟೆಗೆ	₹550

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1450 (1430)
ಸೋಯಾ (ರಿಫೈನ್ಡ್)	₹1415 (1405)
ಸೂರ್ಯಕಾಂತಿ (ರಿಫೈನ್ಡ್)	₹1550 (1560)
ಪಾಮೋಲಿನ್	₹1250 (1255)

ಮುಂಬೈ ಧಾರಣೆ

ಶೇಂಗಾ

3-06-2021

ಜಾವಾ 70/80(ಹೊಸ)	10050-10100
ಜಾವಾ 80/90(ಹೊಸ)	9250-9300
ದಪ್ಪ ಮಧ್ಯಪ್ರದೇಶ(ಹೊಸ)	10400-10500
ದಪ್ಪ ಗುಜರಾತ್(ಹೊಸ)	9600-9700

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1460 (1440)
ಒಂದು ವಾರದ ಡೆಲಿವರಿ	1455 (1435)
ಸೋಯಾ ಕಚ್ಚಾ	1405 (1395)
ಪಾಮ್ ವಾರದ ಡೆಲಿವರಿ	1248 (1253)
ಸೂರ್ಯಕಾಂತಿ ಎಣ್ಣೆ ಕಚ್ಚಾ	1520 (1520)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ
48,500 (49,100)
ಬೆಳ್ಳಿ ಕೆ.ಜಿ
71,000 (71,400)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ

ಬಂಟ್ವಾಳ	
ಹೊಸತು	23500-40000
ಹಳತು	42500-50000
ಕಾರ್ಕಳ	
ಹೊಸತು	36000-40000
ಪುತ್ತೂರು	
ಹೊಸತು	28000-39500
ಹಳತು	39500-49000
ಯಲ್ಲಾಪುರ	
ಬಿಳಿಗೋಟು	29060-31030
ಚಾಲಿ	33840-36640
ರಾಶಿ	40510-42220
ತಟ್ಟಿಬೆಟ್ಟೆ	30740-34810

ಏಲಕ್ಕಿ ಧಾರಣೆ

ಸಕಲೇಶಪುರ	
ಕೂಳೆ	700- 800
ನಡುಗೋಲು	850-900
ರಾಶಿ	950-1000
ರಾಶಿ ಉತ್ತಮ	1000-1050

ಜರಡಿ	1150 -1200
ಹೆರಕಿದ್ದು	1500-1600
ಹಸಿರು ಸಾಧಾರಣ	900- 1000
ಹಸಿರು ಉತ್ತಮ	1100-1200
ಹಸಿರು ಅತಿ ಉತ್ತಮ	1400-1500
ಕಾಳು ಮೆಣಸು	400

ರೇಷ್ಮೆಗೂಡು

ರಾಮನಗರ	
ಮಿಶ್ರ ತಳಿ (ಸಿ.ಬಿ)	232-335
ದ್ವಿತಳಿ (ಬಿ.ವಿ)	288-500

ಕೊಬ್ಬರಿ

ಅರಸೀಕೆರೆ	15500-16400
ತಿಪಟೂರು	15000-17000

ಕಾಫಿ ಧಾರಣೆ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	10,900	10,700	10,750	161.15
ಎಸಿ	4,675	4,300	4,125	
ಆರ್‌ಪಿ	5,250	5,200	5,200	
ಆರ್‌ಸಿ	3,125	3,100	3,075	1601

ಬ್ಯಾಂಕ್ ಖಾಸಗೀಕರಣ: ಹೆಸರು ಸೂಚಿಸಿದ ನೀತಿ ಆಯೋಗ

ನವದೆಹಲಿ (ಪಿಟಿಐ): ಪ್ರಸಕ್ತ ಆರ್ಥಿಕ ವರ್ಷದಲ್ಲಿ ಖಾಸಗಿಯವರಿಗೆ ಮಾರಾಟ ಮಾಡಬೇಕಿರುವ ಬ್ಯಾಂಕ್‌ಗಳ ಹೆಸರನ್ನು ನೀತಿ ಆಯೋಗವು 'ಹೂಡಿಕೆ ಹಿಂತೆಗೆತಕ್ಕೆ ಸಂಬಂಧಿಸಿದ ಕಾರ್ಯದರ್ಶಿಗಳ ಸಮಿತಿ'ಗೆ ಸಲ್ಲಿಸಿದೆ ಎಂದು ಕೇಂದ್ರ ಸರ್ಕಾರದ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

2021–22ನೇ ಸಾಲಿನ ಬಜೆಟ್‌ನಲ್ಲಿ ಘೋಷಿಸಿದಂತೆ, ಖಾಸಗಿಯವರಿಗೆ ಮಾರಾಟ ಮಾಡಬಹುದಾದ ಸರ್ಕಾರಿ ಸ್ವಾಮ್ಯದ ಎರಡು ಬ್ಯಾಂಕ್‌ಗಳು ಹಾಗೂ ಒಂದು ವಿಮಾ ಕಂಪನಿಯ ಹೆಸರನ್ನು ಅಂತಿಮಗೊಳಿಸುವ ಹೊಣೆಯನ್ನು ನೀತಿ ಆಯೋಗಕ್ಕೆ ವಹಿಸಲಾಗಿತ್ತು.

ಸಂಪುಟ ಕಾರ್ಯದರ್ಶಿ ನೇತೃತ್ವದ ಸಮಿತಿಯು ಬ್ಯಾಂಕ್ ಹಾಗೂ ವಿಮಾ ಕಂಪನಿಯ ಹೆಸರಿಗೆ ಒಪ್ಪಿಗೆ ಸೂಚಿಸಿದ ನಂತರ ಅಂತಿಮವಾಗಿ ಸಂಪುಟದ ಅನುಮೋದನೆ ಪಡೆದುಕೊಳ್ಳಬೇಕಿದೆ.

ಕನಿಷ್ಠ ವೇತನ: ಸಮಿತಿ ರಚನೆ

ನವದೆಹಲಿ (ಪಿಟಿಐ): ಕನಿಷ್ಠ ವೇತನ ನಿಗದಿಗೆ ಶಿಫಾರಸು ನೀಡುವಂತೆ ಸೂಚಿಸಿ ಕೇಂದ್ರ ಸರ್ಕಾರವು ಪ್ರೊ. ಅಜಿತ್ ಮಿಶ್ರಾ ನೇತೃತ್ವದಲ್ಲಿ ತಜ್ಞರ ಸಮಿತಿ ನೇಮಿಸಿದೆ.

'ಕನಿಷ್ಠ ವೇತನ ನಿಗದಿ ವಿಚಾರದಲ್ಲಿ ಶಿಫಾರಸು ನೀಡಲು ಸಮಿತಿ ರಚಿಸಲಾಗಿದೆ' ಎಂದು ಕೇಂದ್ರ ಕಾರ್ಮಿಕ ಸಚಿವಾಲಯದ ಹೇಳಿಕೆ ತಿಳಿಸಿದೆ. ಸಮಿತಿ ಮೂರು ವರ್ಷಗಳ ಅವಧಿ ಹೊಂದಿದೆ. ಪ್ರೊ. ಮಿಶ್ರಾ ಅವರು ಆರ್ಥಿಕ ಬೆಳವಣಿಗೆ ಸಂಸ್ಥೆಯ ನಿರ್ದೇಶಕರು.

ಮಲ್ಯ ಆಸ್ತಿ ಮಾರಾಟ: ಬ್ಯಾಂಕ್‌ಗಳಿಗೆ ಅನುಮತಿ

ನವದೆಹಲಿ (ಪಿಟಿಐ): ಉದ್ಯಮಿ ವಿಜಯ್ ಮಲ್ಯ ಅವರ ಕೆಲವು ರಿಯಲ್ ಎಸ್ಟೇಟ್ ಆಸ್ತಿಗಳನ್ನು ಹಾಗೂ ಷೇರುಗಳನ್ನು ಮಾರಾಟ ಮಾಡಲು ಅವರಿಗೆ ಸಾಲ ನೀಡಿರುವ ಬ್ಯಾಂಕ್‌ಗಳಿಗೆ ಹಾದಿ ಮುಕ್ತವಾಗಿದೆ.

ಜಾರಿ ನಿರ್ದೇಶನಾಲಯ (ಇ.ಡಿ.) ವಶಪಡಿಸಿಕೊಂಡಿರುವ, ಮಲ್ಯ ಅವರ ಆಸ್ತಿಗಳನ್ನು ತಮಗೆ ಮರಳಿಸಬೇಕು ಎಂದು ಕೋರಿ ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ನೇತೃತ್ವದ 11 ಬ್ಯಾಂಕ್‌ಗಳ ಒಕ್ಕೂಟವು ಅಕ್ರಮ ಹಣ ವರ್ಗಾವಣೆ ತಡೆ ಕಾಯ್ದೆಯ ಅಡಿ ರಚಿಸಿರುವ ವಿಶೇಷ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದವು. ಬ್ಯಾಂಕ್‌ಗಳ ಈ ಒಕ್ಕೂಟವು ಮಲ್ಯ ಅವರಿಗೆ ಸಾಲ ನೀಡಿದೆ. ₹ 5,646 ಕೋಟಿ ಮೌಲ್ಯದ ಆಸ್ತಿಗಳನ್ನು ಬ್ಯಾಂಕ್‌ಗಳಿಗೆ ಮರಳಿಸಬೇಕು ಎಂದು ನ್ಯಾಯಾಲಯವು ಮಂಗಳವಾರ ಆದೇಶಿಸಿದೆ. ನ್ಯಾಯಾಲಯದ ಆದೇಶದಲ್ಲಿ ಉಲ್ಲೇಖಿಸಲಾಗಿರುವ ಆಸ್ತಿಗಳ ಸಾಂಕೇತಿಕ ಹಸ್ತಾಂತರ ಕಾರ್ಯವನ್ನು ಅಗತ್ಯ ಕಾನೂನು ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿದ ನಂತರ ನಡೆಸಲಾಗುವುದು ಎಂದು ಬ್ಯಾಂಕ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.